# ಅನುಕಲ್ಪನೆ



ಪ್ರತಿಭಾ ಪ್ರಕಟನ ಮಂದಿರ
೨೧೮, ಮಿಡಲ್ ಸ್ಕೂಲ್ ರಸ್ತೆ, ವಿಶ್ವೇಶ್ವರಪುರ
ಬೆಂಗಳೂರು-೪

# ಅನುಕಲ್ಪನೆ

(ಕವಿ-ಕಾವ್ಯ ವಿಮರ್ಶೆ)

ಜಿ. ವೆಂಕಟಸುಬ್ಬಯ್ಯ, ಎಂ.ಎ., ಬಿ.ಟಿ.
ಕನ್ನಡ ಪ್ರಾಧ್ಯಾಪಕರು, ವಿಜಯ ಕಾಲೇಜು
ಬೆಂಗಳೂರು

ಪ್ರತಿಭಾ ಪ್ರಕಟನ ಮಂದಿರ
೨೧೮, ಮಿಡಲ್ ಸ್ಕೂಲ್ ರಸ್ತೆ, ವಿಶ್ವೇಶ್ವರಪುರ
ಬೆಂಗಳೂರು-೪

ಮೊದಲನೆಯ ಮುದ್ರಣ: ೧೯೫೭







ಬೆಲೆ: ಸಾಧಾರಣ ಪ್ರತಿ ರೂ. ೨—೦—೦
ಉತ್ತಮ ಪ್ರತಿ ರೂ. ೨—೮—೦
ಕ್ಯಾಲಿಕೋ ಪ್ರತಿ ರೂ. ೩—೦—೦

ಬಿ. ಎಂ. ಶ್ರೀಕಂಠಯ್ಯ ಅಚ್ಚುಕೂಟ
ಕನ್ನಡ ಸಾಹಿತ್ಯ ಪರಿಷತ್ತು,
ಚಾಮರಾಜಪೇಟೆ, ಬೆಂಗಳೂರು-೨

# ಮುನ್ನುಡಿ.

ಕಾವ್ಯಾಭ್ಯಾಸದಲ್ಲಿ ರಸಾಸ್ವಾದನೆಗೆ ಮೊದಲ ಹೆಜ್ಜೆ **'ಅನುಕಲ್ಪನೆ'.** ಈ ಪದವನ್ನು ನಾನು ಬೇಕೆಂದೇ ಉಪಯೋಗಿಸಿದ್ದೇನೆ. ಕವಿಯ ಪ್ರತಿಭೆಯನ್ನನುಸರಿಸಿದ – ಅವನ ಕಲ್ಪನೆಗೆ ಸರಿಯಾದ – ಪುನಃಕಲ್ಪನೆಯನ್ನು 'ಅನುಕಲ್ಪನೆ' ಎಂದು ಕರೆಯಬಹುದು. ಕವಿಯ ಹೃದಯವೂ ಇಂಗಿತವೂ ಈ ಮೂಲಕ ಸ್ವಲ್ಪ ಸ್ವಲ್ಪವಾಗಿ ಅರ್ಥವಾಗುತ್ತಾ ಬರುತ್ತವೆ. ಈ ಹೆಜ್ಜೆಯನ್ನು ಇಟ್ಟಾದಮೇಲೆ ಮುಂದಿನ ಇತರ ಹೆಜ್ಜೆಗಳು ಸುಗಮವಾಗುತ್ತವೆ. ಪ್ರಾರಂಭದಲ್ಲಿ ಅರ್ಥವಾಗದ ಎಷ್ಟೋ ಸನ್ನಿವೇಶಗಳೂ ಪದಪ್ರಯೋಗಗಳೂ ನೂತನಾರ್ಥವನ್ನು ಹೊಂದಿ ರಂಜಿಸುತ್ತವೆ; ಪಾತ್ರಗಳಿಗೆ ಅರ್ಥ ತುಂಬಿ ಬರುತ್ತದೆ.

ವಿದ್ಯಾರ್ಥಿಗಳಿಗೆ ಪಾಠ ಹೇಳುವಾಗ ನನಗೆ ಕಂಡುಬಂದುದರಲ್ಲಿ ಈ 'ಅನುಕಲ್ಪನೆ'ಯೇ ಅವರಿಗೆ ಬಹಳ ಕಷ್ಟವಾದುದು. ಇದನ್ನು ಅವರು ಗ್ರಹಿಸುವಂತೆ ಮಾಡಿದರೆ ಮುಂದಿನ ವಿವರಣೆಗಳು ಬಹುಬೇಗ ಅವರಿಗೆ ಅರ್ಥವಾಗುತ್ತವೆ. ಎಲ್ಲ ವಿದ್ಯಾರ್ಥಿಗಳೂ ಗ್ರಂಥವಿಮರ್ಶಕರಾಗಬೇಕೆಂಬ ಆಸೆಯನ್ನು ಹೊಂದಿರುತ್ತಾರೆ. ಕೆಲವರು ಮಾತ್ರ ಈ ಮಾರ್ಗದಲ್ಲಿ ಪ್ರಯತ್ನಿಸುತ್ತಾರೆ. ಅಂತಹವರಿಗೆ ಯಾವುದು ಮುಖ್ಯವೆನ್ನುವುದನ್ನು ತೋರಿಸುವ ದೃಷ್ಟಿಯಿಂದ 'ಪ್ರಜಾವಾಣಿ' ಪತ್ರಿಕೆಯಲ್ಲಿ ಕೆಲವು ಲೇಖನಗಳನ್ನು ನಾನು ಬರೆದಿದ್ದೆನು. ಅಲ್ಲದೆ ಪ್ರಭಾತ, ಜನಪ್ರಗತಿ, ಜೀವನ, ಕನ್ನಡ ನುಡಿ, ಜನವಾಣಿ ಮುಂತಾದ ಪತ್ರಿಕೆಗಳಲ್ಲಿ ಬಂದ ಕೆಲವು ಲೇಖನಗಳೂ ಆಕಾಶವಾಣಿಯಲ್ಲಿ ಪ್ರಸಾರವಾದ ಕೆಲವು ಭಾಷಣಗಳೂ ಇವೆ. ನನ್ನ ಸ್ನೇಹಿತರನೇಕರು ಇವುಗಳನ್ನೆಲ್ಲಾ ಒಂದುಕಡೆ ಸೇರಿಸಬೇಕೆಂದು ಸೂಚನೆ ಇತ್ತರು. ಅವುಗಳಲ್ಲಿ ಕೆಲವನ್ನು ತಿದ್ದಿ ಸ್ವಲ್ಪ ವಿಸ್ತಾರಮಾಡಿ ಇಲ್ಲಿ ಒಂದಾಗಿ ಪ್ರಕಟಿಸಿದ್ದೇನೆ. ಮಿಕ್ಕವುಗಳನ್ನು ಇನ್ನೊಂದು ಭಾಗವಾಗಿ ಪ್ರಕಟಿಸುತ್ತೇನೆ. ಇವು ಕಿರಿಯರಿಗೆ ಸಹಾಯವಾದಾವೆಂದು ನನ್ನ ಆಸೆ.

ಇಲ್ಲಿಯ ಲೇಖನಗಳಲ್ಲಿ ಒಂದು ಕ್ರಮವನ್ನು ಓದುಗರು ಕಾಣಬಹುದು. ಹಳಗನ್ನಡ ಕಾವ್ಯ, ಹಳಗನ್ನಡ ನಾಟಕ, ಆಧುನಿಕ ಕಾವ್ಯ, ಆಧುನಿಕ ಪದ್ಯ ನಾಟಕ, ಕಾದಂಬರಿ, ಸಣ್ಣಕತೆ, ಒಂದುಪಾತ್ರ, ನವ್ಯಕವಿತೆ ಇವುಗಳಿಗೆ ಸಂಬಂಧಪಟ್ಟಂತೆ ಲೇಖನಗಳನ್ನು ಅಳವಡಿಸಿದ್ದೇನೆ. ವಿವಿಧ ಸಾಹಿತ್ಯಪ್ರಕಾರ ಗಳ ವಿಚಾರದಲ್ಲಿ ರಸಾಸ್ವಾದನದೃಷ್ಟಿ ಬೆಳೆಯಲು ಇವು ಸಹಾಯಕವಾದಾ ವೆಂದು ನನ್ನ ನಂಬಿಕೆ.

ತಮ್ಮಲ್ಲಿ ನನ್ನ ಲೇಖನಗಳಿಗೆ ಆಶ್ರಯಕೊಟ್ಟ ಎಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ. ಪುಸ್ತಕವನ್ನು ಬಹುಬೇಗ ಅಂದವಾಗಿ ಅಚ್ಚುಮಾಡಿ ಕೊಟ್ಟ ಪರಿಷತ್ತಿನ ಅಚ್ಚುಕೂಟದ ಅಧಿಕಾರಿಗಳಿಗೆ ನನ್ನ ವಂದನೆಗಳು.

ಬೆಂಗಳೂರು
20-3-1957

**ಜಿ. ವೆಂಕಟಸುಬ್ಬಯ್ಯ**

# ವಿ ಷ ಯ ಸೂ ಚಿ ಕೆ

೧

# ಹರಿಹರನ

# 'ಗಿರಿಜಾಕಲ್ಯಾಣ ಮಹಾಪ್ರಬಂಧಂ'

ಹದಿಮೂರನೆಯ ಶತಮಾನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಪ್ರಯೋಗ ಕಾಲವೆಂದು ಹೆಸರು ಪಡೆದಿದೆ. ಈ ಸಮಯದಲ್ಲಿ ಹಿಂದಿದ್ದ ಸಂಪ್ರದಾಯಗಳ ಸಂಕೋಲೆಗಳನ್ನು ಮುರಿದು ಸ್ವಾತಂತ್ರ್ಯದ ಮೊದಲ ಸವಿಯನ್ನು ಅನುಭವಿಸಿದ ಅನೇಕ ಕವಿಗಳು ಜೀವಿಸಿದ್ದು ತಮ್ಮ ವಿದ್ಯಾ ಪಾರಂಗತತೆಯನ್ನೂ ಕವಿ ಪ್ರತಿಭೆಯನ್ನೂ ಕಾವ್ಯದಲ್ಲಿ ಬೆಳಗಿದರು. ನೂತನ ಛಂದಸ್ಸು, ನೂತನ ವಸ್ತು, ನೂತನ ನಿರ್ಮಾಣ ಕೌಶಲ, ನೂತನ ಸ್ವಾಚ್ಛಂದ್ಯಗಳು ನಮಗೆ ಈ ಕಾಲದಲ್ಲಿ ಕಾಣುತ್ತವೆ. ವಚನಗಳ ಸುರಿಮಳೆ, ರಗಳೆಗಳ ಬೀಸುಮಳೆ, ಷಟ್ಪದಿಯ ಬಿರುಮಳೆ ಗಳಲ್ಲಿ ಹಿಂದಿನ ವೃತ್ತಕಂದಗಳ ಮಹಾಮಾರ್ಗ ಮುಚ್ಚಿಹೋಯಿತು. ಇಂಥ ಸ್ವತಂತ್ರವೃತ್ತಿಯ ಕಾವ್ಯ ನಿರ್ಮಾಣಕ್ಕೆ ಹರಿಹರನೇ ಪುರೋ ಹಿತನಾಗಿ ಮಾರ್ಗದರ್ಶಕನಾದನು. ವಿದ್ವಾಂಸರು, ವಿರಕ್ತರು, ಶಕ್ತರು, ಭಕ್ತರು ಕವಿ ಗಮಕಿ ವಾದಿ ವಾಗ್ಮಿಗಳೆಲ್ಲ ಭಕ್ತ್ಯಾವೇಶವಶರಾಗಿ ಹಂಪೆಯ ವಿರೂಪಾಕ್ಷನ ಮರೆಹೊಕ್ಕರು. ಮುಕ್ತಿಯ ನೆಲೆಮನೆ ಯಾಗಿಯೂ ಪುಣ್ಯದ ಜನ್ಮಭೂಮಿಯಾಗಿಯೂ ಪಂಪಾ ಕ್ಷೇತ್ರ ಮೆರೆ ಯಿತು. ಸೂರ್ಯೋದಯದಲ್ಲಿ ದಿನಕರನ ಹೊಂಬೆಳಕು ಎಂಟು ದಿಕ್ಕು ಗಳನ್ನು ಬೆಳಗುವಂತೆ ಕನ್ನಡನಾಡಿನ ಎಲ್ಲ ಕಡೆಗಳಲ್ಲಿಯೂ ಈ ಸ್ವಾತಂತ್ರ್ಯಘೋಷ ಪ್ರತಿಧ್ವನಿಮಾಡಿತು.

ಹೊಯ್ಸಳ ದೊರೆಗಳ ಆಶ್ರಯದಲ್ಲಿ ಕರಣಿಕನಾಗಿ ಮೆರೆದ ಹರಿಹರನಮೇಲೆ ಪಿಸುಣರ ಮಾತ್ಸರ್ಯ ಹೆಚ್ಚಿ ಅವನ ಆತ್ಮ ರೋಸಿ, ಹಳೆಯ ಬೀಡನ್ನು ಬಿಟ್ಟು ಹಂಪೆಗೆ ಬಂದಿದ್ದ ಶಿವಕವಿಗೆ ಈ ನೂತನ ಸತ್ಸಂಗದಲ್ಲಿ ಶಿವಸುಖ ದೊರೆಯಿತು. ಶಿವಧ್ಯಾನ, ಶಿವಸಂಗ, ಶಿವಪೂಜೆ ಗಳಲ್ಲಿ ನಿತ್ಯಕರ್ಮಾಸಕ್ತನಾದ ಅವನ ಆತ್ಮ, ಕ್ರಮೇಣ ಕಾವ್ಯ

ಸಮಾಧಿಗೆ ಏರಿ ಭಕ್ತಾಗ್ರಣಿಗಳ ಕತೆಗಳು ಕಾವ್ಯವಾಹಿನಿಯಾಗಿ ಹರಿದವು. ಹಂಪೆಯಲ್ಲಿಬರೆದ ಈ ಎಲ್ಲ ಕಾವ್ಯಗಳೂ ಬಹುಶಃ ರಗಳೆಗಳಾಗಿದ್ದು ಇವಕ್ಕೆ ಹಿಂದೆಯೇ ರಾಜಾಶ್ರಯದಲ್ಲಿಯೇ ಆತನು ಗಿರಿಜಾಕಲ್ಯಾಣವನ್ನು ಬರೆದಿರಬೇಕು.

ಹರಿಹರನ ಕಾವ್ಯರಾಶಿಯಲ್ಲಿ ಗಿರಿಜಾಕಲ್ಯಾಣಕ್ಕೆ ಸತ್ಯವಾಗಿಯೂ ಮೊದಲ ಸ್ಥಾನ ಲಭಿಸುವುದಿಲ್ಲ. ಒಂದು ವೇಳೆ 'ಗಿರಿಜಾ ಕಲ್ಯಾಣ' ವೊಂದನ್ನೇ ಹರಿಹರನು ರಚಿಸಿದ್ದರೆ ಆತನಿಗೆ ಈಗಿರುವ ಮಹತ್ವ ಎಂದೆಂದೂ ಲಭಿಸುತ್ತಿರಲಿಲ್ಲ. ಹಾಗಲ್ಲದೆ ಗಿರಿಜಾಕಲ್ಯಾಣವನ್ನು ಆತನು ರಚಿಸದೆ ಹೋಗಿದ್ದರೂ ರಗಳೆಗಳಿರುವತನಕ ಆತನ ಮಹಿಮೆಯಲ್ಲಿ ಲವಲೇಶವೂ ಕಡಿಮೆಯಾಗುತ್ತಿರಲಿಲ್ಲ.

ಗಿರಿಜಾಕಲ್ಯಾಣದಲ್ಲಿ ಆರಂಭದ ಕವಿಯ ಎಲ್ಲ ಚಮತ್ಕಾರಗಳೂ ಕಂಡುಬರುತ್ತವೆ. ಆದರೂ ಗಿರಿಜಾ ಕಲ್ಯಾಣವನ್ನು ಅತಿಸಾಮಾನ್ಯ ಕಾವ್ಯವೆಂದು ಕಡೆಗಣಿಸುವಹಾಗಿಲ್ಲ. ಹರಿಹರನ ಔನ್ನತ್ಯವನ್ನು ನೆನೆದರೆ 'ಗಿರಿಜಾ ಕಲ್ಯಾಣ'ವು ಸಾಮಾನ್ಯವಾಗಿ ಕಾಣುತ್ತದೆ. ಸಾಮಾನ್ಯರ ದೃಷ್ಟಿಯಿಂದ ಅದಕ್ಕೆ ಸಲ್ಲುವ ಗೌರವ ಸಲ್ಲಲೇಬೇಕು.

## ಕಥಾವಸ್ತು

ಹಿಮಗಿರಿರಾಜನ ಮೆಚ್ಚಿನ ಮಡದಿ ಮೇನಾದೇವಿ 'ಬಹುಸಂತಾನಾತುರೆ'ಯಾಗಿ ಪುತ್ರಿಯ ಬಯಕೆಯಿಂದ ಗಿರಿರಾಜನ ಅಪ್ಪಣೆ ಪಡೆದು ರಮ್ಯಸ್ಥಾನದಲ್ಲಿ ನಿಂತು ತಪಸ್ಸನ್ನು ಮಾಡಿದಳು. ದಕ್ಷಯಜ್ಞಕ್ಕೆ ಹೋಗಿದ್ದ ಕಾತ್ಯಾಯಿನಿಯು ತನ್ನ ತಂದೆಯು ತನ್ನ ಪತಿಯನ್ನು ನಿಂದಿಸಿದುದನ್ನು ಸಹಿಸಲಾರದೆ ಮೇನೆಯ ಹೃತ್ಕಮಲದ ಬೆಳಗಿನೊಳಗೆ ಬೆಳಗಾಗಿ ಮೆರೆದಳು. ಸುಮುಹೂರ್ತದಲ್ಲಿ ಜನ್ಮ ತಳೆದ ಗೌರಿಯು ಕಣ್ಮುಚ್ಚಿ ಶಿವಲಿಂಗೇಕ್ಷಣಲೋಲುಪೆಯಾಗಿದ್ದಳು. ಗುರು ಶೈವಾಚಾರ್ಯರ ಸೂಚನೆಯಂತೆ ಶಿವಲಿಂಗವನ್ನು ತೋರಿದ ಮೇಲೆ ಆಕೆ ಕಣ್ದೆರೆದಳು. ಅನಸೂಯೆ, ಅರುಂಧತಿ, ಕಮಲೆ, ಸರಸ್ವತಿಯರ ಸೇವೆ ಪಡೆದು ಶೈವಲೀಲೆಯನ್ನೊಳಗೊಂಡು ಗಿರಿಜೆ ಬೆಳೆದಳು. "ಅಲರ್ಗ

ಣೆಗೆ ಕೊರ್ಪ್ಪ ಕೊಡುವ ತೆರದಿಂದ" ಚೆಲುವಿಗೆ ಆಕರ್ಷಣೆ ಸೇರಿ ದಶವರ್ಷವಾದ ಗಿರಿಜೆಗೆ ವರನನ್ನು ಹುಡುಕುವುದು ಗಿರಿರಾಜನಿಗೆ ಕಷ್ಟವಾಯಿತು. "ವರನನಿಂದುಧರನೇ ಬಲ್ಲ"ನೆಂದು ಗಿರಿರಾಜನು ವ್ಯಗ್ರನಾಗಿದ್ದಾಗ ನಾರದಮಹರ್ಷಿಯು ಬಂದು ಮಹೇಶ್ವರಿಯ ಅವತಾರವಾಗಿದ್ದ ಗಿರಿಜೆಯನ್ನು ಹೇಮಕೂಟಾಚಲದಲ್ಲಿ ತಪಸ್ಸು ಮಾಡುತ್ತಿದ್ದ ಈಶ್ವರನ ಬಳಿಗೆ ಕಳುಹಿಸಬೇಕೆಂದು ಬುದ್ಧಿವಾದವನ್ನು ಹೇಳಿದನು. ನಾರದನ ಬೋಧೆಯಿಂದ ಜ್ಞಾನಸದ್ಭಾವವು ಹುಟ್ಟಿ ಆತನು ಹೇಮಕೂಟಾಚಲಕ್ಕೆ ಮಗಳನ್ನು ತಂದು ಬಿಟ್ಟನು. ಅಲ್ಲಿ ಗಿರಿಜೆಯು ಪ್ರತಿನಿತ್ಯವೂ ಪುಷ್ಪಾಪಚಯ ಮಾಡಿ ಅನೇಕ ರೀತಿಯ ಮಾಲೆಗಳನ್ನು ಕಟ್ಟಿ ಶಿವಪೂಜೆ ಮಾಡುತ್ತಿದ್ದಳು.

ಇದೇ ಸಮಯದಲ್ಲಿ ತಾರಕಾಸುರನ ಅಕ್ರಮ ಕಾರ್ಯಗಳಿಂದ ಪರಾಭವಗೊಂಡ ಬ್ರಹ್ಮ, ಇಂದ್ರ ಮುಂತಾದವರು ಈಶ್ವರನಿಂದ ಕುಮಾರಜನನವಾಗಬೇಕೆಂದು ಬಯಸಿ ಮನ್ಮಥನ ಮರೆಹೊಕ್ಕರು. ಕಾಮನು ಮೊದಲು ಹೆದರಿದರೂ ಲೋಕಕಲ್ಯಾಣಕ್ಕಾಗಿ ಮನಸ್ಸು ಮಾಡಿ ಶಿವನ ಕೋಪಕ್ಕೆ ತುತ್ತಾಗಿ ಭಸ್ಮೀಭೂತನಾದನು. ಈಶ್ವರನು ಕಣ್ಣುಬಿಟ್ಟಾಗ ಎದುರಿಗೆ ಗಿರಿಜೆ ಕಂಡರೂ ನುಡಿಸದೆ, ಸೋಂಕದೆ ಅವನು ಕೈಲಾಸಕ್ಕೆ ಹೊರಟುಹೋದನು. ಆಗ ಗಿರಿಜೆಯು ನಾನಿದ್ದರೂ ನುಡಿಸದೆ ಹೋದ ಶಿವನನ್ನು ನಾನಿದ್ದಲ್ಲಿಗೇ ತರುತ್ತೇನೆ ಎಂದು ಹಟತೊಟ್ಟು ಬೇಸಗೆ ಮಳೆಗಾಲ ಹಿಮಗಾಲಗಳಲ್ಲಿ ಘೋರ ತಪಸ್ಸು ಮಾಡಿ ಈಶ್ವರನನ್ನು ಸಾಕ್ಷಾತ್ಕರಿಸಿಕೊಂಡಳು. ಈಶ್ವರನು ಕರುಣೆಯಿಂದ ಬಂದು ಗಿರಿಜೆಯನ್ನು ಕೈಲಾಸಕ್ಕೆ ಬರುವಂತೆ ಕರೆದನು. ಆದರೆ ಗಿರಿಜೆಯು ತನ್ನ ತಂದೆಯನ್ನು ಒಪ್ಪಿಸಿ ಮದುವೆ ನಿಲ್ಲಬೇಕೆಂದು ಕೇಳಿದಳು. ಅದರಂತೆಯೇ ಶಿವನು ಸಪ್ತರ್ಷಿಗಳನ್ನು ಕಳುಹಿಸಿ ಗಿರಿರಾಜನಿಂದ ಗಿರಿಜೆಯನ್ನು ಬೇಡಿ ಅವಳನ್ನು ಮದುವೆಯಾದನು. ಅತ್ತೆಮಾವಂದಿರು ಗಿರಿಜಾ ಶಂಕರರನ್ನು ಕೈಲಾಸಕ್ಕೆ ತಂದು ಮನೆತುಂಬಿಸಿ 'ನಿಮಗೆ ಶಿವವಾಗಲೆ'ಂದು ಹರಸಿ ಹಿಂದಿರುಗಿದರು. ಈ ಕತೆಯನ್ನು ಮೂಲವಾಗಿಟ್ಟುಕೊಂಡು ಹರಿಹರನು ಗಿರಿಜಾ ಕಲ್ಯಾಣ ಮಹಾ

ಪ್ರಬಂಧವನ್ನು ರಚನೆ ಮಾಡಿದ್ದಾನೆ. ಈ ಕಾವ್ಯದಲ್ಲಿ ಕಾಣುವ ಗಿರಿಜೆಯ ಬಾಲಲೀಲೆಯನ್ನೂ ಕಾಮದಹನ ಚಿತ್ರವನ್ನೂ ರತಿವಿಲಾಪ ವನ್ನೂ ಗಿರಿಜೆಯ ತಪಃಪ್ರಭಾವವನ್ನೂ ಹರಿಹರನ ವರ್ಣನಾಕೌಶಲ ವನ್ನೂ ನಾವು ಇನ್ನು ಪರಿಶೀಲಿಸಬಹುದು.

## ಹಿಮರಾಜ ಪುತ್ರಿಯ ಬಾಲಲೀಲೆಗಳು

ದೇವತೆಗಳ ಕತೆಯನ್ನು ಆರಿಸಿಕೊಂಡು ಅವರ ವೈಭವವನ್ನು ಹೊಗಳುವುದು ಭಕ್ತನ ಮನಸ್ಸಿನ ಆಸೆ. ಭಕ್ತಿಯೂ ಕವಿಪ್ರತಿಭೆಯೂ ಒಂದೆಡೆ ಸೇರಿದರೆ ಕೇಳಬೇಕೆ?

ಹರಿಹರನು ಇಂತಹ ಕವಿಯಾದುದರಿಂದ ಅವನ ಕಾವ್ಯವನ್ನು ಭಕ್ತನ ದೃಷ್ಟಿಯಿಂದಲೇ ಓದಬೇಕು. ಆಗ ಮಾತ್ರ ಅಲ್ಲಿ ಕಾಣುವ ಅತ್ಯುಕ್ತಿಗಳು ನಮಗೆ ಅಲ್ಪೋಕ್ತಿಗಳಾಗಿ ದೇವನ ಮಹಿಮೆಯ ಪರಿಚಯವಾಗುವುದು.

ಮಹಾದೇವಿಯಾದ ಪಾರ್ವತಿಯ ಜನ್ಮಧಾರಣೆಗೆ ಕಾರಣವನ್ನೂ, ಆ ಪುಣ್ಯವನ್ನು ಪಡೆಯುವ ದೇಶವನ್ನೂ ಮುಂಚೆಯೇ ನಮಗೆ ಕವಿಯು ಪರಿಚಯ ಮಾಡಿಕೊಡುತ್ತಾನೆ.

ಗಿರಿರಾಜನ ದೇಶವು ಇಳೆಗೇ ವಿಭೂಷಣವಾಗಿತ್ತು. ಅಲ್ಲಿಯ ಕಲ್ಲು ಪರುಷ, ತರುಗಳು ಕಲ್ಪತರುಗಳು, ಗೋವೆಲ್ಲ ಕಾಮಧೇನುಗಳು. ಇಂತಹ ದೇಶದಲ್ಲಿ ಔಷಧಿ ಪ್ರಸ್ಥಪುರವು ನಾಡಿಗೆ ಶಿರೋಮಣಿಯಾಗಿ ದುರ್ಗಕೋಟೆಗಳಿಂದ ಬಲಿದು ಸರ್ವಋತುಗಳಲ್ಲಿಯೂ ಒಂದೇ ರೀತಿ ಯಲ್ಲಿರುವ ಉದ್ಯಾನಗಳಿಂದ ಮೆರೆಯುತ್ತಾ ಇತ್ತು. ಗಿರಿರಾಜ ಮೇನಾ ದೇವಿಯರು ಮೈನಾಕನೆಂಬ ಮಗನನ್ನು ಪಡೆದು ಸುಖವಾಗಿದ್ದರು. ಆದರೂ ಬಹುಸಂತಾನಾತುರೆಯಾದ ಮೇನೆಗೆ ಪುತ್ರಿಯ ಬಯಕೆ ಹೆಚ್ಚಾಯಿತು. ಅವಳು ಪತಿಯನ್ನು ಒಪ್ಪಿಸಿ ಮಹಾದೇವಿಯನ್ನು ಕುರಿತು ತಪಸ್ಸು ಮಾಡಿದಳು.

ಮುಗಿದುವು ನಯನಸರೋಜಂ
ಬಿಗೆಯಲರ್ದುದು ಚಿತ್ತಕೈರವಂ, ವೀಕ್ಷೇಜಿ

ತ್ತು ಗಭೀರ ತಪೋವಾರಿಧಿ
ಬಗೆಯೊಳಗಾಧ್ಯಾನ ಚಂದ್ರನುದಯಿಸುವಾಗಳ್

ಇಂತಹ ತಪಸ್ಸಿಗೆ ಭವಾನಿಯು ಮೆಚ್ಚಿ—

"ಸುರತರುವಿಂ ಬೀಜಂ....ಬಂಧುರ ಕುಸುಮದೆ ಕಂಪು" ಬರುವ ಹಾಗೆ ಬಂದು ಮೇನೆಯ ಕೃತ್ಕಮಲವನ್ನು ಸೇರಿದಳು. ಸುಮುಹೂರ್ತ ಗಳು ಅಹಮಹಮಿಕೆಯಿಂದ ಮುಂದೆ ಬಂದಿದ್ದಾಗ "ಅಲರ್ದ ಸರೋಜ ದಿಂದವೊಗೆತರ್ಪ ಲಸತ್ಕಳಹಂಸಿಯಂತೆ" ಮೇನೆ ಜನಿಸಿದಳು. ಆಗ "ಕಾಮಂ ತಳೆದಂ ನಿಜ ಭುಜಬಲಮಂ, ಪುಲಕಿತವಾಯ್ತು ಇಂದುಧರನ ವರವಾಮಾಂಗಂ !"

ಹೀಗೆ ಜನ್ಮತಾಳಿದ ಶಿವಭಕ್ತೆ ಸುಮ್ಮನೆ ಕಣ್ಣು ಬಿಡುವುದುಂಟೆ? ಅವಳು ಶಿವನನ್ನೇ 'ನಚ್ಚಿಮಚ್ಚಿ' ಕಣ್ಣುಗಳನ್ನು ಮುಚ್ಚಿದ್ದಳು. ಗುರು ಗಳಾದ, ಪರಮಜ್ಞಾನಿಗಳಾದ ಗುರುಶೈವಾಚಾರ್ಯರ ಬುದ್ಧಿವಾದದಂತೆ ಶಿವಲಿಂಗವನ್ನು ತೋರುವ ತನಕ ಕಣ್ಣುಗಳನ್ನು ಬಿಡಲೇ ಇಲ್ಲ. ಹಾಗೆ ಶಿವಲಿಂಗವನ್ನು ತಂದು

ತೋರಲೊಡಂ ಕಣ್ದೆರೆದಳ್
ಪೇರಿದಳೆರಡುಂ ಕರಂಗಳಂ ನೊಸಲೊಳ್ಸೊಂ
ಪೇರಿದಳಭವನೊಳಗೆ ಬೇ
ರೂರಿದಳಂಕುರಿಸಿಪಲ್ಲವಿಸಿ ಫಲವಾದಳ್

ಆಕೆಯ ಪುಣ್ಯಕೀರ್ತಿಲತೆ ಭೂಮಿಯಲ್ಲಿ ಗಡಿಗೆಟ್ಟು ಧೀಂಕಿಟ್ಟಿತು. ಮಗುವಿಗೆ 'ಗಿರಿಜಾತೆ' ಎಂದು ಹೆಸರಿಟ್ಟು, ಮಣಿಗಣಪ್ರಭಾಸಂಪುಟ ವಾದ ರತ್ನದ ತೊಟ್ಟಿಲೊಳಗೆ ಇಟ್ಟರು. ಜೋಗುಳವನ್ನು ಹಾಡಿ ಅನಸೂಯೆ, ಅರುಂಧತಿ, ಲಕ್ಷ್ಮೀ, ಸರಸ್ವತಿ ಮತ್ತು ಸಪ್ತಮಾತೃಕೆ ಯರು ಸೇವೆ ಮಾಡಿದರು.

ಈ ಬಾಲ್ಯದಲ್ಲಿ ಗಿರಿಜೆಗೆ ಶಿವಲೀಲೆಯೇ ಆಟವಾಯಿತು. ಅವಳು ನಕ್ಕರೆ ಕರುಣಾಮಯದ ಮೃದುವಾದ ಕವಾಟವು ತೆಗೆದಂತಾಗುತ್ತಿತ್ತು. ಗೋಡೆ ಹಿಡಿದು ನಡೆಯುವುದು, ದಟ್ಟಡಿಯಿಟ್ಟು ಮುಂಬರಿಯುವುದು ಮುಂತಾದ ಆಟಗಳಿಂದ ಮಗು 'ಪರಮನರಮನೆಯಾದ' ಈಶ್ವರ ದೇವ

ಸ್ಥಾನಕ್ಕೆ ಬರುತ್ತಿದ್ದಳು. "ತೊಳತೊಳಗಿ, ಬೆಳಬೆಳಗಿ, ನಳನಳಿಸಿ" ಬೆಳೆಯುತ್ತಿರುವ ಗಿರಿಜೆಯ ಮಾತುಗಳು ಅವಳ ನಾಲಗೆಯ ಸವಿಯನ್ನು ಸವಿದು ಮುದಿಸಿದಂತೆ ಹೊರಸೂಸುತ್ತಿದ್ದುವು. ತನ್ನ ಅಂತಃಕರಣದಲ್ಲಿ ಕಂಡ ಹರನ ಅಂಘ್ರಿಗಳನ್ನು ಹೊರಗೂ ಕಾಣಬೇಕೆಂಬ ಆಸೆಯಿಂದ ಕಣ್ಣನ್ನು ಅರಳಿಸುತ್ತಿದ್ದಳು. ಅವಳ ಕಿವಿಯಲ್ಲಿ ಒಲಿದಾಡುವ 'ಮಾಗಾಯಿಗೆ' ಕೂಡ ಆತ್ಮಾಭಿಮಾನ ಹೆಚ್ಚಿತು. "ನೋಡು, ಅಭವ ವಲ್ಲಭೆಯ ಕಿವಿಗೂಡಿದೆವು" ಎನ್ನುವಂತೆ ಅವು ತೂಗಾಡುತ್ತಿದ್ದುವಂತೆ. ಮೂಗಿನ ಮುತ್ತು ಈಶ್ವರನ ಕೀರ್ತ್ಯಂಕುರದಂತೆ ಗಿರಿಜೆಯ ಮೂಗಿನಲ್ಲಿ ಬೆಳಗುತ್ತಿತ್ತು. ಅವಳ ಕಾಲ್ಗೆಜ್ಜೆಯ ರವ ವೇದಘೋಷದಂತೆ ಪವಿತ್ರವಾಗಿತ್ತು. ಹೀಗೆ ಬೆಳೆದು ಹದಿನಾರು ಸಾವಿರ ಸೇವಕಿಯರಿದ್ದರೂ ಯಾರ ಸಹಾಯವನ್ನೂ ಪಡೆಯದೆ, ಅಭ್ಯಾಸವಿಲ್ಲದೆಯೇ ಅಪೂರ್ವ ಸರ್ವವಿದ್ಯೆಗಳನ್ನೂ ಕಲಿತು, ಎಲ್ಲ ಕಡೆಯಲ್ಲಿಯೂ ಈಶ್ವರನ ಪೂಜೆಯೊಂದೇ ಕರ್ಮವಾಗಿ ಇದ್ದಳು ಅವಳು.

ಹೂವು ಸಿಕ್ಕುವ ಕಡೆ ಪೂಜೆ, ನೀರು ಸಿಕ್ಕುವ ಕಡೆ ಅಭಿಷೇಕ, ಹಣ್ಣು ಸಿಕ್ಕುವ ಕಡೆ ನೈವೇದ್ಯವೆನ್ನುವಂತೆ, ಇವಳ ಅರ್ಚನೆ. ನುಣುಪಾದ ಮರಳನ್ನು ತೆಗೆದು ದಿವ್ಯವಾದ ಲಿಂಗವನ್ನು ಸಮೆದು ಆನಂದಾಶ್ರುವನ್ನೂ ರೋಮಾಂಚವನ್ನೂ ಪಡೆದು ಮನಸ್ಸೆಂಬ ಕುಸುಮದಿಂದ ಪೂಜೆಮಾಡುತ್ತಿದ್ದಳು. ಹಸಿವು ಬಾಯಾರಿಕೆ ಬಿಟ್ಟು ಪೂಜೆಮಾಡುವ ಈ ವಿಚಾರವು ಗಿರಿರಾಜನ ಕಿವಿಗೂ ಮುಟ್ಟಿತು. ಚಿತ್ರಾರ್ಪಿತವಾದಂತೆ ಎರಕ ಹೊಯ್ದಂತೆ, ಕಂಡರಿಸಿದಂತೆ ಇದ್ದು ಶಿವಪೂಜೆ ಬೇಡವೆಂದರೂ ಕೇಳುತ್ತಿರಲಿಲ್ಲ.

ಬೇಡೆಂದೊಡೆ ಮಾಣಳ್ ನಲಿ
ದಾಡುವಳಪ್ಪವಳಮರ್ಚವಳ್ ಪುಳಕಿಪ್ಪಳ್
ಮಾಡುವ ಲಿಂಗಾರ್ಚನೆಯೊಳ್
ನೊಡಳ್ ನುಡಿಯುಳ್, ಭವಾನಿಯೇನೆಂದರಿಯುಳ್

ಇಂತಹ ಮಗಳನ್ನು ಗಿರಿರಾಜನು ಕಂಡು ಹತ್ತಿರಕ್ಕೆ ಕರೆದು ಮಾತನಾಡಿಸುತ್ತಿದ್ದನು. ಗಿರಿಜೆಯೂ ಕೂಡ ಪುತ್ರೀಭಾವದ ನಟನೆ

ಗಾಗಿ ತಂದೆಯ ಬಳಿಗೆ ಹೋಗುತ್ತಿದ್ದಳು. ಹೀಗೆ ಬಾಲ್ಯವೆಲ್ಲ ಶಿವಪೂಜಾ ತತ್ಪರತೆಯಲ್ಲಿಯೇ ಕಳೆದುಹೋಯಿತು.

ಈ ಬಾಲಲೀಲೆಯಲ್ಲಿ ನಮಗೆ ಗಿರಿಜೆಯ ಬಾಲ್ಯದ ಸವಿ ನೆನಪು ಉಂಟಾಗುವುದಕ್ಕಿಂತ ಹೆಚ್ಚಾಗಿ ಹರಿಹರನ ಶಿವಭಕ್ತಿಯ ನೆನಪು ಸಾಧಿತವಾಗುತ್ತದೆ. ಕವಿ ತನ್ನ ಭಕ್ತಿಯ ಆಧಿಕ್ಯವನ್ನು ಭವಾನಿಗೂ ಆರೋಪಣೆ ಮಾಡಿ ಬಾಲಲೀಲೆಯ ವರ್ಣನೆಯಲ್ಲಿ ಅಸಹಜತೆಯನ್ನು ತಂದಂತೆ ಕಾಣುತ್ತದೆ. ಆದರೆ ಅವತಾರ ಮಾಡಿದ ಮಹಾದೇವಿಯ ನಡವಳಿಕೆಯನ್ನೂ ವ್ಯವಹಾರವನ್ನೂ ವಿಮರ್ಶೆಮಾಡಲು "ಕೇವಲ ಮಣ್ಣಿನ ಬೊಂಬೆಗಳಾದ ನಾವಾರು?" ಎಂದು ಕೇಳುತ್ತಾನೆ ಹರಿಹರ. ಅವನಿಗೆ ಉತ್ತರ ಹೇಳುವುದು ಕಷ್ಟ.

## ಮನ್ಮಥ ಗರ್ವಭಂಗ

ಗಿರಿಜೆಯು ಸಾಮಾನ್ಯಳೇ! ಹತ್ತುವರ್ಷವಾಗುವ ಹೊತ್ತಿಗೆ ಆಗಲೇ "ಅಲಗ್ರ್ಣಿಗೆ ಕೂರ್ಪು ಕೊಡುವ ಹಾಗೆ" ದೇಹಕ್ಕೆ ಸೌಂದರ್ಯದ ಆಕರ್ಷಣೆ ಸೇರಿಕೊಂಡಿತು. ಈ ಬಾಲಕಿಯ ನಡೆವಳಿಕೆಯು ನಿಷ್ಕಳಂಕ ವಾಗಿತ್ತು. ಅವಳ ಮನದ ಆಸೆ ವದನದಲ್ಲಿ ಹೊಳೆಯುತ್ತಿತ್ತು. ಕಣ್ಣುಗಳು ಮಾತಾಡುವಂತೆ ಕಂಡುವು. ಕೆನ್ನೆಗಳಲ್ಲಿ ನಗು ಹೊರ ಹೊಮ್ಮಿತು. ಹುಬ್ಬಿನಲ್ಲಿ ಕೋಪ, ಬುದ್ಧಿಯಲ್ಲಿ ಜ್ಞಾನ. ಇನ್ನೇನು ಬೇಕು ಪೂರ್ಣ ಸೌಂದರ್ಯಕ್ಕೆ!

ಈ ರೂಪಿಂಗೀ ಯೌವನ
ಕ್ಕೀರಮಣೀಯಾಂಗವತಿಗೆ ಮಿಗೆಸೌಂದರ್ಯ
ಕ್ಕೀರಾಜಿಪ ಗಿರಿಜೆಯ ವಿ
ಸ್ತಾರಕ್ಕಂ ವರನನಿಂದುಧರನೇ ಬಲ್ಲಂ

ಎಂದು ಗಿರಿರಾಜನು ಆಲೋಚನಾಪರನಾದನು. ಅಷ್ಟು ಹೊತ್ತಿಗೆ ಸರಿಯಾಗಿ "ಅಮೃತ ಮಯೂಖಮಂಡಲದಿನೇಳ್ತರುತೀರ್ಪ ಶಶಾಂಕ ಮೂರ್ತಿಯಂತೆ" ನಾರದನು ಬಂದು ಗಿರಿರಾಜನ ಸತ್ಕಾರವನ್ನು ಸ್ವೀಕರಿಸಿ ಗಿರಿಜೆಯು ಬಂದ ಒಡನೆಯೇ ತಾನೇ ಅವಳಿಗೆ ನಮಸ್ಕಾರ

ಮಾಡಿ ಸ್ತೋತ್ರ ಮಾಡಿದನು. ಗಿರಿರಾಜನು "ಎಮ್ಮ ಮಗಳ್ಗೆ ಸಿಷ್ಮರ್ದಿಗಳ್ ವಂದನೆಗೆಯ್ವುದತ್ಯಾಶ್ಚರ್ಯಮೆಂ"ದು ಅಜ್ಞಾನದಿಂದ ನುಡಿದನು. ದಿವ್ಯಜ್ಞಾನಿಯಾದ ನಾರದನು ನಸುನಗುತ್ತಾ "ಈಬಾಲೆಯುಂ ಪುತ್ರಿಯೆಂಬೊಂದವಿಚಾರಂ ಬೇಡ" ಎಂದು ಬುದ್ಧಿ ಹೇಳಿ ಅವಳನ್ನು ಹೇಮಕೂಟಾಚಲದಲ್ಲಿ ಯೋಗಾಭ್ಯಾಸನಿರತನಾಗಿದ್ದ ಪರಮೇಶ್ವರನಲ್ಲಿಗೆ ಕಳಿಸುವುದೇ ಸರಿಯೆಂದು ತಿಳಿಸಿದನು.

ಪುಣ್ಯಂ ಪಣ್ತಾದ ತೆರದೆ

ತಪಸ್ವಿಗಳಿದ್ದ ಹೇಮಕೂಟಾಚಲಪ್ರಾಂತಕ್ಕೆ ತಂದೆ ಮಕ್ಕಳು ಬಂದರು. ಜಯೆವಿಜಯೆಯರು ಭವಾನಿಗೆ ಸಖಿಯರಾಗಿ ನಿಂತರು. ಈಶ್ವರನ ತಪೋವೇಷವನ್ನೂ, ಪ್ರಭಾಮಂಡಲವನ್ನೂ ಕಂಡು ಗಿರಿಜೆಗೆ ಕಾರ್ಪಣ್ಯ, ಅಹಂಕಾರ, ನಿರ್ವೇದ, ಆಸೆ ಮುಂತಾಗಿ ನಾನಾ ಭಾವಗಳು ತಲೆದೋರಿದುವು. ಅವಳು ಭಕ್ತಿಪ್ರದನಾದ ಈಶ್ವರನ ಪ್ರಸನ್ನತೆಗೆ ಪೂಜೆಯೇ ಸಾಧನವೆಂದು ಪುಷ್ಪಾಪಚಯ ಮಾಡಿ, ಅನೇಕ ರೀತಿಯಲ್ಲಿ ಮಾಲೆಗಳನ್ನು ಕಟ್ಟಿ, ಪೂಜಿಸುವಾಗ

ಪೊಸಜಡೆಯೊಳ್ ತೊಡಂಕಿ, ನೊಸಲೊಳ್
ನಡಪಾಡಿ, ಕಪೋಲಭಾಗದೊಳ್
ಪಸರಿಸಿ, ಲೋಚನಂಗಳೊಳ ಮುರ್ಚಿ
ತದಾಸ್ಯದೊಳೊಂದಿ, ಕಂಠದೊಳ್
ಮಿಸುಗಿ ಭುಜಾಗ್ರದೊಳ್ ತೊಳಗಿ,
ವಕ್ಷದೊಳಾಳ್ದು, ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬೀಳ್ದುವು ಭವಾನಿಯ ಮಾಸಿಯ ದೈನ್ಯದೃಷ್ಟಿಗಳ್

ಪಾರ್ವತಿಯ ಶಿವಾರ್ಚನೆ ಹೀಗೆ ನಡೆಯುತ್ತಿದ್ದಾಗ, ಅತ್ತ ಕಡೆ ದೇವತೆಗಳು ತೀವ್ರವಾದ ಕಷ್ಟಕ್ಕೆ ಒಳಗಾಗಿದ್ದರು. ತಾರಕಾಸುರನು ಭೂಮಿಯನ್ನು ನಾಶಮಾಡಿ, ದಿಕ್ಪಾಲಕರನ್ನು ತುಳಿದು ನಾಗಲೋಕವನ್ನು ಹಿಂಡಿ ಅಕ್ರಮಕಾರ್ಯಧುರಂಧರನಾಗಿದ್ದನು. ಸ್ವರ್ಗದವರೆಲ್ಲ ಓಡೋಡಿ ಮುಚ್ಚಿಟ್ಟುಕೊಂಡರು. ಬ್ರಹ್ಮ, ಇಂದ್ರ ಮುಂತಾದವರು ಇನ್ನೊಮ್ಮೆ ಯುದ್ಧಕ್ಕೆ ಪ್ರಯತ್ನಿಸಬೇಕೆಂದು ಆಲೋಚಿಸಿದರು. ಆದರೆ ವಿಷ್ಣು ತಮ್ಮೆಲ್ಲರ ಬಲಾಬಲಗಳ ವಿಮರ್ಶೆ ಮಾಡಿ

ಆಯ್ದುಂ ಮುಖದಭವಂಗಿ ।
ರಯ್ದುಂ ಭುಜದೀಶ್ವರಂಗೆ ಷಣ್ಮುಖನುದಯಂ
ಗೆಯ್ದೀಳನೆಯ ದಿನಂಬಂ
ದೆಯ್ದಿದೊಡತ್ಯುಗ್ರತಾರಕಾಸುರನಳಿವಂ

ಎಂಬ ಬ್ರಹ್ಮನ ಮಾತು ಸತ್ಯವೆಂದೂ, ಆದುದರಿಂದ ಈಶ್ವರನ ಮನಸ್ಸನ್ನು ಚಲಿಯಿಸುವ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದೂ ನಿಶ್ಚಯಿಸಿದನು. ಅದರಂತೆ ಮನ್ಮಥನನ್ನು ಕರೆತರಿಸಿ ಅವನಿಗೆ ಹೀಗೆ ಹೇಳಿದನು :

ಆರಿಂದಂ ಸಾಯಂ ತ್ರಿಪು
ರಾರಿಗೆ ಪುಟ್ಟಿದ ಕುಮಾರನಿಂದಲ್ಲದವಂ
ತೀರಂ ತಾರಕನಂತದು
ಕಾರಣದಿಂ ಪಾಳ್ಪ ಕಜ್ಜಮುಂಟೀಪದದೊಳ್

ತಪಮಂ ಕೆಡಿಪುದು ಮಾಡುವ
ಜಪದಕ್ಷರದೊಳಗೆ ನಿನ್ನ ನನೆಯಂಬಂಕೀ
ಲಿಪುದಾ ಗಿರಿಜಾವಧು ಸೌ
ಖ್ಯ ಪದಾವರಣಾತ್ಮನೆನೆಸುವುದು ಶಶಿಧರನಂ

ಅಷ್ಟೇ ಅಲ್ಲದೆ ಈ ಕೆಲಸಕ್ಕೆ "ನೀನೇ ಬಲ್ಲೆ ನೀನೆ ಸಮರ್ಥ" ಎಂದೂ ಹೊಗಳಿದನು.

'ವೇದಗಳ ಶಕ್ತಿಗೆ ಒಳಗಾಗದ, ಮನುಗಳಿಗೂ, ಶಾಸ್ತ್ರಗಳಿಗೂ ಸಿಕ್ಕದ ಅಪ್ರತಿಹತರೂಪನಾದ ಈಶ್ವರನನ್ನು ಕಾಣುವುದು ಹೇಗೆ' ಎಂದು ಕಾಮನಿಗೆ ಯೋಚನೆಯುಂಟಾಯಿತು. ಮನಸ್ಸಿಗೆ ಪ್ರೇರಣೆ ಮಾಡುವವನೇ ಆತ, ಅವನನ್ನು ಬಾಣಕ್ಕೆ ಗುರಿಮಾಡುವವರು ಯಾರಿದ್ದಾರೆ? "ಹರಿಯಲ್ಲಿಗೆ ತಮಮಂ, ಕೇಸರಿಯಲ್ಲಿಗೆ ಕರಿಯಂ" ಕಳುಹುವಂತೆ ತನ್ನನ್ನು ಈಶ್ವರನಲ್ಲಿಗೆ ಕಳುಹಿದರೆ ಗತಿಯೇನು? ಎಂದು ಮನ್ಮಥನೇ ಕೇಳಿದನು. ಆಗ ಮುಕುಂದನು "ನಿನ್ನಿಂದಂ ಸಕಳಜಗಂ ಸುಖದಿಂದಿರ್ಪೊಡೆ ಹರಣದೊಂದು ಹುರುಳರಸುವರೇ?" ಎಂದು ಪ್ರೋತ್ಸಾಹ ಮಾಡಿದನು. ಇಷ್ಟು ಕಾಮನಿಗೆ ಸಾಕಾಯಿತು. ಅವನು :

. . . . . . . . . . . . . . . . . . ಸಕಳಭು
ವನಮೆನ್ನಿಂ ಪರಮಸುಖದೊಳಿರ್ಪುದು ಗಡಮಾ
ನೆನಿತರವನೆನ್ನ ಹರಣಂ
ಘನವೇ, ತೆಗೆ, ಇಂದೆ ನೂಱು ತೀವಿತ್ತೆಂದಂ

ಮನ್ಮಥನು ಮನಸ್ಸುಮಾಡಿದ ಮೇಲೆ ಕೇಳಬೇಕೆ! ವಸಂತಮಾಸ ಕಾಲಿಟ್ಟಿತು, ಕೋಗಿಲೆ ಕೂಗಿತು. ಮಾವು ತಳಿತು, ಮಂದಾನಿಲ ಬೀಸಿ ಉದ್ಯಾನವು ಕೆಂಪು ಹಸುರು ಬಿಳಿಪೂಗಳಿಂದ ಪ್ರಕಾಶಿಸಿತು.

ಇಕ್ಷುಧನುವುಂ ಕುಸುಮಾಸ್ತ್ರಮು
ಮೆನ್ನಕೆಯ್ಗೆ ಸಂದಣಿಸೆ

ಯಾರು ತಾನೆ ನನ್ನ ಎದುರಿಗೆ ನಿಲ್ಲುತ್ತಾರೆ ಎಂದು ಮನ್ಮಥನು ವಿಜಯಪ್ರಯಾಣಮಾಡಿದನು. ಯತಿಗಳ, ಮುನಿಗಳ, ವ್ರತಿಗಳ ಮನಸ್ಸು ಚಲಿಸಿತು. ಹೇಮಕೂಟಾಚಲದ ಪ್ರಾಂತಕ್ಕೆ ಬಂದ ಒಡನೆಯೇ ಈಶ್ವರನ ತಪಸ್ಸಿಗೆ ಕಾವಲಾಗಿದ್ದ ನಂದಿಕೇಶ್ವರನ ಮನಸ್ಸಿಗೆ ಸಂಚಲತೆಯುಂಟಾಯಿತು. ಆತನು ಕೋಪದಿಂದ ನೋಡಿದ ಕೂಡಲೇ ಕಂತುರಾಜನ ಸೈನ್ಯಕ್ಕೆ ವ್ಯಾಕುಲವುಂಟಾಯಿತು. “ಈ ನಂದೀಶನ ಕೋಪವೇ ಈರೀತಿಯಾದರೆ ಈಶ್ವರನನ್ನು ಎದುರಿಸುವುದು ಹೇಗೋ” ಎಂದುಕೊಂಡು ಕಾಮನು ಚಿಂತಿಸುತ್ತಿದ್ದಾಗ ಎದುರಿಗೆ “ಕಣ್ ಬಂದಂತೆ ಉಸಿರ್ ಬಂದಂತೆ” ಗೌರಿಯು ಬಂದಳು.

ಗಿರಿಜೆಗೂ ಕೂಡ ಮನ್ಮಥನ ಸಹಾಯ ಅಗತ್ಯವಾಗಿತ್ತು. ಅವಳು ಮನ್ಮಥನನ್ನು ಕುರಿತು :

ಅರಿದೆಂ ನಿನ್ನಯ ಬರವಂ
ಕರೆಗೊರಲನ ತೀವ್ರತಪಮನೆಳ್ಚಟ್ಟುವುದೀ
ತೆರದಿಂದೆನ್ನಿಷ್ಟಮದೆ
ನ್ನೆರಕೆ, ಅದೆನ್ನಿಚ್ಛೆ ಎನ್ನಲಾಭಂ ಲೋಭಂ

ಎಂದು ಪ್ರೋತ್ಸಾಹಿಸಿ

ಶ್ರೀ ನಂದನ, ನೀನಂಜದಿ
ರಾನಿರ್ದಪೆನಾನೆರಕ್ಷೆಯಾನೆ ಸಹಾಯಂ

ಎಂದು ಅಭಯದಾನ ಮಾಡಿದಳು. ಅವಳಿಂದ ಶಕ್ತಿ ಬಂದಂತಾಗಿ ಅವಳ ವಿಮಾನದ ನೆರಳಿನಲ್ಲಿ ಅಡಗಿ ಮನ್ಮಥನು ಶಿವನನ್ನು ಸಮೀಪಿಸಿದನು.

ಈಶ್ವರನ ಎಡಗಡೆ ನಿಂತು ದೇವತೆಗಳೆಲ್ಲಾ ಹೊಗಳುತ್ತಿದ್ದಾಗ "ಸಾಯಲ್ ಬಲ್ಲರದೇವ"ನಾದ ಕಾಮನು ಒಂದು ಸರಳನ್ನು ಹೂಡಿಬಿಟ್ಟನು. ಆ ಬಾಣ ಪರಂಜ್ಯೋತಿಯ ಇರುವಿಕೆಯನ್ನೇ ಅರಿಯದೆ ಹಿಂದಿರುಗಿತು. ರತೀಶನು ಅಸ್ತ್ರವಿಳಾಸನಾದನು. ಅದೇ ಸಮಯಕ್ಕೆ ಬಂದ ಪಾರ್ವತಿಯ ಸೌಂದರ್ಯವನ್ನು ನೋಡಿ ಮನ್ಮಥನಿಗೆ ಮತ್ತೆ ಬಲ ಬಂದಂತಾಯಿತು.

ಇನ್ನಂಜೆನಂಜೆನಾ ಹಾ
ಉನ್ನತ ಬಲವಾಯ್ತು .

ಎಂದು ಒಂದು ಬಾಣವನ್ನು ಕಿವಿಯವರೆಗೂ ಸೆಳೆದು ಬಿಟ್ಟನು. ಈ ಬಾಣದಲ್ಲಿ ದೇವತೆಗಳ ಆಸೆ ಗಿರಿಜೆಯ ಅಭಿಲಾಷೆಗಳು ಕೂಡಿಕೊಂಡಿದ್ದುವು. ಈಶ್ವರನ ಮನಸ್ಸು ಸ್ವಲ್ಪ ಚಲಿಸಿ ಕಣ್ಬಿಟ್ಟು ನೋಡಿದಾಗ ಪಕ್ಕದಲ್ಲಿ ಗಿರಿಜಾತೆಯಿರುವುದು ಅವನಿಗೆ ಕಂಡುಬಂದಿತು. "ಆನೇಕೆ ಈಮಾನಿನಿ ಏಕೆ, ಈತಪವೆಲ್ಲಿಯದು, ಎತ್ತಣಿಂಬಂದುದು, ಆರಿಂದಾದುದು" ಎಂದು ಎಡಗಡೆ ತಿರುಗಿದಾಗ ಕಾಮನು ಕಂಡುಬಂದನು. ಹಣೆಗಣ್ಣಿನಲ್ಲಿ ಸ್ವಲ್ಪ ಕೋಪ ತೋರಿದ ಒಡನೆಯೇ "ನೋಡದ ಮುನ್ನಂ ಕೋಪಂ ನಾಡೆಯು ಮೊತ್ತರಿಸಿ........ನೆರೆ ಕಾಮನುರಿದು ಕರಿಮುರಿವೋದಂ".

ಈಶ್ವರನು ಮನ್ಮಥನನ್ನೂ ಸುಟ್ಟು

ಮುಂತಿರ್ದೊಪ್ಪುವ ಗಿರಿಜಾ
ಕಾಂತೆಯನೀಕ್ಷಿಸಿದೆ, ನುಡಿಯಿಸದೆ, ಸೋಂಕದೆ,
ನಿಶ್ಚಿಂತಂ ಸ್ವತಂತ್ರನಹಿಧರ
ನಂತರ್ಧಾನಕ್ಕೆ ಸಂದಂ ...

ಮನ್ಮಥ ಭಂಗವಾಯಿತು. ದೇವತೆಗಳ ಆಸೆ ಫಲಿಸಲಿಲ್ಲ. ಪಾರ್ವತಿಗೆ ಮುನಿಸುಂಟಾಯಿತು.

ಈ ಭಾಗದಲ್ಲಿ ಹರಿಹರನು ಕಾಳಿದಾಸನ ಕುಮಾರಸಂಭವದಿಂದ ಹೆಚ್ಚು ಪ್ರಯೋಜನ ಹೊಂದಿದ್ದಾನೆ. ಅಲ್ಲಿಯ ಕಥೆಯನ್ನೂ ವರ್ಣನೆಯನ್ನೂ ಅಲ್ಲಲ್ಲಿ ವಿಸ್ತರಿಸಿದ್ದಾನೆ. ಇವೆರಡನ್ನು ಹೋಲಿಸುವ ಗೋಜಿಗೆ ನಾವು ಹೋಗಬೇಕಾಗಿಲ್ಲ. ಇಬ್ಬರ ದೃಷ್ಟಿ, ಪ್ರತಿಭೆ, ಕಾಲ ದೇಶಗಳು ಬೇರೆ ಬೇರೆಯಾದುದರಿಂದ ಅದು ವೃಥಾಶ್ರಮವಾಗುತ್ತದೆ.

## ರತಿವಿಲಾಪ

ಶಿವನ ಅಧಿಕಾಕ್ಷದ ಕ್ರೋಧದಿಂದ ಮನ್ಮಥನು ಉರಿದು ಭಸ್ಮಾವಶೇಷನಾದಾಗ ರತಿಗೆ ಅತಿಶೋಕವುಂಟಾಯಿತು. ಚಂದ್ರನಿಗೆ ಗ್ರಹಣವು ಹಿಡಿದುಕೊಂಡರೆ ಚಕೋರ ಪಕ್ಷಿಯು ಕೊರಗಿಹೋಗುವಂತೆ ಅವಳು ಭಯಪಟ್ಟು ಮತಿಗೆಟ್ಟು ವಿಲಾಪಮಾಡಿದಳು. 'ಬೆಂದನುಲಿಯಂತೆ' ಬೂದಿಯಾದರೂ ಭದ್ರಾಕಾರವನ್ನು ಕಳೆದುಕೊಳ್ಳದ ಕಾಮನ ಸ್ಥಿತಿಯನ್ನು ಕಂಡು ಅವಳ ಶೋಕ ದಳವೇರಿತೇ ಹೊರತು ಬಾಡಿಹೋಗಲಿಲ್ಲ. ಅವಳು ಹಲುಬಿದ ರೀತಿಯಲ್ಲಿ ಅಸಹಾಯಕಳಾದ ಅವಳ ದಾರುಣ ವೇದನೆ ಚಿತ್ರಿತವಾಗಿದೆ.

"ಕುಸುಮ ಬಾಣಗಳಿಂದ ಈಶ್ವರನನ್ನು ಗೆಲ್ಲುವೆಯೆಂದೇ ನನ್ನ ಮನವರಿಕೆಯಾಗಿತ್ತು. ಹೀಗೆ ಈಶ್ವರನ ಹಣೆಗಣ್ಣಿನ ಬೆಂಕಿಯಿಂದ ಬೆಂದು ಹೋಗುವುದು ನನಗೆ ಎಲ್ಲಿ ಗೊತ್ತು. ಯೌವನವಂತನೂ, ಸುಕುಮಾರನೂ, ಸುಖಪ್ರದನೂ ಆದ ನೀನು ನಿನ್ನ ಶಕ್ತಿಯನ್ನು ಮೀರಿ ಹಣೆಗಣ್ಣಿನ ಮುಸುಕನ್ನು ತೆರೆದೆ. ನಿನ್ನ ಎದುರು ನನಗೆ ಎಂದು ಕೋಪಬಂದರೂ ನನಗೆ ತಿಳಿವಳಿಕೆ ಹೇಳುವಂತೆ ಮಾತನಾಡುತ್ತಿದ್ದೆ. ಈ ದಿನ ಮಾತನಾಡದ ಹೊಸ ಕೋಪವನ್ನು ಹೊಂದಿದ್ದೀಯೆ. ಸರ್ಪಧರನಾದ ವಿಷಧರನಾದ ಈಶ್ವರನು ನಿಷ್ಠುರಗುಣಗಳುಳ್ಳವನು. ಅವನು ನಿನ್ನನ್ನು ಸುಡುವುದು ಆತನ ಗುಣಕ್ಕೆ ತಕ್ಕಹಾಗಿದೆ. ಆದರೆ ನೀನು ಸದ್ಗುಣಿಯಾಗಿದ್ದರೂ ನನ್ನನ್ನು ಏಕೆ ಹೀಗೆ ಉರಿಸುತ್ತಿದ್ದೀಯೆ? ಎಲೆ ದೇವತೆಯರಿರಾ ಪಾಪಿಯಾದ, ಅನಾಥೆಯಾದ ನನ್ನನ್ನು ಒಳಕೊಳ್ಳಿರಿ."

ರತಿಯು ಹೀಗೆ ಶೋಕಿಸುತ್ತಿದ್ದಾಗ ಕೃಪಾಕರಿಯಾದ ಗಿರಿಜೆಯು ಅವಳ ಬಳಿ ಬಂದು ಸಮಾಧಾನ ಮಾಡಿದಳು; ಈಶ್ವರನನ್ನು ಬೇಡಿ ಪರಮಹರ್ಷವನ್ನುಂಟುಮಾಡುವುದಾಗಿ ಮಾತುಕೊಟ್ಟಳು. ಭವಾನಿಯ ಅಭಯವು ರತಿಗೆ ಎಷ್ಟೋ ಸಮಾಧಾನವನ್ನುಂಟುಮಾಡಿತು.

## ಗಿರಿಜೆಯ ಘೋರ ತಪೋನಿಷ್ಠೆ

ಮನ್ಮಥಭಂಗದಿಂದಲೂ ಹರನ ಅಂತರ್ಧಾನದಿಂದಲೂ ಗಿರಿಜೆಗೆ ತುಂಬ ಕೋಪವುಂಟಾಯಿತು.

ತಾನು ಪೂಜೆಮಾಡುತ್ತಾ ಈಶ್ವರನೇ ತನಗೆ "ಗತಿ ಮತಿ ಪತಿ ಎನ್ನಾಯು ಎನ್ನಾತ್ಮತತ್ವಂ" ಎಂದು ಉತ್ಸಾಹದಿಂದ ನಿರೀಕ್ಷೆಮಾಡಿಕೊಂಡಿದ್ದರೂ ಉಗ್ರನಾದ ಈಶ್ವರನು "ಏನೆಂದು ನೋಡದೆ ರಜತ ಗಿರಿಗೆ ಪೋದಂ." ಇದರಿಂದ ಅವನೇ "ನಿಕೃಷ್ಟಾತ್ಮನಾದನು." ತಾನು ಇನ್ನು ಸುಮ್ಮನೇ ಇರುವುದಿಲ್ಲ. "ನಿಶ್ಚಳನಾದವನನ್ನು ಛಲದಿಂದ ನಾನು ಇದ್ದ ಬಳಿಗೇ ಬರುವಂತೆ ಮಾಡುತ್ತೇನೆ" ಎಂದು ಹಟ ತೊಟ್ಟಳು, ಪಾರ್ವತಿ.

ತಾನಿರ್ದಲ್ಲಿಗೆ ನಡೆತಂ
ದಾನರ್ಚಿಸೆ ಕಾಮವೈರಿ ನುಡಿಯಿಸದಂತ
ರ್ಧಾನಕ್ಕೆ ಸಂದನದರಿಂ
ದಾನಿರ್ದಲ್ಲಿಗೆ ಸಮಂತುತನ್ನನೆ ತರ್ಪೆಂ

ಈ ಹಟದ ಸಾಧನೆಗಾಗಿ ಹೇಮಕೂಟಾಚಲದ ತುದಿಯಲ್ಲಿಯೇ ಬೇಸಗೆಯಲ್ಲಿ ತಪೋನಿರತಳಾಗಿರಲು ನಿವೇಶನವನ್ನು ಗೊತ್ತುಮಾಡಿದಳು. ವಿಭೂತಿ ಧರಿಸಿ ಬೆನ್ನಮೇಲೆ ಕೇಶಪಾಶವನ್ನು ಕೆದರಿ, "ನೀಲಾಂಬುದಮಂ ಪಿಂದಿಕ್ಕಿ ಮುಂದೆ ಬೆಳಗುತೆ ನಿಂದೆಳಮಿಂಚಿನವೊಲ್" ತಪಸ್ಸಿಗೆ ನಿಂತಳು.

ಬೇಸಗೆಯ ತಪಸ್ಸಿನ ರೀತಿಯೇ ಬೇರೆ. ಪಂಚಾಗ್ನಿಯ ನಡುವೆ ಗಿರಿಜೆ ತಪಸ್ಸು ಮಾಡುತ್ತಿದ್ದಳು. ಈ ತಪಸ್ಸಿನ ತಾಪಕ್ಕೆ ಹೆದರಿ ಸೂರ್ಯನೂ ಕೂಡ ಓಸರಿಸಿ ನಡೆಯುತ್ತಿದ್ದನು. ಮೃಗ ಪಕ್ಷಿಗಳು ಹತ್ತಿರ

ಸುಳಿಯುತ್ತಿರಲಿಲ್ಲ. ಗಾಳಿ ಬೀಸುತ್ತಿರಲಿಲ್ಲ. ಜಲಸ್ಥಳಗಳೆಲ್ಲಾ ಬತ್ತಿಹೋದುವು. ಮರಗಿಡಗಳು ಸುಟ್ಟುಹೋದುವು. ದಿಕ್ಕುಗಳಲ್ಲಿ ಕಾವು ಹೆಚ್ಚಾಯಿತು. ನಿಜವಾದ ನೀರಿನ ಪ್ರತಿಯಾಗಿ ಎಲ್ಲೆಲ್ಲಿಯೂ ಮರೀಚಿಕಾ ಜಲವೇ ಕಂಡುಬಂದಿತು. ಎಲ್ಲೆಡೆಯಲ್ಲಿಯೂ ಬಿಸಿಲು, ಬರಿಯ ಬಿಸಿಲು, ಕರಿಯ ಬಿಸಿಲು, ಅಚ್ಚರಿಯ ಬಿಸಿಲು. ಇಂತಹ ಬಿಸಿಲಿನ ತಾಪವನ್ನು ತಡೆಯಲಾರದೆ ನೆರಳಿನಲ್ಲಿದ್ದ ಆನೆ ಬೇರೆಡೆಗೆ ಹೊರಟು ಬಿಸಿಲಿಗೆ ಕಾಲಿಟ್ಟ ಒಡನೆಯೇ ಕಾಲು 'ಚುಯ್' ಎಂದು ಸುಟ್ಟು ಇನ್ನೊಂದು ಕಾಲನ್ನು ಇಡಲಾರದೆ ಒದ್ದಾಡಿತು. ಸೂರ್ಯನಿಗೆ 'ಜಲಜ ಸಖ' ಎಂದೂ ಅಗ್ನಿಗೆ 'ಅನಿಲ ಸಖ' ಎಂದೂ "ರಸವೆಸರ"ಲ್ಲ ದಿದ್ದರೆ ಅವರಿಬ್ಬರೂ ಘಳಿಲನೆ ಉರಿದುಹೋಗುತ್ತಿದ್ದರು. ಇಂತಹ ಬೇಸಗೆಯಲ್ಲಿ ಗಿರಿಜೆಯು ಗಂಗಾಧರನನ್ನೂ, ಶಶಿಧರನನ್ನೂ ನೆನೆದು ಕಾಲವನ್ನು ತಳ್ಳಿದಳು.

ಬೇಸಗೆಯಾದ ಮೇಲೆ ಮಳೆಗಾಲ. ಬಿಸಿಲು ಬಾಡಿ ಮೋಡ ಕವಿದಿತು. ಮಿಂಚುಗಳು ಅಂಕುರಿಸಿದುವು. ಹಂಸಪಕ್ಷಿಗಳಿಗೆ ಹೆದರಿಕೆಯೂ, ನವಿಲುಗಳಿಗೆ ಆನಂದವೂ ಉಂಟಾದುವು. ಕದಂಬ ಕೇತಕೀ ವೃಕ್ಷಗಳು ಪುಷ್ಪಿತವಾದುವು. ಮಳೆ ಇಳೆಗೆ ಹರ್ಷವನ್ನು ತಂದಿತು. ಭೂಮಿದೇವತೆಯನ್ನು ವರ್ಷಾಗಾಲವೆಂಬ ರಾಜನಿಗೆ ಮದುವೆ ಮಾಡಿಕೊಟ್ಟಂತೆ ಕಂಡಿತು. ಮಳೆ ಧಾರಾಕಾರವಾಗಿ, ದಿಕ್ಕುದೆಸೆ ಕಾಣದೆ ಚಂದ್ರಸೂರ್ಯರು ನಿರ್ನಾಮವಾದರು. ಭೂಮಿಯೇ ಮುಳು ಗಿತೋ ದಿಕ್ಚಕ್ರವಿಲ್ಲಾಯ್ತೋ ಎನ್ನುವಂತಾಯಿತು ಮಳೆಯಿಂದ. ಈ ಮಳೆಗಾಲದಲ್ಲಿ "ಮಳೆ ಮಾಣ್ದೊಡೆ ಹನಿ ಮಾಣದ" ಕಡೆ ನಿಂತು ಗಿರಿಜೆ ತಪಸ್ಸು ಮಾಡಿದಳು.

ಇದೇ ವಿಧವಾಗಿ ಶರತ್‌ಕಾಲದಲ್ಲಿಯೂ ಹಿಮಗಾಲದಲ್ಲಿಯೂ ಬೇರೆ ಬೇರೆಯ ತೊಂದರೆಗಳನ್ನು ಗಿರಿಜೆಯು ಅನುಭವಿಸಿದಳು. ಹಿಮ ಗಾಲದ ಕಾಠಿಣ್ಯವನ್ನು ಕೇಳಬಹುದೇ? ಮಂಜು ಬೀಳುವುದು ನಿಂತರೂ ಚಳಿ ನಿಲ್ಲಲಿಲ್ಲ.

ಕಿಡಿಗಳ್ ಕೆಚ್ಚನೆಯಾಲಿಕಲ್
ಉರಿಯ ಮೊತ್ತಂ ಕೆಂದಳಿರ್
ಕೆಂಡದೊಂದಡಕಿಲ್ ಮಾಣಿಕದಿಂಡೆ
ಕಾಯ್ವ ತಪನಂ ಚಂದ್ರಂ
ಆತಪಂ ಗಡ ಬೆಳ್ದಿಂಗಳ್

ಹೀಗಾಯಿತು. ಅಗ್ನಿಗೇ ಶೀತವು ಹತ್ತಿಕೊಂಡಿತಂತೆ. ಪ್ರಾಣಕ್ಕೆ ದೇಹವು 'ಚಳಿಯ ಕುಪ್ಪಸ'ವಾಗಿ ಪರಿಣಮಿಸಿತು. ಎಲ್ಲಿಲ್ಲಿ ನೋಡಿದರೂ ಚಳಿ ಚಳಿ.

ಪುಟ್ಟಿತು ಚಳಿ, ಬಳೆದುದು ಚಳಿ
ಕೊಟ್ಟುದು ಚಳಿ, ಕೊಂಡುದೆಲ್ಲಮುಂ ಚಳಿ ಚಳಿ ಎಂ-
ದುಟ್ಟುದು ಚಳಿ ತೊಟ್ಟುದು ಚಳಿ
ಮೆಟ್ಟಿತು ಚಳಿ, ಮುಟ್ಟಿತೆಲ್ಲ ಚಳಿ ಪೊಸ ಚಳಿಯೊಳ್.

ಈ ಚಳಿ ಮಂಡಲದಲ್ಲಿ ಭಾಳಲೋಚನನ ಭಾಮಿನಿ ಘೋರವಾಗಿ ತಪಸ್ಸು ಮಾಡಿದಳು.

## ಕಪಟ ವಟು ಮಾಡಿದ ಪರೀಕ್ಷೆ

ಇದನ್ನು ಕಂಡು ಅಚಲನಾದ ಈಶ್ವರನ ಮನಸ್ಸೂ ಕೂಡ ಕರುಣೆಯಿಂದ ಕೂಡಿತು. ಇನ್ನು ಸುಮ್ಮನಿರಬಾರದೆಂದು ಗಿರಿಜೆಯ ಮನಸ್ಸನ್ನು ಒರೆದು ನೋಡುವ ಉದ್ದೇಶದಿಂದ ಗಿರಿಜೆಯಿದ್ದ ಬಳಿಗೆ ಬಂದನು. ತನ್ನ ದಶಭುಜಗಳನ್ನೂ ಪಂಚಮುಖಗಳನ್ನೂ ಮುಚ್ಚಿಟ್ಟು ವಟುವೇಷದಿಂದ ಈಶ್ವರನು ಮೆರೆಯುತ್ತಿದ್ದನು. ಈಶ್ವರನ ಆಗಮನದಿಂದ ಅಕಾಲದಲ್ಲಿ ವಸಂತಋತು ತಲೆದೋರಿತು. ಮಾವು ಚಿಗುರಿ, ಕೋಗಿಲೆ ಕರೆದು, ಮಲ್ಲಿಗೆ ಹೂ ಬಿಟ್ಟು, ಮಂದಾನಿಲವು ಬೀಸಿ ಆವರಣ ಶೃಂಗಾರಮಯವಾಯಿತು. ಕಪಟ ವಟುವಿಗೆ ಜಯೆ ವಿಜಯೆಯರು ಉಪಚಾರಮಾಡಿದರು. ಚರಣ ತಳವನ್ನು ತೊಳೆದು ಕಂದಮೂಲ ಫಲಗಳನ್ನು ತಿನ್ನಲು ತಂದಿಟ್ಟರು.

ಎಳವಾಳೆಯ ಸುಳಿಯೆಲೆಯೊಳ್
ನಳನಳಿಸುವ ಕಂದಮೂಲಮಂ, ನವಜಂಬೂ

ಫಳವಾಮ್ರಫಳಂ ಕದಳೀ
ಫಳಂಗಳಂ ತೀವಿತಂದು

ಕೊಟ್ಟರು. ಹಸಿವನ್ನು ಓಡಿಸಲು ಈ ಹಣ್ಣುಗಳನ್ನು ತಿನ್ನಬೇಕೆಂದು ಪಾರ್ವತಿಯ ಸಖಿಯರು ಹೇಳಿದರೆ, ಅವನು "ಹೈ, ಫಲವಂ ಕೈಕೊಂಡಪೆವು, ಈ ಲಲನೆ ಅಡಾರ್, ತಪವಗಣ್ಯವಾವನ ಪುಣ್ಯಂ?" ಎಂದು ಪ್ರತಿಯಾಗಿ ಕೇಳಿದನು. ಈಕೆಯ ವಿಚಾರವಾಗಿ 'ಚಿಂತಾರತಿ'ಯು ಬೇಡವೆಂದೂ ಹಸಿವು ಕಳೆಯುವ ಯೋಚನೆ ಮಾಡಬೇಕೆಂದೂ ಸಮಾಧಾನದಿಂದ ಮಾತನಾಡಿದರು ಅವರು. ಆದರೆ ಆತನು "ಈ ಪೊಸ ಕನ್ನೆ ತಪೋನಿರೋಧದಿಂದೊರ್ಡೆ ಸೈರಿಸಬರ್ಪುದೆ?" ಎಂದು ವಿಲಾಸದಿಂದ ನುಡಿದನು. ಈ ಮಾತು ಗಿರಿಜೆಗೂ ಕೇಳಿ ನಸುಮುನಿಸುಂಟಾಗಿ ಕಣ್ಬಿಟ್ಟು ವಟುವನ್ನು ನೋಡಿದಳು.

ಇಂದುಗೆ ಮೇಘಂ ಕವಿದೊಡ
ಮಂದೀ ಲೋಕಕ್ಕೆ ತಣ್ಣು ತಪ್ಪದ ತೆರದಿಂ
ದಿಂದುಧರಂವರ ವಟುವೇ
ಷಂದಳೆದೊಡಮಗಜೆಗಾದುದುರೆಹರ್ಷಮುಖಂ.

ಅನಿಮಿತ್ತವಾಗಿ ಆದ ಹರ್ಷದ ಕಾರಣವನ್ನು ಯೋಚಿಸಿದಳು. ಈಶ್ವರನಿಗೂ ತನ್ನ ನಿಜರೂಪವನ್ನು ಮುಚ್ಚಿಡುವುದು ಅಸಾಧ್ಯವಾಯಿತು. ಗಿರಿಜೆಯೊಡನೆ ಹೊಸ ಹುಸಿ ಮಾತುಗಳಾಡಿದನು. "ಮೃದು ಕೋಮಲಪಾದಗಳನ್ನು ಕಲ್ಲುನೆಲದ ಮೇಲೆ ಇಡುತ್ತಾರೆಯೇ? ತಾರುಣ್ಯದಲ್ಲಿ ತಪಸ್ಸೇಕೆ? ಎಳೆಯ ಬಳ್ಳಿಯನ್ನು ಬಿಸಿಲಿನಲ್ಲಿ ಬಾಡಿಸುತ್ತಾರೆಯೇ? ಮೃಗನಯನೆ! ಯಾರಿಗಾಗಿ ಈ ತಪಸ್ಸು?"

ಈ ಧೂರ್ತ ವಿಪ್ರನಿಗೆ ಪಾರ್ವತಿಯು ಈಶ್ವರನ ಹೆಸರನ್ನು ಹೇಳಿದಳು. ಅವನು ಮತ್ತೆ 'ಎಲೈ ಲತಾಂಗಿ, ಕಾಮನನ್ನು ಸುಟ್ಟ, ಮುಕ್ಕಣ್ಣನಲ್ಲಿ, ವೇದಶಾಸ್ತ್ರಾತೀತನಲ್ಲಿ, ರುದ್ರಭೂಮಿಯಲ್ಲಿ ವಾಸ ಮಾಡುವವನಲ್ಲಿ ಹೇಗೆ ತಾನೇ ಪ್ರೇಮವಿಟ್ಟೆ? ಅವನು ವಿಷ, ನೀನು ಅಮೃತ. ನೀನು ಮೃದು, ಅವನು ಕಠಿಣ. ನೀನು ಅಬಲೆ, ಅವನು ಉಗ್ರ. ನೀನು ಭೀರು, ಅವನು ಸರ್ಪಭೂಷಣ. ಹುಲಿಚರ್ಮ

ವನ್ನುಟ್ಟು, ಹಾವನ್ನು ತೊಟ್ಟು, ಹಣೆಗಣ್ಣನ್ನು ಇಟ್ಟು, ಶವಶಿರೋಮಾಲೆಯನ್ನು ಧರಿಸಿರುವವನಲ್ಲಿ ಹೆದರಿಕೆಯಿರಬೇಕೇ ಹೊರತು ಪ್ರೇಮ ವಿಡುತ್ತಾರೆಯೇ ?' ಎಂದನು.

ಪಾರ್ವತಿಗೆ ಶಿವನಿಂದೆಯನ್ನು ಕೇಳಿ ಮನಸ್ಸು ನೊಂದಿತು. ತಪಸ್ಸು ಮಾಡುವಾಗ ಕೋಪವಿರುವುದು ತಪ್ಪೆಂದು ತಿಳಿದಿದ್ದರೂ ಈಗ ಸುಮ್ಮನಿರಲಾರದೆ ಭಸಿತದಿಂದ ಈ ವಿಪ್ರನನ್ನು ಹೊಡೆದಳು. "ಶಿವನಾದೊಡದೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್." ವಟುವೇಷವು ಮಾಯವಾಗಿ ಈಶ್ವರನ ನಿಜರೂಪ ಪ್ರತ್ಯಕ್ಷವಾಯಿತು. ಆಕಾಶ ಹೂಮಳೆಗರೆಯಿತು. "ಕೈಲಾಸಪರ್ವತಕ್ಕೆ ಹೋಗೋಣ" ಎಂದು ಈಶ್ವರನು ಗಿರಿಜೆಯನ್ನು ಕರೆದನು. ಗಿರಿರಾಜನಲ್ಲಿ ತನ್ನನ್ನು ಬೇಡಿ ಮದುವೆ ನಿಲ್ಲಬೇಕೆಂದು ಕೇಳಿದಳು ಗಿರಿಜೆ.

ಈ ಸಮಯಕ್ಕೆ ಸರಿಯಾಗಿ ಬಂದ ರತಿಗೆ ಮನ್ಮಥನು ಸಂಕಲ್ಪ ಜನ್ಮನಾಗುವ ವರ ದೊರಕಿತು. ಈಶ್ವರನು ಕೈಲಾಸಕ್ಕೂ ಪಾರ್ವತಿಯು ಗಿರಿರಾಜನಲ್ಲಿಗೂ ತೆರಳಿದರು. ತಾನಿದ್ದಲ್ಲಿಗೇ ಈಶ್ವರನನ್ನು ಪಾರ್ವತಿಯು ತಂದಳು.

'ಗಿರಿಜಾಕಲ್ಯಾಣ'ದಲ್ಲಿ ಬರುವ ಈ ಸನ್ನಿವೇಶದಲ್ಲಿ ಗಿರಿಜೆಯ ತಪಸ್ಸಿನ ವರ್ಣನೆ ಅಷ್ಟಾಗಿಲ್ಲ. ಗಿರಿಜೆಯ ತಪಸ್ಸನ್ನು ಕಾರಣವಾಗಿಟ್ಟುಕೊಂಡು ಕವಿಯು ಬೇಸಗೆ, ಮಳೆಗಾಲ, ಹಿಮಗಾಲಗಳ ವಿಸ್ತಾರವಾದ ವರ್ಣನೆಗೆ ಅವಕಾಶ ಮಾಡಿಕೊಂಡಿದ್ದಾನೆ. ಅಕಾರಣವಾದ ವರ್ಣನೆಗೆ ಹರಿಹರನೂ ಮಾರುಹೋಗಿದ್ದನೆಂದು ಇಲ್ಲಿ ಗೊತ್ತಾಗದೆ ಇರುವುದಿಲ್ಲ. ಯುವಕನ ಉತ್ಸಾಹಕ್ಕೆ ಇದೂ ಒಂದು ಉದಾಹರಣೆ.

ಈ ಗ್ರಂಥದ ಕೊನೆಯ ಭಾಗವಾದ ಶಿವಪಾರ್ವತಿಯರ ವಿವಾಹವು ಸ್ವಲ್ಪದಲ್ಲಿ ವರ್ಣಿತವಾಗಿದೆ. ಈಶ್ವರನು ಸಪ್ತಋಷಿಗಳನ್ನು ಕಳುಹಿಸಿ ಗಿರಿಜೆಯನ್ನು ಬೇಡಿದನು. ಗಿರಿರಾಜನು ಸಂತೋಷದಿಂದ ಒಪ್ಪಿದನು. ವಿಶ್ವಕರ್ಮನು ಮದುವೆಯ ಮಂಟಪವನ್ನು ಸಮೆದನು. ದೇವದೇವತೆಗಳು ಸೇರಿದರು. ವಿವಾಹ ವೈಭವದಿಂದ ನೆರವೇರಿ ಪತಿಪತ್ನಿಯರನ್ನು

ಕೈಲಾಸಕ್ಕೆ ಕರೆತಂದು ಗಿರಿರಾಜ ಮೇನಾದೇವಿಯರು ಮನೆ ತುಂಬಿಸಿದರು. ಶಿವನ ಹಿರಿಮೆ ಹೆಚ್ಚಿತು. ಗಿರಿಜೆಯ ಮನಸ್ಸು ತಣಿಯಿತು.

'ಗಿರಿಜಾಕಲ್ಯಾಣ'ಕ್ಕೆ ಉತ್ತಮ ಕಲಾಕೃತಿಗೆ ಬೇಕಾದ ಒಂದು ಐಕ್ಯ ಸಂದಿಲ್ಲ. ತಾರಕಾಸುರನ ಮಾತು ಬಂದಮೇಲೆ ಅದರ ಪರಿಣಾಮವನ್ನು ಸೂಚಿಸುವುದು ಕತೆಗಾರನ ಕರ್ತವ್ಯ. ಈ ಕಾವ್ಯದಲ್ಲಿ ಈ ಒಂದು ಅನೌಚಿತ್ಯ ಕಂಡುಬರುತ್ತದೆ. ಕವಿಯ ದೃಷ್ಟಿಯಲ್ಲಿ ಅದು ಮುಖ್ಯವಲ್ಲವೆಂದು ಉಪಚಾರದ ಸಮಾಧಾನವನ್ನು ಹೇಳಿ ಜಾರಿಕೊಂಡುಬಿಡಬಹುದು. ಅಷ್ಟೆ!

ಇಷ್ಟಾದರೂ ಹರಿಹರನ ಹಿರಿಮೆಯೇನೂ ಕಡಿಮೆಯಾಗುವುದಿಲ್ಲ. ಯೌವನದಲ್ಲಿ ಬರೆದ ಕೃತಿಯಾದರೂ ಯೌವನವನ್ನು ಮೀರಿದ ಪ್ರತಿಭಾಪ್ರದರ್ಶನ ಕಾವ್ಯದತುಂಬ ಬಂದಿದೆ. ಸಾಮಾನ್ಯ ಕವಿಯ ರಚನೆಯಲ್ಲಿ ಎಂದೂ ಕಾಣಬಾರದ ಶೈಲಿಯ ಸೊಗಸು, ಪ್ರೌಢಿಮೆ, ಅಲಂಕಾರಗಳು, ವ್ಯಕ್ತಿಚಿತ್ರಣ, ಸನ್ನಿವೇಶರಚನೆಗಳು ರಸವನ್ನನುಸರಿಸಿ ಈ ಕಾವ್ಯದಲ್ಲಿ ಅಲ್ಲಲ್ಲಿ ಕಂಡುಬರುತ್ತವೆ. ಈ ಹಿರಿಯ ಕವಿಯ ಚೈತನ್ಯವು ಸಂಪೂರ್ಣವಾಗಿ ಹೂತಿರುವುದನ್ನು ನಾವು ಆತನ ರಗಳೆಗಳಲ್ಲಿ ಕಾಣಬಹುದು. ಆ ಅಭ್ಯಾಸಕ್ಕೆ ಗಿರಿಜಾಕಲ್ಯಾಣವು ಅಚ್ಚುಕಟ್ಟಾದ ಹಿನ್ನೆಲೆಯನ್ನು ಕಲ್ಪಿಸುತ್ತದೆ.

## ೨

# ಬಿ. ಎಂ. ಶ್ರೀ. ಅವರ ‘ಗದಾಯುದ್ಧ ನಾಟಕಂ’

ರನ್ನಮಹಾಕವಿಯ ‘ಸಾಹಸಭೀಮ ವಿಜಯವು’ ನಾಟಕರೂಪವನ್ನು ತಳೆದು ಇಂದಿಗೆ ಮೂವತ್ತು ವರುಷಗಳಾದುವು. ಈ ಮೂವತ್ತು ವರುಷಗಳಲ್ಲಿ ಅದನ್ನು ನಾಟಕರಂಗದ ಮೇಲೆ ಹತ್ತಾರು ಸಲ ಪ್ರದರ್ಶಿಸಿದ್ದಾರೆ. ಅಷ್ಟೆ! ನಾಟಕದ ಯೋಗ್ಯತೆಯನ್ನು ಅರಿತು ಅದರ ಸವಿಯನ್ನುಂಡು ಅರ್ಥಮಾಡಿಕೊಳ್ಳಬಲ್ಲ ಪ್ರೇಕ್ಷಕವೃಂದವಾಗಲಿ, ಅದನ್ನು ಯುಕ್ತವಾಗಿ ಅಭಿನಯಿಸಿ ನೋಟಕರನ್ನು ತಣಿಸಬಲ್ಲ ನಟವೃಂದವಾಗಲಿ ನಮ್ಮಲ್ಲಿ ಹೆಚ್ಚಾಗಿಲ್ಲ. ಕಷ್ಟವಾದ ಕೆಲಸವನ್ನು ಹಿಡಿಯುವ ನಿರ್ದುಷ್ಟವಾದ ಆಸಕ್ತಿ ನಮ್ಮಲ್ಲಿ ಇನ್ನೂ ಬೆಳೆಯಬೇಕಾಗಿದೆ. ರಂಗದ ಮೇಲೆ ಈ ನಾಟಕ ಹೆಚ್ಚು ಪ್ರದರ್ಶಿತವಾಗಿಲ್ಲವೆಂಬ ಅಂಶವೊಂದರಿಂದಲೇ ನಾಟಕದ ಮೇಲ್ಮೆಗೆ ಕುಂದಾಗುವುದಿಲ್ಲ. ಕಾವ್ಯವು ಹೇಗೆ “ರಸದ ಘಟ್ಟ”ಯೋ ಹಾಗೆಯೇ ನಾಟಕವೂ ಒಂದು “ದುರಂತದ ಸೃಷ್ಟಿ”.

ಈ ನಾಟಕದ ಕಥಾವಸ್ತುವು ಉತ್ತಮ ಕವಿಪರಂಪರೆಯಲ್ಲಿ ಸಂದರ್ಭಾನುಸಾರವಾಗಿ ವ್ಯತ್ಯಾಸ ಹೊಂದಿದೆ. ಪಂಪಕವಿಯು ಭಾರತದಿಂದ ಕಥೆಯನ್ನು ತೆಗೆದುಕೊಂಡರೂ “ವ್ಯಾಸ ಮುನೀಂದ್ರರುಂದ್ರ ವಚನಾಮೃತ ವಾರ್ಧಿಯನೀಸುವೆಂ” ಎಂದು ಹೇಳಿದರೂ, ಧರ್ಮರಾಯನನ್ನು ಕಥಾನಾಯಕನನ್ನಾಗಿ ಮಾಡಲಿಲ್ಲ. ತನಗೆ ಆಶ್ರಯದಾತನಾದ ಅರಿಕೇಸರಿಗೆ ಪ್ರಾಧಾನ್ಯ ಕೊಡುವ ಉದ್ದೇಶದಿಂದ ಅರ್ಜುನನಿಗೂ ಅರಿಕೇಸರಿಗೂ ಅಭೇದ ಕಲ್ಪನೆ ಮಾಡಿ ‘ವಿಕ್ರಮಾರ್ಜುನ ವಿಜಯ’ವನ್ನು ರಚಿಸಿದನು. ರನ್ನನು ಭಾರತವನ್ನು ಸಿಂಹಾವಲೋಕನ ಕ್ರಮದಿಂದ ವೀಕ್ಷಿಸುವ ಅಪೇಕ್ಷೆಯಿಂದಲೂ, ತನಗೆ ಆಶ್ರಯ

ದಾತನಾದ ಚಾಳುಕ್ಯ ಸತ್ಯಾಶ್ರಯನನ್ನು ಹೊಗಳುವ ಕಾರಣಕ್ಕಾಗಿ ಸತ್ಯಾಶ್ರಯನಿಗೂ ಭೀಮನಿಗೂ ಅಭೇದ ಕಲ್ಪನೆ ಮಾಡಿ "ಸಾಹಸ ಭೀಮ ವಿಜಯ"ವನ್ನು ಮಹಾ ಕಾವ್ಯವಾಗಿ ಮಾಡಿದನು. ಪಂಪನಿಗೆ ಅರ್ಜುನನೇ ನಾಯಕ. ರನ್ನನಿಗೆ ಭೀಮನೇ ನಾಯಕ.

ಕವಿರನ್ನನು ತನ್ನ ಕಾವ್ಯದಲ್ಲಿ ದುರ್ಯೋಧನನಿಗೆ ಅನುಕಂಪೆಯನ್ನು ವ್ಯಕ್ತಪಡಿಸಿ ಅವನನ್ನು ಮಹಾನುಭಾವನನ್ನಾಗಿ ಮಾಡಿರುವುದೇನೋ ನಿಜವೆ. ಅಲ್ಲಿ ಅವನ ಗುಣಗಳು ಹೆಚ್ಚಾಗಿದ್ದು 'ಛಲ' ಒಂದರಿಂದಲೇ ಪತನ ಹೊಂದುವುದೂ ನಿಜ. ಆದರೂ ಕೌರವನು ನಾಯಕನಾಗುವುದಿಲ್ಲ. ಕವಿಯ ದೃಷ್ಟಿಯಲ್ಲಿ ಭೀಮನೇ ನಾಯಕ. ಅವನೇ ಸತ್ಯಾಶ್ರಯ. ಅವನ ಕಾರ್ಯವೆಲ್ಲ ಧರ್ಮಕ್ಕೆ ಸಹಾಯಕ. ಧರ್ಮರಾಯನೂ ಅರ್ಜುನನೂ ಮಾಡಿದ ಅಧರ್ಮಗಳನ್ನು ಕೃಷ್ಣನು ಕಾಯುವುದಾದರೆ ಭೀಮನ ಅಕಾರ್ಯಗಳನ್ನೂ ಕೃಷ್ಣನೇ ಕಾಯುತ್ತಾನೆ.

ಆದುದರಿಂದಲೇ ಕವಿಯು ಕೃಷ್ಣನ ಬಾಯಿಯಲ್ಲಿ ಭೀಮನನ್ನು ಕುರಿತು, ಧರ್ಮರಾಜನ ಎದುರು "ನಿನ್ನ ಧರ್ಮವೇ ಕಾವುದು" ಎಂದು ಹೇಳಿಸಿದ್ದಾನೆ. ಇದರಿಂದ ರನ್ನನ ದೃಷ್ಟಿ ಶಾಶ್ವತವಾಗಿ ನಿರ್ಧಾರವಾಗುತ್ತದೆ.

ಈ ಗ್ರಂಥದ ಸೃಷ್ಟಿಯಲ್ಲಿ ಕೌರವನಿಗೆ ದೊರೆತಿರುವ ಅನುಕಂಪೆ ನೂತನವಾಗಿರುವುದನ್ನು ಕಂಡ ಶ್ರೀ ಬಿ. ಎಂ. ಶ್ರೀಯವರು ಅದನ್ನು ಉಪಯೋಗಿಸಲು ಮನಸ್ಸುಮಾಡಿದರು. ಅವರ ಪಾಶ್ಚಾತ್ಯ ಸಾಹಿತ್ಯಗಳ ಗಾಢವಾದ ಪರಿಚಯದ ಪರಿಣಾಮವಾಗಿ, ಈ ವಸ್ತುವಿನಲ್ಲಿ ಒಂದು ದುರಂತನಾಟಕದ ಬೀಜವಿರುವುದೂ, ರನ್ನನ ಕಾವ್ಯದಲ್ಲಿನ ನಾಟಕೀಯತೆಯು ಅದಕ್ಕೆ ಸಹಾಯಕವಾಗಿರುವುದೂ ಅವರಿಗೆ ಹೊಳೆಯಿತು. ಆದುದರಿಂದ ಒಂದು 'ದುರಂತ ನಾಟಕ'ವನ್ನು ಅವರು ಸೃಷ್ಟಿಸಿದರು.

'ಶ್ರೀ'ಯವರ ಈ ನಾಟಕವು ರನ್ನನ ಕಾವ್ಯದ ಸಂಪರ್ಕ ಹೊಂದಿದ್ದರೂ, ಅದರಿಂದಲೇ (ಒಂದೆರಡೆಡೆ ಬಿಟ್ಟು) ಎಲ್ಲ ಮಾತುಗಳನ್ನೂ ಅಳವಡಿಸಿಕೊಂಡಿದ್ದರೂ ಅದು ರನ್ನನ ದೃಷ್ಟಿಯಲ್ಲಿ ನಮ್ಮ ಮನೆಯು

ಮಗಳೇ ವೇಷಭೂಷಣಗಳನ್ನು ವ್ಯತ್ಯಸ್ತಪಡಿಸಿಕೊಂಡು 'ಪಾರಸಿ' ಹೆಂಗಸಾದಂತೆ, ಹೊಸರೂಪದಲ್ಲಿ ಹೆಚ್ಚು ಸುಂದರಳಾಗಿ ಕಂಡಂತೆ, ಏನೋ ಮೋಹಕತೆಯನ್ನು ಸ್ವಾಧೀನಪಡಿಸಿಕೊಂಡಂತೆ ಇಲ್ಲಿ ರನ್ನನ ಕಾವ್ಯ ಪಾಶ್ಚಾತ್ಯರೂಪದಿಂದ ಆಕರ್ಷಕವಾಗಿದೆ. ಆ ರೂಪಕ್ಕೆ ತಕ್ಕ ಮಾತುಗಳನ್ನು ಉಳಿಸಿಕೊಂಡು, ವೇಷಭೂಷಣಗಳನ್ನು ಬಳಸಿಕೊಂಡು, ಮೂಲರೂಪವನ್ನು ಮರೆಸಿಕೊಂಡು ಈ ವಸ್ತು ದಿವ್ಯವಾಗಿದೆ. ಇಲ್ಲಿ ಭೀಮನು ತನ್ನ ಪ್ರಾಧಾನ್ಯವನ್ನು ಕಳೆದುಕೊಂಡು ಕೌರವನನ್ನೇ ಮುಂದೆ ಬಿಟ್ಟಿದ್ದಾನೆ. ಭೀಮನು ಭೀಕರನಾಗಿ, ಕೃಷ್ಣನು ಮಾಯಾವಿಯಾಗಿ, ದ್ರೌಪದಿಯು ಎರಡನೆಯ ಹಿಡಿಂಬಿಯಾಗಿ ಇದ್ದರೂ ಅವರೂ ನಮಗೆ ಪ್ರಿಯರಾಗಿಯೇ ಕಾಣುತ್ತಾರೆ. ಅವರವರ ಸತ್ವವನ್ನು ಕಾಪಾಡಿಕೊಂಡು, ಸನ್ನಿವೇಶಬಲದಿಂದ ಮಾಡಲೇಬೇಕಾದ ಕಾರ್ಯಗಳನ್ನು ಮಾಡಿ, ಆಡಲೇಬೇಕಾದ ಮಾತನಾಡಿ ಅವರು ಶಾಶ್ವತಸಮಸ್ಯೆಯೊಂದನ್ನು ಮುಂದೆ ಒಡ್ಡುತ್ತಾರೆ. ಸಮಸ್ಯೆಗೆ ಉತ್ತರವೇ ದೊರಕದೆ ದುರ್ಯೋಧನನು ಬಲಿಯಾಗುತ್ತಾನೆ. ನಾವು ಇದೆಲ್ಲವನ್ನೂ ನೋಡಿ ಮೂಕ ವಿಸ್ಮಯದಿಂದ ಸಂಭ್ರಾಂತರಾಗುತ್ತೇವೆ. ನಮ್ಮ ದೃಷ್ಟಿ ನಮ್ಮ ಸ್ವಂತ ಜೀವನದ ಸನ್ನಿವೇಶಗಳ ಕಡೆ ಹರಿದು ನಾವು ಗುಣೈಕ ಪಕ್ಷಪಾತಿಗಳಾಗುತ್ತೇವೆ. ಇದೇ ಪಾಶ್ಚಾತ್ಯ ದುರಂತ ನಾಟಕಗಳ ಪರಿಣಾಮ. ಇದನ್ನು ಸಾಧಿಸಿ 'ಶ್ರೀ'ಯವರು ಭವ್ಯವಾದ ದೃಷ್ಟಾಂತವನ್ನು ನಿರ್ಮಿಸಿದ್ದಾರೆ. ಇದರ ಸಂಪೂರ್ಣ ರಸಾಸ್ವಾದನೆಗೆ ರನ್ನನು ಮಾಡಿಕೊಂಡಿರುವ ವ್ಯತ್ಯಾಸ ಸಹಾಯಕವಾಗುವುದರಿಂದ ಅದರ ಪರಿಚಯ ಮಾಡಿಕೊಳ್ಳುವುದು ಅಗತ್ಯ.

## ಮುಖ್ಯ ವ್ಯತ್ಯಾಸ

ರನ್ನನು ಪಂಪನ ಭಾರತದ ಹದಿಮೂರನೆಯ ಆಶ್ವಾಸದ ಹದಿನೈದು ಇಪ್ಪತ್ತು ಪದ್ಯಗಳನ್ನು ವಿಸ್ತರಿಸಿ ಈ ಮಹಾ ಕಾವ್ಯವನ್ನು ರಚಿಸಿದ್ದಾನೆ. ಈ ವಿಸ್ತರಣದಲ್ಲಿ ಕಾಣಬರುವಂತೆ ವ್ಯತ್ಯಾಸಗಳು ಹೀಗಿವೆ.

ಸೋಲನ್ನಪ್ಪಿದ ಕೌರವನು ದುಃಖತಪ್ತನಾಗಿ ದ್ರೋಣ ಅಶ್ವತ್ಥಾಮರನ್ನು ನಿಂದಿಸುತ್ತಾನೆ. ಸಂಜಯನು ಇವರಿಬ್ಬರ ಸ್ವಾಮಿ ಭಕ್ತಿಯನ್ನು ಕರ್ತವ್ಯನಿರತತೆಯನ್ನು ಹೊಗಳಿ ಪಾಂಡವರಲ್ಲಿ ಭೀಮಾರ್ಜುನರ ಸ್ಥಾನಮಾನಗಳನ್ನು ಕುರಿತು ಹೊಗಳುತ್ತಾನೆ. ಇದರಿಂದ ಕ್ರೋಧಗೊಂಡ ಕೌರವನು ಪಾಂಡವರನ್ನೂ ಕೃಷ್ಣನನ್ನೂ ಹೀಯಾಳಿಸಿ ಮಾತಾಡುತ್ತಾನೆ. ಇದು ಮೂಲಭಾರತದಲ್ಲಿಲ್ಲ.

ಇಲ್ಲಿ ಯುದ್ಧರಂಗಕ್ಕೆ ಬಂದು ಸಂತಾಪದಗ್ಧನಾದ ಮಗನನ್ನು ಧೃತರಾಷ್ಟ್ರ ಗಾಂಧಾರಿಯರು ಸಮಾಧಾನಮಾಡುತ್ತಾರೆ. ಧರ್ಮಜ ನೊಡನೆ ಸುಖವಾಗಿ ಬಾಳುವಂತೆ ಬೋಧಿಸುತ್ತಾರೆ. ಕೊನೆಗೆ ಭೀಷ್ಮರ ಆಲೋಚನೆಯನ್ನು ಕೇಳಿ ನಡೆದುಕೊಳ್ಳುವಂತೆ ಸೂಚಿಸುತ್ತಾರೆ. ಭೀಷ್ಮರು ವೈಶಂಪಾಯನ ಸರೋವರದಲ್ಲಿ ಕೌರವನು ಅಡಗಿರಬೇಕೆಂದೂ ಮಾರನೆಯ ದಿನವೇ ಬಲರಾಮನು ಬಂದಮೇಲೆ ಯುದ್ಧವನ್ನು ಮುಂದುವರೆಸಿ ಗೆಲವನ್ನು ಪಡೆಯಬಹುದೆಂದೂ ಸೂಚಿಸುತ್ತಾರೆ.

ಯುದ್ಧರಂಗದಲ್ಲಿ ಬಿದ್ದಿದ್ದ ದ್ರೋಣ, ಅಭಿಮನ್ಯು, ಲಕ್ಷಣ, ದುಶ್ಶಾಸನ, ಕರ್ಣ ಇವರ ಕಳೇಬರಗಳನ್ನು ನೋಡಿ ಅಪಾರ ದುಃಖ ದಿಂದ ಅವರವರ ಗುಣಗಳನ್ನು ನೆನೆಸಿಕೊಂಡು ಕೌರವನು ಗೋಳಿಡು ತ್ತಾನೆ. ಈ ಯಾವುದೂ ಮೂಲದಲ್ಲಿಲ್ಲ. ಇವುಗಳಿಂದ ಕೌರವನ ಅನೇಕ ಗುಣಗಳು ವ್ಯಕ್ತಪಡುತ್ತವೆಯಾದ್ದರಿಂದ ಅವನಲ್ಲಿ ನಮಗೆ ವಿಶ್ವಾಸ ಬೆಳೆಯುತ್ತದೆ.

## ವಸ್ತು ಸಂವಿಧಾನ

ಗದಾಯುದ್ಧ ನಾಟಕದಲ್ಲಿ ಐದು ದೃಶ್ಯಗಳಿವೆ. ಒಂದೊಂದಕ್ಕೂ 'ರಂಗ'ವೆಂದು ಶ್ರೀಯುತರು ಹೆಸರಿಟ್ಟಿದ್ದಾರೆ. ಮೊದಲನೆಯ ರಂಗದಲ್ಲಿ ಕೃಷ್ಣನು ಭೀಮನ ಪರಾಕ್ರಮವನ್ನು ಹೊಗಳುವುದನ್ನೂ, ದ್ರೌಪದಿಯು ವೀರ್ಯವಿಲ್ಲದ ಕಥೆಯಲ್ಲಿ ವರ್ಣನೆಯಾದರೂ ಇರಲಿ ಎಂದು ನೊಂದು ನುಡಿಯುವುದನ್ನೂ, ಭೀಮನು ಕ್ರೋಧಗೊಂಡು ತನ್ನ ಶಪಥವನ್ನು ನೆನೆಸಿಕೊಂಡು ಯಜ್ಞಪುತ್ರಿಗೆ "ಬಾ ನಿನ್ನ ಕಾರ್ಯಮಾಯ್ತು" ಎಂದು

ಸಮಾಧಾನ ಮಾಡುವುದನ್ನೂ ಕಾಣುತ್ತೇವೆ. ಕೃಷ್ಣನೂ ಈ ಬೆಂಕಿಯನ್ನು ಪ್ರಜ್ವಲನಗೊಳಿಸುವುದಕ್ಕಾಗಿಯೇ ದ್ರೌಪದಿಯನ್ನು ರಕ್ಕಸಿಯೆಂದೂ ಎರಡನೆಯ ಹಿಡಿಂಬಿಯೆಂದೂ ಕರೆಯುತ್ತಾನೆ. ಆಗ ಭೀಮನು "ಎನ್ನಾರಧನೆಯ ಶಕ್ತಿಯಿವಳ್" ಎನ್ನುತ್ತಾನೆ. ಅಂತೂ ರಾಕ್ಷಸ ಶಕ್ತಿಯ ಆರಾಧನೆಯಿಂದ ಈ ನಾಟಕ ಮೊದಲಾಗುತ್ತದೆ.

ಎರಡನೆಯ ರಂಗವು ದುರ್ಯೋಧನನ ಖಿನ್ನಮನಸ್ಕತೆಯನ್ನು ಬಿಂಬಿಸುತ್ತದೆ. ಇಲ್ಲಿ ತನಗಾಗಿ ಯುದ್ಧ ಮಾಡದ ದ್ರೋಣಾಶ್ವತ್ಥಾಮರನ್ನು ಕೌರವನು ನಿಂದಿಸುತ್ತಾನೆ. ಅಂತಹವರನ್ನು ಆಶ್ರಯದಲ್ಲಿಟ್ಟುಕೊಂಡೇನು ಪ್ರಯೋಜನ.

> ಕರವಾಳಂ ಮಸೆವಂದದೆ
> ಮರವಾಳಂ ಮಸೆಯ ಕೂರಿತಕ್ಕುಮೆ ?

ತಂದೆಮಕ್ಕಳಿಬ್ಬರೂ ಒಂದೆ.

> ಕಯ್ಪೆ ಸೊರೆಯ ಕುಡಿಯೇಂ ಮಿಡಿಯೇಂ.
> ಮರೆಯ ಪಾಂಡವಂ ಬಗೆದು ನೋಳ್ಪೊಡೆ ಅಶ್ವತ್ಥಾಮಂ.

ಸಂಜಯನು ಏನು ಸಮಾಧಾನ ಹೇಳಿದರೂ ಅದು ಹಿಡಿಸುವುದಿಲ್ಲ. ಇತರರನ್ನು ಹೊಗಳಿ ತಮ್ಮನ್ನು ಕಿರಿದಾಗಿ ಮಾಡುವುದು ಅವನಿಗೆ ಅನ್ಯಾಯಮಾಡಿದಂತೆ. ಸಂಜಯನೂ ಇನ್ನೊಬ್ಬ ದ್ರೋಣ ಅಥವಾ ಭೀಷ್ಮ ಆಗಲು ಪ್ರಯತ್ನಿಸುತ್ತಿದ್ದಾನೆಂದು ಕ್ರೋಧ ಸಂಕಟಗಳಿಂದ ಉಸಿರುತ್ತಾನೆ ಕೌರವ. ಕೌರವನು ವ್ಯಸನಾಕ್ರಾಂತನಾಗಿರುವಾಗಲೇ ವೃದ್ಧರಾದ ತಾಯಿ ತಂದೆಗಳು ಬಂದು ಅವನಿಗೆ ಸಮಾಧಾನಮಾಡುತ್ತಾರೆ. ತಂದೆ:

> ಕಾಲ್ವಿಡಿದು ಬೇಡುವೆನಂಧಪಿತಂ ಸುಪುತ್ರನಂ

ಎನ್ನುತ್ತಾನೆ. ಗಾಂಧಾರಿ, ತಾಯಿ :

> ಗುರುವಚನಮಲಂಘನೀಯಂ

ಎನ್ನುತ್ತಾಳೆ. ತಂದೆ ಹೇಳುವುದು ಯುಕ್ತವಾದುದೆಂದೂ ಅದನ್ನು ಕೇಳಬೇಕೆಂದೂ ಬೇಡುತ್ತಾಳೆ. ದುರ್ಯೋಧನನಿಗೆ ಅವರ ಪೂರ್ವಪಕ್ಷವೇ

ಸಿದ್ಧಾಂತ. ಸಾಧಿಸುವುದೇ ಹಟ. ಕೊನೆಗೆ ಭೀಷ್ಮನ ಆಲೋಚನೆಯನ್ನು ಕೇಳಲು ಹೇಗೋ ಒಪ್ಪಿಕೊಳ್ಳುತ್ತಾನೆ.

ಮೂರನೆಯ 'ರಂಗ'ವೇ ಈ ನಾಟಕದ ಶಿಖರ. ಅಲ್ಲಿ ಕೌರವನ ಪುತ್ರವಾತ್ಸಲ್ಯ, ಭ್ರಾತೃಪ್ರೇಮ, ಕರ್ಣಮೈತ್ರಿ, ಗುರುಭಕ್ತಿ ಮುಂತಾದುವೆಲ್ಲ ಕರುಣಾಸ್ರೋತವಾಗಿ ಹರಿದಿವೆ. ಮರುಳುಗಳು ಬಂದು ಅವನನ್ನು ಎದುರಿಸಿ "ದ್ರೌಪದೀ ದ್ರೋಹ ಸಿಲ್" ಎನ್ನುವುದೂ "ಊರು ಭಂಗಮಪ್ಪುದು ತಡೆ" ಎನ್ನುವುದೂ ಭಯಂಕರ ಸನ್ನಿವೇಶಗಳಾಗಿವೆ. ಮ್ಯಾಕ್ಬೆತ್ ನಾಟಕದ ಮಾಟಗಾತಿಯರು ಮ್ಯಾಕ್‌ಬೆತ್ತನೊಡನೆ ಹೂಡುವ ಆಟವನ್ನು ಇದು ನೆನಪಿಗೆ ತರುತ್ತದೆ. ಗದೆಯ ಏಟಿಗೆ ಹೆದರಿ ಓಡುವುದಕ್ಕೆ ಮುಂಚೆ ಒಂದು ಮರುಳು "ಸಂಜೆವರಂ ನಿನ್ನಾಟಂ" ಎಂದು ಹೇಳುವುದಂತೂ ಮರ್ಮಭೇದಕವಾಗಿದೆ.

ನಾಲ್ಕನೆಯ ರಂಗದಲ್ಲಿ ಭೀಮನು ಧರ್ಮರಾಜನ ಸಮಾಧಾನ ವಾಕ್ಯವನ್ನು ಧರ್ಮಶ್ರವಣವೆಂದು ಹಾಸ್ಯಮಾಡಿ ಕೌರವನನ್ನು ಹುಡುಕಲು ಕೃಷ್ಣನು ಹೊರಡುವುದು ಚಿತ್ರಿತವಾಗಿದೆ.

ಐದನೆಯ ರಂಗವೇ ಕೊನೆಯ ರಂಗ. ಇಲ್ಲಿಯೇ ಕೌರವನು ಕೊಳದಿಂದ ಹೊರಬರುವುದು, ಗದಾಯುದ್ಧವಾಗುವುದು, ಊರುಭಂಗ ಕಿರೀಟಭಂಗಗಳಾಗುವುದು, ದ್ರೌಪದಿಗೆ ಭೀಮನೇ ತುರುಬುಕಟ್ಟಿ ಹೂ ಮುಡಿಸುವುದು, ಕೌರವಲಕ್ಷ್ಮಿ ಅವನನ್ನು ಬಿಟ್ಟು ಪಾಂಡವಪಕ್ಷವನ್ನು ಸೇರುವುದು. ಯುದ್ಧರಂಗದಲ್ಲಿಯೇ ಭೀಮನು ದ್ರೌಪದಿಯನ್ನು ನೋಡಿ "ಅಹೋ ಶೃಂಗಾರಂ, ವಿಭ್ರಮಂ, ಬೆಡಂಗು, ಬಿಂಕಂ! ಇಂತಾಗವೇಡಾ ಪೆಣ್ಬಾಳ್ವೆ" ಎನ್ನುತ್ತಾನೆ. ಈ ಭೀಕರ ಶೃಂಗಾರ ದ್ರೌಪದಿ ಭೀಮರ ನಡುವೆ ಮಾತ್ರ ಸಾಧ್ಯ.

ಅರ್ಧದಿನದೊಳಗಾಗಿಯೇ ನಡೆದ ಈ ಕಥೆಯಲ್ಲಿ ಪಾಶ್ಚಾತ್ಯ ನಾಟಕ ತತ್ವದಲ್ಲಿ ಹೇಳುವ ಮೂರು ಐಕ್ಯಗಳೂ ಹೊಂದಿಕೊಂಡಿವೆ. ಗ್ರೀಕ್ ನಾಟಕಗಳಲ್ಲಿ ಬರುವ ಮೇಳದ ಸ್ಥಾನವನ್ನು ಸಂಜಯನು ಆಕ್ರಮಿಸಿ ರುದ್ರನಾಟಕದ ರೂಪಕ್ಕೆ ಸಹಾಯಕನಾಗಿದ್ದಾನೆ. ಇಲ್ಲಿ ಐದು 'ರಂಗ'ಗಳನ್ನು ಏರ್ಪಡಿಸುವುದರಲ್ಲಿ ಶ್ರೀಯವರು ಷೇಕ್ಸ್‌ಪಿಯರ್

ಕವಿಯ ದುರಂತ ನಾಟಕಗಳ ಮಾದರಿಯನ್ನನುಸರಿಸಿದ್ದಾರೆ. Macbeth, Hamlet, Romeo and Juliet, Othello ಎಂಬ ದುರಂತ ನಾಟಕಗಳಲ್ಲೆಲ್ಲಾ ಐದೈದು ಅಂಕಗಳೇ ಇವೆ. ಮೂರನೆಯ ಅಂಕದಲ್ಲಿ ಬರುವ ಶಿಖರದಲ್ಲಿಯೂ ಇದೇ ಅನುಕರಣೆ ಕಂಡುಬರುತ್ತದೆ.

## ದುರ್ಯೋಧನನ ಚಿತ್ರ

ಸಂಜಯನೊಡನೆ ತನ್ನ ಹೃದಯವೇ ಬಲ್ಲ ದುಃಖವನ್ನು ತೋಡಿ ಕೊಳ್ಳುತ್ತಾ ಬರುವ ದುರ್ಯೋಧನನ ಚಿತ್ರ ಮೊದಲೇ ನಮ್ಮ ಅನುಕಂಪೆ ಯನ್ನು ಸಂಪಾದಿಸುತ್ತದೆ. ದ್ರೋಣನೂ ಅವನ ಮಗನೂ ತನಗೆ ಮಾಡಿದ ದ್ರೋಹವನ್ನು, ದುಃಖದಲ್ಲಿ ಅವನು ಹೀಯಾಳಿಸುತ್ತಾನೆ. ಸಂಜಯನು "ವಿಧಿ ವಿಳಸನದಿಂದ ಅಕಾರ್ಯಂಗೆ ಅಹಿಕೇತನಂಗೆ" ಹೀಗೆ ಮನಸ್ಸು ಬೆಳೆಯುತ್ತಿದೆ ಎಂದುಕೊಳ್ಳುತ್ತಾನೆ. ಅವನ ಸಮಾಧಾನ ಕೌರವನಿಗೆ ಕ್ರೋಧದಾನವಾಯಿತು. ಮಾರುತಿಯ ಗಂಡನ್ನು ಹೀಯಾಳಿಸಿ, ಬಾರದ ಭವವನ್ನು ಬಂದ ಅರ್ಜುನನನ್ನು ಕಡೆನುಡಿದು ಇತರರನ್ನೂ ಹಾಸ್ಯಮಾಡಿ ತನ್ನ ಕಾರ್ಯವನ್ನೇ ಮರೆಯುತ್ತಾನೆ ಆತ. ಸಂಜಯನು ಹೇಳಿದ "ನೀಂ ಪ್ರತಿಕೂಲ ದೈವನೈ. ಅನುಕೂಲ ದೈವರ್ ಪಾಂಡವರ್" ಎನ್ನುವ ಮಾತೂ ಮನಸ್ಸುಹೊಗುವುದಿಲ್ಲ. ಕೃಷ್ಣನು ಮಹಾವಿಷ್ಣುವೆನ್ನುವುದರಿಂದ "ಪನ್ನೊಂದನೆಯದು ಸೂತಾವ ತಾರಮುಂ ಹರಿಗಾಯ್ತೆ" ಎಂಬ ಅಪಹಾಸ್ಯವೇ ಹೊರಬಂದಿತು. ಕೃಷ್ಣನ ರಹಸ್ಯವೇನು? ಧರ್ಮಜನ ಅನುಜನ ನೆವದಿಂದ ಅವನೇ ಅರಸುಗೈಯುವನು. ಆದುದರಿಂದ ಅವರ ಮಾತೇ ಬೇಡ. ಸಂಜಯನು ಹೇಳುವಂತೆ "ಅಂತಶ್ಶೂನ್ಯಮಕ್ಕುಮುನ್ನತವಂಶ" ಎನ್ನುವುದು ಅವನ ಮಾತ್ರಕ್ಕಂತೂ ನಿಜವಾಯಿತು.

ಅಂಧಪಿತನ ಬೇಡಿಕೆಯೂ ದುಃಖಶತಜನನಿಯಾದ ಗಾಂಧಾರಿಯ ಅನುನಯವೂ ಕೌರವನ ಪೂರ್ವಪಕ್ಷ ಸಿದ್ಧಾಂತವನ್ನು ಮತ್ತಷ್ಟು ದೃಢಮಾಡಿದುವು. ಮರುಳುಗಳ ಮಾತಿನಿಂದ ಹೆದರಿಕೆಯಾದರೂ "ಮರುಳ ಮಾತಿನೊಳ್ ಪುರುಳಿಲ್ಲ" ಎಂದು ಸಮಾಧಾನಮಾಡಿಕೊಂಡು

ರಣರಂಗದಲ್ಲಿ ಮಡಿದ ಪ್ರಿಯರ ದರ್ಶನದಿಂದ ದುಃಖೋದ್ವೇಗವಾಗಿ ಅವನ ಪ್ರಲಾಪ ಕರುಣವಾಹಿನಿಯಾಗಿದೆ.

"ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತನೋ" ಎಂದು ಕೊನೆ ಗಾಣುವ ದುಃಖ ಅಮರ ಸ್ನೇಹದ ಅಮರಗೀತೆಯಾಗಿದೆ ಇಲ್ಲಿ. ಕೌರವನು "ಎಂತುಮರೆವಂ ದುರ್ಯೋಧನಂ ಕರ್ಣನಂ" ಎನ್ನುತ್ತಾನೆ. ಈ ಸ್ನೇಹವನ್ನು ಯಾರು ತಾನೇ ಮರೆಯುವುದು ಸಾಧ್ಯ.

ಭೀಷ್ಮನ ಮುಂದೆ ಅವನು ಆಡುವ ಮಾತು ಸತ್ಯ. "ನೆಲಕಿರಿವೆನೆಂದು ಬಗೆದಿರೆ ಚಲಕಿರಿವೆಂ" ತಮ್ಮಂದಿರೂ ಸ್ನೇಹಿತನೂ ಸಾಯುವಂತೆ ಮಾಡಿದ ಈ ನೆಲ ಕೀಳ್ನೆಲ. ಇನ್ನು ಅದರೊಡನೆ ಸಂಬಂಧ ಪಡೆದವರುಂಟೆ?

ಅನಿವಾರ್ಯವಾದುದು ನಡೆಯಲೇಬೇಕು. ವೈಶಂಪಾಯನ ಸರೋವರದ ಸಲಿಲವಾಗಲಿ, ಬಲರಾಮನ ಬರವಾಗಲಿ ಅದನ್ನು ತಡೆಯಲಾರದು. ಭೀಮನ ಸ್ವರ ಕೇಳಿ ಈಚೆ ಬಂದ ಕೌರವನಿಗೂ ಅವನಿಗೂ ಗದಾಯುದ್ಧವಾಯಿತು. ಅಧರ್ಮದಿಂದ ಕೌರವನ ತೊಡೆಯೊಡೆಯಿತು, ಕಿರೀಟಭಂಗವಾಯಿತು. ಆದರೇನು? ಅವನ ಹಿರಿಮೆ ಕಡಿಮೆಯಾಗಲಿಲ್ಲ. ಧರ್ಮರಾಜನೇ ಹೇಳುವಂತೆ ಕುಲಗಿರಿ ಕೆಡೆದಂತೆ ಅವನು ಮಲಗಿದ್ದನು. ತನ್ನ ಭೂಮಿಯನ್ನು ಎಂದೂ ಬಿಡುವುದಿಲ್ಲ ಎನ್ನುವುದನ್ನು ತೋರಿಸುವಂತೆ ಅವನು ಬಿದ್ದಿದ್ದನಂತೆ.

ಇಡೆ ತೊಡೆಯನುಡಿದು ನೆಟ್ಟನೆ
ಕೆಡೆಯುತ್ತಂ ಕರ್ಚಿ ನೆಲನನಾನಿದನೆಂತುಂ
ಬಿಡೆನೆಂಬ ತೆರದೆ ಕುಲಗಿರಿ
ಕೆಡೆದಂದದೆ ಕೆಡೆದು ಕೌರವೇಂದ್ರಂ ಮೆರೆವಂ

ಆಡಿದ ಮಾತನ್ನು ಕೊನೆಯತನಕವೂ ಹಿಡಿದು, ಛಲವನ್ನೂ ಬಿಡದೆ, ಮಾಡಿದ ಪ್ರತಿಜ್ಞೆಯನ್ನು ಕಾಪಾಡಿ, ದೇಹವು ನುಚ್ಚುನೂರಾಗುವ ತನಕ ಹೋರಾಡಿದ ಕೌರವನು ಲಕ್ಷ್ಮೀಶ ಹೇಳುವಂತೆ "ಅಭಿಮಾನಧನಂ ಸುಯೋಧನಂ". ಅವನು ಅವಸಾನ ಹೊಂದಿದುದು ಕುರುಕುಲದ ಸೂರ್ಯನು ಅಸ್ತಮವಾದಹಾಗಾಯ್ತು. ನಮ್ಮ ಕಣ್ಮುಂದೆ ನಿಲ್ಲುವುದು

ಭೀಮನ ಭ್ರಾತೃಹತ್ಯದ ಪಾಪ, ಕೃಷ್ಣನ ಸಮಾಧಾನ. ನಮ್ಮ ಮನಸ್ಸಿನಲ್ಲಿ ನಿಲ್ಲುವುದು ಕೌರವನ ಮಹಾನುಭಾವ ಗುಣ, ಅವನ ಹಿರಿಮೆ. ಅವನ ಕೊನೆಯ ಮಾತೇ ನಮ್ಮ ಕೊನೆಯ ಮಾತು. "ದೈವದ ಮುಂದೆ ನಾವಲ್ತು".

## ಭೀಮ

ಭೀಮನ ದೃಷ್ಟಿಯಲ್ಲಿ ಈ ಗದಾಯುದ್ಧವು ಒಂದು ಯಜ್ಞ.

ಅರಸಂ ದೀಕ್ಷಿತನಿಲ್ಲಿ ಋತ್ವಿಜರೆನ್ಮೊಳ್ ನಾಲ್ವರುಂ, ಸಂಗರಾ
ಧ್ವರದೊಳ್ ತಾನುಪದೇಶಕಂ ಮುರಹರಂ ನೀನುಂ ಗೃಹೀತವ್ರತಾ
ಚರಣ ವ್ಯಾಪಿಕೆ ಮೇಣ್ ಭವತ್ಪರಿಭವಂ ಸಂಚಾರಕಂ ಕೌರವೇ
ಶ್ವರನೀತಂ ಪಶುವಾಗೆ ಬೇಳ್ದಿನಿವನಂ ಕೋಪಾಗ್ನಿಯಿಂದಗ್ನಿಜೇ

ಧರ್ಮರಾಜನ ದೀಕ್ಷೆಯಲ್ಲಿ ಮಿಕ್ಕ ನಾಲ್ವರು ಪಾಂಡವರು ಋತ್ವಿಜರಾಗಿ, ಕೃಷ್ಣನ ಉಪದೇಶ ಪಡೆದು, ದ್ರೌಪದಿಯು ವ್ರತಾಚರಣ ವ್ಯಾಪಿಕೆಯಾಗಿ ಅವಳ ಅವಮಾನವೇ ಇವೆಲ್ಲಕ್ಕೂ ಪ್ರೋತ್ಸಾಹಕವಾಗಿ ಕೋಪಾಗ್ನಿಯಲ್ಲಿ ಕೌರವಪಶುವನ್ನು ಭೀಮನೇ ಹೋಮಮಾಡಿದನಂತೆ.

ಬಹುಶಃ ರನ್ನನ 'ಗದಾಯುದ್ಧ' ಕೃತಿಗೆ ಈ ಪದ್ಯವೇ ತಳಹದಿಯೂ, ರೂಪದರ್ಶಿಯೂ ಆಗಿದ್ದಿರಬೇಕು. ಏಕೆಂದರೆ ಅವನ ಕಾವ್ಯವು ಬೆಳೆದಿರುವುದು ಈ ರೀತಿಯಲ್ಲಿ. ಯಜ್ಞಮಾಡುವವನಿಗೆ ಏನೇನು ಪವಿತ್ರದೃಷ್ಟಿಯಿರುತ್ತದೆಯೋ, ಅವೆಲ್ಲವನ್ನೂ ಇವನು ಹೊಂದಿದ್ದಾನೆ. ಇವನಿಗೆ ಪ್ರೋತ್ಸಾಹಕನಾಗಿ ಕೃಷ್ಣನಿದ್ದಾನೆ. ದ್ರೌಪದಿಯಂತೂ ಕುರುಕುಲ ಪ್ರಳಯ ಕಾಲೆ. ಅವಳ ಕಬರಿಭರವು ಬಿಚ್ಚಿರುವ ತನಕ, ಅವಳ ಕಣ್ಣೀರು ಹರಿಯುತ್ತಿರುವ ತನಕ, ಕುರುಕುಲಾಂತಕನಾದ ಭೀಮನ ಕೋಪ ಶಮನವಾಗುವಂತಿಲ್ಲ. ಕುರುನಂದನರನ್ನು ಕೊಂದು ದುಶ್ಯಾಸನನ ರಕ್ತವನ್ನು ಹೀರಿ ಎರಡು ಶಪಥಗಳನ್ನೂ ಪೂರೈಸಿದ್ದ ಅವನಿಗೆ ಈಗ ಇನ್ನೆರಡು ಪೂರೈಸಬೇಕಾಗಿದೆ. ಈ ನಾಟಕ ಆ ಎರಡರ ಆಶ್ರಯದಲ್ಲಿ ಬೆಳೆದಿದೆ. ಕುರುಕುಲ ಜೀವಾಕರ್ಷಣವಾದ, ಪರಾಭವ ಜ್ವಲನ ಧೂಮಕೃಷ್ಣವಾದ, ದ್ರೌಪದಿಯ ಕೇಶಪಾಶವು

ಕಾಳಹಸ್ತಕ್ಕೆ ಸಮ. ಅದನ್ನು ನೆನಪಿನಲ್ಲಿಟ್ಟು ಕುರುಕುಲ ಲಯಕೇತು ವಾದ ಭೀಮನು ಕೌರವನನ್ನು ಮೂದಲಿಸಿ ಸರೋವರದಿಂದೆಬ್ಬಿಸಿ ತೊಡೆಯೊಡೆದು, ಕಿರೀಟವನ್ನೊದೆದು ದ್ರೌಪದಿಯ ವೇಣೀ ಸಂಹಾರ ವನ್ನೆಸಗುತ್ತಾನೆ.

ಆನಂದ ರಸಮಗ್ನಳಾದ ಮಾತನಾಡಲಾರದ ಸುಖವನ್ನನುಭವಿ ಸುವ ದ್ರೌಪದಿಯ ವಿಭ್ರಮ ಬೆಡಗು ಬಿಂಕ ಬಿನ್ನಾಣಗಳಿದುರು ಭೀಮ ನಿಗೆ ಏನೂ ಕಾಣುವುದಿಲ್ಲ. ಭೀಮನ ತಲೆಯ ಮೇಲಾಡುವ ಘೋರ ಮೂರ್ತಿಗಳನ್ನು ಧರ್ಮರಾಯ ಕಾಣಬೇಕು. ಕೃಷ್ಣ ಕಾಯಬೇಕು.

ಈ ನಾಟಕದಲ್ಲಿ ಭಾರತದ ಕೃಷ್ಣನೇ ಕಾಣುತ್ತಾನೆ. ಧರ್ಮ ರಾಜ, ಭೀಷ್ಮರಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ದ್ರೌಪದಿಯ 'ಗಂಡಸುತನ' ಈ ನಾಟಕದಲ್ಲಿ ಹೊರಹುಮ್ಮುವಷ್ಟು ಚನ್ನಾಗಿ ಇನ್ನೆಲ್ಲೂ ಕಂಡು ಬಂದಿಲ್ಲ. ಹಿರಿಯ ತಂದೆತಾಯಿಯರ ಚಿತ್ರವಂತೂ ಹೃದಯವಿದ್ರಾವಕ ವಾಗಿದೆ. ಇವೆಲ್ಲದರಿಂದ 'ಶ್ರೀ'ಯವರ ಈ ನಾಟಕ ನಮ್ಮ ಮನಸ್ಸಿನಲ್ಲಿ ನಿಲ್ಲುವುದು—ಶಾಶ್ವತವಾಗಿ, ಪರಿಣಾಮಕಾರಿಯಾಗಿ.

೩

# 'ವಿ. ಸೀ.' ಅವರ
# ಒಂದು ಕವನಸಂಕಲನ—ದ್ರಾಕ್ಷಿ-ದಾಳಿಂಬೆ

## ಕವಿ

ನಿನ್ನ ನಾಡೀನಾಡು, ನಿನ್ನ ಮಕ್ಕಳು ನಾವು
ಎಮ್ಮನ್ನು ನೀ ನಡೆಸು ದಿಗ್ವಿಜಯಕೆ

*   *   *

ಕಣ್ತುಂಬ ನೋಡೆಮ್ಮ ಹರಸು ತಾಯಿ,
—ಭಾರತ ಭಾಗ್ಯೇಶ್ವರೀ, ಹರಸು ತಾಯಿ

*   *   *

ಎಮ್ಮ ಮನೆಯಂಗಳದಿ ಬೆಳೆದೊಂದು ಹೂವನ್ನು
ನಿಮ್ಮ ಮುಡಿಲೊಳಗಿಡಲು ತಂದಿರುವೆವು

*   *   *

ಕಾಡ ಮೌನವ ಸೀಳಿ ಹಬ್ಬುತಿದೆ ಕೇಳುತಿದೆ
ಬಿತ್ತರದ ದಿಕ್ತಟಗಳಡ್ಡಿ ದಾಟುತಿದೆ!

ಈ ಕವಿವಾಣಿಯ ಮೊಳಗನ್ನು ಕೇಳದ ಕನ್ನಡಿಗನಾರು? ಸುಮಾರು ಕಾಲುಶತಮಾನದಿಂದ ಕನ್ನಡದ ನುಡಿಗುಡಿಯಲ್ಲಿ ಸಂತತವಾದ ಸಾರಸ್ವತಾರಾಧನೆಯನ್ನು ನಡೆಯಿಸಿ ಭಾಷೆಯ ಬೆಳವಣಿಗೆಗೂ ಸಾಹಿತ್ಯದ ಸರ್ವತೋಮುಖವಾದ ಅಭಿವೃದ್ಧಿಗೂ ಶ್ರಮಿಸಿ ಹಿರಿಯರಾಗಿರುವ ಶ್ರೀ ವಿ.ಸೀ. ಅವರ ಸಾಹಿತ್ಯ ಸೇವೆಯು ಕನ್ನಡಿಗರೆಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ ಮುಂತಾದ ಹಲವು ಸಾಹಿತ್ಯ ಮಾರ್ಗಗಳಲ್ಲಿ ರಚಿತವಾಗಿರುವ ಇವರ ಗ್ರಂಥಗಳು ಇವರ ವ್ಯಕ್ತಿಪರಿಚಯವನ್ನು ತಾವಾಗಿಯೇ ಮಾಡಿಕೊಡುತ್ತವೆ.

ನೂರು ಜನರ ನಡುವೆ ಇದ್ದರೂ ನೋಡುವವರ ಮನಸೆಳೆದು ಇವರ ಪರಿಚಯ ಮಾಡಿಕೊಳ್ಳಬೇಕೆಂಬ ಆಸೆಯನ್ನುಂಟುಮಾಡುವ ಆಕರ್ಷಣೆ

ಇವರಲ್ಲಿದೆ. ಶುಭ್ರವಾದ ಉಡುಗೆ ತೊಡುಗೆಗಳು, ನಯವಾದ ನುಡಿ, ವಿನಯವಾದ ವ್ಯವಹಾರ, ಯಾರ ಮನಸ್ಸನ್ನೂ ನೋಯಿಸದ ಸಂಭಾಷಣೆ, ಹಿತವಾದ ಹಾಸ್ಯ, ಅಪಾರವಾದ ಪಾಂಡಿತ್ಯ ಇವೆಲ್ಲವೂ 'ವಿ.ಸೀ.'ಯವರಲ್ಲಿ ಮನೆಮಾಡಿಕೊಂಡಿವೆ. ಕನ್ನಡದ ಕಟ್ಟಾಳುಗಳಲ್ಲಿ ಶ್ರೀವರ್ಾ ವೆಂಕಣ್ಣಯ್ಯನವರು ಎಷ್ಟು ಎತ್ತರವೋ, 'ವಿ.ಸೀ.' ಅವರು ಅಷ್ಟು ಕುಳ್ಳು, ಆದರೆ ಅವರಂತೆಯೇ ತೆಳು. ಹಿಂದೆ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಇವರಿಬ್ಬರೂ ಒಟ್ಟಿಗೆ ಬರುತ್ತಿದ್ದರೆ "The long and the short of it" ಎಂದು ಅವರ ಪರಿಚಯದವರು ನಗುವಿನ ಲಹರಿಯನ್ನು ಏಳಿಸುತ್ತಿದ್ದರಂತೆ. ಇಂತಹ ಚಿಕ್ಕ ಮೂರ್ತಿ ಅಪಾರ ಕೀರ್ತಿಯನ್ನು ಗಳಿಸಿರುವುದು ಅವರ ಸಾರಸ್ವತ ತಪಸ್ಸಿನಿಂದ.

## ಪಂಪಾಯಾತ್ರೆಯ 'ವಿ.ಸೀ.'

ಇವರ 'ಪಂಪಾಯಾತ್ರೆ' ರಚಿತವಾದ ಕೆಲವು ದಿನಗಳಲ್ಲಿಯೇ ಇವರ ಕೀರ್ತಿ ಸುತ್ತ ಹರಡಿಕೊಂಡಿತು. ಕನ್ನಡದ ಶುಭ್ರವಾದ ಶೈಲಿಗೂ, ತಿಳಿಯಾದ ಹಾಸ್ಯಕ್ಕೂ, ರಸವತ್ತಾದ ಕಥನಕ್ರಮಕ್ಕೂ ಪಂಪಾಯಾತ್ರೆಯು ಇಂದಿಗೂ ಮಾದರಿಯಾಗಿದೆ. ಮಾಥ್ಯೂ ಅರ್ನಾಲ್ಡ್ ಕವಿಯ 'ಸೊಹ್ರಾಬ್ ಮತ್ತು ರುಸ್ತುಂ' ಕವನವನ್ನೋದಿ, ಆ ಕಥೆಯನ್ನೇ ನಾಟಕ ರೂಪದಲ್ಲಿ ಕನ್ನಡಿಗರಿಗೆ ಅರ್ಪಿಸಬೇಕೆಂದು "ಸೊಹ್ರಾಬ್-ರುಸ್ತುಂ" ರೂಪಕವನ್ನು ೧೯೩೦ರಲ್ಲಿ ಇವರು ರಚನೆಮಾಡಿದರು. ಇದರಲ್ಲಿ "ಮೂಲದಲ್ಲಿಲ್ಲದಿದ್ದರೂ ತಾಯಿ ತಹಾಮಿನೆಯನ್ನು ಸೊಹ್ರಾಬನ ಮರಣಕಾಲದ ಸಮಯಕ್ಕೆ ರಂಗಕ್ಕೆ" ಕರೆತಂದು ರಸಮಯವಾದ ಸನ್ನಿವೇಶವನ್ನು ರಚಿಸಿದ್ದಾರೆ. "ವಿಧಿಯು ಗಿಡುಗನಂತೆ ಹಾರಾಡಿ ಅವರ ಕಾರ್ಯಗಳನ್ನು ನಿರ್ಧರಿಸುತ್ತಿತ್ತೆಂಬುದೂ ಇಲ್ಲಿ ಸ್ವಲ್ಪ ಮಟ್ಟಿಗೆ ಹೊರಪಡಬಹುದು" ಎಂದು ನಾಟಕದ ವಿಚಾರದಲ್ಲಿ ಅವರು ಹೇಳಿದ್ದಾರೆ. ಇದೊಂದು ಉತ್ತಮವಾದ ನಾಟಕ. ಈಚೆಗೆ ಬರೆದ 'ಆಗ್ರಹ'ವೆಂಬ ಮತ್ತೊಂದು ನಾಟಕದಲ್ಲಿ ಮೂಲಭಾರತದಲ್ಲಿ ಚಿತ್ರಿತವಾಗಿರುವ ಅಶ್ವತ್ಥಾಮನ ಭೀಕರವಾದ 'ದುರಂತ'ವನ್ನು ಕನ್ನಡಿಸಿ

ದ್ದಾರೆ. ಒಂದು ವಿಧದಲ್ಲಿ ಈ ನಾಟಕವು ಶ್ರೀಯವರ 'ಅಶ್ವತ್ಥಾಮನ್' ನಾಟಕದ ಮೇಲೆ ಬಂದ ಕಟುವಾದ, ಅರ್ಥರಹಿತವಾದ ಟೀಕೆಗೆ ಉತ್ತರ.

## 'ಹಾಡುಗಬ್ಬಗಳು'

'ವಿ.ಸೀ.' ಅವರ ಕವನಗಳು ಮುಖ್ಯವಾಗಿ ಹಾಡುಗಬ್ಬಗಳು. 'ಗೀತೆಗಳು' 'ದೀಪಗಳು' 'ನೆಳಲು-ಬೆಳಕು' 'ದ್ರಾಕ್ಷಿ-ದಾಳಿಂಬೆ' ಎಂಬ ಕವನಸಂಕಲನಗಳಲ್ಲಿ ಅನೇಕ ಕವನಗಳು ಈಗ ನಮ್ಮ ದೇಶದಲ್ಲಿ ಮನೆ ಮಾತಾಗಿವೆ. 'ಭಾರತ ಜಗದಾಂಬಾ' 'ಕಸ್ಮೈ ದೇವಾಯ' 'ಉಂಗುರ ರವಕೇಳಿ' 'ಕೋಗಿಲೆ' 'ಮೃಗಶಾಲೆಯ ಸಿಂಹಗಳು' 'ಅಭೀಃ' 'ಮನೆ ತುಂಬಿಸುವುದು' 'ಹರಸು ತಾಯಿ' 'ಮುಂಗಾರಿಗೆ' 'ಲಾಲ್‌ಬಾಗ್' 'ಹೆಮ್ಮರ' 'ನಾಡತಾಯಿ' ಈ ಕವನಗಳಲ್ಲಿ ನಮ್ಮ ಈ ಕವಿಯ ಪ್ರತಿಭೆ ಈಗಲೂ ಮಿಡಿಯುತ್ತಾ ಇದೆ. ಪ್ರಣಯ, ಸ್ನೇಹ, ಪರಾಕ್ರಮ, ಸ್ವಾತಂತ್ರ್ಯಕಾಂಕ್ಷೆ ಕನಸುಗಳು ಅಲ್ಲಲ್ಲಿ ಮೂಡಿ ಓದುಗರ ಮನವನ್ನು ತದ್ಭಾವಲೀನವಾಗಿಸುತ್ತವೆ. ಈ ಕವನಗಳ ಭಾವ ಹಾಡಿದಾಗ ಹೆಚ್ಚು ಸ್ಫುರಣಗೊಳ್ಳುವುದೆಂಬುದು ಕವಿಗಳ ಅಭಿಪ್ರಾಯವೂ ಹೌದು. ಭಾವ ಗೀತೆಗಳಲ್ಲಿ ಸೌಂದರ್ಯ ಪರಿಪೂರ್ಣತೆಯನ್ನು ತುಂಬುವುದು ಸಾಮಾನ್ಯದ ಕೆಲಸವಲ್ಲ. ಮಾತು ಶೈಲಿ, ಭಾವ ರೀತಿ, ಧ್ವನಿ ರಸಗಳು ಒಟ್ಟುಗೂಡಿದ ಅಮೃತಲಗ್ನವನ್ನು ಕವನದಲ್ಲಿ ಹಿಡಿದಿರಿಸುವುದು ವರ ಕವಿಗೆ ಮಾತ್ರ ಸಾಧ್ಯ. ಇದನ್ನು 'ವಿ.ಸೀ.' ಅವರು ಸಾಧಿಸಿದ್ದಾರೆ. ಕಾವ್ಯ ಬರೆಯಲು ಮೊದಲುಮಾಡಿದಾಗ ಇದ್ದ ಅವರ ಛಲ—

ಹೋರುವೆವು ಮಲ್ಲರೊಲು ಕಾಲದೊಡನೆ
ಕಾಲನೆಮ್ಮಯದಾಗಿ ಆಗುವನಕ ;
ಗರಿಯಿಕ್ಕದೆಳೆವಕ್ಕಿ ಎಮ್ಮಾಸೆ ಇನ್ನೂ
ತುಂಬುಗರಿವಕ್ಕಿಯಿದು ಆಗುವನಕ, ...
ಆಗಿ ಘೋರಿಡುತಿರುವ ಬಿರುಗಾಳಿ ಸಮುಕೂ
ಗಾಳಿಕಡೆ ರೆಕ್ಕೆಗಳ ಹರಡುವನಕ !—

ಅವರ ಕಾವ್ಯದಲ್ಲಿ ಸಾರ್ಥಕತೆಯನ್ನು ಪಡೆದಿದೆ. ಈಗ ಅವರ ಕಾವ್ಯವನ್ನು ಓದುವಾಗ—

ಗಂಧರ್ವ ಗಾನಕಿದು ಮಿಗಿಲೆನಿಸಿ ರಂಜಿಪುದು
ಚಂದದಿಂಗಾಂಧಾರ ನುಡಿಯುತಿಹುದು

ಎಂಬ ಅವರ 'ವೀಣಾಗಾನ' ಶ್ರುತಿಯೇ ಕೇಳಿಬರುತ್ತದೆ, ಇಲ್ಲದಿದ್ದರೆ ಸಮಯಕ್ಕೆ ತಕ್ಕಂತೆ—

ಭೀಷಣ ವರ್ಷಧಾರೆ! ಕಾರ್ಮುಗಿಲ ಸಿಡಿರೋಷ!
ದಿಗ್ಭಿತ್ತಿಯೊಡೆವಂತ ವಜ್ರ ನಿರ್ಘೋಷ!

ಬೇಕಾದರೂ ಆಗಿಬಿಡುತ್ತದೆ.

ಹಗಲ ಕ್ಷಣಗಳೊಂದುಗೂಡಿ
ಬಗೆಗೆ ಬಂದ ಪರಿಯೊಳಾಡಿ
ಜಗವ ದೂರದಿಂದೆ ನೋಡಿ
ಹಗುರಮನದೆ ಹಾಡಿಹಾಡಿ

ಮೊರೆಯುವ ಸನ್ನಿವೇಶಗಳೂ ಉಂಟು. ಮಾರ್ದವದ ಮೆಲುದನಿಯ ಮೋಹಕತೆಯೂ ಉಂಟು.

ಬಲಹೀನರೆಂದೆತ್ತಲಾತ್ಮವನುಗಳಿಸಿದರು!
ಬಲಕಾಗಿ ಕಾಯ್ವವರು ಏಗೈವರು?
ಚಲವೊತ್ತ ಅಧಿಕಾರದಂಡಲೆಗೆ ಬೆದರುವರು
ಎಂದೇನ ಸಾಧಿಸುವರೆಂದೆಮ್ಮ ಕೇಳುತಿದೆ
ಅಭೀಃ ಅಭೀಃ ಅಭೀಃ ಎಂಬ ಸಗ್ಗದಬಿತ್ತು
ನರರಎದೆವೊಲಗಳಲಿ ಬೇರಿಟ್ಟು ಮೊಳೆಯುತಿದೆ
ಬಲದ ತಿರುಳನು ಬಲಿಸಿ ಬೆಳೆಸುತ್ತಿದೆ!

ಎಂದು ಜನರ ನಾಡಿಯನ್ನು ನಡಸಿ ಬಾಳನ್ನು ತಿದ್ದುವುದೂ ಉಂಟು. ತಮ್ಮ ಕವಿತೆಗಳು ಕೆಲವರಿಗೆ ಹಿಡಿಸದೆ ಅವರಿಂದ ಬಂದ ಕಟುಟೀಕೆಗೆ ಉತ್ತರವಾಗಿ ಅವರು 'ದ್ರಾಕ್ಷಿ-ದಾಳಿಂಬೆ'ಯಲ್ಲಿ ಹೇಳಿರುವ ಮಾತುಗಳು ಓದುಗರಿಗೆ ಗಮನಾರ್ಹವಾಗಿವೆ.

“ಮಣಿಗವಿತೆ, ಹಳಸಲೂಟ, ಪ್ರಾಗ್ವೃಷ್ಟಿ, ಕಣ್ಣಪಟ್ಟಿ ಕಟ್ಟಿದವರ ಕಾಣ್ಕೆ, ಬಂಡವಾಳಶಾಹಿಯ ಕೋಣ, ದಂತದ ಗೋಪುರವಾಸ, ಮಧ್ಯಮ ತರಗತಿಯ ಮಂದಮತಿ, ಹೀಗೇ ಇನ್ನೂ ಏನೇನಾದರೂ ಎಲ್ಲ ಮಾತುಗಳನ್ನು ಬೇಕಾದಷ್ಟು ಆಡಬಹುದು. ಸಂತೋಷ. ಸದ್ಯಕ್ಕೆ ನನ್ನ ಮಾತು ಇಷ್ಟೇ. ಯಾವ ಪ್ರಕರಣದಲ್ಲಿ ಆಗಲಿ ಮುನ್ನಡೆ ಹೊರ ಪ್ರಪಂಚಕ್ಕೆ ಎಷ್ಟು ಸೇರಿದುದೋ ಅಷ್ಟೇ ಅಂತಃಪ್ರವೃತ್ತಿಗಳ ಪರಿಶುದ್ಧಿಗೂ ಸೇರಿದುದು, ಮನುಷ್ಯನ ಮೂಲತ್ವಕ್ಕೆ ಸಂಬಂಧಿಸಿದ್ದು— ಎಂಬುದನ್ನು ಬಲ್ಲವರು ಒಪ್ಪುತ್ತಾರೆ. ಅಲ್ಲಿ ಸಹಜತೆ, ಆರ್ದ್ರತೆ, ಶುಚಿಯಾಸೆ, ಆ ಬಗ್ಗೆ ಪಕ್ಷಪಾತ ಶ್ರದ್ಧೆ ಉಂಟಾಗುವುದಾದರೆ ನಾಳಿನ ಎಲ್ಲ ಪ್ರಸಂಗಗಳಲ್ಲಿಯೂ ಅದು ಪ್ರಬಲಿಸುವುದು; ಫಲಕಾರಿಯಾಗಬಲ್ಲದ್ದಾಗುವುದು. ಉಳಿದುದು ಕೃತಿಗೆ ವಿಷಯಗಳನ್ನು ಆರಿಸುವ ಭಾಗ. ಆ ಆ ಪರಿಚಯವಿರುವವರು ಮಾತ್ರ ಅವನ್ನು ಕುರಿತು ಬರೆದಾರು–ಬರೆಯಬೇಕು ಅಗತ್ಯವಾಗಿ”. ಇಲ್ಲಿ ಶ್ರೀ ‘ವಿ.ಸೀ.’ ಅವರ ಕಾವ್ಯರಚನ ಕಾವ್ಯಾವಲೋಕನ ದೃಷ್ಟಿ ವ್ಯಕ್ತವಾಗಿದೆ. “ನಿತ್ಯಪ್ರಾಚೀನವಾದ ನಿತ್ಯನೂತನವಾದ ಮೂಲಮನೋವೃತ್ತಿ”ಗಳನ್ನು ಅರಿತಿರುವವರು ಇವರ ಕಾವ್ಯದಲ್ಲಿ ಸೊಗಸನ್ನು ಕಾಣುವುದು ಆಶ್ಚರ್ಯವೇನಲ್ಲ.

## ಅಭ್ಯಾಸಾರ್ಹ ಗದ್ಯಶೈಲಿ

ಕವನ ರಚನೆಯಲ್ಲಿರುವ ಸೊಗಸು ಶ್ರೀ ವಿ.ಸೀ. ಅವರ ಗದ್ಯ ರಚನೆಯಲ್ಲಿಯೂ ಇದೆ. ಅವರ ಪ್ರಬಂಧಗಳಲ್ಲಿರುವ ಮೃದುವಾದ ಹಾಸ್ಯ, ತಿಳಿಯಾದ ಶೈಲಿ ಅಭ್ಯಾಸಾರ್ಹ, ಅನುಕರಣೀಯ.

ಅನೇಕ ಸಾಹಿತಿಗಳಂತಲ್ಲ ಶ್ರೀ ವಿ. ಸೀ. ಇವರು ಕಾವ್ಯ ಪ್ರಪಂಚಕ್ಕೇ ದತ್ತು ಕೊಟ್ಟವರಲ್ಲ. ಅರ್ಥಶಾಸ್ತ್ರ ರಾಜ್ಯಶಾಸ್ತ್ರಗಳನ್ನೂ ಆಳವಾಗಿ ವ್ಯಾಸಂಗಮಾಡಿ, ಉದ್ದಾಮ ಪಂಡಿತರಾಗಿದ್ದ ಶ್ರೀ ಎ೯.ಎಸ್. ಸುಬ್ಬರಾಯರ ಮೆಚ್ಚುಗೆಯನ್ನು ಸಂಪಾದಿಸಿ ಕನ್ನಡದಲ್ಲಿ “ಹಣ ಪ್ರಪಂಚ”ವೆಂಬ ಬಹು ಉಪಯುಕ್ತವಾದ ಶಾಸ್ತ್ರಗ್ರಂಥವನ್ನೂ ರಚಿಸಿದ್ದಾರೆ. ಇದೂ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

The Aryan Path, The Hindu ಮುಂತಾದ ಮಾಸ ಪತ್ರಿಕೆ, ದಿನಪತ್ರಿಕೆಗಳಲ್ಲಿ ಕನ್ನಡ ಗ್ರಂಥಗಳ ವಿಚಾರದಲ್ಲಿ ಬರುವ ಇಂಗ್ಲಿಷ್ ವಿಮರ್ಶೆಗಳಲ್ಲಿ ಅನೇಕ ವೇಳೆ ಶ್ರೀ ವಿ.ಸೀ. ಅವರ ಲೇಖನಿಯ ಸವಿ ಓದುಗರಿಗೆ ದೊರಕುತ್ತದೆ. ಕನ್ನಡದಂತೆಯೇ ಇಂಗ್ಲಿಷ್ ಭಾಷಾ ಸಾಹಿತ್ಯಗಳಲ್ಲಿ ಇವರ ಪಾಂಡಿತ್ಯ ಹಿರಿದು; ಬರೆವಣಿಗೆ ರುಚಿಕರ ವಾದುದು.

ಇದು ಇವರ ಗ್ರಂಥರಚನೆಯ ಮಾತಾದರೆ ಇದಕ್ಕಿಂತಲೂ ಮುಖ್ಯವಾದ ಗ್ರಂಥ ಪ್ರಕಟಣೆಯ ಮಾತೊಂದುಂಟು. "ಕಾವ್ಯ ನಿರ್ಮಾಣದಂತೆಯೇ ಕಾವ್ಯಪ್ರಕಟನವೂ ಒಂದು ಕಲೆ" ಎಂದು ಇವರ ನಂಬಿಕೆ. ನಾವು ನಮ್ಮ ದೇಹವನ್ನು ಆಕರ್ಷಕವಾದ ರೀತಿ ಯಲ್ಲಿ ಬಟ್ಟೆಗಳಿಂದ ಅಲಂಕರಿಸಿಕೊಳ್ಳುವಂತೆಯೇ ಕಾವ್ಯಕ್ಕೂ ಅಚ್ಚು ಕಟ್ಟಾದ ಮೇಲ್ಮೈ ಬೇಕು. ಕನ್ನಡದಲ್ಲಿ ಭವ್ಯವಾಗಿ ಗ್ರಂಥವನ್ನು ಪ್ರಕಟಿಸಿದವರಲ್ಲಿ ಬಹುಶಃ ಶ್ರೀ ವಿ.ಸೀ. ಅವರೇ ಮೊದಲಿಗರು. ಕಾಗದ, ಅಚ್ಚು, ರಕ್ಷಾಕವಚ, ಕವಚದ ಮೇಲೆ ಚಿತ್ರ, ಹೊರನೋಟ, ಒಳನೋಟ ಎಲ್ಲದರಲ್ಲಿಯೂ ಒಂದೇ ರಸಿಕತೆ. ಅವರು ಹೇಗೋ ಹಾಗೆಯೇ ಅವರ ಗ್ರಂಥಗಳು. "ಕನ್ನಡ ಪುಸ್ತಕಗಳನ್ನು ಚೆಲುವಾಗಿ ಪ್ರಕಟಿಸುವ ಸಂಪ್ರದಾಯವು ಈ ಕಾಲದಲ್ಲಿ ಮೊದಲಾಯಿತೆಂಬ ಅಂಶವು ನಮ್ಮ ಸಾಹಿತ್ಯ ಚರಿತ್ರೆಗೆ ಸೇರುವಂತಾಗಲಿ" ಎಂಬ ಅವರ ಮಾತು ಸತ್ಯವಾಗಿದೆ.

ಯುವಕರು ಅವರ ಮಾತಿನಲ್ಲಿಯೇ ಅವರಿಗೆ ಗೌರವವನ್ನು ಸಲ್ಲಿಸು ತ್ತಾರೆ:

> ಮುಂದೆ ದಾರಿಯ ಬೆಳಗಿ
> ಎಮ್ಮ ನಡೆಯನು ನೇರ ಕೊಂಡೊಯ್ಯಲಿ.

ಸಾವಿರಾರು ವಿದ್ಯಾರ್ಥಿಗಳನ್ನು ಕಾವ್ಯಗಂಗೆಯೆಡೆಗೆ ಕರೆದೊಯ್ದು, ಕಿರಿಯ ಸ್ನೇಹಿತರಲ್ಲಿ ಅನೇಕರಿಗೆ ಮಾರ್ಗದರ್ಶಕರಾದ ಇವರ ಒಂದು ಕವನಸಂಕಲನವನ್ನು ಕುರಿತು ಈ ಲೇಖನದಲ್ಲಿ ಪರಿಚಯ ಮಾಡಿ ಕೊಟ್ಟಿದೆ.

## ದ್ರಾಕ್ಷಿ-ದಾಳಿಂಬೆ

ಈಗ ಕನ್ನಡದ ಗ್ರಂಥರಾಶಿಯನ್ನು ನೋಡುವ ಜನಕ್ಕೆ ಮೂವತ್ತು, ನಲವತ್ತು ವರ್ಷಗಳ ಹಿಂದಿನ ಕನ್ನಡ ನಾಡಿನ ಚಿತ್ರ ಸರಿಯಾಗಿ ಹೊಳೆಯುವುದು ಕಷ್ಟ. ಸಾಹಿತ್ಯಮಾರ್ಗದಲ್ಲಿ ನೂತನತೆ ಬೇಕೆಂದು ವಿವಿಧ ದೃಷ್ಟಿಯಿಂದ ಅದಕ್ಕೆ ದಿಗ್ದರ್ಶಕರಾಗಿ ನಿಂತ 'ಶ್ರೀ' ಯವರ ನೇತೃತ್ವದಲ್ಲಿ ದೊಡ್ಡ ಆಂದೋಳನ ನಡೆದದ್ದು ಎಲ್ಲರಿಗೂ ತಿಳಿದೇ ಇದೆ. ಆಗ ಅವರ ಸರಿಸಮ ವಯಸ್ಸಿನವರು ಅನೇಕರು ಅವರ ಜೊತೆ ನಿಂತು ಅವರ ಕಾರ್ಯದಲ್ಲಿ ಭಾಗಿಗಳಾದರು. ಅವರೆಲ್ಲರಿಗೂ 'ಶ್ರೀ'ಯವರಿಂದ, ಅವರ ಗ್ರಂಥಗಳಿಂದ ಸಹಾಯವಾಯಿತೆನ್ನುವುದರಲ್ಲಿ ಸಂದೇಹವಿಲ್ಲ.

ಅಂದು ಕೆಲಸವನ್ನಾರಂಭಿಸಿದ ಹಿರಿಯರಲ್ಲಿ ಕೆಲವರು ಇನ್ನೂ ಗ್ರಂಥರಚನೆ ಮಾಡುತ್ತಿದ್ದಾರೆ. ಶ್ರೀ ಡಿ. ವಿ. ಜಿ., ಶ್ರೀ ಮಾಸ್ತಿ, ಪ್ರೊ|| ಕೃಷ್ಣಶಾಸ್ತ್ರಿ ಇವರು ಮುಖ್ಯ ಉದಾಹರಣೆಗಳು. ಇವರೆಲ್ಲರ ನಡುವೆ ಶ್ರೀ ವಿ.ಸೀ. ಅವರಿಗೆ ಒಂದು ವಿಶಿಷ್ಟವಾದ ಸ್ಥಾನ ಸಿಕ್ಕಿತು. ಮೇಲೆ ಹೇಳಿದವರ ಈಗ ನಮ್ಮ ಮುಂದೆ ಇಲ್ಲದಿರುವ ದಿ|| ಬಿ. ಎಂ. ಶ್ರೀಕಂಠಯ್ಯ, ಟಿ. ಎಸ್. ವೆಂಕಣ್ಣಯ್ಯ, ಬೆಳ್ಳಾವೆ ವೆಂಕಟನಾರಣಪ್ಪ ಮುಂತಾದವರ ನಡುವೆ ಆಗಿನ ಕಾಲದಲ್ಲಿ ಶ್ರೀ ವಿ.ಸೀ. ಅವ ರೊಬ್ಬರೇ ಚಿಕ್ಕ ವಯಸ್ಸಿನವರು. ಹಿರಿಯರೆಲ್ಲರೂ ಶ್ರೀ ವಿ.ಸೀ. ಅವರನ್ನು ತಮ್ಮಲ್ಲಿ ಒಬ್ಬರೆನ್ನುವಂತೆಯೇ ನಡೆಸಿಕೊಂಡರು. ಶ್ರೀ ವಿ. ಸೀ. ಅವರು ವಯಸ್ಸಿನಲ್ಲಿ ಚಿಕ್ಕವರಾದರೂ ಅವರೊಡನೆ ತಾವೂ ಇರಬಹುದೆಂಬುದನ್ನು ಇತರ ಯೋಗ್ಯತೆಗಳಿಂದ ವ್ಯಕ್ತಪಡಿಸಿಕೊಂಡರು. ಹೀಗೆ ಅನೇಕವೇಳೆ ಈ ವಯಸ್ಸಿನ ಅಂತರದಿಂದ ಪರಸ್ಪರ ಅಭಿಪ್ರಾಯ ವ್ಯತ್ಯಾಸಗಳು ಬಂದು ಹಿರಿಯರಿಗೆ ಕಿರಿಯರ ದೃಷ್ಟಿಯೂ, ಕಿರಿಯರಿಗೆ ದೊಡ್ಡವರ ಅಭಿಪ್ರಾಯವೂ ತಿಳಿಯಬರುತ್ತಿತ್ತು. ಆ ಗುಂಪಿನಲ್ಲಿದ್ದು ಬಹುಶಃ ಶ್ರೀ ವಿ. ಸೀ. ಅವರು ತಮ್ಮ ಕಿರಿಯರ ಅಥವ ಸಮವಯಸ್ಸಿನವರ ಕೆಲವರ ವಿಚಿತ್ರ ವಿಮರ್ಶೆಗೂ ಒಳಗಾದರೆನ್ನುವುದು ಈಗ ಚರಿತ್ರೆಯ ಮಾತು.

ಅಂದು ಬೆಳಗುವುದಕ್ಕೆ ಮೊದಲುಮಾಡಿದ ಶ್ರೀ ವಿ. ಸೀ. ಅವರ ತೀಕ್ಷ್ಣ ಪ್ರತಿಭೆ ಇಂದೂ ನಮಗೆ ವ್ಯಕ್ತವಾಗುತ್ತಿದೆ. ಜೀವನದ ಎಲ್ಲ ಹಾದಿಯಲ್ಲಿಯೂ ಪಾವನತೆಯನ್ನು ಸಾಧಿಸಬೇಕೆನ್ನುವ ಈ ಸಂಯಮಿಯ ಕವನಗಳಲ್ಲಿಯೂ ಆ ಭಾವದ ವಿವಿಧ ಮುಖಗಳು ಕಂಡುಬರುತ್ತವೆ. ಶ್ರೀ ವಿ. ಸೀ. ಅವರ ಕವನಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರ ಕಾವ್ಯದ ಮುಖ್ಯ ಗುಣಗಳನ್ನು ಮೊದಲು ಗಮನಿಸಬೇಕು.

ಶ್ರೀ ವಿ. ಸೀ. ಮುಖ್ಯವಾಗಿ ಒಬ್ಬ ಪ್ರಯೋಗ ಕವಿ. ತಮ್ಮ ಕಾವ್ಯಗಳಲ್ಲಿ ಅವರು ಮಾಡಿರುವ ಅನೇಕ ಪ್ರಯೋಗಗಳು ಇನ್ನೂ ಹೆಚ್ಚು ಪ್ರಚಾರವಾಗದಿರುವುದು ಶೋಚನೀಯವಾದ ಸಂಗತಿ. ಆಧುನಿಕ ಕಾವ್ಯಾಭ್ಯಾಸಿಗಳಿಗೆ ಇವರ ಕಾವ್ಯದಲ್ಲಿ ಅನೇಕ ಪಾಠಗಳು ದೊರೆತಾವು. ಒಂದು ಪದ ಪ್ರಯೋಗದಲ್ಲಿ, ನೂತನ ಛಂದೋ ವಿಸ್ತಾರದಲ್ಲಿ, ಸಂಕೋಚನದಲ್ಲಿ, ವಸ್ತುಗಳ ಆಯ್ಕೆಯಲ್ಲಿ ಇತರರಲ್ಲಿ ಕಾಣದ ಗುಣ ಇವರ ಕಾವ್ಯಗಳಲ್ಲಿದೆ. ಕನ್ನಡ ಸಾಹಿತ್ಯದಲ್ಲಿ ಇತರ ಆಧುನಿಕ ಕವಿಗಳು ಮಾಡದಿರುವ ಕೆಲವು ಪ್ರಯೋಗಗಳನ್ನು ಇವರು ನಡೆಸಿದ್ದಾರೆ. ಸಂಗೀತವನ್ನು ಕಾವ್ಯಕ್ಕೆ ಹೊಂದಿಸುವುದರಲ್ಲಿಯೂ ನಮಗೆ ಇದು ಗೊತ್ತಾಗುತ್ತದೆ. ಇತರ ಕವಿಗಳಂತೆಯೇ ತಮ್ಮ ಕಾವ್ಯ ವನ್ನು ಹಾಡಿ ತೋರಿಸುವ ಅವಕಾಶವನ್ನು ಕನ್ನಡ ಸಭೆಗಳಿಗೆ ಶ್ರೀ ವಿ. ಸೀ. ಅವರು ಒದಗಿಸಲಿಲ್ಲ. ಹಾಗಾಗಿದ್ದರೆ ಅವರ ಕಾವ್ಯಗಳ ಅರ್ಥ ಬಹು ಸ್ಫುಟವಾಗಿ ಅನೇಕ ಅನರ್ಥಗಳು ತಪ್ಪಿಹೋಗಬಹುದಾಗಿತ್ತು. ಜಾಡು ಹೊಸದಾಗಿರುವಾಗ ಅದರಲ್ಲಿ ಎಲ್ಲಿಗೆ ಹೋಗಬಹುದೆನ್ನುವುದನ್ನು ತೋರಿಸುವುದು ಬಹಳ ಅಗತ್ಯ. ಇಲ್ಲದಿದ್ದರೆ ಅದು ಬೇಗ ಮುಚ್ಚಿ ಹೋಗಿ ಮತ್ತೆ ಹುಡುಕಬೇಕಾಗುತ್ತದೆ. ತಮ್ಮ ಕಾವ್ಯದ ವಿಚಾರ ವಾಗಿ ಅವರು ಎಲ್ಲೂ ಮಾತನಾಡದೇಹೋದುದು ಈ ದೃಷ್ಟಿಯಿಂದ ಒಂದು ನಷ್ಟವಾಗಿದೆ. ಶ್ರೀ ವಿ. ಸೀ. ಅವರ 'ದ್ರಾಕ್ಷಿ-ದಾಳಿಂಬೆ' ಯನ್ನು ವಸ್ತು, ಭಾಷೆ, ಛಂದಸ್ಸು ಮುಂತಾದ ದೃಷ್ಟಿಗಳಿಂದ ಪರೀಕ್ಷಿಸು ವುದಕ್ಕೆ ಮೊದಲು 'ಭಾವಗೀತೆ' ಎನ್ನುವ ಕವನಮಾರ್ಗದ ವಿಶಿಷ್ಟತೆ ಯನ್ನು ಇಲ್ಲಿ ತಿಳಿಸಿದೆ.

## ‘ಭಾವಗೀತೆ’ ಎಂದರೇನು ?

ಇಂಗ್ಲಿಷ್ ಸಾಹಿತ್ಯದಲ್ಲಿ ‘ಹಾಡುಗಬ್ಬ’ವೆನ್ನುವ ಅರ್ಥದಿಂದ, ಕವಿಯ ಭಾವನೆಗಳೆಲ್ಲವನ್ನು ಒಳಗೊಳ್ಳುವವರೆಗೆ ‘ಭಾವಗೀತೆ’ಯ ಅರ್ಥ ಬೆಳೆದುಬಿಟ್ಟಿದೆ. ಆಧುನಿಕ ಕನ್ನಡ ಕಾವ್ಯದಲ್ಲಿ ಬಹುಪಾಲು ‘ಭಾವ ಗೀತೆ’ ಎಂಬ ಭಾಗದಲ್ಲಿ ಸೇರುತ್ತದೆ, ಎಂದರೆ ಮೇಲಿನ ಮಾತು ಅರ್ಥ ವಾಗುತ್ತದೆ. ಭಾವಗೀತೆಗಳನ್ನು ವಿವಿಧ ಪಂಗಡಗಳಾಗಿ ವಿಭಾಗಿಸು ವುದು ಇನ್ನೂ ಕಷ್ಟದ ಕೆಲಸ. ಭಾವಗೀತೆಯಲ್ಲಿ ರಸನಿರೂಪಣೆ, ಒಂದೇ ಕಲ್ಪನಾವಿಲಾಸ ಇರಬೇಕೆನ್ನುವುದು ಸಾಧಾರಣವಾಗಿ ಎಲ್ಲರೂ ಒಪ್ಪುವ ವಿಷಯ.

ಕವಿಯ ಆತ್ಮೀಯವಾದ ಭಾವನಾ ಸಾಮ್ರಾಜ್ಯದ ಸೃಷ್ಟಿ ಭಾವ ಗೀತೆ. ಅಂದರೆ ಅದು ಸಂಪೂರ್ಣವಾಗಿ ವ್ಯಕ್ತಿನಿಷ್ಠವಾಗಿ ಇತರರಿಗೆ ಸಂಬಂಧಪಟ್ಟಿಲ್ಲವೆಂದು ಅರ್ಥವಲ್ಲ. ಎಲ್ಲ ಕಲೆಗಾರರೂ ಮಾನವ ಸಾಮಾನ್ಯವಾದ ಅನುಭವಗಳನ್ನು ಹೊಂದಿ ತಮ್ಮ ಪ್ರತಿಭಾಸಂಪನ್ನತೆ ಯಿಂದ ಅವುಗಳಿಗೆ ಲೋಕಸಂಪರ್ಕವನ್ನು ಒದಗಿಸುತ್ತಾರೆ. ತಮ್ಮ ಕಲ್ಪನಾ ಸಹಚಾರಿಯಾದ ಅನುಕಂಪೆಯಿಂದ ಇತರರ ಅನುಭವಗಳನ್ನು ತಮ್ಮದನ್ನಾಗಿ ಮಾಡಿಕೊಳ್ಳುತ್ತಾರೆ. ಆದುದರಿಂದ ಪ್ರತಿಯೊಂದು ಭಾವಗೀತೆಯಲ್ಲಿಯೂ ಮಾನವತೆಗೇ ಸಾಮಾನ್ಯವಾದ ಭಾವನಾ ವಿಶೇಷವು ವ್ಯಕ್ತವಾಗಿರುತ್ತದೆ. ಅಥವಾ ಎಷ್ಟರಮಟ್ಟಿಗೆ ಈ ಭಾವನೆ ಲೋಕಸಾಮಾನ್ಯವೋ ಅಷ್ಟರಮಟ್ಟಿಗೆ ಅದಕ್ಕೆ ‘ಭಾವಗೀತೆ’ ಎಂಬ ಹೆಸರು ಒಪ್ಪುತ್ತದೆ ಎನ್ನಬಹುದು. ಜನಪದ ಸಾಹಿತ್ಯದ ಒಂದೊಂದು ಪಲುಕೂ ಈ ದೃಷ್ಟಿಯಿಂದ ಭಾವಗೀತೆಯೇ. ಅಲ್ಲಿಂದ ಹಿಡಿದು ಇತ್ತೀಚಿನ ಕವಿಯೊಬ್ಬರು ಹಾಡಿರುವ,

> **ಇದೆ ಕನಸೋ ಅದೆ ಕನಸೋ**
> **ನಾನರಿಯೆ-ಅಚ್ಚರಿಯೆ**

ಎನ್ನುವವರೆಗೆ ಭಾವಗೀತೆ ಬೆಳೆದಿದೆ. ಎರಡನೆಯ ಹಾಡಿನಲ್ಲಿ ಕಾಣುವ

ಭವ್ಯವಾದ ರಸಾನುಭವದ ಆವೇಗ ಹಿಂದಿನ ಕೆಲವು ಜಾನಪದ ಗೀತೆಗಳಲ್ಲಿ ಕಾಣದಿರಬಹುದು. ಇದು ಬೆಳವಣಿಗೆ. ಒಬ್ಬ ಕವಿ,

ನಿನ್ನ ಬಯಸುವ ಕಣ್ಣ ಮೋಹಕೆ
ನಿನ್ನ ನುಡಿಸುವ ತುಟಿಯ ತವಕಕೆ
ನಿನ್ನನೊಲಿಸುವ ಬಗೆಯ ವೇಗಕೆ
ತಡೆಗಳಿಂತೇಕೆ ?

ಎಂದು ಹಾಡಿದರೆ ಆ ಅನುಭವ ಕವಿಗೆ ವೈಯಕ್ತಿಕವಾದುದೆಂದು ಹೇಳಿಬಿಡಬಾರದು. ಅದು ಕಾವ್ಯಕ್ಕೆ ಅಪಾರ್ಥಮಾಡಿದಂತೆ. 'ಪುಟ್ಟನಂಜಿ'ಯ ಹೆಸರನ್ನೋ 'ಗೌರಿ'ಯ ಹೆಸರನ್ನೋ ನೆನಪಿನಲ್ಲಿಟ್ಟುಕೊಂಡು ತಾವು ಕಂಡ ಪುಟ್ಟನಂಜಿ ಗೌರಿಯರನ್ನು ಕವಿಯ ಜೀವನಕ್ಕೆ ಅಂಟಿಸುವ ಗೋಜಿಗೆ ಹೋಗಬಾರದು. ಇವುಗಳ ಹಿಂದೆ ಇರುವ ಮಾನವ ಸಾಧಾರಣವಾದ ಅನುಭವದ ನಿರೂಪಣೆಯೇ ಕವಿಯ ದೃಷ್ಟಿ.

ಭಾವಗೀತೆಯ ಗುಣ ಇಷ್ಟಾದರೆ ಅದರ ರೂಪದಲ್ಲಿ ಮತ್ತೊಂದು ವಿಶಿಷ್ಟತೆಯಿರುತ್ತದೆ. ಇತಿಹಾಸ, ಕಥನ ಕವನಗಳಂತೆ ಭಾವಗೀತೆಯಲ್ಲಿ ಅನೇಕ ಘಟನೆಗಳಾಗಲಿ ಸಂದರ್ಭಗಳಾಗಲಿ ಬರುವುದಿಲ್ಲ. ಅಲ್ಲಿ ಬಹಿರಂಗವಾದ ಒಂದು ಪ್ರಪಂಚಕ್ಕೂ ಅಂತರಂಗದ ಒಂದು ವಿಶ್ವಕ್ಕೂ ಅವ್ಯಕ್ತವಾದ ಸಂಪರ್ಕ ನಿರ್ಮಾಣವಾಗಿರುತ್ತದೆ. ಬಹು ಸಾಧಾರಣವಾದ ಭಾವಗೀತೆಗಳಲ್ಲಿ ಹೊರಗಣ ಪ್ರಪಂಚದಲ್ಲಿ ಕಾಣುವ ವಿವರಗಳ ವರ್ಣನೆಯಲ್ಲಿಯೇ ಕವಿ ತೃಪ್ತಿಗೊಂಡಿರುವುದು ಕಂಡುಬರುತ್ತದೆ. ಆದರೆ ವಸ್ತುವೀಕ್ಷಣದಿಂದ ಅಂತರ್ಯದ ತತ್ವ ಮಿನುಗಿ ಯಾವುದೋ ಗಾಢವಾದ ವಿಷಯವನ್ನು ನಿರೂಪಿಸುವ ಭಾವಗೀತೆಗಳು ಹೆಚ್ಚು ಶಾಶ್ವತವಾದವು. ಶ್ರೀ ಡಿ. ವಿ. ಜಿ. ಅವರ "ಶಿಲಾಬಾಲಿಕೆಯರು" ಇಂತಹ ಭಾವಗೀತೆಗಳಿಗೆ ಒಳ್ಳೆಯ ಉದಾಹರಣೆ. ಕೀಟ್ಸ್ ಕವಿಯ Ode on a Grecian Urn ಎಂಬ ಭಾವಗೀತೆಯ ಮಾದರಿಯಲ್ಲಿ ರಚಿತವಾದ ಈ ಗೀತದಲ್ಲಿ ಸೌಂದರ್ಯ ಮೀಮಾಂಸೆಯೊಂದು ರೂಪುಗೊಂಡು ಓದುಗರ ಮನಸ್ಸನ್ನು ಸೆರೆಹಿಡಿಯುತ್ತದೆ. ಶ್ರೀ ವಿ. ಸೀ. ಅವರ 'ಬೇಲೂರು ಚೆನ್ನಕೇಶವ' ಎನ್ನುವ ಕವನದಲ್ಲಿ ಈ ದೃಷ್ಟಿ ಕಾಣುತ್ತದೆ.

ಇಂತಹ ಕವನಗಳು ತತ್ವಪೂರ್ಣವಾಗಿದ್ದು ತೀಕ್ಷ್ಣವಾದ ಆಲೋಚನೆಗೆ ಆಗರವಾಗಿರುವುದರಿಂದ ಗೀತದ ಗುಣ ಅದರಿಂದ ಸ್ವಲ್ಪ ದೂರವಾಗಿರಬಹುದು.

ಭಾವಗೀತೆಗೆ ಇಂತಹುದೇ ರೂಪವೆನ್ನುವುದಿಲ್ಲ. ಒಂದೊಂದು ರಾಗಗಳಿಗೆ ಹೊಂದಿಕೊಳ್ಳುವ ಗುಣ ವಿವಿಧ ಭಾವಗಳಿಗೆ ಇರುವುದರಿಂದ ಸಮಯೋಚಿತವಾಗಿ ಅದು ರೂಪವನ್ನು ತಳೆಯುತ್ತದೆ. ಸ್ಥಿರವಾದ ಗಾಂಭೀರ್ಯವನ್ನೂ, ನುಣುಪಾದ ಛಂದೋಗತಿಯನ್ನೂ ಪಡೆದಿರುವುದು ಭಾವಗೀತೆಗಳಿಗೆ ಅಗತ್ಯವಿಲ್ಲ. ಮೊನಚಾದ ಮಾತು, ವೇಗವಾದ ಧಾಟಿ, ವಿವಿಧ ಛಂದಸ್ಸುಗಳು ಭಾವಗೀತೆಗಳಿಗೆ ಬಹಳ ಅಗತ್ಯ. ಆದರೂ ಕವನದ ರೂಪದಲ್ಲಿ, ಕೊನೆಗಾಣುವ ಮನೋಹರತೆಯಲ್ಲಿ, ಒಟ್ಟು ಕೂಡಿಕೊಂಡಿರುವ ಭಾವಸಾಂದ್ರತೆ ಭಾಷೆಯ ಬಿಗು ಇವುಗಳಲ್ಲಿ ಭಾವಗೀತೆಯ ಗಾಂಭೀರ್ಯ ವ್ಯಕ್ತಗೊಳ್ಳುತ್ತದೆ. ಈ ಕಾರಣಗಳಿಂದ ಭಾವಗೀತೆಯ ರಚನೆ ಬಹು ಕಷ್ಟವಾದುದು. ಅದಕ್ಕೆ "ಕಾಸಿನಲ್ಲಿ ಕೈಲಾಸ ತೋರಿಸು"ವ ದಿವ್ಯ ಶಕ್ತಿ ಬೇಕು.

ಭಾವಗೀತೆಗಳನ್ನು ಬೇರೆ ಬೇರೆ ವಿಭಾಗಗಳಾಗಿ ಮಾಡುವುದು ಬಲು ಕಷ್ಟ. ಗೀತೆಗಳ ವಸ್ತುವನ್ನು ಅನುಸರಿಸಿ, ಪ್ರೇಮ, ದುಃಖ, ದೇಶ, ಸಮಾಜ, ಪ್ರಕೃತಿ, ಕಲೆ ಮುಂತಾಗಿ ವಿಭಾಗಿಸುವುದು ಬಹು ಸಾಮಾನ್ಯವಾದುದು. ಇದರಿಂದ ಕವನಗಳನ್ನು ಒಂದೊಂದು ಗುಂಪಾಗಿ ಮಾಡಬಹುದೇ ಹೊರತು ಆ ಮಾರ್ಗದ ಗೀತೆಗಳ ವಿಶಿಷ್ಟತೆಯನ್ನು ಅದರಿಂದ ಸಾಧನೆ ಮಾಡುವುದಕ್ಕಾಗುವುದಿಲ್ಲ. ಛಂದಸ್ಸಿನ ಕ್ರಮವನ್ನು ಅನುಸರಿಸಿ ಭಾವಗೀತೆಗಳನ್ನು ಜೇರೆ ಬೇರೆ ಗುಂಪುಗಳನ್ನಾಗಿ ವಿಭಾಗಿಸಬಹುದು. ಇದೂ ಅಷ್ಟು ಪ್ರಯೋಜನಕಾರಿಯಲ್ಲ. ಹಾಡುಗಬ್ಬಗಳು, ಹಾಡಿಗೆ ಸಿಗದ ಕಾವ್ಯಗಳು, ಎಂದು ವಿಭಾಗ ಮಾಡಿದರೂ ಇದೇ ಕಷ್ಟ. ಆದುದರಿಂದ ಭಾವಗೀತೆಯ ಗುಣಗಳನ್ನು ನೆನಪಿನಲ್ಲಿಟ್ಟು ಕೊಂಡು 'ದ್ರಾಕ್ಷಿ-ದಾಳಿಂಬೆ'ಯ ಕವನಗಳನ್ನು ಮೇಲೆ ಹೇಳಿದ ಸಾಧಾರಣ ರೀತಿಯಲ್ಲಿಯೇ ವಿಂಗಡಿಸಿ ಅವುಗಳ ಪರಿಚಯ ಮಾಡಿ

ಕೊಳ್ಳುವುದು ಸುಲಭವಾದುದರಿಂದ ಇಲ್ಲಿ ಆ ಮಾರ್ಗವನ್ನೇ ಅನುಸರಿಸಿದೆ.

## ಪ್ರೇಮಕವನಗಳು

ಪ್ರೇಮವನ್ನು ಕುರಿತು ಕವನವನ್ನು ರಚಿಸದ ಕವಿಯಿಲ್ಲ. ವಿಶ್ವ ಸಾಹಿತ್ಯದಲ್ಲಿ ಬಹುಭಾಗ, ಅರ್ಧಕ್ಕಿಂತ ಹೆಚ್ಚು ಭಾಗ, ಪ್ರೇಮವನ್ನು ಕುರಿತು ಬರೆದದ್ದಾಗಿದೆ.

ಮಾನವನ ಜೀವನದಲ್ಲಿ ಪ್ರೇಮದಷ್ಟು ಗಾಢವಾದ ಭಾವನೆ ಮತ್ತೊಂದಿಲ್ಲ. ವೀರ ಎರಡನೆಯ ಸ್ಥಾನವನ್ನು ಆಕ್ರಮಿಸುತ್ತದೆ. ಮಿಕ್ಕುದು ಆಮೇಲೆ. ಆದುದರಿಂದಲೇ ಶೃಂಗಾರರಸನಿರೂಪಣೆಗೆ ಸಾಹಿತ್ಯದಲ್ಲಿ ಅಷ್ಟು ಪ್ರಾಧಾನ್ಯ. ಸಂನ್ಯಾಸಿಗಳಾದ ಕವಿಗಳೂ ಕೂಡ ತಪಸ್ಸಿನ ಸ್ವೀಕಾರವನ್ನೋ ಮೋಕ್ಷಗಮನವನ್ನೋ ವರ್ಣಿಸಬೇಕಾದರೆ "ಮೋಕ್ಷ ಶ್ರೀವರನಾದಂ" ಎಂದೇ ವರ್ಣಿಸಬೇಕು.

ಆಧುನಿಕ ಕನ್ನಡ ಕಾವ್ಯದಲ್ಲಿಯೂ ಪ್ರೇಮಕವನಗಳಿಗೇನೂ ಕಡಿಮೆಯಿಲ್ಲ. ಪ್ರೇಮಕವನಗಳಿಗಾಗಿಯೇ ತಮ್ಮ ಬರೆಹವನ್ನೆಲ್ಲಾ ಮೀಸಲಾಗಿರಿಸಿರುವ ಕವಿಗಳೂ ನಮ್ಮಲ್ಲಿದ್ದಾರೆ. ಆದರೆ ಶ್ರೀ ವಿ. ಸೀ. ಅವರ ಪ್ರೇಮಕವನಗಳಲ್ಲಿ ಒಂದು ವೈಶಿಷ್ಟ್ಯವಿದೆ. ಇವುಗಳಲ್ಲಿ ಅತಿ ಸಾಧಾರಣವಾದ ಗಂಡು-ಹೆಣ್ಣಿನ ಸರಸ, ವಿರಸ, ಸಮರಸಗಳ ನೇರವಾದ 'ಗಣಿತಶಾಸ್ತ್ರ'ದ ನಿರೂಪಣೆಯಿಲ್ಲ. ಯಾವುದು ನೇರವಲ್ಲವೋ, ಎಲ್ಲಿ ಇತರರು ತಮ್ಮ ಕೈವಾಡವನ್ನು ತೋರಿಸಿಲ್ಲವೋ ಅಲ್ಲಿಯ ಕೊಂಕನ್ನು ವಸ್ತುವನ್ನಾಗಿ ಅವರು ಆರಿಸಿಕೊಂಡಿರುವುದು ನಮಗೆ ವ್ಯಕ್ತವಾಗುತ್ತದೆ. ಹೆಣ್ಣಿನ ಕೊಂಕು 'ಕೊಂಕು' ಎಂಬ ಕವನದಲ್ಲಿ ಎಷ್ಟು ಸೊಗಸಾಗಿ ಬಂದಿದೆ ನೋಡಿ. ಸ್ತ್ರೀಸಹಜವಾದ ಈ ಕೊಂಕು ಕಾವ್ಯಕ್ಕೆ ಸೊಂಕು. ಹುಬ್ಬು, ನುಡಿ, ಕಣ್ಣುಕುಡಿ, ನೋಟಗಳಲ್ಲಿ ಪುರುಷನು ನಿರೀಕ್ಷಿಸುವ ಯಾವುದೂ ಸತ್ಯವಲ್ಲ. ಬಯಕೆ ಸಲ್ಲಿಸುವಾಗ ಬೇಡವೆನ್ನುವ ಮಾತು, ಮನಸ್ಸಿಗೆ ಬೇಡದುದನ್ನು ನಿಡುಬಯಕೆಯಂತೆ ಸ್ವೀಕರಿಸುವ ರೀತಿ, ನೋಡುವ ನೋಟದಲ್ಲಿ ತೆಕ್ಕನೆ ಮೈತಾಳುವ ವ್ಯಗ್ರತೆ, ಆ ವ್ಯಗ್ರತೆಯೇ

ಮರುಕ್ಷಣದಲ್ಲಿ ಏಕಾಗ್ರತೆಯಾಗುವ ಇಂದ್ರಜಾಲ, ವಿಶ್ವಸತ್ಯವನ್ನೇ ಅಲ್ಲವೆನ್ನುವ ಶಿರೋಭಂಗಿ, ಸೋಲಿನಲ್ಲಿ ವ್ಯಕ್ತಪಡಿಸುವ ಅವಹೇಳನ, ದೈನ್ಯದಲ್ಲಿ ಸಂಪಾದಿಸುವ ಗೆಲವು, ಓಡಿ ಓಡಿ ಬಳಿಗೆ ಕರೆಯುವ ಅವ್ಯಕ್ತವಾದ ಬಯಕೆಯ ಆಹ್ವಾನ, ಬೇಡವಾದಾಗ ತೋಳತೆಕ್ಕೆಯಲ್ಲಿದ್ದೂ ಶಿಲೆಯಂತೆ ಕೋಮಲತೆ ಮಾಧುರ್ಯ ರಸಿಕತೆಗಳನ್ನು ಇಲ್ಲವಾಗಿಸಿಕೊಳ್ಳುವ ಕಾಮರೂಪಧಾರಣಾಶಕ್ತಿ, ಪುರುಷನಿಗೆ ಮಾತಿನಲ್ಲಿ ಸ್ವಾತಂತ್ರ್ಯವಿತ್ತು ಮಾನಸವಾದ ಹೊನ್ನ ಸಂಕೋಲೆಯನ್ನು ಬಿಗಿವ ಬಲುಹು, ನಿಜವಾದ ಪ್ರೇಮವಿಲ್ಲದಿದ್ದಾಗಲೂ ಬಿನ್ನಾಣದ ಪ್ರೇಮವನ್ನು ತೋರಿಸುವ ಅವಗುಂಠನ ಮುಂತಾದ 'ಕೊಂಕು'ಗಳು ಎಷ್ಟು ರಸವತ್ತಾಗಿ ಮೂಡಿವೆ! ಅಂತರ್ಯದಲ್ಲಿ ಹೆಣ್ಣಿಗೆ ಆಸೆ ಆವೇಗವಿದ್ದರೂ "ಮುಚ್ಚಿ ತುಟಿಯನು ಚಪಲವಡಗಿಸುವ" ರೀತಿ ಈ ಕವನದಲ್ಲಿ ರೂಪು ತಳೆದಿದೆ. ಈ ಕೊಂಕಿನ ವೈವಿಧ್ಯದ ಹಿಂದೆ ಇರುವ ಪರಮರಸಮಯವಾದ ಶೃಂಗಾರದ ಸೊಗಸು ನಮಗೆ ಅರಿವಾಗಬೇಕು. ಅದಿರುವುದರಿಂದಲೇ ಕವಿ:

> ನೀವು ಇಲ್ಲದ ಬಾಳ್ಗೆ ಶುಚಿಯುಂಟೆ? ರುಚಿಯುಂಟೆ?
> ನಿಮ್ಮೊಡ್ಡು ಜಾಲದಿಂ ಬಿಡುಗಡೆಗಳುಂಟೆ?

ಎಂದು ಪ್ರಶ್ನೆಯನ್ನು ಕೇಳಿ ಕವನವನ್ನು ಕೊನೆಗಾಣಿಸುತ್ತಾರೆ. ಈ ಪ್ರಶ್ನೆಯಲ್ಲಿಯೇ ಉತ್ತರವೂ ಅಡಕವಾಗಿರುವ ಜಾಣ್ಮೆಯನ್ನು ಹೊಸದಾಗಿ ವಿವರಿಸಬೇಕಾಗಿಲ್ಲ.

'ನೀನಾರೆ?' ಎನ್ನುವ ಕವನದಲ್ಲಿ ಚಿತ್ರವಾಗಿರುವ ನಾರಿಯು ಅಪೂರ್ವವಾದ ಬಿಂಕದಲ್ಲಿ ಬಹು ಆಕರ್ಷಣೆಯಿದೆ. ಮಿಂಚಿನಂತೆ ಹೊಳೆಯುವ ತಿಳಿಯ ಕಣ್ಣುಗಳೂ, ಬಳುಕುವ ನುಣುಪು ಕದಪೂ, ಮಿನುಗುವ ಮೂಗುತಿಯ ಬೆಡಗೂ ನಮಗೆ ಸಾಮಾನ್ಯವಾದುದಾದರೂ 'ನಟ್ಟಕೂರಲಗಂತೆನಿಲ್ಲುವೆ' ಎನ್ನಿಸಿಕೊಳ್ಳುವ ಹೆಣ್ಣು ಆಧುನಿಕ ಕನ್ನಡ ಕವನದಲ್ಲಿ ಇನ್ನೆಲ್ಲಿದ್ದಾಳೆ? ಅಂಕೆಯೊಲ್ಲದ ಬೇಟಕ್ಕೆ ಕರಗದ, ಎಲ್ಲವನ್ನೂ ಒಳಕೊಳ್ಳುವ ಈ ಚೆಲುವೆ ಸೆಳೆದು ಜರೆದು ಕೆಣಕುತ್ತಾಳೆ. ದಾರಿಯ ಎಲ್ಲ ಕಣ್ಣುಗಳಿಗೂ ಅವಳು ಬಲೆ; ದೃಷ್ಟಿ ವಿಹಂಗಮಗಳನ್ನು

ಸೆರೆಗೊಳ್ಳುವ ಶಬರಿ. ಅವಳ ಮೋಹನವನ್ನು ಕವಿ ಎರಡು ಸಾಲುಗಳಲ್ಲಿ ತುಂಬ ಲಾವಣ್ಯಯುತವಾಗಿ ವರ್ಣಿಸಿದ್ದಾರೆ.

ಕೊಲುವ ಮೋಹದ ಚೆರಗೆ ಸೆರಗೆ ಚೆಲುವೆ ನೀನಾರೆ?
ಮಾಯೆ ಬೀಸುವ ಕುಂಚಸಂಚೇನೆ?

ಇಲ್ಲಿ ಆ ಚೆಲುವನ್ನು 'ಚೆರಗೆ, ಸೆರಗೆ' ಎಂದು ಕರೆದು 'ಮಾಯೆ ಬೀಸುವ ಕುಂಚದ ಸಂಚನ್ನು' ಅದಕ್ಕೆ ಸೇರಿಸಿರುವಲ್ಲಿ ಹೆಣ್ಣಿನ ಸೀರೆಯ ಸೆರಗು ಗಾಳಿಗೆ ಒಲೆದಾಡುವಲ್ಲಿ ರಚಿತವಾಗಿರುವ ಚಿತ್ರಗಾರನ ಮಾನಸದ ಪ್ರತಿಭಾವಿಲಾಸವೆಲ್ಲ ಸೂಚಿತವಾಗಿದೆ. ಆದರೂ ಆಕೆ 'ಬಂಜೆ ಬಿಂಕಿ'. ಆ ಎಲ್ಲ ಬಿಂಕಗಳೂ ಯಾವ ಪ್ರಲೋಭದಿಂದಲೂ ಕೂಡಿದ ಕೂಟವಲ್ಲ. ಅದು ವಿಧಿ ಮಾಡಿದ ಮಾಟ.

"ಸಪ್ತಪದಿ", "ನಿನಗಾಗಿ" ಎಂಬೆರಡು ಕವನಗಳೂ ಪರಸ್ಪರ ಪೂರಕವಾದ ಕವನಗಳು. 'ಸಪ್ತಪದಿ'ಯಲ್ಲಿ ಪತಿಯಾಗಲಿರುವವನ ದೃಢವಾದ ಪ್ರೇಮದ ವಿಶ್ವಾಸಪೂರ್ಣವಾದ ನಿರೂಪಣೆಯಿದೆ. ಎಲ್ಲೋ ಇದ್ದವರಿಬ್ಬರನ್ನು ತಂದು ಸತಿಪತಿಯರನ್ನಾಗಿ ಮಾಡಿದರೂ "ಒಂದೇ ದೋಣಿಗೆ ಹುಟ್ಟನು ಹಾಕುತ ಆಚೆಯ ಬಂದರ"ನ್ನು ಮುಟ್ಟುವ ನಂಬಿಕೆ ಆ ಪತಿಗೆ ಇದೆ. ನೂರು ಜನ ಸುಂದರರೂ ಸಾವಿರ ಜನ ಸದ್ಗುಣಿಗಳೂ ಇವರ ಮುಂದೆ ಸುಳಿದರೂ ಮನಸ್ಸು ಕದಡದೆ ಪ್ರೇಮವನ್ನು ತುಂಬುವ, ಪರಸ್ಪರ ಸಹನೆಯನ್ನು ಕಲಿಯುವ, ಒಂದೇ ಗೊಂಚಲ ಹೂವಿನಂತೆ ತೊನೆಯುವ ವಿಶ್ವಾಸ;

ಹೆಜ್ಜೆಗಳೇಳನು ಈಗಿಡುವಂತೆಯೆ
ತಲೆಗಳನೇಳನು ನಡೆದೇವು

ಎನ್ನುವ ಆತ್ಮದ ಭರವಸೆ. ಅಲ್ಲಿ ವಂಶದ ಬೆಳವಣಿಗೆ, ಮನೆದೇವರ ಹರಕೆ, ಅಕ್ಕಪಕ್ಕದವರಿಗೆ ಸಹಾಯ, "ಬಾಳಿನ ಸಂತಸವೇ ನೆರೆವೊನಲಿಟ್ಟು" ಲೋಕವೆಲ್ಲ ಸಂತೋಷಪೂರ್ಣವಾಗುವ ಕನಸು ಮನೆಮಾಡಿವೆ. ಮದುವೆಯಾಗುವ ವರನ ಮನಸ್ಸಿನಲ್ಲಿ ಯಾವ ಯಾವ ಸಂಸ್ಕೃತವಾದ ಆಸೆಗಳು ಮೂಡಬಹುದೋ ಅವೆಲ್ಲ ಇಲ್ಲಿ ಕಾಣುತ್ತವೆ. ವಯಸ್ಸಿನಲ್ಲಿ

ಹಿರಿಯನಾದ ಕವಿ ಎಳೆಯವನಿಗೆ ಅವನ ವಿವಾಹ ಸಂದರ್ಭದಲ್ಲಿ ಹೇಳಬಹುದಾದ ಸಂಭಾವನಾಪೂರ್ಣವಾದ ಸದ್ಗೃಹಸ್ಥನ ಸಂಸ್ಕೃತ ಭಾವನೆಗಳೆಲ್ಲಾ ಇಲ್ಲಿ ಮನೆಮಾಡಿವೆ.

'ನಿನಗಾಗಿ' ಎನ್ನುವುದು ವಧುವಿನ ಪರವಾಗಿ ಹೇಳಬಹುದಾದ ಇದೇ ವಿಧವಾದ ಭಾವನೆಗಳನ್ನು ರೂಪಿಸುತ್ತದೆ.

ಮಾನವನ ಜೀವನದಲ್ಲಿ ವಿಷಮ ಸಮಯ ಒದಗಿ ಜೀವನದ ಹದವನ್ನು ಹಾಳುಮಾಡುವ ಸಂದರ್ಭವೊಂದು 'ಗೆಳೆಯನಿಗೆ' ಎಂಬ ಕವನವಾಗಿವೆ. ಇಲ್ಲಿ ಯಾವ ಪೂರ್ವಪಾಪ ಸಂಪರ್ಕದಿಂದಲೋ ಮತ್ತಿನ್ನಾವ ಅಡ್ಡಹಾದಿ ಬಿದ್ದ ಹಿರಿಯನ ನೆನಪಿನಿಂದಲೋ ಕಿರಿಯನೊಬ್ಬನು ತನ್ನ ಎಳಹೆಂಡತಿಯನ್ನು ಉದಾಸೀನಮಾಡಿ ಪ್ರಾಯದ ವಿಧವೆಯೊಬ್ಬಳಲ್ಲಿ ಮೋಹಗೊಂಡು ತೊಳಲಾಡುತ್ತಿದ್ದಾನೆ. ಅವನಿಗೆ ಮುಂದಿನ ಜೀವನದ ನೋಟವಿಲ್ಲ. ಮೂರು ಬಾಳುಗಳು, ಬಹುಶಃ ಕೈಹಿಡಿದ ಪತ್ನಿಯ ಮತ್ತು ಇಬ್ಬರು ಎಳೆಯಮಕ್ಕಳ ಬಾಳುಗಳು ಸಾವು ಕಾಣಬಹುದು. ಯಾರ ಮಾತೂ ಈ ಗೆಳೆಯನಿಗೆ ಹಿಡಿಸದು. ಸತ್ತ ಒಬ್ಬ, ಅವನ ವಿಧವೆ ಇವರಿಬ್ಬರೂ ಸೇರಿ ಎರಡು ಜೀವಗಳಿಗೆ ತೊಂದರೆ ತಂದಿದ್ದಾರೆ. ಪ್ರಾಯದ ಗಂಡ ಸತ್ತು, ಅವನ ವಿಧವೆಗೆ ದಾರಿಕಾಣದೆ ಮನಸೋಲುತ್ತಾ ಇದ್ದಾಳೆ. ಆ ಹೆಣ್ಣಿನ ಮೋಹದಿಂದ ಈತನ ಪವಿತ್ರ ಜೀವನ ನಾಶವಾಗುತ್ತಾ ಇದೆ. ಈ ಗೆಳೆಯನೂ ಸಾಮಾನ್ಯನಲ್ಲ. ವಿದ್ಯೆ, ಬುದ್ಧಿ, ನಯ, ಹಿರಿಮೆ ಎಲ್ಲವೂ ಇವೆ. ಇದ್ದರೇನು, ಇವನನ್ನು ಕಾಯುವ ಯೋಗ್ಯತೆ ಅವಕ್ಕೀಗಿಲ್ಲ. ಇಂತಹವನಿಗೆ ಕವಿ,

> ನಿನ್ನ ಕರುಣೆಗೆ ದಾನ ಬಂದ ಬಾಳೊಂದಿಹುದು.
> ಕೊಳು ಅದನು, ಕೆಳೆಯೂಡು, ಬಾಳಿಸದನು.

ಎಂದು ಬುದ್ಧಿ ಹೇಳುತ್ತಾರೆ. ಬೇರೊಂದು ಚಿತೆವೆಂಕಿಯನ್ನು ಹಾದು ಬಂದಿರುವ, ಬೇರೆ ಒಲವನ್ನು ಕೇಳಿದ, ಬೇರೆ ತುಟಿ ಮುತ್ತನ್ನು ಸವಿದ ಹೆಣ್ಣಿನ ಮೋಹ ಬೇಡವೆನ್ನುವುದು ಈ ಗೆಳೆಯನಿಗೆ ಹಿಡಿಸಿತೋ ಇಲ್ಲವೋ! ಸಾಮಾನ್ಯ ಓದುಗನಿಗೆ ಇದರ ಧರ್ಮ ಖಂಡಿತ ಹಿಡಿಸುತ್ತದೆ.

'ವಿರಹಿ'ಯು ವಿರಹಿಣಿಯೊಬ್ಬಳ ಮನದ ಕಾತರವನ್ನು ಚಿತ್ರಿಸುತ್ತದೆ. "ನೀವಿಲ್ಲದ ಸೌಭಾಗ್ಯಗಳೇನಿದ್ದರು ಸಲ್ಲ" ಎನ್ನುವ ಪತ್ನಿಯನ್ನು ಪಡೆದ ಧನ್ಯತೆಯನ್ನು ಇದು ವ್ಯಂಜಿಸುತ್ತದೆ.

'ತಂದೆ ಹರಕೆ', 'ತಾಯಿ ಬಯಕೆ'ಗಳು ಪ್ರೇಮದ ಅಪರಾವತಾರವಾದ ಪಿತೃವಾತ್ಸಲ್ಯದ ಆಸೆಯನ್ನು, ಮಾತೃವಾತ್ಸಲ್ಯದ ಹೆಬ್ಬಯಕೆಯನ್ನು ನಿರೂಪಿಸುತ್ತವೆ. ತಂದೆಗೆ ತನ್ನ ವಂಶ ಮುಂದುವರಿಯಬೇಕೆಂಬ ಆಸೆಯಿದೆ. ಆದರೆ ಆ ಆಸೆ ಅಷ್ಟೇ ಅಲ್ಲ. ನಾಲ್ಕು ಮಕ್ಕಳು ಬೆಳೆದ ಅವರ ಜೀವಿತದೆದುರು ಮಸಣಕ್ಕೆ ತಾನು ನಡೆಯಬೇಕು. ಅದೇ ತುಂಬಿದ ಜೀವನ. ಅವನ ಪುಣ್ಯ ಅವರ ಜೀವನದಲ್ಲಿ ಬೆರೆದು, ಅವನ ಆಸೆ ಅವರಿಂದ ಫಲಿಸಬೇಕು. ಎಲ್ಲ ಗುಣಗಳು ಸೇರಿ ಮಾನವರ ಸಾಹಸ ಕಾರ್ಯದಲ್ಲಿ ಅವರ ಶಕ್ತಿಗಳು ಕೈಸೇರಬೇಕು. ಮನೆ ಬದುಕು ಬೆಳಗಿ ಇತರರಿಗೆ ಸುಖವನ್ನು ಹಂಚಬೇಕು. ಈ ತಂದೆಯ ಆಸೆ ಮಕ್ಕಳ ಭಾಗ್ಯಕ್ಕೆ ಯಾವ ಎಲ್ಲೆಯನ್ನೂ ಕಟ್ಟುವುದಿಲ್ಲ. ಇಹಪರಗಳನ್ನು ಮೀರಿ

**ಅವಕು ಮೀರಿದ ಭಾಗ್ಯವಿದ್ದರೆ ಅದರ ಭೋಗವು ಇಡುಕಲಿ.**

ಎಂದು ಹಾರೈಸುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಈ ಹರಕೆಯ ಕೊನೆಯಲ್ಲಿ ಕಾಣುವ ಶಾಪದಲ್ಲಿ ಬಹು ಸೊಗಸಿದೆ.

**ಹೆರರ ನೋವಿಗೆ ಕರಗದಾದರೆ ಅಲ್ಲೆ ಅಂದಿಗೆ ಮುಗಿಯಲಿ.**

ಹರಕೆ ಆಸೆಯ ಬೇರೆ ಮುಖ, ಆದರೆ ಆ ಆಸೆಯಲ್ಲಿ ಸ್ವಾರ್ಥವಿಲ್ಲ. ಪರಾರ್ಥದ ಜೀವನವಿಲ್ಲದವರು ಬದುಕಿದ್ದೇನು? ಅವರು ಸಾಯಲಿ. ಈ ಕವನದ 'ಪರಿಣಾಮ ರಮಣೀಯತೆ' ಯಾರಿಗಾದರೂ ಹೊಳೆದೀತು. ಈ ತಂದೆಯಂತೆಯೇ ಈ ತಾಯಿ. ಏಕೆಂದರೆ ಈ ಕವಿಯೇ ತಂದೆ ತಾಯಿ.

**ಜಗದೆಲ್ಲ ಪುಣ್ಯಗಳು ನಿನ್ನ ಬೆನ್ನಲಿ ನಿಂತು**
**ನಿನ್ನ ಗೆಲವಿಗೆ ಬಲವನೂಡಿ ಕಾಪಿಡಲಿ.**

ಎಂದು ಹರಸುವ ತಾಯಿಯಂತೆ ನಾವೂ ಸಾವಿರ ಸಲ ಅಂದುಕೊಳ್ಳುತ್ತೇವೆ.

ಪ್ರೇಮದ ಈ ಚಿತ್ರಗಳಲ್ಲಿ, ಭಾವಗಳಲ್ಲಿ ಕಾಣುವ ನವೀನತೆ ಮೊದಲ ನೋಟಕ್ಕೆ ಹೊಳೆಯುವುದಿಲ್ಲ. ಇಲ್ಲಿಯ ಪದಗಳ ಪ್ರಯೋಗ ಹಳೆಯ ಜಾಡಿನಲ್ಲಿ ಬಂದುದಲ್ಲ. ಈ ಸಾಲುಗಳ ಹೊಸತನವನ್ನು ನೋಡಿದರೆ ಅದು ಗೊತ್ತಾಗುತ್ತದೆ.

ಬೇಡಾಗೆ ತೋಳಿನಲೆ ಸಿಲೆಯುಪ್ಪಿರಿ.

ನಟ್ಟ ಕೂರಲಗಂತೆ ನಿಲ್ಲುವೆ.

ನನ್ನ ದಿಬ್ಬಣವವರ ಭುಜದಲಿ ಮಸಣ ಸೂಡಿಗೆ ನಡೆಯಲಿ.

ಅವರವರವೆತೆಯವರ್ಗೆ ಹಾಸುಹೊದಿಕೆ. .

ಈ ಮೊದಲೆ ಬೇರೊಂದು ಚಿತೆವೆಂಕಿ ಹಾದು ಬಂದಿಹುದು.

## ಸಮಾಜದ ಸಮಸ್ಯೆಗಳನ್ನು ಕುರಿತ ಕವನಗಳು

ಕವಿಯ ಹೃದಯವು ಸಾಮಾನ್ಯರ ಹೃದಯದ ಅನುಭವಗಳನ್ನು ಹೆಚ್ಚು ತೀವ್ರವಾಗಿ ಅನುಭವಿಸುತ್ತದೆ. ಆದುದರಿಂದಲೇ ಕವಿಯ ಒಂದೊಂದು ಅನುಭವವೂ ಸಮಾಜದ ಯಾರ ಅನುಭವವಾಗಿ ಯಾದರೂ ಆಗಬಹುದು.

ಸಾಮಾನ್ಯನು ಮೂಕನಾಗಿಯೇ ಇರುವಲ್ಲಿ ಕವಿಯು ಸಾಮಾನ್ಯನ ಮೂಕಭಾವನೆಗಳಿಗೆ ಮೂರ್ತರೂಪಗಳನ್ನು ಕೊಡುತ್ತಾನೆ. ಮಿತ್ರರ ಸ್ನೇಹ, ಸಹಜೀವನ, ಗುರುಹಿರಿಯರ ವಾತ್ಸಲ್ಯ, ವಿಶ್ವಾಸ, ಅಧಿಕಾರಿ ಗಳ ದರ್ಪ, ಧಾರ್ಷ್ಟ್ಯ, ಸಮಾಜದ ಸುತ್ತ ಕಾಣುವ ಕೀಳ್ತನ, ಖೂಳತನ, ಇವುಗಳ ಪರಿಣಾಮವಾಗಿ ಬರುವ ನಿರಾಶೆ, ಬೇಸರ, ಮುಂತಾದ ಕೆಲವು ಭಾವನಾತರಂಗಗಳನ್ನು ಇಲ್ಲಿನ ಕೆಲವು ಕವನಗಳಲ್ಲಿ ಕಾಣಬಹುದು.

'ಬೀಳ್ಕೊಡುಗೆ' ಸ್ನೇಹದ ಸಾನ್ನಿಧ್ಯದ ಸವಿಯನ್ನು ಕಂಡ ಕವಿ ಬಲವಂತವಾಗಿ, ಅಧಿಕಾರದ ಕಾರಣ, ಬೇರೆಡೆಗೆ ಹೋಗಲೇಬೇಕಾಗಿ ಬಂದಾಗ ಉಕ್ಕುವ ವ್ಯಸನವನ್ನು ರೂಪಿಸಿದೆ. ಇಲ್ಲಿಯ ಮೊದಲ ನಾಲ್ಕು ಸಾಲುಗಳು ಹಾಡಿನ ಪಲ್ಲವಿಯಂತೆ ಪ್ರತಿ ಪದ್ಯದ ಕೊನೆಯಲ್ಲೂ ನಮಗೆ ನೆನಪಿಗೆ ಬಂದು ಈ ಅಗಲಿಕೆಯ ತಾಪವನ್ನು ಹೆಚ್ಚಿಸುತ್ತವೆ.

ಬೇರೆಯ ಊರಿಗೆ ಹೋದದ್ದಾಗಿದೆ. ಸ್ನೇಹಿತರನ್ನು ಕಾಣುವ ಹಂಬಲಿಂದ ಮತ್ತೆ ಬಂದದ್ದಾಗಿದೆ. ಈ ಎಂಬತ್ತಾರು ಮೈಲಿಗಳ ಅಂತರ–ಮೈಸೂರು ಬೆಂಗಳೂರುಗಳ ಅಂತರ–ಹೆಚ್ಚಲ್ಲವಾದರೂ ದಿನದಿನವೂ ಈ ದೂರ ಬೆಳೆದಂತೆ ಕಾಣುತ್ತದೆ. ಈಗ ಕರುಣೆಯಿಲ್ಲದ ಕರೆ, ಅಧಿಕಾರದ ಪಾಶ, ಹಿಂದಕ್ಕೆ ಎಳೆಯುತ್ತಿವೆ. ಕವಿಗೆ ಈ ಊರಿನಲ್ಲಿ ಹಿಂದೆ ಪಟ್ಟ ಸುಖಗಳೊಂದೊಂದೂ ಹೊಸದಾಗಿ ಕಾಣುತ್ತಿವೆ. ಅವುಗಳ ಸೊಗಸು ಹೆಚ್ಚು. ಅರಳಿದ ಕಾಡುಮಲ್ಲಿಗೆಯ ನಗುವೇನು, ಉಗುರಂಟೆಯ ಹಿಗ್ಗೇನು, ದಾರಿಯ ಹೂಬಳ್ಳಿಗಳ ಪ್ರೇಮದ ಆಲಿಂಗನಗಳೇನು, ಹಸುರೆತ್ತಿ ಹಿಡಿದ ಎರಡು ಸಾಲಿನ ಮರಗಳ ಚಿಗುರು ಚಾಮರ ಬೀಸುವ ಸೊಗಸೇನು, ಬಯಲ ಗಾಳಿಗಳೆಲ್ಲ ಬಂದು ಮೃದು ನೇಹವನ್ನು ಸುತ್ತುವುದೇನು! ಈ ಒಂದು ದಿನವಾದರೂ, ಎಲ್ಲರೂ ಒಟ್ಟಿಗಿದ್ದು ಸುಖವನ್ನು ಸವಿಯೋಣ ಎಂಬುದು ಕವಿಯ ಆಸೆ.

> ಒಂದಂಗುಲ ದಾರಿಗೊಂದು ಸಿರಿ ನೆನಪಿದೆ
> ಒಂದು ಜನ್ಮಕೆ ಸಾಲ್ವ ಹರುಷವಿದೆ.

ಎಂಬಲ್ಲಿ ಕವಿಯ ಸ್ನೇಹ ಸಹವಾಸಗಳ ಮನೋಹರ ಚಿತ್ರಣವಿದೆ. ಕವಿಗೆ ಇವು ಸುಖಮಯವಾಗಿರುವುದಿರಲಿ. ಇವರ ವಿಶ್ರಾಮಸ್ಥಾನಗಳ ಸುತ್ತಣ ಪ್ರಕೃತಿಯೂ ಇವರ ಸ್ನೇಹದಲ್ಲಿ ಸೇರಿಬಿಟ್ಟಿರುವಂತೆ ಕಾಣುತ್ತದೆ.

> ಇನ್ನೊಂದು ಸಲವನ್ನ ಬಂದೇಬರುವನೆಂದು
> ಕೆಂದಾವರೆ ನಂಬಿ ಕಾಯುತಿದೆ.

ಇದ್ದಕ್ಕಿದ್ದಂತೆ ಅನಿರೀಕ್ಷಿತವಾಗಿ ಕೊನೆಗಾಣುವಂತಿರುವ ಈ ಕವನದಲ್ಲಿ ಈ ಮೊದಲ ಪಲ್ಲವಿ ಒಂದು ಮಧುರ ಯಾತನೆಯನ್ನುಂಟು ಮಾಡುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಪಾಠ ಹೇಳಿಕೊಡಬೇಕಾದ ಕವಿ ಆಗಾಗ ವಿಜ್ಞಾನ ವಿಭಾಗಗಳಿಗೆ ಭೇಟಿ ಕೊಟ್ಟು, ಸ್ನೇಹಿತರೊಡನೆ ಕಾಲ ಕಳೆಯುವುದು ಅಪರಿಹಾರ್ಯ. ಅಂತಹ ಸಂದರ್ಭ ಒಂದರಲ್ಲಿ ಭೌತಶಾಸ್ತ್ರದ

ಪ್ರಯೋಗಮಂದಿರದಲ್ಲಿ ಇವರ ಕಣ್ಣಿಗೆ ಕಂಡ ದೃಶ್ಯ ಮನಸ್ಸಿಗೆ ಹೊಳೆದ ಭಾವ 'ಶಾಸ್ತ್ರಶಾಲೆ' ಎಂಬ ಕವನವಾಗಿದೆ. ಅಲ್ಲಿ ಸೂರ್ಯಕಿರಣವನ್ನು ಹಿಡಿದು, ಒಡೆದು ಆ ಬೆಳಕಿನ ಬಣ್ಣ ಬಿಡಿಸಿ, ಬೆಳಕಿನ ಹೊನಲ ಅಲೆಯನ್ನು ಅಳೆದು, ಅವುಗಳ ಮೂಲವನ್ನು ನಿಶ್ಚಯಿಸುತ್ತಾರೆ. ಕವಿ ಸೂರ್ಯೋದಯ, ಸೂರ್ಯಾಸ್ತಗಳೆಂಬ ಪ್ರಕೃತಿಯ ಪವಾಡಗಳಿಂದ ಬಗೆಗುರುಡು ಕಳೆದು, ಬಗೆಗಣ್ಣು ಬೆಳಕಾಗಿ, "ಶುಚಿರಾಗ ರಾಗರುಚಿ ಹಸರವಿಡುತಿರಲು" ಪುಳಕಿತನಾದರೆ ಅವನನ್ನು ಈ ವಿಜ್ಞಾನಿಗಳು ಹಾಸ್ಯ ಮಾಡುತ್ತಾರೆ. ಆದುದರಿಂದ ಕವಿ ಒಂದು ನಿರ್ಧಾರಕ್ಕೆ ಬರುತ್ತಾನೆ.

ತಿಳಿಯದಜ್ಞರ ಮಬ್ಬು ಬೆಳಕಿಂದೆ ಕಳೆಯುತಿರೆ
ತಿಳಿದ ಪ್ರಾಜ್ಞರಿಗಲ್ಲಿ ಬೆಳಕೆ ಮಬ್ಬು.

ವಿಜ್ಞಾನಿಯಾದರೂ ಪ್ರಕೃತಿಯ ಸೌಂದರ್ಯದ ಕಡೆ ಗಮನವಿಡದೆ ಒಂದೇ ಕುರುಡು ದೃಷ್ಟಿಯಿಟ್ಟುಕೊಂಡರೇನು ಪ್ರಯೋಜನ!

'ಮುಂದೆ ದಾರಿ' ಎನ್ನುವ ಕವನದಲ್ಲಿ ಹತ್ತಾರು ಸ್ನೇಹಿತರು ಒಡನೆ ಬೆಳೆದು ಮುಂದೆ ಹೊರಟಾಗ ಅವರವರ ಜೀವನದಲ್ಲಿ ಬರುವ ಬೇಸರ, ಬೇನೆ, ತೃಪ್ತಿ, ಧ್ಯೇಯ, ಸಾಧನೋದ್ದೇಶಗಳಿಂದ ಪರಸ್ಪರ ತತ್ವಭೇದಗಳು ಮೂಡಬಹುದು. ಇಂತಹ ಸಂದರ್ಭದಲ್ಲಿ ಮುನ್ನಡೆಯುವ ಸಾಹಸಿಯ ಧ್ಯೇಯ ಇಲ್ಲಿ ಚಿತ್ರಗೊಂಡಿದೆ.

ಕೆಲವರು ಸ್ನೇಹಿತರು ಒಡನೆ ಬಂದವರು ಹಿಂದೆ ನಿಲ್ಲುವ ಸೂಚನೆಯಿದೆ. ಇಷ್ಟುಬೇಗ ನಿಲವನ್ನು ಕಂಡ ಅವರು ಪುಣ್ಯವಂತರೆಂದೂ ತಾವೇ ಪಾಪಿಗಳೆಂದೂ ಕವಿ ಹೇಳುತ್ತಾನೆ. ನಿಲ್ಲುವ ವಿಶ್ರಾಮ ಧಾಮ ಅವರಿಗೆ ಇನ್ನೂ ದೊರಕಿಲ್ಲ. ಶಾಂತಿಯನ್ನು ಕಂಡ ಆ ಸ್ನೇಹಿತರ ಮನಸ್ಸೂ ಕೂಡ:

ಎರಡು ವರುಷದ ಬೇನೆಗಳಲಿ
ಬರಿದೆ ಕೊರಗಿದೆ ಸೊರಗಿದೆ.

ಆದುದರಿಂದಲೇ ಕವಿ ಒಂದು ಸಮಾಧಾನದ ಮತನ್ನಾಡುತ್ತಾನೆ. ಇಲ್ಲಿಯವರೆಗಿನ ಸ್ನೇಹಕ್ಕೇ ಅವರು ಕೃತಜ್ಞರು. ಬರುವಷ್ಟು ಪುಣ್ಯ ಬಂದಿದೆ. ಎಷ್ಟು ಸಂತೋಷ ಬೇಕು ಅಷ್ಟು ಸಂದಿದೆ. ಯಾರು

ಯಾರಿಗೆ ಪ್ರಯಾಣ ಸಾಕೆಂಬ ಇಚ್ಛೆಯೋ ಅವರೆಲ್ಲ ಹಿಂದೆ ನಿಂತು ನಿದ್ದೆ ಮಾಡಿ ಶಾಂತಿ ಗಳಿಸಲಿ. ಇವರಿಗಾದರೆ :

ದಾರಿ ತುತ್ತುರಿ ಕರೆಯಿದೆ—

ಒಂದುವೇಳೆ ಇನ್ನಾದರೂ

ಅಲ್ಲಿ ಶಾಂತಿಗಳಿಲ್ಲವೆಂದರೆ
ಸಹನೆ ನಿಲುವುದು ಪಾಲಿಗೆ.

ಯಾರ ಬಲಾತ್ಕಾರವೂ ಇಲ್ಲ. ಅವರವರ ಮಾರ್ಗ ಅವರಿಗೆ. ಬೇಗ ಶಾಂತಿಯನ್ನು ಕಂಡು, ಇದ್ದುದರಲ್ಲಿ ತೃಪ್ತಿಯನ್ನು ಪಡೆಯುವ ಜನ ಪುಣ್ಯವಂತರು. ಇವರಿಗೆ ಇಷ್ಟು ಸಾಲದು. ನೆಲೆಯನ್ನು ಕಾಣುವತನಕ ಮುಂದುವರಿಯುವುದೇ ಸರಿ.

ನೂರು ಜನ್ಮಕೆ ದಾರಿಯಾದರೆ
ನೂರು ಜನ್ಮಕು ಪಯಣವೇ.
ಕಾಣಲಾದೀತೇನೋ ಗಡಿಯನು
ಎಂಬ ನಚ್ಚಲಿ ನಡೆವೆವು.

ಈ ಗಡಿ, ಈ ಗುರಿ, ಈ ಧ್ಯೇಯ ಕವಿಗೆ ಶಾಶ್ವತವಾದ ಆಕರ್ಷಣೆ. ಅದನ್ನು ಮುಟ್ಟದೆ ಶಾಂತಿಯಿಲ್ಲ. ವಿಶ್ರಾಂತಿಯಿಲ್ಲ.

ಒಟ್ಟಿಗೆ ಹೊರಟ ಸ್ನೇಹಿತರಲ್ಲಿ ಕೆಲವರು ನಿಂತರು ಎಂದುಕೊಳ್ಳೋಣ. ಮತ್ತೆ ಕೆಲವರು ಮುನ್ನುಗ್ಗುತ್ತಾರೆ. ಅವರೂ ಎಲ್ಲರೂ ಕೊನೆಯತನಕ ಒಂದೇ ಮಾರ್ಗಾನುಯಾಯಿಗಳಲ್ಲ. ಬೇರೆ ಬೇರೆ ಮಾರ್ಗಗಳನ್ನು ಅನುಸರಿಸುವಾಗ :

ನಡುವೆ ದಾರಿಗಳಡ್ಡ ಕದಲಲಿ
ಭಾಗ್ಯವಿದ್ದರೆ ಬೆರೆವೆವು

ಎಂಬ ಆಸೆ ಕವಿಗೆ ಇಲ್ಲದಿಲ್ಲ. ಒಂದುವೇಳೆ ಹಾಗೆ ಸೇರುವುದು ಸಾಧ್ಯವಿಲ್ಲದಿದ್ದರೆ ನೋಡಿ ನುಡಿಸದೆ :

ಕೆಳೆಯ ಪ್ರೇತಗಳನ್ನು ಹೂಳುತ ನಡೆವೆವು

ಎಂಬುದೇ ಮಾರ್ಗ. ಬರುವ ಬೇನೆ ಬರಲಿ, ಒಂಟಿತನ ಕಾಡಲಿ,

ನೀರು ಬರುವ ಕಣ್ಣಿನಲ್ಲಿ ರಕ್ತ ಬರಲಿ, ಎಲ್ಲ ವಿಕಟ ಕಾಟಗಳು ಒಟ್ಟಲಿ, ಮಾರ್ಗವನ್ನು ಮಾತ್ರ ವ್ಯತ್ಯಾಸ ಮಾಡುವುದಿಲ್ಲ.

ಒಡನೆ ಬಂದ ಸ್ನೇಹಿತರು ಹೀಗೆ ಕವಲೊಡೆದ ದಾರಿಗಳಲ್ಲಿ ಮುಂದೆ ಹೋದರೂ ಕವಿಗೆ:

ಇಲ್ಲಿ ದಾರಿಯು ಸೇರದಾದರೆ
ಸೇರದೆಂದಿಗು ಹೋಹುದೆ?

ಎಂಬ ಒಂದು ನಿರೀಕ್ಷಣೆ ಇದ್ದೇ ಇದೆ. ಇವರೆಲ್ಲರ ಸ್ನೇಹವೂ ಹಿಂದಿನ ಹಾಗೆಯೇ ಮುಂದೆಯೂ ನಡೆಯುವುದಾಗಿದ್ದರೆ ಅದೊಂದು ಪುಣ್ಯವಾಗಿತ್ತು. ಅದಾಗದಿದ್ದರೇನು? ಇಂದಿನ ಎತ್ತರಕ್ಕೆ ಬೆಳೆದಿರುವ ಮನಗಳು ಹೊಂದಿ ಬೆಳೆದು ಸ್ವರ್ಗವಾಗುವ ಅವಕಾಶವಿದ್ದೂ ಕಳೆದು ಕೊಂಡರೆ ತಾನೇ ಏನು? ಇಲ್ಲಿಯವರೆಗೂ

ಸಂದ ಸೊದೆಗೇ ಋಣಿಗಳು

ಇಲ್ಲಿ ಕೊನೆಗಾಣದ ಸಾಹಸಪ್ರಕೃತಿಯ ಸಾಧಕನ ಚಿತ್ರವನ್ನು ನಾವು ಕಾಣುತ್ತೇವೆ.

ಮೊದಲನೆಯ ಸಲ ಈ ಕವನವನ್ನು ಓದಿದಾಗ ಮ್ಯಾಥ್ಯೂ ಆರ್ನಾಲ್ಡ್ ಕವಿಯ Rugby Chapel ಕವನವು ನೆನಪಾಗುವುದು ಆಶ್ಚರ್ಯವಲ್ಲ.

What is the course of the life of moral men on earth

ಎಂದು ಪ್ರಾರಂಭವಾಗಿ

We have chosen our path—path to a clear-purposed goal, path of advance!

ಎಂದು ಮುಂದುವರಿಯುವ ಭಾಗವನ್ನು ನೆನಪಿಗೆ ತಂದುಕೊಂಡರೆ ಕನ್ನಡದ ಕವನದ ರೀತಿಯಲ್ಲಿರುವ ನೂತನತೆ ಗೊತ್ತಾಗುತ್ತದೆ. ಅಂದರೆ ಕನ್ನಡ ಕವನದಲ್ಲಿಯೂ ಧ್ಯೇಯಸಾಧನೆಯ ನಿರೂಪಣೆಯಿದ್ದರೂ ಇದು Rugby Chapel ಗಿಂತ ಬೇರೆ. ಇಂಗ್ಲಿಷ್ ಕವನದಲ್ಲಿ ಸಾಧಕನು

To the end of our way, to the lovely inn 'mid the rocks ಸೇರುತ್ತಾನೆ. ಅಲ್ಲಿಯ Host ಒಂದು ದೀಪವನ್ನು ಮೇಲೆತ್ತಿ

Whom in our party we bring?
Whom we have left in the snow?

ಎಂದು ಕೇಳುವ ಸನ್ನಿವೇಶವಿದೆ.

"ಮುಂದೆ ದಾರಿ"ಯಲ್ಲಿ ಇದೆಲ್ಲ ಇಲ್ಲ. ಅಲ್ಲಿ ಅವಿರತವಾದ ಮಾರ್ಗಾನುಸರಣೆಯೊಂದೇ, ಧ್ಯೇಯ ಸಾಧನೆಯೊಂದೇ,

ನೂರು ಜನ್ಮಕೆ ದಾರಿಯಾದರೆ
ನೂರು ಜನ್ಮಕು ಪಯಣವೇ.

ಈ ಕನ್ನಡ ಕವಿಯ ಹಟ, ಸತ್ವ, ನಿಶ್ಚಲತೆಗಳು ಈ ಕವನದಲ್ಲಿ ಒಡೆದು ಮೂಡಿವೆ. "ಮುಂದೆ ದಾರಿ" ನಿಜವಾದ ಸಾಧಕನ ಮುಂದಿರುವ ಒಂದೇ ದಾರಿ.

ಸಮಾಜದಲ್ಲಿ ನಮ್ಮ ಪ್ರೇಮ, ಭಕ್ತಿ, ಗೌರವಗಳೆಲ್ಲವನ್ನೂ ಸೂರೆಗೊಳ್ಳುವ ವ್ಯಕ್ತಿಗಳು ಕೆಲವರಿರುತ್ತಾರೆ. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಈ ವ್ಯಕ್ತಿ ಪರಿಚಯವಾಗುತ್ತದೆ. 'ದಾನಪಾತ್ರ' ಇಂತಹ ಸನ್ನಿವೇಶವೊಂದನ್ನು ನೆನಪಿಗೆ ತರುತ್ತದೆ. ಎಲ್ಲ ವಿಧದಲ್ಲಿಯೂ ಬಹು ಎತ್ತರದಲ್ಲಿದ್ದು ವಿದ್ಯೆ, ವ್ಯವಹಾರ, ಗಾಂಭೀರ್ಯ, ಕರುಣೆ ಎಲ್ಲದರಲ್ಲಿಯೂ ಮೇಲ್ಪಂಕ್ತಿಯಾದವರನ್ನು, ಒಬ್ಬ ಗುರುವನ್ನು ಕುರಿತು ನಾವು ಹೀಗೆ ಹೇಳಬಹುದು.

ಎನ್ನೆದೆಯ ಸೊಡರಿದಕೆ ದೀಪ ಮುಡಿಸಿದಿರೆಂದು
ಎಂದೆಂದು ನಂದದಂತದು ಬೆಳಗಲಿ

ಎನ್ನುವುದೇ ಶಿಷ್ಯನ ಅಭಿಲಾಷೆ.

ಬಯಲ ಗಾಳಿ ಬೀಸುವಾಗ ಹೊಂಗೆಯ ತಳಿರನ್ನು ಒಲಿಸಬೇಕೆನ್ನುವ ದೃಷ್ಟಿ ಆ ಗಾಳಿಗೆ ಇಲ್ಲ. ಬೆಳಕ ಬೀರುವ ಸೂರ್ಯನಿಗೆ ಹೂ ಹಣ್ಣು ಲತೆಗಳಿಗೆ ಕಾಂತಿ ಕೊಡಿಸಬೇಕೆಂಬ ಬಯಕೆಯಿಲ್ಲ. ಆದರೂ ಹೊಂಗೆ ತೊನೆದು ಗಾಳಿಗೆ ಕೃತಜ್ಞವಾಗಿದೆ. ಲತೆ ಹೂತು ಕೃತಕೃತ್ಯವಾಗಿದೆ. ಗುರುವಿನ ಕರುಣೆಯ ಕುಡಿಯ ಒಂದೆಳೆಯನ್ನೇ ಈ 'ದಾನ

ಪಾತ್ರ ' ಹಗಲೆಂದು ಎಣಿಸುತ್ತಾನೆ. ಆ ಕಳೆಯ ಅಂಚಿನಂಚಿನಲ್ಲಿ ಇನಿಸು ಎಡೆದೊರೆತರೂ ಅದುವೇ

ಆ ದಿನದ ಬಾಳ್ಬೆಳಸು ಹರ್ವದುಣಿಸು

ಎಂದು ಆತ ನಂಬುತ್ತಾನೆ. ಹಿರಿಯನಾದ ಗುರು ಎಣಿಸುವಷ್ಟು ದೊಡ್ಡವನಾಗುವುದೂ ಶಿಷ್ಯನಿಗೆ ಬೇಕಿಲ್ಲ.

ನಿಮ್ಮಣಿಕೆ ತೂಕಕ್ಕೆ ನಾನೇರದಿರಲಿ.

ತನ್ನ ಜೀವನವು ದಿನದಿನವೂ ಸವಿಯಾಗುತ್ತಾ ಬೆಳೆಯುವ, ರಸವಿಟ್ಟು ಬಲಗೊಳ್ಳುವ ಹರಕೆ ಮಾತ್ರ ಆತನಿಂದ ದೊರಕಿದರೆ ಸಾಕು.

ಇಲ್ಲಿ ಕಾಣುವ ಶಿಷ್ಯತನದ ವಿನಯ, ಸೌಶೀಲ್ಯಗಳು ಗುರುವಿನ ಹಿರಿತನವನ್ನು ಹೇಗೆ ಸಾಧಿಸಿವೆಯೋ ಹಾಗೆಯೇ ಶಿಷ್ಯನ ಅರ್ಹತೆಯನ್ನು ವ್ಯಂಜಿಸುತ್ತವೆ. ಈ ಕವನದ ವ್ಯಾಸಂಗ ಮಾಡುವಾಗ ನಮಗೆ ಇಂಗ್ಲೆಂಡಿನ ಮಹಾಕವಿ ಷೇಕ್ಸ್‌ಪಿಯರ್‌ನ ೩೩ನೆಯ ಸಾನೆಟ್ಟು ನೆನಪಿಗೆ ಬಂದಂತಾಗುತ್ತದೆ.

Full many a glorious morning have I seen.

ಎಂಬ ಕವನದ ರೀತಿಯಲ್ಲಿರುವ ಸೊಬಗನ್ನೂ ವ್ಯಕ್ತಿಪರವಾದ ಗೌರವವನ್ನೂ ನಾವು ಅರ್ಥಮಾಡಿಕೊಂಡರೆ ಈ ಕವನದ ಭಾವ ಚೆನ್ನಾಗಿ ಸ್ಫುರಿಸೀತು. ಆದರೆ ಈ ಎರಡು ಕವನಗಳಿಗೆ ಸಂಬಂಧವಿದೆಯೆಂದಾಗಲಿ ಎರಡರ ಹಿನ್ನೆಲೆ ಒಂದೆಂದಾಗಲೀ ಭಾವಿಸಿದರೆ ದೊಡ್ಡ ಅಪರಾಧವಾದೀತು. ಸಾಮ್ಯದಲ್ಲಿ ಹಿರಿಯನನ್ನು ಕುರಿತ ನಿಷ್ಕಲ್ಮಷವಾದ ಪ್ರೇಮಗೌರವಗಳು ಮಾತ್ರ ನೆನಪಿಗೆ ಬರಬೇಕು. ದೊಡ್ಡ ವ್ಯಕ್ತಿಗಳ ಸನ್ನಿಧಿಯಲ್ಲಿದ್ದವರಿಗೆ, ನಡೆದುಕೊಂಡವರಿಗೆ ಈ ಕವನದ ರೀತಿ ನೀತಿಗಳು ಗೊತ್ತಾಗುತ್ತವೆ.

' ಶ್ರಾದ್ಧ ' ಬಹು ಗಾಢವಾದ ಅರ್ಥವುಳ್ಳ ಕವನ. ಇಲ್ಲಿಯ ತಾಯಿ ಮಕ್ಕಳು ನಮ್ಮ ಕಣ್ಣೆದುರು ಕಾಣುತ್ತಾರೆ, ಎಂಬ ದೃಷ್ಟಿಯಿಂದ ಬರೆದದ್ದಲ್ಲ ಈ ಕವನ. ಒಂದುವೇಳೆ ಇಂತಹ ತಾಯಿ, ಹಿರಿಯ ಮಗನಿಗೆ ಕರುಬುವ ಕಿರಿಯರಿಗೆ ತಲೆ ಸವರುವ ತಾಯಿ

ಚೊಚ್ಚಿಲಗೆ ಎರೆದದ್ದು ಹಾಲಲ್ಲ ಗರಳವೆನ್ನುವ

ತಾಯಿ, ಇದ್ದಳು ಎಂದುಕೊಳ್ಳೋಣ. ಆಕೆ ಕಿರಿಯರನ್ನು ಹರಸಿ, ಹಿರಿಯನ ಕೊರಳಿಗೆ ಉರುಲು ಬಿದ್ದು, ತಮ್ಮಂದಿರಿಗೆ ತೃಪ್ತಿಯುಂಟಾಯಿತು ಎಂದುಕೊಳ್ಳೋಣ. ಆ ಸನ್ನಿವೇಶ ಎಂತಹ ಭೀಕರ ಸನ್ನಿವೇಶ! ಆಗ ಹಿರಿಯ ಮಗ ಏನೆಂದುಕೊಂಡು ಸಾಯುಬಹುದೋ ನೋಡಿ.

ಓ ತಂದೆ ತಪ್ಪಲಿಲ್ಲವು ತಾಯಿ ಯಾವೊಂದು ಕ್ಷಣದಲ್ಲು ನಿಮಗೆ
ನಿರ್ಭಾಗ್ಯ ಹಿರಿಗುವರನೆನ್ನ ಸಾವಿಂತು ಬರೆದಿತ್ತು ಬರಿದು
ತಿಲತುಲಸಿ ಪರಮಾನ್ನ ತಾವಿಡಲು ಮುಗಿಸಿದರು ಎನ್ನಸಿವರಿಂತು
ಇದೆಕೊ ಬರುತಿಹೆ ಬಳಿಗೆ ಕೊಳುನೀನಾದರೆನ್ನಸಿಂದು

ಇದೇ ಪ್ರಾರ್ಥನೆ. ಬೇರೆ ಗತಿ ಇಲ್ಲ. 'ಶ್ರಾದ್ಧ'ದ ಹಿರಿಮೆ ಇಂತಹ ಅಸಹಜವಾದ ಚಿತ್ರನಿರೂಪಣೆಯಲ್ಲಿ ಮುಗಿಯುವುದಿಲ್ಲ. ಇಲ್ಲಿಯ ತಾಯಿ ತಾಯಲ್ಲ. ಇಲ್ಲಿಯ ಮಕ್ಕಳು ಮಕ್ಕಳಲ್ಲ. ತಾಯಿ ನಾಲ್ಕಾರು ಜನರನ್ನು ಒಟ್ಟು ಬೆಳೆಸಿದ ಒಬ್ಬಾಕೆ. ಅವರಲ್ಲಿ ಹಿರಿಯ ದೂರದಲ್ಲಿರುವಾಗ, ಕಿರಿಯರು ಬಳಿಯಲ್ಲಿಯೇ ಓಡಾಡಿ, ಹಿರಿಯನಿಗೆ ಸಲ್ಲಬೇಕಾದ ಗೌರವ, ಸ್ಥಾನ, ಮನ್ನಣೆಗಳನ್ನು ಚಾಡಿಕೋರತನದಿಂದ, ಸ್ವಾರ್ಥದಿಂದ ಗಳಿಸಿಬಿಡುತ್ತಾರೆ. ತಾಯಿಯಂತೆಯೇ ಬೆಳಸಿದ ಹಿರಿಯ 'ನಿಡುಸುಯ್ದು' ಒಪ್ಪಿಕೊಳ್ಳುತ್ತಾನೆ. ಆತ ಸಾಮಾನ್ಯನಲ್ಲ. ನಮ್ಮೆಲ್ಲರಿಗೂ 'ತಂದೆ' ಯಾದ ದೇವರ ದೃಷ್ಟಿಯಲ್ಲಿ ಎಂದೂ ತಪ್ಪು ಮಾಡದವನು. ಇಂದು ಹೀಗಾದುದು ಈ ಹಿರಿಗುವರನಾದವನ, 'ನಿರ್ಭಾಗ್ಯ'ನಾದವನ ಅದೃಷ್ಟ ಅಷ್ಟೇ! ಇಂತಹ ಸಹಜವಾದ ಜೀವನಚಿತ್ರದ ದಾರುಣತೆಯನ್ನು ಘೋರತರವಾಗಿ ಮಾಡಲು ಶ್ರಮಿಸಿ, ಕವಿ ಈ ಕವನದಲ್ಲಿ ತಾಯಿಮಕ್ಕಳ ಚಿತ್ರವನ್ನು ತಂದಿದ್ದಾನೆ. ಈ ಸಾಧಾರಣೀಕರಣದಿಂದ ಸೋತವನ ಮನಸ್ಸಿನ ಅವ್ಯಕ್ತವಾದ ನೋವು ನಮಗೆ ಪರಿಚಯವಾಗುತ್ತದೆ. ಆಗಾಗ ಸಮಾಜದಲ್ಲಿ ನಡೆಯುವ ಈ 'ಶ್ರಾದ್ಧ' ಸಮಾಜದ ರೋಗಗಳಲ್ಲಿ ಬಹು ಪ್ರಭಾವಶಾಲಿಯಾದುದು. ಯೋಗ್ಯರು ಕಷ್ಟಪಡುವುದು ಅದರಿಂದ. ಇಂತಹ ರೋಗರುಜಿನಗಳು ನಾಶವಾದಲ್ಲದೆ ಸಮಾಜಕ್ಕೆ ಶಾಂತಿಯೆಲ್ಲಿ?

'ಇಂದ್ರ', 'ಪದವಿ' ಎಂಬ ಎರಡೂ ಒಂದೇ ಭಾವನೆಯ ಎರಡು ಬೇರೆ ಬೇರೆ ಮುಖಗಳು. ಶುಚಿಯಾದ ಬಾಳುವೆಯ ದೃಷ್ಟಿಯಿಂದ ಅಧಿಕಾರಮದದ ಇಂದ್ರನ ನಡವಳಿಕೆ ಎಷ್ಟು ಅಸಹ್ಯವೆಂಬುದು 'ಇಂದ್ರ' ಎನ್ನುವ ಕವನದಲ್ಲಿನ ವಸ್ತು. ಇಂದ್ರನ ಆಯುಧ ಸಿಡಿಲು; ಅವನ ಅಧಿಕಾರ ದರ್ಪದ ಕುರುಹು ಅದು. ಮಣಿಯದ ಜನಜನಾಂಗಗಳನ್ನು ಬೇಕಾದರೂ ಸುಟ್ಟು ನಾಶಮಾಡಿಬಿಟ್ಟಾನು ತನ್ನ ಅಪ್ಪಣೆಗೆ ಅಡ್ಡಿ ಬಂದರೆ. ಅವನ ಗುಡುಗಾಟ ಆರ್ಭಟಗಳೂ ಐಶ್ವರ್ಯ ಪದವಿ ಹಿರಿ ಹೆಮ್ಮೆಗಳೂ ಎಲ್ಲಾ ಇದ್ದರೂ ಏನು ಪ್ರಯೋಜನ? ನಿಜವಾದ ದಿವ್ಯತೆ ಅಲ್ಲಿಲ್ಲ. ಅಹಲ್ಯೆಯ ಜೀವನ ಇಂದ್ರನಿಂದ ಸೊದೆಯುಣಿಸು ಪಡೆದಿರಬಹುದು. ಆದರೆ ಶುಚಿಬಾಳಿನ ತೃಪ್ತಿಗೂ ಈ ಬೆಂದ ಭಾಗ್ಯಕ್ಕೂ ಎಷ್ಟು ಅಂತರ. ದೇವತನಕ್ಕೆ ಇದೇ ನಿಜವಾದ ಕುರುಹಲ್ಲ. ಇಳೆಯ ಮೆಚ್ಚನ್ನೂ ಪಡೆಯುವ ಹೆಚ್ಚಿಗೆಯೇ ನಿಜವಾದ ದೇವತನವಲ್ಲವೇ ?

ಇಂದ್ರನ 'ಪದವಿ'ಯಾದರೂ ಶಾಶ್ವತವಾದುದೇನು? ಅವನಿಗೆ ಎಷ್ಟೊಂದು ಚಿಂತೆ. ಇನ್ನಾವನು ಇಂದ್ರನಾಗಲಿರುವನೋ ಯಾರು ಬಲ್ಲರು? ಯಾವ ಬಲಿಯೋ, ಯೋಗಿಯೋ, ಚಾಗಿಯೋ ಬಲಿದರೇನು ಗತಿ ಎಂಬ ಹೆದರಿಕೆ. ಎಲ್ಲರಿಂದ ಸುದ್ದಿಗಳನ್ನು ತರಿಸಿ ಕಳವಳದಲ್ಲಿ ಸಾಯುತ್ತಿರುವುದೇ ಬದುಕು. ಇದೇನು ಬದುಕು? ಅಮರಾವತಿಯ ವಾಸ, ಈಶತ್ವ, ಕಾಮರೂಪತ್ವ, ಮಹೇಂದ್ರತ್ವ, ಇವೆಲ್ಲ ಏಕೆ? ನಮಗೆ ಸಾವಿಲ್ಲವೇ ಎಂದು ವ್ಯಸನಪಡುವ ದೇವತೆಗಳೇ ಸೇವಕರು. ಬೇಕಾದುದೆಲ್ಲ ಸುತ್ತ ಬಿದ್ದಿದೆ. ಆದರೂ ಆಕಳಿಕೆ, ಬೇಸರ. ರಂಭೆ ಊರ್ವಸಿಯರು ನೃತ್ಯ ಮಾಡುತ್ತಿದ್ದರೂ ಕಣ್ಣು ಮುಚ್ಚಬೇಕೆಂಬ ಆಸೆ; ಆಗದ ಆಸೆ. ಇದೇನು ಬಾಳು? ಇಷ್ಟನ್ನು ಹೇಳಿ ಕವಿಯು "ಏನು ಬಾಳಯ್ಯ ನಿನತು !" ಎಂದು ಹಾಸ್ಯದಿಂದ ಇಂದ್ರನನ್ನು ಸಂಬೋಧಿಸಿ ನಗುತ್ತಾನೆ. ಪಾಪ, ಇಂದ್ರನೇನು ಉತ್ತರಕೊಟ್ಟಾನು. ದೇವೇಂದ್ರನಾಗಲಿ ಇದೇರೀತಿಯ ಸ್ವಾಭಿಮಾನ, ದರ್ಪ, ವ್ಯಸನ

ಗಳುಳ್ಳ ಮನುಜೇಂದ್ರರಾಗಲಿ ಏನು ಉತ್ತರ ಹೇಳಾರು? ತಲೆ ತಗ್ಗಿಸ ಬೇಕು, ಅಷ್ಟೆ.

'ಸಾಲ' ಸಣ್ಣ ಕವನವಾದರೂ ನಮ್ಮ ಮನಸ್ಸಿನ ಮುಂದೆ ಒಂದು ತೀಕ್ಷ್ಣವಾದ ನೋವಿನ ಚಿತ್ರವನ್ನು ಶಾಶ್ವತವಾಗಿ ಕಟ್ಟಿಬಿಡುತ್ತದೆ. ನಾಲ್ಕು ಜನ ಯಮದೂತರಂತೆ ಕಾಣುವವರು ಕೆಲವು ದನಕರುಗಳನ್ನು ಕಟುಕರಂಗಡಿಯ ಕಡೆ ಹೊಡೆದುಕೊಂಡು ಹೋಗುತ್ತಿದ್ದಾರೆ. ಹಿಂದೆ ಇವುಗಳ ಒಡೆಯ 'ಆರಡಿಯನರೆಮಾಡಿ' ಸಾಗುತ್ತಿದ್ದಾನೆ. ಅವನ ರಕ್ಷಣೆಗಾಗಿ ಆಶಿಸಿ ಆಕಳು ನಿಂತರೆ ಸಾಕು, ಯಮದೂತರ ಚಾವಟಿಯ ತಿರುವು ಪೆಟ್ಟು ಬೀಳುತ್ತದೆ. ಹರಿಸಲಾರದ ಸಾಲಕ್ಕಾಗಿ ದನಗಳನ್ನು ಕಟುಕನಿಗೆ ಒಪ್ಪಿಸಬೇಕಾಗಿ ಬಂದಿರುವ ಈ ಬಡ ಒಡೆಯನ, ಅವನ ಆಕಳ ಹಿಂಡಿನ, ಯಮದೂತರ ಚಿತ್ರ

ಅಳಿಸಲಾಗದೆ ಕಣ್ಣ ಕೀಲಿಸಿಹುದು

ಪದಕ್ಕೆ ಪದ ಬೆಳಕಾಗಿ. ಇಲ್ಲಿ ಆಕಳ ಬೇರೆ ಬೇರೆ ಬಣ್ಣಗಳು ಅವುಗಳು ಓಡುವುದು ಅರಚುವುದು ಧೂಳೇಳುವುದು ಚಾಟಿಯೇಟು ಬೀಳುವುದು ಮುಂತಾದುವುಗಳಿಂದ ನಮಗೂ ಇದು ಅಳಿಸಲಾಗದ ಚಿತ್ರ.

'ಸವೆದ ಹರುಷದ'ಲ್ಲಿ ಮನೆಯಲ್ಲಿ ಹೆಣ್ಣಿನ ಕಾಟದಿಂದ ನೊಂದ ಬೆಂದ ಗಂಡಿನ ಬೇಜಾರಿನ ಚಿತ್ರವಿದೆ.

ಮಲ್ಲಿಗೆಯರಳಿದರೇನು, ಶಶಿಯ ದಿಬ್ಬಣ ಬಂದರೇನು? ಮನೆಯೊಳಗೆ ಕೆದರಿದ ಮುಖದ, ಗರಗಸದ ನುಡಿಯ, ಕೊರಳ ಹಾಡನು ತಡೆಯುವುಬ್ಬಸದ ಮೈತೆರೆದಿರುವ ಬಯಕೆಯನ್ನು ವ್ಯರ್ಥಮಾಡುವ ವಿಚಿತ್ರ ಸನ್ನಿವೇಶ.

ತುಂಬಿದಕ್ಕರಿನೆದೆಯ ಹಿಸಿಯುತೆ
ಹಿಂಡಿ ಬಾಳನು ಬಸಿವರು;
ಒಲವು ಬೆಸುಗೆಯ ಬಿಡಿಸಿ ಅಗಲಿಸಿ
ಮನವ ಮಸಣವ ಗೈವರು–

ಹೀಗಾಗಿ ಹಗಲೂ ಇರುಳೂ ಬೇಗೆ. ಒಲುಮೆಯ ಚಿಲುಮೆ ಬತ್ತಿ ಹೋಗಿದೆ.

ಈ ಜನರ ನಡೆವಳಿಕೆ

ಬೆಳೆವ ಬಾಳಿನ ಬಯಕೆ ಕಳಸಕೆ
ಕುಳಿಯ ತೋಡುವ ನಡೆಗಳು !

ಹೊರಗೆಲ್ಲ ಬೆಳಕು ನಂಟು ಕಾಣುವಾಗ ಮನೆಯ ಒಳಗೆಲ್ಲ ಕತ್ತಲೆ, ದ್ವೇಷ! ಇದಕೇನು ದಾರಿ ?

ವಿಷವೆ, ಬೆಂಕಿಯೆ, ಅಲಗೆ, ಗಾಣವೆ
ಕುದಿವ ಎಣ್ಣೆಯೆ, ಸೀಸವೆ,
ಸಿಲುಬೆ ಮೊಳೆಗಳ ಉಳಿಯೆ, ಪೆಟ್ಟೆ,
ಇದಕೆ ಸಾಟಿಯೆ ? ಪೋಟಿಯೆ ?

ಈ ಮನೆಯ ಹಿಂಸೆ ಇದಾವುದಕ್ಕೂ ಸಮವಲ್ಲ, ಬಹು ದೊಡ್ಡದು, ಅವುಗಳನ್ನು ಮೀರಿರುವುದು.

ಕೊಲ್ಲುವಲಗೋ ಕೊಂದುಮುಗಿವುದು
ಒಡಲು ಒಮ್ಮೆಗೆ ಕೆಡೆವುದು.
ಇಲ್ಲಿ ದಿನ ನಿಶಿಯೆಲ್ಲ ಮನೆಯಲ್ಲಿ
ಕೊಂದ ಕೊಲ್ಲದ ಕೊಲೆಯಿದೆ.

ಇಂತಹ ಬಾಳು, ಬೇಸರದ ಬಾಳು, ಏನು ಕಠಿಣವೆನ್ನುವುದನ್ನು ಇಲ್ಲಿ ಕವಿ ವ್ಯಕ್ತಪಡಿಸುತ್ತಾನೆ.

ಸಮಾಜದ ನಾನಾ ಮುಖಗಳಲ್ಲಿ ಕೆಲವನ್ನು ಮಾತ್ರ ಆರಿಸಿ ಅವುಗಳ 'ಅಳಿಸಲಾಗದ' ಚಿತ್ರಗಳನ್ನು ವಿ. ಸೀ. ಅವರು ಕವನಗಳನ್ನಾಗಿ ಮಾಡಿದ್ದಾರೆ. ಇವುಗಳಲ್ಲಿರುವ ಪ್ರಾಧಾನ್ಯವೆಲ್ಲ ಕಾಣುವುದು ಅವುಗಳಿಂದುಂಟಾಗುವ ತೀವ್ರವಾದ ಹೃದಯ ಸಂವಾದದಲ್ಲಿ. ಸಹಜ ಕವಿತೆಯ ಮುಖ್ಯಗುಣ ಇದೆಂದಮೇಲೆ ಈ ಕವನಗಳಿಗೆ ಹೆಚ್ಚಿಗೆ ಹೊಗಳಿಕೆ ಬೇಕಿಲ್ಲ.

## ಕಲೆ

ಕಲೆಗಾರ, ಕಲೆ, ಅದರ ತತ್ವ, ಈ ವಿಷಯಗಳೂ ಕೂಡ ಕವಿಯ ಕಲೆಗೆ ವಸ್ತುಗಳು. ಈ ಕವಿ ತಮ್ಮ ಅನುಭವವನ್ನು ಇಲ್ಲಿಯೂ ಒಂದು ವಿಶಿಷ್ಟರೀತಿಯಲ್ಲಿ ಹೊರಗೆಡಹಿದ್ದಾನೆ.

ಕವಿಗೆ ಬೇಕೆಂದಾಗ ಲೇಖನಿ ಹಿಡಿದು ನೂರು ಸಾಲು ಹೆಣೆಯುವುದು ಸಾಧ್ಯವಾಗುವುದಿಲ್ಲ. ಹೆಣೆದರೂ ಅದು ಕಾವ್ಯವಾಗುವುದಿಲ್ಲ. ಸರಿಯಾದ ಭಾವನೆ ಹದವಾಗಿ ಮೂಡಬೇಕಾದರೆ ಕಾವ್ಯದೇವಿಯ ವರ ಬೇಕು. ಆದರೆ ಆಕೆ ಸದಾ ಪ್ರಸನ್ನಳಲ್ಲ.

ಬಂದಾಗ ನೀ ಬರುವೆ,
ಹೋದಾಗ ಹೋಗುವೆ,
ನಿನ್ನ ಮೇಲಧಿಕಾರವಿಲ್ಲವೆನಗೆ,
ಎನಗೆ ಬೇಕೆಂದಾಗ
ಬಾರದಿರುವೆ,
ಬೇಡ ಮುಚ್ಚಟಿಯೆನಲು
ಕಾಡುತಿರುವೆ.

ಅನೇಕ ಸ್ನೇಹಿತರ ಸಹವಾಸದಲ್ಲಿರುವಾಗ, ಹಾಸ್ಯ ಸಂತೋಷಗಳಲ್ಲಿ ಮುಳುಗಿರುವಾಗ ಇದ್ದಕ್ಕಿಂದ್ದಂತೆಯೇ ಯಾವುದೋ ಹಳೆಯ ನೆನಪನ್ನು ತಂದು ನಗುವನ್ನು ಕ್ಷಣದಲ್ಲಿ ಕತ್ತಲಾಗಿಸುತ್ತಾಳೆ ಆಕೆ. ಅವಳ ಹಟವೇ ಹಟ. ಇತರರು ಹಿಡಿಯದುದನ್ನೇ ಕವಿ ಹಿಡಿಯಬೇಕೆಂದು ಒತ್ತಾಯಪಡಿಸುತ್ತಾಳೆ. ಬೆಟ್ಟದ ಝರಿಯಂತೆ ಧುಮುಕಿ, ಹುಣ್ಣಿಮೆಯ ಸಾಗರದಲೆಯಂತೆ ಘೋಷಿಸಿ, ಮುಂಗಾರು ಮಳೆಯಂತೆ ಬೀಸಿ, ಕಾಳ್ಗಿಚ್ಚಿನಂತೆ ಉರಿಸಿ, ರುದ್ರಭೀಕರವಾಗಿಸಬಲ್ಲಳು ಕವಿಯ ಆಲೋಚನೆಗಳನ್ನು. ಇಲ್ಲದಿದ್ದರೆ, ಮಲ್ಲಿಗೆಯಂತೆ ಅರಳಿ, ನಲ್ಲೆಯಂತೆ ಒಲಿದು, ವಸಂತೋದ್ಯಾನದಂತೆ ತಳಿತು, ಮಾಗಿಯ ಫಲಭರಿತ ವೃಕ್ಷಗಳಂತೆ ಜೋತು ಮಧುರವಾಗಿಸಬಲ್ಲಳು. ಕಾವ್ಯದೇವಿಯ ಕೃಪೆಯೊದಗಿದರೆ ಸಾಕು 'ತಿಮಿರ ಕರಗಿ, ಸತ್ಯ ಉರಿದು' ಅವಳ ವಾಣಿಯೇ ಘೋಷಿಸುತ್ತದೆ. ಇದ್ದಕ್ಕಿದ್ದಂತೆಯೇ ನಡು ರಾತ್ರಿಯಲ್ಲಿ ನಗುವಿನಿಂದ ಕರೆದು ಜಾಗರಣೆ ಮಾಡಿಸಿ, ನರ್ತನ ಮಾಡಿ, ರಂಪ ರಗಳೆಮಾಡಿ, ಕರುಳ ಕಿವುಚಿದರೂ ಸುಖವಿತ್ತು, ದುಃಖದಲ್ಲಿಯೇ ಸೊದೆಗರೆದು, ಬೇಗೆಯಲ್ಲಿ ತಂಪಿತ್ತು, ಚಳಿಯಲ್ಲಿ ಕಾವಿತ್ತು ಬೆಂಗಾಡಿನಲ್ಲಿ ಹಸುರ ಬೆಳಸಿ, ಹೊಂಗೆ ಬೇವುಗಳ ತಣ್ಣೆಳಲಿನ ನೂರಾರು ಸವಿ ನೋಟಗಳನ್ನು ತುಂಬಿಬಿಡುತ್ತಾಳೆ. ಕತ್ತಲೆಯನ್ನು ಬೆಳಗಿಸಿ,

ಬೆಳಕನ್ನು ಕತ್ತಲಿಸಿ, ಘೋರ ನಿನದಗಳನ್ನು ಮೃದುಗಾನಗಳನ್ನಾಗಿ ಮಾಡಿ, ಕವಿಯನ್ನೇ ಒಂದು ಹಕ್ಕಿಯನ್ನಾಗಿ ಮಾಡಿಬಿಡುತ್ತಾಳೆ. ಇಷ್ಟೆಲ್ಲ ಆದರೂ ಆ ದೇವಿಯ ಮೇಲೆ ಕವಿಗೆ ಒಂದಿಷ್ಟೂ ಅಧಿಕಾರವಿಲ್ಲ. ಅವಳ ಆಜ್ಞೆಯೇನಿರಬಹುದೆಂದು ಮುಂಚೆಯೇ ತಿಳಿಯುವುದಂತೂ ಕವಿಗೆ ಅಸಾಧ್ಯ. ಆದುದರಿಂದ ಕವಿ ಈ ಕವನದ ಕೊನೆಯಲ್ಲಿ "ರಾಣಿ ನೀನು" ಎಂದು ಕಾವ್ಯದೇವಿಗೆ ಹೆಸರಿಟ್ಟಿದ್ದಾರೆ. ಈ ಕವನದಲ್ಲಿ ಕಾವ್ಯತತ್ವದ ಸೂಕ್ಷ್ಮ ಭಾವನೆಗಳು ಕವಿ ಸಹಜವಾಗಿ ಚಿತ್ರಿತವಾಗಿವೆ. ಯಾವ ಹೆಸರಾಂತ ಕವಿಯೂ ಈ ದೇವಿಯನ್ನು ಹೊಗಳದೆ, ತೆಗಳದೆ ಬಿಟ್ಟಿಲ್ಲ. Goldsmith ಹೇಳಲಿಲ್ಲವೆ—

Dear charming nymph, neglected and decried,
My shame in crowds, my solitary pride ;
Thou source of all my bliss, and all my woe,
That foundest me poor at first, and keepest me so.

ಅನೇಕವೇಳೆ ಕವಿಗಳು ಈ ದೇವಿಯ ವಿಚಿತ್ರ ಕಾಟಗಳಿಗೆ ಸೋತು ಉನ್ಮತ್ತರಾಗಿರುವುದೂ ಉಂಟು. ಅವರೆಲ್ಲರನ್ನೂ ನಮ್ಮ ಕವಿಯ ಈ ಅನುಭವಗಳೊಡನೆ ಹೋಲಿಸಿದರೆ ಕವಿಗಳ ಚಿತ್ತಕರ್ಮ ವ್ಯಕ್ತವಾಗುತ್ತದೆ.

'ಶಿಲ್ಪಿ' ಒಂದು ಶ್ರೇಷ್ಠವಾದ ಕವನ. ವಿರೂಪವಾದ ಕಗ್ಗಲ್ಲಿನಿಂದ ಸೌಂದರ್ಯಸಾರವನ್ನು ಹೊರತೆಗೆಯುವ ಶಿಲ್ಪಿಗೆ ಇತರ ಯಾವ ಯೋಚನೆಯೂ ಇಲ್ಲ. ಮನೆ ಮಡದಿ, ಬದುಕು ಬವಣೆ, ಹೊಟ್ಟೆ ಬಟ್ಟೆ, ತಿಳಿವು ಮರೆವುಗಳು ಅವನಿಗೆ ಇಲ್ಲ. ಈತನ ಕರ್ಮನಿಷ್ಠೆಯಲ್ಲಿ ಮಿಕ್ಕೆಲ್ಲ ಭಾವನೆಗಳೂ ಮಾಯವಾಗಿ ಒಂದೇ ಧ್ಯೇಯ ಕಣ್ಮುಂದೆ ಇದೆ. ಈ ಶಿಲ್ಪಿಗೆ ಕಗ್ಗಲ್ಲಿನ ಅಂತರಾಳದಲ್ಲಿ ಹುದುಗಿರುವ ಸೌಂದರ್ಯ ಮಾತ್ರ ಕಾಣುತ್ತಿದೆ. ಎಷ್ಟೋ ಚೆಲುವುಗಳು ಇನ್ನೆಷ್ಟೋ ಜೀವಗಳು ಈ ಕಗ್ಗಲ್ಲ ಸೆರೆಯಲ್ಲಿ ಬಿದ್ದು ದೈನ್ಯದಿಂದ ಬೇಡಿಕೊಳ್ಳುತ್ತಿವೆ—"ಹೊರಗೆತ್ತಿ ಕಾಯಿರೆಂದು". ಇದು ಶಿಲ್ಪಿಯನ್ನು ಕಗ್ಗಲ್ಲ ಬಳಿಗೆ ಸೆಳೆದಿದೆ.

ಕಲ್ಲ ಮುಂದೆ ಕುಳಿತು ಅವನು ಉಳಿಯಿಂದ ಕೆತ್ತುತ್ತಿದ್ದರೆ ಆ ಒಂದೊಂದು ಪೆಟ್ಟೊ, ಶಿಲ್ಪಿಯ ಮನದ ಭಾವನೆಯ ಗಾನಕ್ಕೆ ತಾಳವಾದಂತೆ ಇದೆ.

ಬಿಟ್ಟುಕೊಡು ಬಿಟ್ಟುಕೊಡು
ಕಗ್ಗಲ್ಲ ಸೆರೆಯಿಂದ
ಬಿಟ್ಟುಕೊಡು ಸೌಂದರವನು

ಶಿಲ್ಪಿಯಂತೂ ನಿರ್ಧರಿಸಿದ್ದಾನೆ. ಆತನ ಬಳಿ ಸಿಡಿಮದ್ದು, ಸಿಡಿಲ ಕಿಡಿ, ಸುತ್ತಿಗೆ, ಉಳಿ ಇವೆಲ್ಲವೂ ಸಿದ್ಧವಾಗಿವೆ. ಇವುಗಳಿಂದ ಪೆಟ್ಟು ಹಾಕಿ ಕಗ್ಗಲ್ಲಿನಿಂದ ಚೆಲುವನ್ನು ಅವನು ಮೆರೆಸಲು ಸಿದ್ಧ.

ಪಾಷಾಣ ಕುಹರದಲ್ಲಿ
ಸೆರೆಯಿರುವ ಜೀವಕ್ಕೆ
ಹೊರ ಬಾಳ ತಂದೀವೆನು

ಕಲ್ಲಿಗೆ ಹೇಳುತ್ತಾನೆ ಕವಿ :

ಹೂ, ಹಣ್ಣು, ಎಲೆ ಬಳ್ಳಿ
ಹೊಸಚಿಗುರು, ಗಿಳಿ, ಕೋತಿ,
ಹಸುಗಣ್ಣ ಚಿಗರಿಗಳನು
ಕೆಳೆಯರನು, ಚೆಲುವರನು,
ಇನಿಯರನು, ದೇವರನು
ಬಿಡಿಸುವೆನು ನಿನ್ನ ಕಡಿದು.

ಶಿಲ್ಪಿಯ ಆಸೆಯಲ್ಲಿ ಒಂದು ಧೋರಣೆಯಿದೆ. ಈತನಿಗೆ ತಾನು ಮಾಡುವ ಕಾರ್ಯದಲ್ಲಿ ನಂಬಿಕೆಯಿರುವುದರ ಜೊತೆಗೆ ಕಗ್ಗಲ್ಲಿನ ಮನಸ್ಸು ವ್ಯತ್ಯಾಸವಾಗುವುದರಲ್ಲಿಯೂ ನಂಬಿಕೆಯಿದೆ. ಈ ಕಲ್ಲೆ ನಾಳೆ ಹೊರಬಂದ ಸೌಂದರ್ಯಕ್ಕೆ ತಳಹದಿ ಹಾಕಿ ದೇವಸ್ಥಾನದಲ್ಲಿ ನಿಲ್ಲಿಸಾವು.

ನಿನ್ನ ಸೀಳಿದ ಹೋಳೆ
ನಾಳೆ ಗುಡಿಗಟ್ಟುವುವು
ಇಂದಿನೀ ನಿನ್ನ ಸೆರೆಗೆ.

ಈ ಕೆಲಸ ನಡೆದುದು ಶಿಲ್ಪಿಯ ಹಟದಿಂದ. ಕಗ್ಗಲ್ಲು ಶರಣಾ

ಯಿತು ಅವನಿಗೆ. ಅವನ ಮಾತು ಕೇಳಿ ಕಲ್ಲಿನಿಂದಲೇ "ಏಳ್ವ" ದೇವರು ಗಳಿಗೆ ಗೋಪುರವನ್ನು ಕಟ್ಟಿತು. ಇದನ್ನು

ಮೂಲೋಕವರಿಯುತಿರೆ
ನಾ ಕೆತ್ತುವಕ್ಷರದಲ್ಲಿ

'ನಾನೇನು ಕಡಿಮೆ' ಎಂದು ಅವನಿಗೆ ಹೆಮ್ಮೆ. ಕಲೆಗಾರನ ಧ್ಯೇಯ, ಅದರ ಸಾಧನೆ ಅದರಲ್ಲಿರುವ ದೃಷ್ಟಿ, ಏಕಾಗ್ರತೆ, ಪವಿತ್ರ ಭಾವನೆಗಳೆಲ್ಲ ಈ ಕವನದಲ್ಲಿ ರೂಪು ತಳೆದಿವೆ. ಈ ಶಿಲ್ಪಿಯ ಶಿಲ್ಪದಂತೆ ಈ ಕವಿಯ ಈ ಕವನ 'ಸವಿಯಮೃತ'ವನ್ನು ಕಡೆದಿದೆ. ನಿಜವಾದ ಶಿಲ್ಪಿಯು ಸಂಪ್ರದಾಯಶರಣನಾಗದೆ ತಾನು ಆರಿಸಿದ ವಿಷಯದಲ್ಲಿ ವಿಶಿಷ್ಟವಾದ ಹೊಸ ಕೆಲಸವನ್ನು ಮಾಡಿರಬೇಕು. ಇಲ್ಲದಿದ್ದರೆ ಅವನ ಕೆಲಸ ಶ್ರೇಷ್ಠವಾಗಲಾರದು. ಅವನಿಗೆ ಲೋಕದ ಮನ್ನಣೆ ಸಿಗಲಿ, ಸಿಗದಿರಲಿ ತಾನು ಮಾಡಿರುವ ಕಾರ್ಯದ ವಿಶಿಷ್ಟತೆಯಲ್ಲಿ ತನಗೆ ನಂಬಿಕೆ ಯಿರಬೇಕು. John Drink Water ಎಂಬ ಕವಿ "The Carver in Stone" ಎಂಬ ಕವನದಲ್ಲಿ ಈ ಭಾವನೆಯನ್ನು ಬಹು ಸೊಗಸಾಗಿ ನಿರೂಪಿಸಿದ್ದಾನೆ.

Till on the wall, out of the sullen stone,
A glory blazed, his vision manifest,
His wonder captive and he was content.

ಇದು ಬೇಕು ನಿಜವಾದ ಶಿಲ್ಪಿಗೆ. ಶ್ರೀ ವಿ. ಸೀ. ಅವರ ಕವನ ದಲ್ಲಿ ಶಿಲ್ಪಿಯ ದೃಷ್ಟಿ, ಹಟ, ಹೀಗೆ ಮೂಡಿದೆ.

ಕನ್ನಡದ ಹಿರಿಮೆಗಳಲ್ಲಿ ಬೇಲೂರು ಹಳೇಬೀಡುಗಳಲ್ಲಿರುವ ಭವ್ಯ ಶಿಲ್ಪಗಳು ಬಹು ಮುಖ್ಯವಾದವು. ಬೇಲೂರಿನ ಚೆನ್ನಕೇಶವ ದೇವಾ ಲಯದ ಶಿಲ್ಪವನ್ನೇ ವಸ್ತುವನ್ನಾಗಿ ಉಳ್ಳ "ಬೇಲೂರು ಚೆನ್ನಕೇಶವ" ಎಂಬ ಕವನದಲ್ಲಿ ಕನ್ನಡ ಶಿಲ್ಪದ ಹಿರಿಮೆ ಮನೆಮಾಡಿಕೊಂಡಿದೆ. ಶ್ರೀ ಡಿ. ವಿ. ಜಿ. ಅವರ "ಬೇಲೂರಿನ ಶಿಲಾಬಾಲಿಕೆಯರು" ಎಂಬ ಕವನದ ರೀತಿಗೂ ಈ ಕವನದ ರೀತಿಗೂ ವ್ಯತ್ಯಾಸವಿದೆ. ಶ್ರೀ ಡಿ. ವಿ. ಜಿ. ಅವರು ಕೀಟ್ಸ್ ಕವಿಯ ಕವನವನ್ನು ಮಾದರಿಯಾಗಿಟ್ಟು

ಅಲ್ಲಿಯ ಭಾವನೆಗಳನ್ನೇ ಉಪಯೋಗಿಸಿಕೊಂಡು, ಭವ್ಯವಾದ ಕನ್ನಡ ಕವನಗಳನ್ನು ರಚಿಸಿರುವುದು ನಮ್ಮೆಲ್ಲರಿಗೂ ಗೊತ್ತಿರುವ ವಿಷಯ. ಶ್ರೀ ವಿ. ಸೀ. ಯವರ ಈ ಕವನದಲ್ಲಿ ಬೇರೊಂದು ರೀತಿಯ ದೃಷ್ಟಿಯನ್ನು ಅಳವಡಿಸಿದ್ದಾರೆ.

ಕಲ್ಲು ನಾಡಿನ ಕತೆಯ ಹೇಳುತಿದೆಯಿಲ್ಲಿ
ಗೈಮೆ ಆಗಸದತ್ತ ಕೈಯೆತ್ತಿ ತೋರುತಿದೆ
ಕಲೆಗೆ ಕಳಸವ ಕೆತ್ತಿ ಕಣ್ಗೆ ಹಿಡಿದು
ಹಿರಿಯ ಬಾಳಿನ ಬೆಳಗೆ ಬೆಳಕನಿಡಿದು.

ಈ ಕಲೆಯ ಉತ್ಸವಕ್ಕೆ ಪುರೋಹಿತರಾರು ?

ತಂದೆ ಮೇಲ್ಗಯ್ ಮಗನು, ಮಗನ ಮೆಚ್ಚಿದ ತಂದೆ
ಜಕ್ಕಣನು ಡಂಕಣನು ಹಿಗ್ಗಿ ಕಟ್ಟಿದರು
ಬೈಚೋಜ ಮಾಯಣ್ಣ ಮಾರಯ್ಯ ಮಲ್ಲೋಜ
ಅಮರರಾಗಿಹ ಮಾದ ಮಸಣಿತಮ್ಮ.

ಇವರೆಲ್ಲ ಸೇರಿ ಕಲ್ಲಿನಲ್ಲಿ ನೂತನ ಜೀವಪ್ರಪಂಚವನ್ನು ಸೃಷ್ಟಿಸಿದ್ದಾರೆ. ತುಂಬುರ ನಾರದರ ಗಾನ, ಅಪ್ಸರೆಯರ, ಭೂವನಿತೆಯರ ನೃತ್ಯ ಇವೆಲ್ಲ ಇಲ್ಲಿ ನಮಗೆ ನಿಲುಕುವ ವಿಷಯಗಳು. ಇದು ಭಕ್ತರಿಗೆ ದೇವನಿಲಯ; ಕವಿಗಳಿಗೆ ಕಲಾಸ್ಥಾನ, ಹೆಂಗಸರಿಗೆ ಉತ್ಸವಾವಕಾಶ, ಊರಿನ ಜನರಿಗೆ ವೈಭವ. ಮದನಕೈಕನ್ನೆಯರ ಹಾವಭಾವವಿಲಾಸಗಳು, ಗಾನ, ನಾಟ್ಯ, ಮುಂತಾದುವೆಲ್ಲ ಶಾಶ್ವತ ರೂಪು ತಳೆದಿವೆ. ಕೃಷ್ಣನ ಕೊಳಲಗಾನಕ್ಕೆ ಮನಸೋತು ಕೇಳುವ ಬೆಟ್ಟ, ನದಿ, ತರುತರುಗಳು, ದೇವದೇವನ ಎಲ್ಲ ಅವತಾರಗಳು, ದಶರಥನ ದುಃಖ, ರಾಮನೊಡನೆ ಕಾಡಲೆಯುವ ಸೀತೆ, ದ್ರೌಪದಿಯ ವಸ್ತ್ರಾಪಹರಣ, ಮುಂತಾದುವೆಲ್ಲ ಕಲ್ಲಿನಲ್ಲಿ ಚಿತ್ರಿತವಾಗಿವೆ. ಮರದಲ್ಲಿ ಕುಕಿಲುವ ಕೋಗಿಲೆ, ಕಪಿಯ ಕುಣಿತ, ತುಂಬಿಯ ಹಾರಾಟ, ಕಾಡಾನೆಯ ಸುಳಿದಾಟ, ಗರ್ಜಿಸುವ ಸಿಂಹ, ಹೆದರುವ ಜಿಂಕೆ ಇಂತಹವೆಷ್ಟೋ !

ಒಳ್ಪಸಿರ ಕಾಲಕ್ಕೆ ಸೊಗದ ಸೂಲನು ನಡಸಿ
ಕಲ್ಲಬಾಯನು ನುಡಿಪ ಕಲೆಯೊಪ್ಪಿದೆ

ಸುತ್ತಿಗೆಯುಂ ಕಿತ್ತುಳಿಯು ನಡಸುತಿರಲಾ ಪೆಟ್ಟು
ಕವಿಯ ಕರಣವ ತುಂಬಿ ಎದೆಗಿಳಿದಿದೆ!

ಈ ದೇವನಿಲಯವು ನಿರ್ಮಾಣವಾಗುತ್ತಿದ್ದಾಗ ಎಷ್ಟು ಸಾವಿರ ಉಳಿಗಳು ಹೇಗೆ ಒಟ್ಟಿಗೆ ಪೆಟ್ಟಿಕ್ಕುತ್ತಿದ್ದುವೋ? ಅವೆಲ್ಲ ಕವಿಯ ಹೃದಯದಲ್ಲಿ ಪ್ರತಿಧ್ವನಿಸಿ, ಮನಸ್ಸಿನ ಮುಂದೆ ಪ್ರತಿಬಿಂಬವಾಗಿ ರೂಪುತಳೆದಿರಬೇಕು. ಇಲ್ಲಿ ದೇವಾಲಯದ ಹೊರಗಡೆ ಬಾಳಿನ ಇರವನ್ನು ಬರುವವರ ಬಗೆಗೆ ಕಟ್ಟಿದ್ದಾರೆ ಈ ಶಿಲ್ಪಿಗಳು. ಈ ಸುತ್ತಣ ಸವಿಯನ್ನು ಯಾರು ಅರಿತಾರೋ ಅವರಿಗೆ ಮಾತ್ರ ದೇವರ ದರ್ಶನ. ಇಲ್ಲದಿದ್ದರೆ ಇಲ್ಲಿ, ದೇವ ದರ್ಶನವಿಲ್ಲ!

ಬಳಸಿ ಬಲಿದಿಹ ಸೊಗಸ ಸವಿದು ಒಳಹೊಕ್ಕವರು
ಚೆಲುವ ಚೆನ್ನಿಗನ ಕಾಂಬರೆನ್ನುತಿದೆ.

ಈ ಕವನದ ಭಾವ, ರೂಪ ಎರಡೂ ವಿಶಿಷ್ಟವಾದವು. ಆದುದರಿಂದಲೇ ಕವನಕ್ಕೆ ಪ್ರಾಧಾನ್ಯ. "ಕಲೆ ಸಫಲವಾಯ್ತೆಂದು ಶಿಲೆ ಸಾರಿ"ರುವುದನ್ನು ಇಲ್ಲಿ ಕವಿ ಸಫಲನೆಂದು ಕವಿತೆ ಸಾರಿದೆ. ಈ ಕವನಗಳಲ್ಲಿ ಉತ್ತಮ ಕಲೆಗಾರನ ಉನ್ನತವಾದ ಧ್ಯೇಯವಾದವಿದೆ.

## ರಾಷ್ಟ್ರೀಯತೆ

ರಾಷ್ಟ್ರಭಕ್ತಿ, ದೇಶಪ್ರೇಮ ಎಂಬುದು ಕವಿಯನ್ನು ಮಾರುಹೋಗಿಸಿರುವ ಮತ್ತೊಂದು ಭಾವನೆ. ತನ್ನ ದೇಶ, ತನ್ನ ಜನ ಎಂದು ಮಮತೆಯಿಂದ ಮಾತನಾಡದ ಕವಿಯಿಲ್ಲ. ಕನ್ನಡನಾಡನ್ನು ಹೊಗಳಿ ಹಾಡಿ ಭಾರತದ ಭಾಗ್ಯಕ್ಕೆ ಈ ನಾಡು ಕಾಣಿಕೆ ನೀಡುವುದನ್ನು ದ್ರಾಕ್ಷಿ-ದಾಳಿಂಬೆಯ ಒಂದು ಕವನದಲ್ಲಿ ನಾವು ಕಾಣುತ್ತೇವೆ. "ಕನ್ನಡ ನಾಡು ಕಸ್ತೂರಿನಾಡು, ವೀರ ಸಿರಿ ಕಲೆ ಬೀಡು ಎನ್ನ ತಾಯ್ನಾಡು". ಇಲ್ಲಿ ಅಗೆದಲ್ಲಿ ಹೊನ್ನು ಸಿಕ್ಕುತ್ತದೆ. ನುಡಿ ದಾಂಗುಡಿಯ ಹಾಡಾಗುತ್ತದೆ, ನೆಲ ಗಂಡು ಮೆಟ್ಟು. ಬೆಟ್ಟ, ಕಾಡು, ಕರಾವಳಿ, ಸಮುದ್ರ, ನದೀ, ಹಕ್ಕಿ ಮೃಗಗಳಿಂದ ನಾಡಿನ ಮೋಹನವು ಕಣ್ಕಟ್ಟುತ್ತದೆ. ಇಲ್ಲಿಯ ಜನ "ನೂರು ಭವಭವದಲ್ಲಿ ಇಲ್ಲೆ ಬಾಳ್ ಬಯಸು"ತ್ತಾರೆ. ಕಂಡಕಡೆ

ಗುಣಕ್ಕೆ ಕೈಮುಗಿದು ಹೊಗಳಿ ಉಪಚರಿಸುವ ಧನ್ಯದಾನದ ನೆಲೆ ಈ ದೇಶ. ಇಂತಹ ದೇಶ ಎಂದಿಗೂ 'ಸಿಲಲಂತೆ ಸವಿಯೂರಿಸಲುವಂತೆ' ಎಂಬುದು ಕವಿಯ ಆಸೆ.

ಕನ್ನಡ ನಾಡಿನ ಪ್ರೇಮವು ಕವಿಗೆ ಭಾರತ ಪ್ರೇಮಕ್ಕೆ ಒಂದು ಮೆಟ್ಟಲು ಮಾತ್ರ. ಒಟ್ಟು ಭಾರತವನ್ನು ಕುರಿತ, ಅದರ ಜನರನ್ನು ಕುರಿತ, ಅವರ ಆಸೆ ಭಯಗಳನ್ನು ಕುರಿತು 'ದ್ರಾಕ್ಷಿ-ದಾಳಿಂಬೆ'ಯಲ್ಲಿ ಏಳು ಕವನಗಳಿವೆ. ಒಂದೊಂದರಲ್ಲಿ ಒಂದೊಂದು ವಿಧವಾದ ಭಾವನೆಗಳು ಮೂಡಿವೆ. ಕೊನೆಯ 'ಭಾಗ್ಯತಾರೆ'ಯನ್ನು ಬರೆದ ಕಾಲಕ್ಕೂ ಮೊದಲನೆಯ 'ಗಡಿ ದಾಟು' ಎಂಬ ಕವನವು ರಚಿತವಾದ ಕಾಲಕ್ಕೂ ನಡುವೆ ಕಾಲುಶತಮಾನದ ಅಂತರವೇ ಸಂದಿದೆ. ಸುಮಾರು ೧೯೨೬-೨೭ ರಲ್ಲಿ ಬೆಂಗಳೂರಿನ ದೇಶೀಯ ವಿದ್ಯಾಶಾಲೆಯ ಪತ್ರಿಕೆಯಲ್ಲಿ ಪ್ರಕಟವಾದ 'ಭಾಗ್ಯತಾರೆ'ಯು ಎಂದೋ ಮುಂದೆ ಸವಿಯನ್ನು ಕಾಣಿಸಬಲ್ಲ ಭೂರಿರತ್ನವಾಗಬಲ್ಲ ಶಕ್ತಿಯನ್ನು ನಸುಸೂಸಿ ಜನರನ್ನು ತನ್ನ ಹಿಂದೆ ಬನ್ನಿರೆಂದು ಕರೆಯುವ ಭಾರತದ ಬಾವುಟವನ್ನು ಕುರಿತ ಕವನ. 'ಗಡಿ ದಾಟು' ಸ್ವಾತಂತ್ರ್ಯವನ್ನು ಗಳಿಸಿದ ಹೊಸ ಹುರುಪಿನಲ್ಲಿ ಜನತೆಯಲ್ಲಿ ಕಾಣುವ ಉತ್ಸಾಹವನ್ನು ಪೂರ್ಣವಾಗಿ ಪ್ರತಿಬಿಂಬಿಸುವ ಕವನ. 'ದ್ರಾಕ್ಷಿ-ದಾಳಿಂಬೆ'ಯ ಕವನಗಳಲ್ಲೆಲ್ಲಾ ಈ ಕವನವೇ ಇತ್ತೀಚೆಗೆ ರಚಿತವಾದುದು. ಈ ಕವನದಲ್ಲಿ ಮೂರು ಮಜಲುಗಳಿವೆ. ಮೊದಲನೆಯದರಲ್ಲಿ ಬಿಡುಗಡೆಗಾಗಿ ಹೊಡೆದಾಡಲು ಹಿಂಸೆ, ಸೆರೆ, ಕಾಳಗದ ಕಳ, ಒಂದಕ್ಕೂ ಹೆದರದೆ ನೂರಾರು ದಿಕ್ಕುಗಳಿಂದ, ವೃತ್ತಿಗಳಿಂದ ಜನ ನುಗ್ಗಿದ ವಿಸ್ತಾರದ ಹದವಾದ ವರ್ಣನೆಯಿದೆ. ಕವಿಯು ಬೇಕೆಂದೇ ಕವನವನ್ನು

ನಡೆದಿವೆ ಹೆಣ್ ಗಂಡಿನ ಕಾಲುಗಳು

ಎಂದು ಮೊದಲುಮಾಡುತ್ತಾರೆ. ಅಲ್ಲಿಂದ ಇಲ್ಲಿಂದ ಎಂದು ಸುಮಾರು ಇಪ್ಪತ್ತು ಸ್ಥಾನಮಾನಗಳನ್ನು ಹೆಸರಿಸಿ ಅವರಲ್ಲಿರುವ ಅಂತರಗಳನ್ನೂ ಸೂಚಿಸಿ, ಈ ಎಲ್ಲರೂ ಒಂದೇ ದೃಷ್ಟಿಯಿಂದ ನಡೆಯುವುದನ್ನು ವರ್ಣಿಸಿರುವುದರಲ್ಲಿ ಸ್ವಾತಂತ್ರ್ಯ ಸಮರದಲ್ಲಿದ್ದ ಜನರ ಉತ್ಸಾಹವೇ ಕವನ

ವಾದಂತಿದೆ. ಎಳೆಯರು ಮುದಿಯರು, ಒಂದೇ ಉತ್ಸಾಹದ ಭರದಲ್ಲಿ ಒಟ್ಟು ಸೇರಿದ್ದಾರೆ. ಹೊಸ ಬಾವುಟ ಸಿಲ್ಲಿಸಿದ್ದಾರೆ.

ಎರಡನೆಯ ಮಜಲಿನಲ್ಲಿ ಕವಿಯು ಈ ಉತ್ಸಾಹದ ಮೂರ್ತ ಸ್ವರೂಪದಂತೆ ಬೆಳೆದು ನಿಂತಿರುವ ನಮ್ಮ ದೇಶದ ಬಾವುಟವನ್ನು ವರ್ಣಿಸಿದ್ದಾರೆ. ಅದು ಸಾಮಾನ್ಯವಾದ ಬಾವುಟವಲ್ಲ.

ಅದೆಕಾಣ್ ಅದೊ, ಮೂವಣ್ಣದ
ಮೂಸಾಸಿರ ಗುಣಗಳ ಒಪ್ಪೆಳಸು, ನೆರವೇರಿದ ಕನಸು.
ಈ ನಾಡಿನ ನಡೆಜಾಡಿನ ಹಿರಿಜಾಣಿನ ತೆನೆಗಟ್ಟದ ಬೆಳಸು!
ಅರಗಾಲಿನ ಅರಗಾಲಿಯ ಹಿರಿನಾಗನ ಹೆಬ್ಬೆಡೆ ಹರಹು.
ಎದೆಯಾಸೆಯ ನೆಲೆ ಮೇಲಕೆ ನಿಡುಬಾನಿಗೆ ನಟ್ಟಾಡಿದೆ ಒಲೆದು.

ಈ ಬಾವುಟದ ಆಶ್ರಯದಲ್ಲಿ ನಿಂತವರಿಗೆ ಮತ್ತಾವ ಮಾತೂ ಬೇಡ. ಬಿಡುಗಡೆಯದೊಂದೇ ಮಂತ್ರ, ತಾರಕಮಂತ್ರ.

ಇದರ ಪರಿಣಾಮವಾಗಿ ಏನಾಯಿತೆಂಬುದೇ ಮೂರನೆಯ ಮಜಲಿನಲ್ಲಿ ಬರುವ ವರ್ಣನೆ.

ನುಡಿನಾಡನು ನೆಲಬೀಡನು ಹಿಡಿದಾಗ್ರಹ ಒಡಿತ್ತು
ಹುಟ್ಟಹವಿದೊ ಹೊಸ ಹುರುಪಿನ ಸಾಸಗಳುತ್ಸಾಹಗಳು

ಜನದ ಇಚ್ಛೆ ಫಲಿಸಿದ ಮೇಲೆ ಕೇಳಬೇಕೆ!

"ಯಾರಿನ್ನೀ ನಾಡಿನ ಮುಂದೋಟವ ತಡೆಯುವರು?" ಗುಡಿಗೋಪುರವೆದ್ದು ಬಾನಿನ ನೀಲಿಗೆ ಮುತ್ತಿಟ್ಟು, ಸುರರ ಚಾಮರದ ಬೀಸು ಗೌರವ ದೊರಕೀತು. 'ಹೊಸ ಮೆರುಗಿನ ಬಾಳು' ಬದುಕಿ 'ಹಲನಾಡಿನ ಸುಖಶಾಂತಿಗೆ ಸಂತತಮುನ್ನುಗ್ಗುವರು' ಸ್ವಾತಂತ್ರ್ಯದ ಗುಣ ಒಂದರಿಂದಲೇ ನಾವು.

ಚೆಲುನಡೆಗಳ ನುಡಿಗಳ ಕಲೆಗಳ ಬಲ್ಲಿದರು
—ಪೆರ ತಾವುದನೇನಾಗಲಿ ಒಲ್ಲದರು!

ಈ ಭವಿಷ್ಯ ದರ್ಶನದಿಂದ ಕವನ ಕೊನೆಗಾಣುತ್ತದೆ. ನಮ್ಮ ದೇಶದ ಒಟ್ಟು ನಡೆ ಈ ದೃಷ್ಟಿಯಲ್ಲಿಯೇ ಇದೆ ಎನ್ನುವುದು, ಕವಿಯ ನಿರೀಕ್ಷೆಯನ್ನು ಸ್ವಲ್ಪವಾದರೂ ಸತ್ಯವನ್ನಾಗಿಮಾಡಿದೆ ಎಂಬ ಸಮಾ

ಧಾನವನ್ನು ತರುತ್ತದೆ. ಈ ಕವನ ರಚನೆಯಲ್ಲಿ ಹಲವು ಗುಣಗಳು ಸೇರಿ ಇದನ್ನು ಭವ್ಯವಾದ ಕವನವನ್ನಾಗಿಸಿದೆ. ಇದೊಂದು ಶಾಶ್ವತ ವಾದ ಕನ್ನಡ ಕವನ.

"ವಿದ್ಯಾರ್ಥಿ" ಎನ್ನುವುದು ಯಾವ ವಿದ್ಯಾರ್ಥಿಯನ್ನೂ ಕುರಿತು ಬರೆದುದಲ್ಲ. ಈ ಕವನದಲ್ಲಿ ಬರುವ ವ್ಯಕ್ತಿಯಂತಹ ಯೋಗ್ಯತೆ ಯುಳ್ಳ ವಿದ್ಯಾರ್ಥಿಗಳನ್ನು ಪಡೆಯುವುದು ದೇಶಕ್ಕೆ ಹೆಮ್ಮೆಯ ಮಾತು. ನಮ್ಮ ದೇಶಕ್ಕೆ ಆ ಹೆಮ್ಮೆ ಬಹು ಹಿಂದೆ ಇದ್ದಂತೆ ಮುಂದಾದರೂ ದೊರಕಲೆನ್ನುವುದು ಈಗಿನ ಬೋಧಕರ, ಪೋಷಕರ ದೃಷ್ಟಿ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ರಚಿತವಾದ ಈ ಕವನಕ್ಕೆ ಕಾರಣ ಆ ಕಾಲದಲ್ಲಿ ಕಾನ್‌ಪುರದಲ್ಲಿ ನಡೆದ ಹಿಂದೂ ಮುಸ್ಲಿಂ ಗಲಭೆ. ಇದು ಗೊತ್ತಾಗುವುದು ಕವನದ ಒಂದು ಸಾಲಿನಿಂದ.

"ಕಪ್ಪು ಯಮುನೆಯು ಕೆಂಪ ಬೇಗ ತಿರುಗಿಸಿರಿ." ಹಿಂದೂ ದೇಶದ ಸ್ವಾತಂತ್ರ್ಯ ಸಮರದ ಚರಿತ್ರೆಯನ್ನು ಸ್ವಲ್ಪವಾದರೂ ಅರಿತಿರುವವರಿಗೆ ಕಾನ್‌ಪುರದ ಗಲಭೆಯೂ ಆ ಗಲಭೆಯಲ್ಲಿ ಹುತಾತ್ಮನಾದ ಗಣೇಶ ಶಂಕರ ವಿದ್ಯಾರ್ಥಿ ಎಂಬ ರಾಷ್ಟ್ರವೀರನೂ ಅಪರಿಚಿತರಲ್ಲ. ಈ ಕವನ ಈ ಗಣೇಶ ಶಂಕರ ವಿದ್ಯಾರ್ಥಿಯನ್ನು ಕುರಿತ ಕವನ. ಕವಿಯು ಇದನ್ನೂ ಕವನದಲ್ಲಿ ಸೂಚಿಸಿದ್ದಾರೆ. ಮೂರು ಸಾಲುಗಳಲ್ಲಿ ಈ ಹೆಸರಿನ ಬೇರೆ ಬೇರೆ ಭಾಗಗಳನ್ನು ಸೇರಿಸಿ ಶ್ಲೇಷಾರ್ಥ ಸೂಚಿತವಾಗು ವಂತೆ ಒಂದು ಚಮತ್ಕಾರವನ್ನೂ ಸೇರಿಸಿದ್ದಾರೆ.

> ನಾಡ '**ಶಂಕರ**'ನನ್ನು ಬಲಿಗೊಟ್ಟರು
>
> . . . . . . . . . . . . . .
>
> ಇಂಥ '**ಗಣಗಳು**' '**ಈಶ**'ರೆದ್ದು
>
> ಬರಲಿ ಇಂಥ '**ವಿದ್ಯಾರ್ಥಿ**'ಗಳ ಕುಲ ಬೆಳೆಯಲಿ.

ದಪ್ಪಕ್ಷರದಲ್ಲಿರುವ ಮಾತುಗಳನ್ನು ಗಮನಿಸಿದರೆ ಈ ಸೂಚನೆ ವ್ಯಕ್ತವಾಗುತ್ತದೆ. ಇದು ಕೇವಲ ಚಮತ್ಕಾರವಾಗಿಯೇ ಇದ್ದರೆ ನಾವೇನೂ ಅಷ್ಟು ಗಮನಕೊಡಬೇಕಾಗಿರಲಿಲ್ಲ. ಆದರೆ ಆ ಪ್ರಯೋಗ ದಲ್ಲಿ ಈ ರಾಷ್ಟ್ರವೀರನ ಬೇರೆ ಬೇರೆ ಅನುಸರಣೀಯವಾದ ಗುಣಗಳನ್ನು

ಹೇಳಿರುವುದೂ ಅದಕ್ಕೆ ಹಿಂದೆ ಆ ವೀರನ ಆ ಗುಣಗಳ ವಿವರಣೆ ಇರುವುದೂ ಕವನಕ್ಕೆ ಒಂದು ಪ್ರಾಧಾನ್ಯವನ್ನು ಕೊಡುತ್ತದೆ. ಪೈಶಾಚ ವಿಕಟಗಳನ್ನು ಮಸೆಯುತ್ತಿರುವ ಎರಡು ಮತೀಯ ಗುಂಪಿನಿಂದ ಎಷ್ಟು ಮನೆ ನಾಶವಾಯಿತೋ, ಎಷ್ಟು ಊರು ನೊಂದಿತೋ, ಎಷ್ಟು ಕೊಲೆ ನೆರವೇರಿತೋ, ಹೇಳುವವರಾರು?

ದೇಗುಲ ಮಸೀದಿಗಳ
ನಿವರೊಡೆದು, ಅವರಗೆದು,
ಶತಮಾನಗಳ ಬೆಳಸು ಹಟವ ಸಾಧಿಸುತಿಹರು.

ಇದರ ಪರಿಣಾಮ ನಿಜವಾಗಿಯೂ ಒಳ್ಳೆಯದಲ್ಲ. "ತಲೆತಲಾಂತರಕಿನ್ನು ಮುಯ್ಯಬಿತ್ತುವರು". ಇಂತಹ ಜನಕ್ಕೆ ಕೈಮುಗಿದು, ಕಾಲ್ಗೆರಗಿ "ದಮ್ಮಯ್ಯ" ಎಂದು ಬೇಡಿ, ಉರಿಯುವ ಕಿಚ್ಚಿನಿಂದ ಜನರನ್ನು ಸೆಳೆದು, ರಕ್ತದ ಗಾಯಕ್ಕೆ ಔಷಧಿ ಹಾಕಿ, ಎರಡು ಗುಂಪಿಗೂ ಸಹಾಯ ಮಾಡಿದನು ಈ ವ್ಯಕ್ತಿ. ಅವನ ಕೆಲಸ, ಮಾತು, ಪ್ರತಿಯೊಂದೂ ಆದರ್ಶವಾಗಿತ್ತು.

—ಆದರೇನಾದರೇಂ
ರಕ್ಕಸರ ಗಡಣಗಳು
ನುಗ್ಗುತಿವೆ ನೂಕುತಿವೆ....

"ಕದಗಳಿಗೆ ಕಂದರನು ಮೊಳೆಯಿಟ್ಟು ಕೀಲಿಸುವ" ಈ ಜನಕ್ಕೆ ಇದಾವುದೂ ಬೇಕಿಲ್ಲ. ಮುಸ್ಲಿಮರು "ಸೈತಾನ ಹೋಹೋಗು" ಎಂದೂ, ಹಿಂದೂಗಳು "ದ್ರೋಹಿ ನೀಸಾರು" ಎಂದೂ ಬೈದು ಸ್ನೇಹದ ಬೆಳೆವಣಿಗೆಗೆ ಹವಣಿಸಿದವನನ್ನು ತುಳಿದು ಮೆಟ್ಟಿದರು.

"ದಿವ್ಯ ಕೆಳೆಬೆಳಕೊಂದನಾರಿಸಿದರು". ನಾಡ ಶಂಕರನನ್ನು ಬಲಿಗೊಟ್ಟರು. 'ಸತ್ತು ಬದುಕಿದ' ಈ ದೇಶಭಕ್ತನ 'ಅಮರ ನಡೆ'ಯನ್ನೂ ಅವನೊಲುಮೆಮೂರ್ತಿಯನ್ನೂ ಚಿತ್ರಿಸಿ ಕವಿಯು, "ಇಂಥ ವಿದ್ಯಾರ್ಥಿಗಳ ಕುಲ ಬೆಳೆಯಲಿ" ಎಂದು ಆಶಿಸುತ್ತಾರೆ. ಇದೊಂದು ಕರುಣರಸಪೂರ್ಣವಾದ ಕವನ.

'ಹಿನ್ನೋಟ'ದಲ್ಲಿ ನಮ್ಮ ಜನತೆಯ ಜಡತೆಯನ್ನೂ ಅಂಧಶ್ರದ್ಧೆ ಮೂಢನಂಬಿಕೆಗಳನ್ನೂ ನೆನೆದು, ಒಂದು ನಿಟ್ಟುಸಿರುಬಿಟ್ಟಿದ್ದಾರೆ ಕವಿ.

ಉಸಿರು ಹೊತ್ತರೆ ಬಂತೆ? ಬದುಕಿದ್ದರಾಯ್ತೆ?
ಕೋಟಿಕೋಟಿಗೆ ಸಂಖ್ಯೆ ಮರಿಯಿಟ್ಟರಾಯ್ತೆ?
ನಾಡ ನಲಿಸುವ ಜೀವ ಬಾಳನಗಿಸುವ ಜನವು
ಹುಟ್ಟಿ ಮೆರೆಯುವವರೆಗು ಬದುಕು ಬದುಕೆ?

"ಕ್ರೋಧ ಕೇತನ"ವು ರಕ್ತಕೇತನ. ಇದು ಶ್ರಮಜೀವಿಗಳ ಲಾಂಛನ. ಇದರಡಿಯಲ್ಲಿ ಅವರ ಆಶೋತ್ತರಗಳು ರೂಪುಗೊಂಡಿವೆ. ಇದರ ಆಶ್ರಯದಲ್ಲಿ ನಿಂತು ತಮ್ಮ ಕೋಟಲೆಯನ್ನು ಕೂಗಿ ಹೇಳಿ ಮುಂದೆ ನುಗ್ಗಲು ಅವರು ಸಿದ್ಧರಾಗಿದ್ದಾರೆ. ಅವರಿಗೆ ಹಿಂದಿನ ಬಾಳು ಸಾಕು. ಇನ್ನೂ ಅಂದಿನಂತೆಯೇ ಇರುವರೆಂಬ ನಂಬಿಕೆ ಇತರರಿಗೆ ಇಲ್ಲದಿರಲಿ.

ಅದುವೆ ಕೇಳಿರಿ ಪ್ರಳಯ ಘೋಷವು ಏರಿ ಕವಿಯುತೆ ಬರುವುದು
ಗಣದ ತಂತ್ರವು ಧನಿಯ ರಕ್ತದಿ ನಾಂದು ನಲಿವುದು ಎನ್ನುತೆ.

ಶ್ರಮಜೀವಿಗಳ ಮನಸ್ಸಿನ ರೋಷವೇ ಗೀತವಾದಂತಿವೆ ಈ ಕವನ.

ಎಮ್ಮಕೇತನ ಗಣನಿಕೇತನ
ಕಾಡುಗಿಚ್ಚೀ ನಡಗೆಯು
ಎಮ್ಮ ದನಿಗಳು ಸಿಡಿಲು, ಗುಡುಗು
ಉರಿಯ ಕಾರುವ ಮೋಡವು

ಬಂಡವಾಳದ ಬಾಳನ್ನು ಮುಗಿಸಿ, ರಕ್ತ ಸುರಿಸಿ, ಶ್ರಮದ ಶ್ರಮವನ್ನು ಹರಿಸುವುದು ಅವರ ಶಪಥ. ಮುಂದಿನ ಏಳ್ಗೆಗೆ, ಅದೋ, ಅವರ ನೋವಿನ ಬೇಗೆ ಬಾಯಿನಿಂದ ಹೇಗೆ ನಿಟ್ಟುಸಿರಿನಂತೆ ಹೊರಡುತ್ತದೆ ನೋಡಿ :

ಹಗಲು ಇರುಳು ದುಡಿದು ದುಡಿದು ಯಾರಿಗಾಹಾ ಬೆಳೆವೆವು?
ಮನೆಯ ಮಕ್ಕಳ ಚಳಿಯನೀಗದ ನೆಯಿಗೆ ಯಾರಿಗೆ ನೆಯ್ವೆವು?

ಇದೇನೂ ಒಂದು ದಿನದ ಬೇಗೆಯಲ್ಲ.

ತಂದೆ ಮಕ್ಕಳು ಸಾಹುಕಾರಗೆ
ಬಂದಿಯಾಗಿಯೆ ದುಡಿದೆವು.

ಒಡಲು ಬಾಗಿ, ಭುಜವು ಸೋತು, ಹೆಜ್ಜೆಯ ದಾರ್ಢ್ಯವು ಕೆಟ್ಟು "ಎದೆಯ ಗಂಡೇ ಹೀರಿತು". ಹೆರವರ ಲಾಭಕ್ಕಾಗಿ ಎಲ್ಲಿಯವರೆಗೆ ದುಡಿಯುವುದು? ನಾವು ಪಡುವ ಕಷ್ಟದಿಂದ ಯಾರಿಗೆ ಲಾಭ?

ಯಾರೊ ಉಳುವರು ಯಾರೊ ದಣಿವರು
ಯಾರೊ ಕೊಯ್ವರು ತಿಂಬರು

ಆದುದರಿಂದ "ಒಡಲ ಡೊಗರಿಂದ ಎದ್ದ" ಕೂಗು ಕರೆದು ಸಾಗರ ದಂಚನ್ನೇ ನುಂಗಲು ನುಗ್ಗುವ ಅಲೆಗಳಂತೆ ನೀಳವಾಗಿದೆ. ಶ್ರಮ ಜೀವಿಗಳನ್ನು ಆ ನುಡಿಯು ಕೂಗಿ ಕರೆಯುವ ಮಾದರಿ ನೋಡಿ.

ಅಸ್ಥಿಚರ್ಮದ ಭಾಗ್ಯವಂತರೆ ಬನ್ನಿ ಕಾಣಿರಿ, ನಲಿಯಿರಿ,
ನಿಮ್ಮ ಯೋಗದ ಮಸಣವೀಡಿಗೆ ಹೊಸನಿಕೇತನ ಬರುತಿದೆ.

ಕರುಣೆಯಿಲ್ಲದ ಧನಿಕರನ್ನು ಕಾಯುವುದು ಸಾಕು. ಕಟ್ಟು ಕಟ್ಟಳೆಗಳೂ ಧರ್ಮದೇವತೆಗಳೂ ಸಾಕು.

ಮಿಂಚು ಮಿಂಚಲಿ, ಸಿಡಿಲು ಸಿಡಿಯಲಿ
ಧನದ ಸೊಕ್ಕುಗಳುರಿಯಲಿ.

ಆದರೆ ಇದರಿಂದ ಎಲ್ಲವೂ ನಾಶವಾಗುವುದೆಂಬ ಭಾವನೆಯಿಲ್ಲ ಈ ಕವಿಗೆ, ಶ್ರಮಜೀವಿಗೆ. ಮನಮುರಿದರೂ, ಎದೆ ಒಡೆದರೂ ಅವು ಶಿವಗೆ ಮಾಲೆಗಳಾಗುತ್ತವೆ. ಅದರಿಂದ ಮುಂದೆ ದೇಶಕ್ಕೇ ಶುಭ, ಸೌಭಾಗ್ಯ.

ಬಂಗಾಳಿಯ ಯಾವುದೋ ಹಾಡೊಂದನ್ನು ಕೇಳಿ ಅದರ ಮೊರೆ ತಕ್ಕೆ ಮನಸೋತ ಕವಿ ತನ್ನ ಒಳಗೇ ಅನೇಕ ಸಲ,

ಗಣೇರ್ ನಿಶಾನ್ ರಕ್ತ ನಿಶಾನ್
ಗಣೇರ್ ನಿಶಾನ್ ರಕ್ತ ನಿಶಾನ್

ಎಂದು ಹೇಳಿಕೊಂಡ ಕವಿ, ಕನ್ನಡದಲ್ಲಿ ಈ ಭಾವನೆಯನ್ನು ಕ್ರೋಧ ಕೇತನವನ್ನಾಗಿ ಬೀಸಿದ್ದಾರೆ. ಈ ಹಾಡು ಸಾಮೂಹಿಕವಾಗಿ ಹಾಡಿ

ದಾಗ ಅದರ ಭೀಕರ ಪರಿಣಾಮ ನಮಗೆ ಹೆಚ್ಚು ಮನದಟ್ಟಾದೀತು. ಇದೊಂದು ರಾಷ್ಟ್ರದ ಜೀತದಾಳುಗಳ ಕ್ರೋಧಕವನ. ಇದನ್ನು ಎದುರಿಸಿ ಬಂಡವಾಳಶಾಹಿ ಬದುಕುವುದುಂಟೆ?

ಈ ಕವನಸಂಕಲನದಲ್ಲೆಲ್ಲಾ ಬಹುಶಃ 'ಏಕೊ' ಎಂಬ ಕವನ ವೊಂದೇ ಕವಿಯ ನಿರಾಶಾಭಾವನೆಯನ್ನು ವ್ಯಕ್ತಪಡಿಸುವುದು. ತಳ ವಿಲ್ಲದ ಪಾತಾಳದಲ್ಲಿ ಬದುಕು ಕೊಳೆಯುತ್ತಿರುವಾಗ, ಮನವು ನೆಲೆ ಯಿಲ್ಲದ ಆಕಾಶದಲ್ಲಿ ತೊಳಲುತ್ತಿರುವಾಗ, ಅಧಿಕಾರದ ಮದ ಕಣ್ಮನ ಗಳನ್ನು ತುಳಿಯುತ್ತಿರುವಾಗ ಇನ್ನೇನು ಯೋಚನೆ. "ಬದುಕೇತಕೊ ಬರಿ ನೋವಿಗೆ ಕಿಡುಸಾವಿಗೆ ಬಲಿಯು!" ಎಂದು ತಲೆತಗ್ಗಿಸಿ ನಿರ್ವೀರ್ಯ ವಾಗಿ ಕುಳಿತುಬಿಡುವುದೊಂದೇ ದಾರಿ. ಈ ಮನೋಮಾರ್ಗ ಕವಿಗೆ ಶಾಶ್ವತವಲ್ಲ. ಬಹು ಬೇಗ ಬೇರೆಕಡೆ ತಿರುಗಿ ದೇಶದ ದುಸ್ಥಿತಿಯನ್ನು ನೆನೆದು ನೆನೆದು ಮುಂದೆ ಏನೋ ಒಳ್ಳೆಯದಾಗಲೆಂದು ಹಾರೈಸುವ ಸ್ಥಿತಿಯನ್ನು ವ್ಯಕ್ತಪಡಿಸುತ್ತದೆ.

> ದಿಕ್ಕುಗಾಣದೆ ತೊಳಲುವೀ ದಿನ ಬಾಳ ದಾರಿಗಳಲ್ಲಿ
> ಕತ್ತಲಿಡುತಿಹ ಒತ್ತಿ ತರುಬುವ
> ಮುಗಿಲು ದೀವಿಗೆಯಪ್ಪುದೆ?

'ಮುಗಿಲದೀವಿಗೆ'ಯಲ್ಲಿ ಮುಗಿಲೇ ದೀವಿಗೆಯಾದೀತೆ?—ಆಗಲಿ, ಎಂಬ ಆಶಾಭಾವನೆ ಇದೆ.

'ಕಾಯಿಮೊಗ್ಗು' ತಾಯಿ ಭಾರತಿಯ ಹಿರಿಮೆಯನ್ನು ಹೊಗಳಿ ಹರಕೆಯನ್ನು ಬೇಡುವ ಕವನ. ಶಿಲ್ಪಿ, ಗಾಯಕ, ಚಿತ್ರಗಾರ, ಕವಿ– ಇವರೆಲ್ಲರ ಹಿರಿಯ ಕಾರ್ಯಗಳನ್ನು ಹೇಳುವ ಈ ಕವನದಲ್ಲಿ ಕಾಣುವ ಭಕ್ತಿ ಬಹು ನಿರ್ಮಲವಾದುದು.

"ಶತಂ ಜೀವೇಮಶರದಃ" ಎನ್ನುವುದು ಈ ಎಲ್ಲ ಕವನಗಳಿಗಿಂತ ಬೇರಾದುದು. ಯಜುರ್ವೇದದ ಆರಣ್ಯಕದಲ್ಲಿ ಬರುವ "ಪಶ್ಯೇಮಶರದ ಶ್ಶತಂ ಜೀವೇಮಶರದಶ್ಶತಂ" ಎಂದು ಮೊದಲಾಗುವ ಮಂತ್ರವನ್ನೇ ಕವಿ ಆರಿಸಿ ಅದರ ಅರ್ಥವನ್ನೂ, ಆ ಮಾತು ನುಡಿಯುವ ಮನಸ್ಸಿನ ಯೋಗ್ಯತೆಯನ್ನೂ ಮೊದಲು ಹಾಡಿದ್ದಾನೆ. ಪ್ರತಿನಿತ್ಯವೂ ಕರ್ಮಠ

ರಾದವರು ಮಾಧ್ಯಾಹ್ನಿಕ ಮಂತ್ರವನ್ನು ಹೇಳುವಾಗ ಹೇಳುವ ವಾಕ್ಯ ಇದು. ಈ ಮಾತನಾಡಿದ ಕಾಲದ ಸೊಗಸೇನು! ನೂರು ವರ್ಷ ಬಾಳೋಣ, ನೂರು ವರ್ಷ ಆನಂದಪಡಿಸೋಣ, ನೂರು ವರ್ಷ ಸಂತೋಷಪಡೋಣ, ನೂರು ಒಳ್ಳೆಯುದನ್ನು ಕೇಳೋಣ, ನೂರು ಒಳ್ಳೆಯ ಗೆಲವನ್ನು ಪಡೆಯೋಣ ಮುಂತಾಗಿ ವಿವರಣೆಯುಳ್ಳ ಈ ಮಾತುಗಳನ್ನು ಜನರು ಆಡುತ್ತಿದ್ದಾಗ

ಇಹವು ಸಗ್ಗಕೆ ನೇರ ಸೇತುಗಟ್ಟಿತು.

ದೇವತೆಗಳು ಭೂಮಿಗೆ ಬಂದು ಮಾನವರೊಡನೆ ಬದುಕಿದರು. ಪ್ರಕೃತಿ ಪುಲಕಗೊಂಡು ಕಳೆ ಮೆರೆಯಿತು, ಉಧ್ರ್ವರೇತದ ಸತ್ವ ಹೆಚ್ಚಿತು. ಜಡ ಚೇತನಗೊಂಡಿತು. ಆಗ,

ಉಸಿರಿಡುದು ಸೌಮನಸ; ನುಡಿ ದಿವ್ಯ ಸಾಹಿತ್ಯ
ನಡೆಯು ಶಾಂತಿಯ ಬಿತ್ತು; ಗೈಮೆಯಮೃತ

ವಾಗಿತ್ತು. ಆದರೆ ಇದು ಮುಂದುವರೆಯಲಿಲ್ಲ. ಯಾರೋ ಪಾತಕರು, ಮಾರಕರು ಇದಕ್ಕೆ ಘಾತಕರಾದರು. ಮನಸ್ಸು ವ್ಯತ್ಯಾಸವಾಗಿ ಎಲ್ಲವೂ ಶೂನ್ಯವಾಗಿ ಪರಿಣಮಿಸಿತು. 'ಮಸಣನುಡಿ' ಒಂದೇ ಸತ್ಯವಾಯಿತು.

ಮೊದಲ ಸ್ಥಿತಿ ಪುನಃ ಮರಳಬೇಕಾದರೆ ಯಾರೋ ಮಿತ್ರರು ಹುಟ್ಟಬೇಕು. ನಾಡ ಕಳೆ ಹಿಂತಿರುಗಿ, ಸಂಭ್ರಮ ಮೂಡಿ, ಸಂಕಲೆಯು ಕಳಚಿ ಭಾರತವು ಜಗತ್ತಿಗೆ ಭವ್ಯವಾಗಬೇಕು. ಈ ದೃಷ್ಟಿಯೊಂದೇ ನಮಗೆ ಗತಿ. ಹಾಗಿದ್ದರೆ

ದಶರಥ ಹರಿಶ್ಚಂದ್ರ, ದುಷ್ಯಂತ ಕಲಿಭೀಮ
ನೆರವು ಬೇಡುವ ಸುರರ ಭರಿಸಿ ಪೊರೆದಾರು
ಅರ್ಜುನನು ಸ್ವರ್ಗಕ್ಕೆ ಮೆಟ್ಟಲಿಟ್ಟೇರುತಿರೆ
ನಚಿಕೇತ ಯಮನಿಂದ ತಿಳಿವ ತಂದಾನು.

ಅದಿಲ್ಲದಿದ್ದರೆ ನಮ್ಮ ಬಾಳು ನಾಯಿಬಾಳಾದೀತು ಎನ್ನುವ ಕವಿ ನಮಗೆ ಭವ್ಯದರ್ಶನವೊಂದನ್ನು ನೀಡಿದ್ದಾರೆ. ನಾಡಿಗೆ, ನರರಿಗೆ ಈ

ದರ್ಶನ ಸತ್ಯದರ್ಶನವಾದರೆ ನಾಡೂ ನರರೂ ಕೃತಾರ್ಥರು—ಮೇಲು ಮಟ್ಟದ ಈ ಕವನ ಕವಿಗೇ ಹಿರಿಮೆಯನ್ನು ತರುವಂತಹುದು.

* * * *

ಶ್ರೀ ವಿ.ಸೀ. ಅವರ ಕವನಗಳ ಪರಿಶೀಲನೆಯಲ್ಲಿ ಕವನದ ಸೊಗಸನ್ನು ಕಂಡ ನಮಗೆ ಅವರ ಭಾಷೆಯ ಪ್ರಯೋಗದ ರೀತಿ ಮರೆತು ಹೋಗಬಾರದು. ಅರುಳು, ಹಿಂಗಾರ, ಮಿದುಗದ್ದುಗೆ, ಕಿರುನೋಟಿ, ಕುರುಚಪಲ, ಬೆಳಸುಹಟ, ಬಂಜೆಬಿಂಕಿ, ಅಮರನಡೆ, ಜಡೆಚಾಟಿ, ದಿಟ್ಟವೆಂಕಿ ಮುಂತಾದ ನೂತನ ಪದರಚನಾಕ್ರಮದಲ್ಲಿಯೂ 'ಮೊಗಗಳು ಕೆದರಿವೆ', 'ಅರಗಾಲಿನ ಅರಗಾಲಿಯು' ಮುಂತಾದ ಪದಗುಂಪನದಲ್ಲಿಯೂ ಕವಿಯ ಸಾಮರ್ಥ್ಯ ಹೊಳೆಯುತ್ತದೆ. ಕೆಲವು ವೇಳೆ ಅಸಾಧುವೆಂದು ಕಾಣುವ ಪದಗಳೂ ಇವರ ಕಾವ್ಯದಲ್ಲಿ ನುಗ್ಗದೆ ಇಲ್ಲ. 'ಕಿವಿಚು', 'ಬೆಗ್ಗಾಡು', 'ಎಲ್ಲಾರು', 'ಕುಯುತಿದೆ', 'ಭರಸೆ', 'ಶರಣಾದೆಂದು', 'ಬವಳಲತೆ'.

ಶ್ರೀ ವಿ.ಸೀ. ಅವರ ಕಾವ್ಯವನ್ನು ಪೂರ್ಣವಾಗಿ ಸವಿಯಬೇಕೆನ್ನುವವರಿಗೆ ಅವರು ಉಪಯೋಗಿಸಿರುವ ನೂತನ ಛಂದಸ್ಸುಗಳೂ, ಪದಪ್ರಯೋಗದ ಹಿಂದೆ ಇರುವ ದೃಷ್ಟಿಯೂ, ಉಪಮಾನಾದಿಗಳನ್ನು ಬೇಕೆಂದೇ ಹೆಚ್ಚಾಗಿ ಪ್ರಯೋಗಿಸದಿರುವುದೂ ಮೊದಲು ತಿಳಿದಿರಬೇಕು. ಅದನ್ನು ಬೇರೆಯೆಡೆ ವಿಮರ್ಶಿಸಬಹುದು. ಸದ್ಯಕ್ಕೆ ಅವರ ಕಾವ್ಯದಲ್ಲಿನ "ಮನೋವಿಶುದ್ಧಿ ಬಲವೀರ್ಯಂ ಬುದ್ಧಿಸಾಫಲ್ಯ"ಗಳನ್ನು ಕವಿಯಂತೆ ನಾವು ಅನುಭವಿಸಿದರೆ ಸಾಕು. ಈ ಕಾವ್ಯಪರಿಶೀಲನೆಯನ್ನು ಶ್ರೀ ವಿ.ಸೀ. ಅವರ ಒಂದು ಮಾತಿನಿಂದಲೇ ಕೊನೆಗಾಣಿಸಬಹುದು.

"ಯಾವ ಪ್ರಕರಣದಲ್ಲಿ ಆಗಲಿ ಮುನ್ನಡೆ ಹೊರಪ್ರಪಂಚಕ್ಕೆ ಎಷ್ಟು ಸೇರಿದುದೋ ಅಷ್ಟೇ, ಅಂತಃಪ್ರವೃತ್ತಿಗಳ ಪರಿಶುದ್ಧಿಗೂ ಸೇರಿದುದು, ಮನುಷ್ಯನ ಮೂಲಸತ್ವಕ್ಕೆ ಸಂಬಂಧಿಸಿದುದು ಎಂಬುದನ್ನು ಬಲ್ಲವರು ಒಪ್ಪುತ್ತಾರೆ. ಅಲ್ಲಿ ಸಹಜತೆ, ಆರ್ದ್ರತೆ ಶುಚಿಯಾಸೆ, ಆ ಬಗ್ಗೆ ಪಕ್ಷಪಾತ, ಶ್ರದ್ಧೆ ಉಂಟಾಗುವುದಾದರೆ ಬಾಳಿನ ಎಲ್ಲ ಪ್ರಸಂಗಗಳಲ್ಲಿಯೂ ಅದು ಪ್ರಬಲಿಸುವುದು." ಈ ಮಾತು ಶ್ರೀ ವಿ.ಸೀ. ಅವರ

ಈ ಕವನಗಳಿಂದಲೂ ಸಾಧಿತವಾಗುತ್ತದೆ. ವಿಚಾರ ಭಾರದಿಂದ ಕೂಡಿದ್ದರೂ ಈ ಸಂಕಲನದ ಕವನಗಳಲ್ಲಿ ಕವಿಯ ಇತರ ಎಲ್ಲ ಶಕ್ತಿಗಳೂ ಹೊಂದಿಕೊಂಡಿರುವುದರಿಂದ ಈ ಸಂಕಲನವನ್ನು ಕವಿಯ ಪ್ರತಿಭೆಗೆ ಅಳತೆಗೋಲಾಗಿ ನಾವಿಟ್ಟುಕೊಳ್ಳಬಹುದು.

೪

# 'ಮಾಸ್ತಿ'ಯವರ ಒಂದು ನಾಟಕ—ಯಶೋಧರಾ

## ಕವಿ

'ಶ್ರೀನಿವಾಸ' ಎಂಬ ಕಾವ್ಯನಾಮದಿಂದ ಸುಮಾರು ನಲವತ್ತು ವರುಷಗಳಿಂದ ಕನ್ನಡದಲ್ಲಿ ಗ್ರಂಥರಚನೆ ಮಾಡುತ್ತಾ ಬಂದಿದ್ದಾರೆ, ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರು. ಒಮ್ಮೆ ಶ್ರೀ ಕೆ. ವಿ. ರಾಘವಾಚಾರ್ಯರು ಮಾಸ್ತಿಯವರ ಮಾತುಗಾರಿಕೆಯ ವಿಚಾರದಲ್ಲಿ ಮಾತನಾಡುತ್ತಾ ಹೇಳಿದರು: "ಮಾಸ್ತಿಯವರು ಮೂರುನಾಮದವರು! ಒಂದು ನಾಮ ವೆಂಕಟೇಶ ಅಯ್ಯಂಗಾರ್ ಎಂದು. ಎರಡನೆಯದು 'ಶ್ರೀನಿವಾಸ'ರೆಂದು. ಮೂರನೆಯದು 'ಮುತ್ತಣ್ಣ' ಎಂದು. (ಇದು ಮನೆಯಲ್ಲಿ ಮಕ್ಕಳು ಅವರನ್ನು ಕರೆಯುವ ನಾಮ)". ಕೊನೆಯ ನಾಮ ಮಾಸ್ತಿಯವರ ಸಮೀಪದವರಿಗೆ ಸ್ನೇಹಿತರಿಗೆ ಗೊತ್ತು. ಮಿಕ್ಕೆರಡು ಅಖಿಲ ಕರ್ನಾಟಕದಲ್ಲಿ ಮನೆಮಾತಾಗಿವೆ.

ಶ್ರೀಯುತರು ಕನ್ನಡದಲ್ಲಿ ಸಣ್ಣ ಕತೆ, ಕಾದಂಬರಿ, ಸಾಹಿತ್ಯ ವಿಮರ್ಶೆ, ಕವನ, ನಾಟಕಗಳು ಮುಂತಾಗಿ ಎಲ್ಲ ವಿಧದ ಬರಹಗಳನ್ನೂ ಬರೆದು ಕನ್ನಡದ ಬೊಕ್ಕಸವನ್ನು ತುಂಬಿದ್ದಾರೆ. ಇವರ ನಾಟಕಗಳ ರಚನೆಯನ್ನು ಕುರಿತು ಅದರಲ್ಲಿಯೂ 'ಯಶೋಧರಾ' ನಾಟಕವನ್ನು ಕುರಿತು ಪರಿಚಯ ಮಾಡಿಕೊಡುವುದು ಇಲ್ಲಿಯ ಕೆಲಸ.

## ಮಾಸ್ತಿಯವರ ನಾಟಕಗಳು

ಮಾಸ್ತಿಯವರು ಇಲ್ಲಿಯವರೆಗೆ ಹತ್ತು ನಾಟಕಗಳನ್ನು ರಚಿಸಿದ್ದಾರೆ. 'ತಾಳಿಕೋಟೆ', 'ಶಿವಛತ್ರಪತಿ', 'ಕಾಕನಕೋಟೆ', ಇವು ಐತಿಹಾಸಿಕ ನಾಟಕಗಳು. 'ಶಾಂತಾ', 'ಸಾವಿತ್ರಿ', 'ಉಷಾ', ಇವು

ಪ್ರಾಚೀನ ಕತೆಗಳನ್ನು ಅನುಸರಿಸಿ ಬರೆದುವು. 'ಯಶೋಧರಾ', 'ತಿರುಪಾಣಿ', ಇವು ಮತೀಯವಾಗಿದ್ದು ಹಿರಿಯರ ಸಾಧನೆಗಳನ್ನು ವಿವರಿಸುತ್ತವೆ. 'ಮಂಜುಳಾ' ಎಂಬುದು ಮಾತ್ರ ಸಾಮಾಜಿಕ ವಿಚಾರವನ್ನು ಕುರಿತು ರಚಿತವಾಗಿದೆ. ರವೀಂದ್ರನಾಥ ಟಾಗೂರರ 'ಚಿತ್ರಾಂಗದಾ' ನಾಟಕವನ್ನು ಬಂಗಾಳಿಯಿಂದ ಅಲ್ಲಿದ್ದಂತೆ (ಇಂಗ್ಲೀಷಿನ ಅನುವಾದಕ್ಕೆ ಗಮನ ಕೊಡದೆ) ಕನ್ನಡಿಸಿದ್ದಾರೆ. 'ಅನಾರ್ಕಲಿ' ಎಂಬ ಹನ್ನೊಂದನೆಯ ನಾಟಕವನ್ನು ಬರೆದಿರುವರಾದರೂ, ಅದನ್ನು ಇನ್ನೂ ಪ್ರಕಟಿಸಿಲ್ಲ. ನಾವು 'ಐತಿಹಾಸಿಕ' 'ಸಾಮಾಜಿಕ' 'ಪ್ರಾಚೀನ ಕಥಾ ಪ್ರೇರಿತ', 'ಮತೀಯ' ಎಂದು ಬೇರೆ ಬೇರೆಯ ಗುಂಪುಗಳಾಗಿ ಈ ನಾಟಕಗಳನ್ನು ವಿಂಗಡಿಸಿದರೂ ಅವೆಲ್ಲಕ್ಕೂ ಮೂಲವಾದ ಕವಿದೃಷ್ಟಿ ಒಂದೇ ಆಗಿದೆ.

ಪ್ರಪಂಚದಲ್ಲಿ ಸತ್ಯ ಸೌಂದರ್ಯ ಪ್ರೇಮಗಳಿಗೂ ಅಸತ್ಯ ಅಸುಂದರ ದ್ವೇಷಗಳಿಗೂ ಘರ್ಷಣೆಯುಂಟಾದರೆ ಸತ್ಯ ಸೌಂದರ್ಯ ಪ್ರೇಮಗಳೇ ಎಂದೂ ಗೆದ್ದು ನಿಂತಾವೆಂಬ ಅಚಲವಾದ ಧರ್ಮದೃಷ್ಟಿ ಇದು. ಇವರ ನಾಟಕಗಳನ್ನು ಇದೇ ದೃಷ್ಟಿಯಿಂದ ಪರಿಶೀಲಿಸಿದರೆ ಅವುಗಳ ಹಿರಿಮೆ ಗೊತ್ತಾಗುತ್ತದೆ. 'ಮಂಜುಳಾ' ನಾಟಕದಲ್ಲಿ ಬರುವ ಎರಡನೆಯ ಮದುವೆಯ ಚರ್ಚೆಯಾಗಲೀ, 'ತಾಳಿಕೋಟೆ'ಯಲ್ಲಿ ಬರುವ ರಾಮರಾಯನ ದುರಂತ ಚಿತ್ರವಾಗಲೀ, 'ಶಾಂತಾ', 'ಸಾವಿತ್ರಿ'ಗಳಲ್ಲಿ ಕಾಣುವ ಪುರಾಣ ಕತೆಗಳ ಪುನರ್ನಿರ್ಮಾಣವಾಗಲೀ, 'ತಿರುಪಾಣಿ'ಯಲ್ಲಿ ಬರುವ ಆಧ್ಯಾತ್ಮಿಕತೆಯಾಗಲೀ ಎಲ್ಲಿಯೂ ಅಸಹಜವಾಗಿಲ್ಲ. ಈ ನಾಟಕಗಳ ಶೈಲಿಯಲ್ಲಿಯೂ ಶ್ರೀನಿವಾಸರು ಯಾವ ಹೊಸ ಮೋಡಿಯನ್ನೂ ರಚಿಸಲು ಹೋಗಿಲ್ಲ. ಅವುಗಳ ಮೋಡಿ ಅಲ್ಲಿರುವ ನಿರಾಭರಣ ಸೌಂದರ್ಯದಲ್ಲಿದೆ.

ಈ ನಾಟಕಗಳಲ್ಲಿ ಬರುವ ಪಾತ್ರಗಳ ಶೀಲ ಸ್ವಭಾವಗಳನ್ನು ನೋಡಿದಾಗಲೂ ಒಂದು ದೃಷ್ಟಿ ನಮಗೆ ಕಾಣುತ್ತದೆ. ಒಂದೊಂದು ವ್ಯಕ್ತಿಯ ಸ್ವಭಾವಗಳೂ ಬೇರೆ ಬೇರೆಯಾಗಿ ಕಾಣಬಹುದು. ಆದರೂ ಹಿರಿಯ ವ್ಯಕ್ತಿಗಳೆಲ್ಲ ಬಹುಶಃ ಯಾವುದೋ ಒಂದು ದೊಡ್ಡ ತತ್ವದ

ಸಂಕೇತಗಳಂತೆ ಇರುತ್ತಾರೆ. ಶಾಂತಾ, ಸಾವಿತ್ರಿ, ತಿರುಪಾಣಿ, ಯಶೋಧರಾ, ಇವರು ಈ ರೀತಿಯ ಪಾತ್ರಗಳು. ಈ ತತ್ವಮೂಲದಿಂದ ಆ ಪಾತ್ರಗಳ ಹಿರಿಮೆ ಹೆಚ್ಚಿದೆ.

ಸ್ತ್ರೀಪಾತ್ರಗಳು ಶ್ರೀನಿವಾಸರ ಕನಿಕರದ ಸೃಷ್ಟಿಗಳು. ಇವುಗಳಲ್ಲೆಲ್ಲಾ ಸ್ತ್ರೀತ್ವದ ಮುಖ್ಯ ಗುಣಗಳಾದ ಪ್ರೇಮ, ತ್ಯಾಗ, ಸೌಂದರ್ಯಗಳು ಮೆರೆಯುತ್ತವೆ. ಲೋಕಕಲ್ಯಾಣವು ಇಂತಹ ಗುಣಗಳನ್ನು ಹೇಗೆ ಅವಲಂಬಿಸಿದೆ ಎನ್ನುವುದನ್ನೂ ಪುರುಷನ ಸಜ್ಜನತೆಗೆ, ಸನ್ಮಾರ್ಗಾವಲಂಬನಕ್ಕೆ ಸ್ತ್ರೀಪ್ರೇರಣೆ ಹೇಗೆ ಉದ್ಬೋಧಕವೆಂಬುದನ್ನೂ ಈ ಕೃತಿಗಳಿಂದ ನಾವು ಅರಿಯಬಹುದು.

ಅವರ ನಾಟಕಗಳಲ್ಲಿ 'ಯಶೋಧರಾ' ನಾಟಕವು ಬಹು ಮುಖ್ಯವಾದುದು.

## ಯಶೋಧರಾ

ಇತಿಹಾಸದಲ್ಲಿ ಬರುವ ಒಂದು ವಸ್ತುವನ್ನು ಕಲ್ಪನೆಯ ಚಾಣದಲ್ಲಿ ಕಂಡರಿಸಿ ರಚಿಸಿರುವ ಕಲಾಕೃತಿ ಈ 'ಯಶೋಧರಾ'. ಸಿದ್ಧಾರ್ಥನು ಅನೇಕ ದಿನಗಳನ್ನು ಬಿಟ್ಟು ಹುಟ್ಟಿದ ಊರಾದ ಕಪಿಲವಸ್ತುವಿಗೆ ಹಿಂದಿರುಗಿದನಂತೆ. ಆಗ ಊರಿಗೆ ಊರೇ ಹೋಗಿ ಅವನ ದರ್ಶನ ಪಡೆದು ಉಪದೇಶದ ಅಮೃತವನ್ನು ಸವಿಯಿತು. ಪೂರ್ವಾಶ್ರಮದ ಪತ್ನಿಯಾದ 'ಯಶೋಧರೆ' ಮಾತ್ರ ಹೋಗಲಿಲ್ಲ. ತನ್ನನ್ನು ಅವರು ಒಂದು ವಸ್ತುವೆಂದು ಎಣಿಸುವುದಾದರೆ ತಾನಿರುವ ಕಡೆಗೇ ಅವರು ಬರುತ್ತಾರೆ ಎಂದು ಹೇಳಿದಳು. ಆ ಮಾತನ್ನು ಕೇಳಿ ಬುದ್ಧನು ಯಶೋಧರೆಯ ಅಂತಃಪುರಕ್ಕೆ ಹೋಗಿ ಸಮಾಧಾನ ಮಾಡಿದನು. ಈ ಕತೆಯನ್ನು ನಾಟಕವಾಗಿ ಮಾರ್ಪಡಿಸಿರುವುದೇ 'ಯಶೋಧರಾ'. ಬಹು ದಿನಗಳಿಂದ ಮನಸ್ಸಿನಲ್ಲಿದ್ದ ಬುದ್ಧನ ಜೀವನದ ವಿಷಯಗಳನ್ನು ಒಂದು ಸಣ್ಣ ಕತೆಯಲ್ಲಿ ಮತ್ತು ಈ ನಾಟಕದಲ್ಲಿ ಸೇರಿಸಿದ್ದೇನೆ—ಎಂದು ಮಾಸ್ತಿಯವರೇ ಹೇಳಿದ್ದಾರೆ.

'ಯಶೋಧರಾ' ಸರಳ ರಗಳೆಯಲ್ಲಿ ರಚಿತವಾಗಿರುವ ಕೃತಿ. ಕನ್ನಡದ ಪದ್ಯನಾಟಕಗಳಲ್ಲಿ ಇದು ಮುಖ್ಯವಾದ ಸ್ಥಾನವನ್ನು ಪಡೆದಿದೆ. ಇದರಲ್ಲಿ

ಬುದ್ಧನೆಂಬನ್ವರ್ಥನಾಮವನು ಕ್ಷಿತಿಯು,
ರಕ್ಷೆಯಾಗಿರಲಿರಿಸಿ, ದಿವಕಂದು ಮರೆದ,
ಗುರುವರನ ಚಾರಿತ್ರದೊಂದು ಸಂಗತಿಯ
ನಟಿಸುವೆವು ನಿಮ್ಮೆದುರು ಶಂಕೆಯನು ತೊರೆದು,
ಆರ್ಯ ಸಂಸ್ಕೃತಿಯು ಬದ್ಧಪ್ರೇಮಗಳಿಗೆ,
ಬುದ್ಧನನು ಕುರಿತಿಹುದೆ ಗುಣ ದೃಶ್ಯದೊಳಗೆ

ಎಂಬುದೇ ದೃಷ್ಟಿ. ಆದರೆ ಪಾತ್ರಪ್ರಾಧಾನ್ಯ ದೊರೆಯುವುದು ಬುದ್ಧನಿಗಲ್ಲ, ಯಶೋಧರೆಗೆ.

ಅವನ ಕಾಂತಾಮಣಿ ಯಶೋಧರಾದೇವಿ
ಬಂದಿರುಳು ಭೀಕರದ ಕನಸೊಂದ ಕಂಡು
ಮುಂದೇ ಇನ್ನೇನಹುದೊ ಎಂದೆನುತ ಜೀವ
ನಡುಗಿರಲು ಬಹನೋವ ಮುನ್ನವೇ ಉಂಡು,
ಸುಖದ ರಸ ಬತ್ತಿರುವ ಬಾಳುವೆಯ ತೊರೆಯ
ಬರಿಮರಳ ನೋಡಿ ಬೇಯುತಲಿರುವ ಪರಿಯ

ನಾವಿಲ್ಲಿ ನೋಡುತ್ತೇವೆ.

ನಾಟಕದ ಕಥಾವಸ್ತುವೇನೋ ಸ್ವಲ್ಪವೇ. ಒಂದು ಕನಸಿನ ಪರಿಣಾಮವಾಗಿ, ಮಗನಾದ ರಾಹುಲನು ಎಲ್ಲಿ ಸಿದ್ಧಾರ್ಥನ ಜೀವನವನ್ನು ಅನುಸರಿಸಿಬಿಡುವನೋ ಎಂದು ಯಶೋಧರೆಯು ಚಿಂತಿಸಿ ನೋಯುತ್ತಿರುವಾಗ ಆ ಮಗನೇ ಬಂದು ಬುದ್ಧನನ್ನು ಕರೆತರುವುದಕ್ಕೆ ತಾನೇ ಹೋಗುತ್ತೇನೆ ಎನ್ನುತ್ತಾನೆ. ಅವನ ಆಹ್ವಾನದ ಮೇಲೆಯೇ ಬುದ್ಧನು ಊರಿಗೆ ಹಿಂದಿರುಗುತ್ತಾನೆ. ಆಗ ಪತಿಯನ್ನು ನೋಡಬಹುದೋ ಬೇಡವೋ ಎಂದು ಯಶೋಧರೆ ಸಂಶಯದಲ್ಲಿ ತೊಳಲಾಡುತ್ತಿರುವಾಗ ಆನಂದನು ಬರುತ್ತಾನೆ. ಅವನ ಮೂಲಕ ಬುದ್ಧನಿಗೆ ಈ ವಿಚಾರವು ತಿಳಿದು ಯಶೋಧರೆಯ ಅಂತಃಪುರಕ್ಕೇ ಬುದ್ಧನು ಬರುತ್ತಾನೆ. ಅಲ್ಲಿ ಹತ್ತು ವರುಷಗಳಿಂದ ತನ್ನ ಮನಸ್ಸು ಪಡೆದಿದ್ದ ಸಂಶಯ

ಗಳನ್ನೆಲ್ಲಾ ಯಶೋಧರೆಯು ಹೇಳಿ ಅವುಗಳಿಗೆ ಉತ್ತರಗಳನ್ನು ಪಡೆಯುತ್ತಾಳೆ. ತನ್ನಂತೆಯೇ ನೂರಾರು ಜನ ನೋಯುತ್ತಿರುವಾಗ ಈ ಮತದಿಂದ ಸುಖ ಪ್ರಚಾರವಾಗುವುದು, ಲೋಕಕಲ್ಯಾಣ ಸಾಧಿತ ವಾಗುವುದು ಎನ್ನುವುದನ್ನು ನಂಬುವುದು ಹೇಗೆ? ಈ ಧರ್ಮಸೂಕ್ಷ್ಮ ವನ್ನು ಅವಳು ಅರಿಯಲು ಕುತೂಹಲವನ್ನು ಪಡೆದಿದ್ದಾಳೆ. ಅವಳ ಪ್ರಶ್ನೆಗಳನ್ನು ಸಾವಧಾನವಾಗಿ ಲಾಲಿಸಿ ಅವುಗಳಿಗೆ ಉತ್ತರಗಳನ್ನು ಕೊಡುತ್ತಾನೆ ಬುದ್ಧ. ಕೊನೆಗೆ ಯಶೋಧರೆಯ ಧರ್ಮದೃಷ್ಟಿಗೆ ಸೋತು ಸ್ತ್ರೀಯರಿಗೆ ದೀಕ್ಷೆ ಕೊಡುವುದಕ್ಕೂ ಒಪ್ಪಿಬಿಡುತ್ತಾನೆ.

ಕಥಾವಸ್ತು ಇಷ್ಟು ಸಾಮಾನ್ಯವಾಗಿ ಕಂಡರೂ ಅದರಿಂದ ರಚಿತ ವಾಗಿರುವ ನಾಟಕದ ಸ್ವಾರಸ್ಯ ಅಗ್ಗಳವಾದುದು. ಇಲ್ಲಿ ಬರುವ ಪಾತ್ರಗಳು, ಬುದ್ಧ, ಯಶೋಧರಾ, ಆನಂದ, ಅಂಬಾಪಾಲಿ, ಅಂಬಿಕೆ ಯರು, ಎಲ್ಲರೂ ಹಿರಿಮೆಯನ್ನು ಸಾಧಿಸಿರುವರು. ಒಬ್ಬೊಬ್ಬರು ಒಂದೊಂದು ಗುಣಕ್ಕೆ ಆದರ್ಶವಾದಂತೆ ಚಿತ್ರಿತವಾಗಿದ್ದಾರೆ. ನಾಟಕದ ಆವರಣದಲ್ಲಿಯೇ ಒಂದು ಮೋಹಕತೆಯಿದೆ. ಒಂದು ಕ್ಷಣವೂ ಬೇಸರ ವನ್ನು ತರದ ಈ ಪದ್ಯನಾಟಕದ ವಿಶಿಷ್ಟತೆಯನ್ನು ಪಾತ್ರ ನಿರೂಪಣೆ, ಬುದ್ಧನ ಉಪದೇಶಸಾರ ವಿವರಣೆ, ಶೈಲಿ ಮುಂತಾದ ದೃಷ್ಟಿಗಳಿಂದ ಪರಿಶೀಲಿಸಬಹುದು.

## ವಸ್ತುವಿನ್ಯಾಸ

'ಯಶೋಧರಾ' ಆರು ಸ್ಥಾನಗಳ ನಾಟಕ. ಭೀಕರದ ಕನಸನ್ನು ಕಂಡು ಸುಖದ ರಸ ಬತ್ತಿ ಉದ್ವಿಗ್ನಮನಸ್ಕಳಾದ ಯಶೋಧರೆಯ ತೊಳಲಿಕೆ, ಬುದ್ಧನ ಶಿಷ್ಯರ ಗುರುಭಕ್ತಿ, ಬುದ್ಧನ ಉಪದೇಶಮಾರ್ಗ, ಬ್ರಾಹ್ಮಣ ವಟುಗಳೂ ಹಿರಿಯರೂ ಹೊಸಮತವನ್ನು ಕಾಣುವ ದೃಷ್ಟಿ, ಬುದ್ಧನನ್ನು ಕಾಣುವುದಕ್ಕೆ ಹೋಗದಿರುವುದರಲ್ಲಿ ತೋರುವ ಯಶೋಧರೆಯ ಆತ್ಮಗೌರವ, ಪತ್ನಿಗೆ ಪತಿಯಿಂದ ದೀಕ್ಷಾದಾನ, ಇದು ಈ ಸ್ಥಾನಗಳಲ್ಲಿ ಕಾಣುವ ವಸ್ತುವಿನ್ಯಾಸ.

ಪ್ರಥಮಸ್ಥಾನವು ದಾಸಿ ಒಡತಿಯರ ಸಂಭಾಷಣೆಯಲ್ಲಿ ಒಂದು ದುಃಖ ಪ್ರಪಂಚವನ್ನೇ ಸೃಷ್ಟಿಸಿದೆ. ಯಶೋಧರೆಯು ಕಂಡ

ಕನಸಷ್ಟೇ ಆದರೆ ಅದರಲ್ಲಿ ಅಂಥ ಭೀಕರತೆ ಕಾಣುವುದಿಲ್ಲ. ಆದರೆ ಅವಳಿಗೂ ಅವಳ ಜೀವನಕ್ಕೂ ಅನ್ವಯಿಸುವಂತೆ ಹಿಂದೆ ಇಂಥದೇ ಒಂದು ಕನಸು ಅವಳಿಗೆ ಬಿದ್ದಿದ್ದಿತು. ಅದರ ಪರಿಣಾಮವಾಗಿ ಈ ಕನಸಿನ ವಿವರಗಳಿಗೆ ಪ್ರತಿಯೊಂದಕ್ಕೂ ಅರ್ಥವುಂಟಾಗಿ ಅದು ಭೀಕರವಾಗುತ್ತದೆ. ಮೊದಲನೆಯ ಸಲ ಇಂಥ ಕನಸಾಗಿದ್ದಾಗ ಅವಳು ಕಣ್ಬಿಟ್ಟು ನೋಡಿದ್ದಳು. ಸಿದ್ಧಾರ್ಥ ಬಳಿಯಿರಲಿಲ್ಲ. ಅವನು ತಪಸ್ಸಿಗೆಂದು ಕಾಡಿಗೆ ಹೊರಟುಹೋಗಿದ್ದನು. ಆ ದುಃಖದಲ್ಲಿಯೇ ಅವಳು ಹತ್ತು ವರುಷಗಳನ್ನು ಕಳೆದಿದ್ದಳು. ಆ ಹತ್ತು ವರುಷಗಳೂ ರಾಹುಲನು ಅವಳ ಕಣ್ಣಬೆಳಕಾಗಿ, ಮನಸ್ಸಿಗೆ ಸೊಬಗಾಗಿ, ದುಃಖಕ್ಕೆ ಸಮಾಧಾನವಾಗಿ, ಬಳಿಯಲ್ಲಿಯೇ ಇದ್ದನು. ತನ್ನ ಬಾಳು ತನ್ನದಲ್ಲ, ಬದುಕುವಳು ತಾನಲ್ಲ ಎಂದು ಜೀವಿಸುತ್ತಿದ್ದವಳಿಗೆ ಈ ಹೊಸ ಕನಸು ಹಳೆಯ ನೋವನ್ನು ಹೊಸದಾಗಿ ಮಾಡಿತು.

ಉಪವನದ ಅಶ್ವತ್ಥ ನೆಲೆಯ ಕಟ್ಟೆಯು ಕೆದರಿ
ಬೇರೂರಿ ಬೆಳೆದಂತೆ, ನನ್ನ ಜೀವನ ಸೀಳಿ
ಬೆಳೆಯುತಿರುವುದು.

ಇಂಥ ಕನಸಿನ ರೀತಿಯೇನು? ಒಂದು ರಾತ್ರಿ ಉದ್ಯಾನದಲ್ಲಿ ನಡೆಯುತ್ತಾ ದೊಡ್ಡ ಆಲವೊಂದರ ಕೆಳಗೆ ನಿಂತುಕೊಂಡಹಾಗಾಯಿತು. ಮರದ ಆಶ್ರಯದಲ್ಲಿದ್ದಾಗ ದೊಡ್ಡ ಮರವು ಅವಳ ಬಳಿ ಒಂದು ಬಿಳಲನ್ನು ಬಿಟ್ಟು ದೂರ ಸರಿಯಿತು. ಬಿಳಲಿನ ಕುಡಿತಳಿರನ್ನು ನೋಡಿ ಮೈಸವರಿ ಆನಂದಿಸುತ್ತಿದ್ದಾಗ, ದೂರದ ಮರ ಈ ಎಳೆಯ ಮರಕ್ಕೆ ಸನ್ನೆ ಮಾಡಿ ಕರೆಯಿತು. ಹಿಂದಿರುಗಿದ ವೇಳೆಗೆ ಎಳೆಯ ಮರವೂ ಆ ಕಡೆಗೆ ಹೋಗುತ್ತಿರುವುದು ಕಂಡಿತು. ಯಶೋಧರೆಯು ಒಡನೆಯೇ ಮಗನ ಹಾಸಿಗೆಯ ಬಳಿ ಬಂದು ಮಗನಿರುವುದನ್ನು ನೋಡಿ ಸಮಾಧಾನ ಹೊಂದಿದಳು.

ಈ ಕನಸಿನಲ್ಲಿರುವ ಸೌಂದರ್ಯದ ಕಡೆ ನಾವು ಗಮನಕೊಡಬೇಕು. ಕವಿಯ ಹೃದಯವು ಆ ಭೀಕರತೆಯನ್ನು ತರಬೇಕಾದರೆ ಸೃಷ್ಟಿಸಿರುವ ಈ ಕನಸಿನಲ್ಲಿ ಪತಿಯ ಆಶ್ರಯವೇ ವಟವೃಕ್ಷವಾಗಿ,

ಎಳೆಯ ಮಗು ಬೀಳಲಾಗಿ, ಬೀಳಲಿನ ಗಮನ ತಪ್ರೋಜೀವನದ ಸುಳು ವಾಗಿ, ಮಾತೆಯ ಮನಸ್ಸಿಗೆ ದುಃಖದ ಉದ್ವೇಗವನ್ನುಂಟುಮಾಡುತ್ತದೆ. ಮಾನವನ ಸುಪ್ತಚೇತನ ಅವನಿಗೆ ಅರಿವಿಲ್ಲದಂತೆಯೇ, ಆದರೂ ಅವನ ಜೀವನಕ್ಕೆ ಹೊಂದಿಕೆಯಿರುವಂತೆಯೇ, ಹೇಗೆ ಕನಸುಗಳನ್ನು ಹೆಣೆಯ ಬಲ್ಲುದೋ ಹಾಗೆಯೇ ಕವಿಪ್ರತಿಭೆ ಕಥೆಗೆ ತಕ್ಕ ಧ್ವನಿಪೂರ್ಣವಾದ ಕನಸನ್ನು ಹೆಣೆಯಬಲ್ಲುದು. ಮಾನವರ ಮನಸ್ಸಿನ ಅಂತರಾಳದ ಎಲ್ಲ ಆಲೋಚನೆಗಳನ್ನೂ ಹೀಗೆ ಹೊರಗೆಡಹಲು ಕವಿಗಳು ಕನಸನ್ನುಪ ಯೋಗಿಸಿರುವುದು ಕಂಡುಬರುತ್ತದೆ.

ಸಿದ್ಧಾರ್ಥ ಯಶೋಧರೆಯರು ಒಟ್ಟಿ ಜೀವಿಸುತ್ತಿದ್ದಾಗ ಅವರಿಬ್ಬರ ಪ್ರೇಮ ಎಷ್ಟು ಬೆಳೆದಿದ್ದಿತು? ಆದರೆ ಮುಕ್ತಿಸುಖಕ್ಕೆ ಪತಿಯು ತಾನೊಬ್ಬನೇ ಹೊರಟು, ಒಲುಮೆಯ ಚಿಲುಮೆ ಬತ್ತಿ ಅವಳ ಜೀವ ಬೆಂಡಾಗಿರುತ್ತದೆ. ಅಂಬಿಕೆಯೊಡನೆ ಯಶೋಧರೆಯು ತನ್ನ ದುಃಖವನ್ನು ತೋಡಿಕೊಳ್ಳುತ್ತಿರುವಾಗ, ರಾಹುಲನೇ ಬಂದು ತಾಯಿಯ ದುಃಖವನ್ನು ಶಮನಮಾಡಲು ತಾನೇ ಹೋಗಿ ಬುದ್ಧನನ್ನು ಕರೆತರುವುದಾಗಿ ಹೇಳುತ್ತಾನೆ. ಯಶೋಧರೆಯು ಇದನ್ನು 'ಎರಡನೆಯ ಪುಣ್ಯ'ವೆಂದು ಕರೆಯುತ್ತಾಳೆ. "ಅಂದು ಫಲಿಸಿತು ಮೊದಲನೆಯದು.. ಇಂದೀಗ ಫಲಿಸುತಿದೆ ಇನ್ನೊಂದು."........

ಹಾ ನನ್ನ ವಿಧಿಯೇ ! ಕನಸು ನಿಜವಾಯಿತು.
ನಿಜವೆ ಕನಸಾಯ್ತು ; ಬಾಳುವೆ ಮರೀಚಿಕೆಯಾಯ್ತು.

ಯಶೋಧರೆಯು ಹೀಗೆ ತೊಳಲಿದರೂ ನಾಟಕದ ಕೊನೆಯಲ್ಲಿ 'ತಾನೇ ತನ್ನ ಮಗನಿಗೆ ಉಪದೇಶ ಕೊಡಿಸುವುದನ್ನು' ನೋಡುತ್ತೇವೆ.

## ಬುದ್ಧನ ಉಪದೇಶಸಾರ

ಎರಡನೆಯ ಸ್ಥಾನದಲ್ಲಿ ರಾಹುಲ ಅಂಬಿಕೆಯರು ಮಾನಂದನೆಂಬ ಬುದ್ಧನ ಶಿಷ್ಯನೊಡನೆ ಮಾತನಾಡುತ್ತಾ ಅವನ ಹಿರಿಮೆಯ ಪರಿಚಯ ಮಾಡಿಕೊಳ್ಳುತ್ತಾರೆ. ಮೂರನೆಯ ಸ್ಥಾನದಲ್ಲಿ ಬುದ್ಧನೇ ಉಪದೇಶ

ಮಾಡುವುದನ್ನೂ, ಜನರು ಸೇರಿರುವ ರೀತಿಯನ್ನೂ ಅಂಬಾಪಾಲಿಗೆ ಇರುವ ಗೌರವವನ್ನೂ ಕಾಣುತ್ತೇವೆ.

ಬುದ್ಧನ ಉಪದೇಶದಲ್ಲಿ ಆತ್ಮಜ್ಞಾನದ ಹೊಳಪು ಎಷ್ಟಿತ್ತೋ ಅಷ್ಟೇ ಸ್ಪಷ್ಟವಾಗಿ ಅರ್ಥವಿವರಣೆಯೂ ಇರುತ್ತಿತ್ತೆಂದು ನಾವು ಕೇಳಿದ್ದೇವೆ. ಅನೇಕ ಕಥೆಗಳು, ಬಹು ಅರ್ಥವತ್ತಾದ ಉಪಮಾನಗಳು, ದೃಷ್ಟಾಂತ ಸಾಮತಿಗಳಿಂದ ಅವನ ಉಪದೇಶವು ಜನಪ್ರಿಯವಾಗಿದ್ದಿತೆಂದು ತಿಳಿದಿದ್ದೇವೆ. ನಾಟಕಕಾರರು ತಮ್ಮ ಈ ಕೃತಿಯಲ್ಲಿ ಬುದ್ಧನ ಉಪದೇಶದ ಸಾರವನ್ನು ಅವನ ಮೂಲಕವೇ ಮಾಡಿಸಿದ್ದಾರೆ. ಬೋಧಿವೃಕ್ಷದ ಕೆಳಗೆ ಉದಯವಾದ ಜ್ಞಾನವನ್ನು ಇತರರಿಗೆ ಹಂಚಿಕೊಡಲು ಆತ ಧರ್ಮಚಕ್ರವನ್ನು ಮೊದಲುಮಾಡಿದನು. ಮಗಧ, ಪಾಟಲಿ, ಗಾಂಧಾರ, ವೈಶಾಲಿ, ಕೌಶಾಂಬಿ, ಸಾಕೇತ, ಕೋಸಲ ಮುಂತಾದ ಅನೇಕ ದೇಶಗಳು ಅವನ ಉಪದೇಶದ ಅಮೃತವಾಣಿಯನ್ನು ಕೇಳಿ ಪವಿತ್ರವಾದವು.

ಐದು ವರ್ಷಗಳ ಸಂಚಾರವಾದ ಮೇಲೆ ಶ್ರಾವಸ್ತಿಯ ಜೇತವನದಲ್ಲಿ ನೆಲೆಸಿ ಜನರಿಗೆ ಉಪದೇಶಿಸುತ್ತಿದ್ದನು. ಅವನ ಉಪದೇಶವನ್ನು ಹೀಗೆ ಸಂಗ್ರಹಿಸಬಹುದು.

ಮಾನವನು,

ಒಳಗೆ ಬೆಳಗುವ ಬೆಳಕ ಸರಿಪಡಿಸಿಕೊಳ್ಳಬೇಕು.

ತನ್ನ ಮನೆಯಲ್ಲಿಯೇ ಬಚ್ಚಿಟ್ಟಿರುವ ಸಿರಿಯನ್ನು ತೋರಿದರೆ ಬಡವನಿಗೆ ಏನು ಆನಂದವಾಗುತ್ತದೆಯೋ ಹಾಗೇ ಮಾನವನ ಬುದ್ಧಿ ಸಂತೋಷದಾಯಕ. ಜ್ಞಾನಶಕ್ತಿಯ ಸಾಮರ್ಥ್ಯವನ್ನು ಹೆಚ್ಚಿಸಿ ಅದನ್ನು ಸುತ್ತಿರುವ ಮಬ್ಬನ್ನು ಕಳೆಯಬೇಕು. ಭಾವದಲ್ಲಿರುವ ಬಗ್ಗಡವನ್ನು ತೆಗೆದು ತಿಳಿಯಾಗಿಸಬೇಕು. ಇದೇ ತಪಸ್ಸು, ಯಾತ್ರೆ, ಮುಕ್ತಿ, ಕಲ್ಯಾಣ. ಈ ಸ್ಥಿತಿಯನ್ನು ಪಡೆಯಲು ಎಲ್ಲರೂ ಪ್ರಯತ್ನಿಸಬೇಕು. ವಯಸ್ಸಿನಲ್ಲಿ ಚಿಕ್ಕವನಾದವನು ಇದು ಅಸಾಧ್ಯವೆಂದು ಹಿಂಜರಿಯಬಾರದು. ಸಾಗರದ ಅಂಚಿನಲ್ಲಿರುವವನಿಗೆ ಕಿರುದೂರ ನೀರು ಕಂಡೀತು. ಆದರೆ ನೌಕೆಯನ್ನು ಹತ್ತಿ ಮುಂದೆ ಮುಂದೆ ಹೋದಂತೆ ಇನ್ನೂ

ಮತ್ತೂ ನೀರಿನ ಹರಹು ಗೋಚರಿಸುತ್ತದೆ. ಅಜ್ಞಾನಿಗೆ ಜ್ಞಾನ ಕಡಿಮೆಯಾಗಿ ಕಂಡೀತು. ಗೌರೀಶಂಕರವನ್ನು ಹತ್ತುವವನು ತಾನು ಸಾಧಿಸಿರುವ ಎತ್ತರವನ್ನು ಹೆಮ್ಮೆಯಿಂದ ಗಣಿಸಿದರೆ ಮಿಕ್ಕ ಸಾಧನ ಕಡಿದುಹೋದೀತು.

ಸಾಧಿಸಿದೆ ನಾನೆಂಬ ಅಭಿಮಾನವೂ ಬೇಡ;
ಬೇಡಲ್ಪನಾನೆಂಬ ಅಭಿಮಾನ ವಿಪರೀತ
ಬೇಡ ಸಾಧನೆಯುಪಥವಿಹುದದರಲಿ ವಿಚಿಕಿತ್ಸೆ.

ನಂಬಿ ಮುಂದೆ ನಡೆಯುವವನೇ ಲೋಕಗಳ ಕಲ್ಯಾಣದಾವಾಸವಾಗುವನು. ವಿಶ್ವಜೀವನದ ವಟವೃಕ್ಷದಲ್ಲಿ 'ನಾನು' ಎಂಬುದು ಒಂದು ಕಣ. ಅತಿ ಮಮತೆಯು ವೃಕ್ಷಗಳಲ್ಲಿ ಕಾಣುವ ಗಂಟಿನಂತೆ ಅಪ್ರಯೋಜಕ, ಜೀವರಸಕ್ಕೆ ಕಂಟಕ.

ನನ್ನಿಂದ ನಾಲ್ಕು ಜೀವಕೆ ಸೌಖ್ಯ ದೊರೆಯುಲಿ;
ನಾನೆಂಬುದಿಂತು ಸಾರ್ಥಕವಾಗಲಿ, ಎಂದು
ಸತತವೂ ಪರಹಿತವಸಾಧಿಸುತಲಿರುವುದು.

ಬುದ್ಧನ ಉಪದೇಶವನ್ನು ವಿಮರ್ಶೆ ಮಾಡಿದರೆ ಅವನು ದೇವರ ವಿಚಾರವಾಗಿಯಾಗಲಿ, ಪರಲೋಕದ ವಿಚಾರವಾಗಲಿ, ಏನನ್ನೂ ಹೇಳುವುದಿಲ್ಲವೆನ್ನುವುದು ಗೊತ್ತಾಗುತ್ತದೆ.

ನಾನೆಂದು
ಭಾವಿಸುವ ನಾವು ನೀವೆಲ್ಲ ಭಾವದ ಧಾರೆ,
ಕಾಲನೆಂಬುದು ಇರವ ಕಣವ ಪೋಣಿಸಿದೊಂದು ಹಾರ.
ನೂರಾರು ಹನಿ ಒಂದರೊಡನೊಂದಿರಲು
ಎಲ್ಲವೂ ಎಳೆಯಾಗಿ ಕಾಂಬಂತೆ ಮುತ್ತುಗಳು
ಸರದಿಕೋದಿರಲೊಂದು ಮೌಕ್ತಿಕದ ನಾಳವೂ,
ಕೊಳ್ಳಿ ಸುತ್ತುತಿರೆ ಬೆಂಕಿಯದೊಂದು ಚಕ್ರವೂ
ಕಾಂಬಂತೆ, ಬಿಡಿಬಿಡಿಯ ಕಣ ಹಲವು
ಒಂದನೊಂದನುಸರಿಸಿ ನಾನು ನೀನಾಗಿಹುದು;
ನಾನೆಂಬುದೊಂದಿಲ್ಲ. ಕಾಲವೇ ನಿಜವಲ್ಲ.

ಈ ಮಾತುಗಳು ಪ್ರಾಚೀನ ಮತಾನುಯಾಯಿಗಳಿಗೆ ತಿಳಿಯದೆ ಬುದ್ಧನ ಬೋಧೆಯನ್ನು ಅವರು ನಾಸ್ತಿಕ್ಯವೆಂದು ಹಳಿದರು.

ಅಪಹಾಸ್ಯ ಮಾಡಿದರು. ಅವರವರಲ್ಲಿಯೇ ಜಗಳವಾಡಿದರು. ಸಾಮಾನ್ಯರಾದ ಮುದುಕಿ, ಯುವತಿ, ಮಗು, ಮುಂತಾದವರು ಬುದ್ಧನ ಮುಖಭಾವ, ಶಾಂತಿ ಕನಿಕರಗಳನ್ನು ಹೊಗಳಿದರು. ಕೌಂಡಿನ್ಯನಂಥ ಜನ ಅಂದು ಎಷ್ಟು ಜನರಿದ್ದರೋ !

ಜಾಬಾಲಿಗಳಂಥ ಹಿರಿಯರು ಮಾತ್ರ ತಾವು ಹೇಳಿಕೊಟ್ಟದ್ದಕ್ಕಿಂತ ಬುದ್ಧನು ಮುಂದೆ ಹೋಗಿರುವುದಾಗಿ ಒಪ್ಪಿಕೊಳ್ಳುತ್ತಾರೆ. 'ದೇವರು', 'ಪ್ರತ್ಯಕ್ಷ', 'ಸುಖದುಃಖ' ಎಂಬ ತತ್ವಗಳಲ್ಲಿ ಬುದ್ಧನು ತಮಗಿಂತ ಮುಂದುವರಿದಿದ್ದನು. ನಮ್ಮ ಹಿರಿಯರು ರಚಿಸಿದ್ದ ತತ್ವಸೌಧಕ್ಕೆ ಈತನು ಮಂಗಲ ಹೇಮಕಲಶವನ್ನು ಹಚ್ಚಿದ್ದನು. ಜ್ಞಾನವೃದ್ಧರಾದ ಈ ಹಿರಿಯ ಗುರುಗಳು ಬುದ್ಧನನ್ನು ಕುರಿತು ವಿನಯದಿಂದ "ಇವನೆನಗೆ ಗುರುವೆಂದು ನಾ ಮನದಿ ಬಲ್ಲೆನು" ಎನ್ನುತ್ತಾರೆ.

ಆನಂದನು ಹೇಳುವಂತೆ ಆತನು ಬುದ್ಧ ಗುರುವೆಂಬ ಹೆಸರಿನಿಂದ ದೇವತೆಗಳ ಜ್ಞಾನವನ್ನು ಭೂಮಿಯಲ್ಲಿ ಹರಡುತ್ತಿದ್ದನು. ಭಗೀರಥನು ದೇವಗಂಗೆಯನ್ನು ಭೂಮಿಗೆ ತಂದಂತೆ ಈತನು ದಿವ್ಯ ಜ್ಞಾನವನ್ನು ಭೂಮಿಗೆ ತಂದಿದ್ದನು.

ಗಂಗೆಯಿರ್ತಡಿಯಲ್ಲಿ ಬೆಳೆವ ಶಾಲಿಯ ಬಯಲು
ಇವರ ವಾಣಿಯಲಿ ಬೆಳೆದಿಹ ಮನದ ಬಯಲಂತೆ
ಹಸುರಲ್ಲ : ದಗೆಗೊಂಡು ಗಂಗೆಯಲಿ ಮಿಂದವರು
ಇವರ ನುಡಿಯಿಂದ ಸಂಸಾರಿಗಳು
ಸುಖಿಪಂತೆ ಸುಖಿಸಲಾರರು ; ಇಲ್ಲಿ ಮನದ ಮಲ ಹರಿವಂತೆ
ಅಲ್ಲಿ ಮೆಯ್ ಶುದ್ಧಿಯಾಗದು.

ಎಲ್ಲ ಲೋಕಗಳ ಎಲ್ಲ ತಿಳಿವುಗಳೂ ಒಂದೇ ಜೀವರತ್ನದಲ್ಲಿ ಮೆರೆಯುವಂತೆ ಈತನ ಜೀವ ಮಿರುಗುತ್ತಿತ್ತು. ಅಂದಿನಿಂದ ಶತಮಾನಗಳ ದೂರದಲ್ಲಿರುವ ಇಂದಿಗೂ ಅವನ ಉಪದೇಶ ಶ್ರಾವಕ ಜನದ ಬಾಳನ್ನು ಹಸುರಾಗಿ ಹಸನಾಗಿ ಮಾಡುತ್ತಿದೆ.

ಶ್ರೀನಿವಾಸರು ಉಪಯೋಗಿಸಿರುವ ಮಾತುಗಳಲ್ಲಿ ಇರುವ ಉಪಮಾನ, ದೃಷ್ಟಾಂತ ಇತ್ಯಾದಿಗಳೆಲ್ಲ ಬುದ್ಧನ ಉಪದೇಶದಿಂದಲೇ

ಅರಿಸಿಕೊಂಡದ್ದರಿಂದ ಆ ಉಪದೇಶವಾಣಿಯ ಸವಿ ಇಲ್ಲಿಯೂ ಕಾಣಬರುತ್ತದೆ.

## ಯಶೋಧರೆ

ಈ ನಾಟಕದಲ್ಲಿ ಯಶೋಧರಾ ಪಾತ್ರಕ್ಕೇ ಪರಮ ಪ್ರಾಧಾನ್ಯ ವೆನ್ನುವುದು ವಿದಿತವಾಗಿದೆ. ಇಲ್ಲಿ ಆಕೆಯ ಪತಿಪ್ರೇಮ, ಪುತ್ರವಾತ್ಸಲ್ಯ, ಗುರುಗೌರವ, ಪರಿಜನರಲ್ಲಿ ಆತ್ಮೀಯತೆ ಇವುಗಳೆಲ್ಲ ವ್ಯಕ್ತವಾಗಿವೆ. ಜ್ವಾಲಾಮುಖಿಯ ಅಂತರಾಳದಲ್ಲಿನ ಉಷ್ಣದಂತೆ ಇರುವ ದುಃಖ ವನ್ನು ನುಂಗಿ ಅದನ್ನು ಹೊರಗೆ ತೋರದೆ ಗಾಂಭೀರ್ಯವನ್ನೂ ಚಿತ್ತ ಸ್ಥೈರ್ಯವನ್ನೂ ಆಕೆ ಸ್ವಾಧೀನಪಡಿಸಿಕೊಂಡಿದ್ದಾಳೆ. ಗಂಡನು ತನ್ನನ್ನು ಬಿಟ್ಟು ಹೊರಟುಹೋದಮೇಲೆ ತಾನು ಹಿಂದಿರುವುದು ಸರಿಯಲ್ಲವೆಂದು ಅವಳ ಮನಸ್ಸು ಅವಳಿಗೆ ಎಚ್ಚರಿಕೆ ಕೊಡುತ್ತಾ ಇದೆ.

ಹೋಗು ಅವನಿರುವೆಡೆಗೆ, ನಿಲ್ಲದಿರು ಇಲ್ಲಿ ;
ಅವನಿರುವ ಹಳುವ ನಗರೋಪವನ ನಂದನ,
ಅವನಿಲ್ಲದಿಹ ನಗರ ನಿನ್ನ ಪಾಲಿಗೆ ಹಳುವ ;
ಸೀತೆಯನು ಮರೆತೆಯಾ ? ಸಾವಿತ್ರಿ ದಮಯಂತಿ
ಚಂದ್ರಮತಿಯರ ಮಾತ ಕಾಣೆಯಾ ? ನಿಲ್ಲದಿರು.

ಆದರೂ ಹಿರಿಯರಾಣತಿಯಂತೆ ನಿಂತುಬಿಡುತ್ತಾಳೆ.

ನನ್ನ ವಯಸನು ನೋಡು, ನಿನ್ನ ನೋವಲಿ ನನಗೆ
ಭಾಗವಿರುವುದು ನೋಡು ಸಹಿಸಮ್ಮ

ಎಂದು ಮಾವನವರು ಹೇಳಿದರು. ಮಾವನ ಮಾತು ಮೀರಲಾರದ ಮಾತು.

ಇದರ ಪರಿಣಾಮ ಮಾತ್ರ ಸಹಿಸಲಸಾಧ್ಯವಾಯಿತು. ಒಂದು ಕನಸಿನಲ್ಲಿ ಕೈಸುಟ್ಟುಕೊಂಡಿದ್ದ ನೆನಪು ಮತ್ತೊಂದರಿಂದ ಮತ್ತೆ ಬಂದಿದೆ. ಈ ಸಮಯದಲ್ಲಿ ತಾನು ಏನು ಮಾಡಬೇಕೋ ತಿಳಿಯದು. ಇಂಥ ಸಮಯದಲ್ಲಿ ಬುದ್ಧನು ಕಪಿಲವಸ್ತುವಿಗೆ ಬರುವುದೂ ಸನ್ಯಾಸಿ ಯನ್ನು ತಾನು ನೋಡಬಾರದೆಂದು ಹಿಂದಿರುವುದೂ, ಅಂಬಿಕೆಗೆ "ನೀನೆನ್ನ

ಕಣ್ಣಾಗು, ಕಣ್ಣಿನಿಂದೀಂಟುವುದ ಕಿವಿಗಳಿಂದೀಂಟುವೆನು" ಎಂದು ವರ್ಣನೆಯನ್ನು ಕೇಳುವುದೂ ಗೊತ್ತಾಗುತ್ತದೆ. ಅವಳ ಮನಸ್ಸಿನಲ್ಲಿ ಬುದ್ಧನ ಕಲ್ಪನೆಯೇ ನಿದ್ದಿತೆನ್ನುವುದು ಅವಳೇ ಹೇಳುವ ಒಂದು ಮಾತಿನಲ್ಲಿ ತಿಳಿಯಬರುತ್ತದೆ. ತಾನು ನೋಡದೇಹೋದರೂ ಬುದ್ಧನು ಹೇಗಿರಬಹುದು ಎಂಬುದನ್ನು ಯಶೋಧರೆಯು,

ನನ್ನ ಮನಸಿನ ಕಣ್ಣು
ಅದ ವಿಭಾವಿಸಿ ನೋಡಿ ಸಂತೋಷಗೊಳುತಿಹುದು.

ಸಂಜೆ ಬೆಳಗನು ತೊಟ್ಟು, ಮುಗಿಲೊಂದ ತಲೆಗಿಟ್ಟು
ಹಿಮಗಿರಿಯ ಶೃಂಗವೊಂದಾಶ್ವೀಜಮಾಸದಲಿ
ತಪ್ಪಲಿನ ವನಗಳನು ಹರಸುವ ವೊಲಿಹರಹುದು

ಇಲ್ಲಿ ಪರ್ಯಾಯವಾಗಿ ವರ್ಣಿತವಾಗಿರುವ ಬುದ್ಧನ ದೀರ್ಘ ದೇಹ, ಕಾಷಾಯ ವಸ್ತ್ರ, ಜಟೆ, ನಗುಮುಖ, ಅವನತವಾದ ಶಿಷ್ಯ ಮಂಡಲಗಳ ಚಿತ್ರವು ಬಲು ಮನೋಹರವಾಗಿದೆ.

ಐದನೆಯ ದೃಶ್ಯದಲ್ಲಿ ಯಶೋಧರೆಯ ವಿಹ್ವಲ ವಿಲಾಪಗಳು ಮನಮುರುಗಿಸಿದರೂ ಆರನೆಯ ದೃಶ್ಯದಲ್ಲಿ ಅವಳಿಗೂ ಬುದ್ಧನಿಗೂ ನಡೆದ ಸಂವಾದದಲ್ಲಿ ಚಿತ್ರವಾಗಿರುವ ಅವಳ ಆತ್ಮಗೌರವ ಮುಗಿಲು ಮುಟ್ಟುತ್ತದೆ.

ಆನಂದನಿಂದ ಪೂರ್ವಾಶ್ರಮದ ಪತ್ನಿಯು ಮನನೊಂದಿರುವುದನ್ನು ತಿಳಿದು ಬುದ್ಧನೇ ಅಂತಃಪುರಕ್ಕೆ ಬರುತ್ತಾನೆ. ಹೀಗೆ ಬಂದ ಬುದ್ಧನನ್ನು ಸತ್ಕರಿಸಬೇಕಾದುದು ಹೇಗೆಂದು ತಿಳಿಯದೆ ಯಶೋಧರೆಯು ಬುದ್ಧನನ್ನೇ ನೇರವಾಗಿ ಮಾತನಾಡಿಸದೆ ಆನಂದನಿಗೆ "ಅಡಿಯ ಮುಟ್ಟಬಹುದೇ ಕೇಳು" ಎಂದು ಹೇಳುತ್ತಾಳೆ. ಅದಕ್ಕೆ ಬುದ್ಧನೇ "ಮುಟ್ಟದೊಡೆ ತಪ್ಪಲ್ಲ, ಮುಟ್ಟದಿದ್ದರೆ ಒಳಿತು" ಎಂದು ಉತ್ತರ ಕೊಡುತ್ತಾನೆ. "ತಪ್ಪಲ್ಲದಿರುವುದೇ ಸಾಕೆನಗೆ" ಎಂದು ಪಾದಗಳನ್ನು ಮುಟ್ಟಿ ಯಶೋಧರೆ ಕಣ್ಗೆ ಒತ್ತಿಕೊಳ್ಳುತ್ತಾಳೆ. ಬುದ್ಧನು ಎಲ್ಲರನ್ನೂ ಕುಳ್ಳಿರ ಹೇಳಿ ಯಶೋಧರೆಗೆ,

ಚಿಂತೆಯೇ ಕಷ್ಟ,
ಮನೆ ಬಾಗಿಲಿಗೆ ಬರುವ ಹಾವನಟ್ಟುವ ರೀತಿ
ಮನದ ಬಾಗಿಲಿನಿಂದ ಅದನಟ್ಟುತಿರಬೇಕು.
ಅಭ್ಯಾಗತನ ಕಂಡು ಗೃಹಕೆ ಕರೆದೊಯ್ವಂತೆ
ಮನದೊಳೆಡೆಗೊಟ್ಟು ಕುಳ್ಳಿರಿಸಿ ಪೂಜಿಸಲು ಅದು
ದುರ್ವಾಸನಾಗುವುದು.

ಎಂದು ಶಾಂತಿಯನ್ನು ಅರಸುವಂತೆ ಬೋಧಿಸುತ್ತಾನೆ. ಯಶೋಧರೆಗೆ ಇದು ಹೊಸದಲ್ಲ. 'ಇದ ನಾನು ಅರಿತಿಹೆನು' ಎನ್ನುತ್ತಾಳೆ. ಆಗ ಬುದ್ಧನು ಯಶೋಧರೆಯ ಒಲುಮೆ ತನ್ನ ಹೃದಯದಲ್ಲಿ ಇನ್ನೂ ನಂದಾದೀಪವಾಗಿ ಬೆಳಗುತ್ತಾ ತಾನು ಅರಿತ ಜ್ಞಾನದಲ್ಲಿ ಲೀನವಾಗಿದೆಯೆಂದೂ ಅದರಿಂದ ಬಳಿಗೆ ಬಂದ ಆತ್ಮಗಳಿಗೆ ಸುಖವನ್ನುಂಟುಮಾಡುತ್ತಿರುವುದೆಂದೂ ಸಮಾಧಾನ ಮಾಡುತ್ತಾನೆ. ಬುದ್ಧನು ಯಶೋಧರೆಯನ್ನು ಕುರಿತು ಆಡಿರುವ ಮಾತು ಆಕೆಗೆ ಎಂಥ ಗೌರವವನ್ನು ತರುತ್ತದೆ ನೋಡಿ. ಯಶೋಧರೆಯ

ಪ್ರೇಮವಂದೆನ್ನ ಹೃದಯ ಪದ್ಮದೊಳಿಟ್ಟ
ಸಮ್ಮೋದದೊಂದು ನಂದಾದೀಪ ಈಗಲೂ
ಎನ್ನ ಅಂತರ್ಯವನು ತೃಪ್ತಿಯಲಿ ಬೆಳಗುತಿದೆ.

ಇರುಳು ತಮವನು ತಾಗಿ ಬಾಂದಳದ ಚೆಲುವಾಗಿ
ಬೆಳಕ ಬೀರಿದ ತಾರೆ, ಹಗಲು ನೇಸರು ನೆರೆದು
ಮರೆಯಿಂದ ಜಗವ ಬೆಳಗುವವೊಲಾತಣಿವೆನಗೆ
ಸಿದ್ಧಿಯಿಂದೊದವಿದ ಮನಃಪ್ರಸಾದದಿ ಬೆರೆದು
ಬಳಿಸಾರಿ ಬಂದ ಆತ್ಮಗಳ ಸುಖಗೊಳಿಸುತಿದೆ.

ಪತಿಗೆ ಬೇಡದೆ ಹೋದೆನೆಂದು ನೆನೆದುದು ಸಾಕು.

ಈ ಮಾತುಗಳನ್ನು ಹೇಳಿದಾಗ ಯಶೋಧರೆಯು "ಇನ್ನೆನಗೆ ಚಿಂತೆಯೆಂಬುದು ಇಲ್ಲ" ಎಂದು ಹೇಳಿದರೂ ಅವಳ ಮನಸ್ಸಿನಲ್ಲಿರುವ ಸಂದೇಹ ಬುದ್ಧನಿಗೆ ಹೊಳೆದು ಅವೇನೆಂದು ಕೇಳುತ್ತಾನೆ. ಹತ್ತು ವರ್ಷಗಳಿಂದ ಅವಳ ಮನಸ್ಸಿನಲ್ಲಿ ಈ ಪ್ರಶ್ನೆಗಳು ಮಿಡಿಯುತ್ತಿದ್ದುವು.

ಈಗ ಧೈರ್ಯವಾಗಿ ಧರ್ಮ ಸೂಕ್ಷ್ಮವನ್ನು ತಿಳಿಯುವುದಕ್ಕಾಗಿಯೇ ಆ ಪ್ರಶ್ನೆಗಳನ್ನು ಕೇಳಿಬಿಡುತ್ತಾಳೆ.

"ಈಗ ತನ್ನನ್ನು ಬಂದುನೋಡುವುದು ತಪ್ಪಿಲ್ಲದಿದ್ದರೆ ತನ್ನನ್ನು ಬಿಟ್ಟು ಕಾಡಿಗೆ ಹೋಗಬೇಕಾದ ಆವಶ್ಯಕತೆಯೇನಿತ್ತು? ಸುಖವಾಗಿ ಇದ್ದವಳನ್ನು ದುಃಖದಲ್ಲಿ ಮುಳುಗಿಸಿದುದು ಏಕೆ? ಧರ್ಮಿಷ್ಠೆಯಾದ ಸತಿಯು ಪತಿಯ ಧರ್ಮಮಾರ್ಗಾನುಸರಣೆಗೆ ಅಡ್ಡಿ ತರುತ್ತಾಳೆಯೇ? ದಾಂಪತ್ಯವನ್ನು ಕೊನೆಗಾಣಿಸಲು ಗಂಡ ಹೆಂಡಿರಲ್ಲಿ ಇಬ್ಬರ ಅಭಿಪ್ರಾಯವೂ ಇಲ್ಲದೆ ಅದು ಹೇಗೆ ಸಾಧ್ಯ?"

ಬುದ್ಧನು ಈ ಎಲ್ಲ ಪ್ರಶ್ನೆಗಳಿಗೂ ಸಾವಧಾನದಿಂದಲೇ ಉತ್ತರ ಕೊಡುತ್ತಾನೆ.

"ಧರ್ಮಮಾರ್ಗವನ್ನು ಅಳೆಯುವವನು ತನ್ನ ಸುಖದಿಂದ ಅಳೆಯ ಬಾರದು. ಸ್ವಾರ್ಥವನ್ನು ಬಿಟ್ಟು ಇತರರಿಗೆ ಒಳ್ಳೆಯದಾಗಲಿ ಎಂಬುದೇ ನಿಜವಾದ ಧರ್ಮ. ಸಂಸಾರ ಸಮುದ್ರದಲ್ಲಿ ಹುಟ್ಟು ಸಾವು ಎಂಬ ಸುಳಿಯಲ್ಲಿ ಸಿಕ್ಕಿ ಮಾನವ ಜೀವವು ತೊಳಲಾಡುತ್ತಿದೆ. ಆ ಜೀವಿಗಳ ಕಲ್ಯಾಣಸಾಧನೆಗಾಗಿ ನಾನು ಕಷ್ಟಗಳನ್ನು ವರಿಸಿದೆನು. ಸಂಸಾರದಲ್ಲಿದ್ದು ಮುಕ್ತಿ ಸಾಧಿಸುವುದು ಕೋಟಿಯಲ್ಲೊಂದು ಚೇತನಕ್ಕೆ ಸಾಧ್ಯ. ನನಗೆ ಈ ಅನುಭವ ಬರಬೇಕಾದರೆ ವನಪ್ರಯಾಣ ಅಗತ್ಯವಾಗಿತ್ತು. ಪತ್ನಿಯ ಒಪ್ಪಿಗೆಯಿಲ್ಲದೆ ದಾಂಪತ್ಯ ಕೊನೆಯಾಗುವುದಿಲ್ಲವೆಂಬ ಮಾತು ಸತ್ಯ. ವೈರಾಗ್ಯ ಮುಖ್ಯವಾದ ತನ್ನ ಮತದಲ್ಲಿ ಅದು ಅಮುಖ್ಯ ಅಷ್ಟೆ. ವೈರಾಗ್ಯ ಸಾಧನೆಯಾದಮೇಲೆ ಪತಿಪತ್ನಿಯರು ಒಡನೆಯೇ ಇದ್ದು ಶುಭವನ್ನು ಸಾಧಿಸಬಹುದು."

ಈ ಉಪದೇಶದಿಂದ 'ಪತಿವರ್ಜಿತೆ'ಯೆಂಬ ಭಯ ಹೋಯಿತು ಯಶೋಧರೆಗೆ. ಆದರೂ ಮಿಕ್ಕ ತತ್ವಗಳನ್ನು ಅವಳು ಪೂರ್ತಿ ಒಪ್ಪಲಿಲ್ಲ. "ಹೆತ್ತು ಸಲಹುವುದು ಮಾತೆಯ ಧರ್ಮ. ತೊರೆವುದನ್ನು ಸುಲಭದಲ್ಲಿ ಒಪ್ಪಲಾರದು ಅವಳ ಚೇತನ" ಎನ್ನುವುದು ಬುದ್ಧನ ಸಮಾಧಾನ.

ಕೊನೆಗೆ ಯಶೋಧರೆಯೇ ದೀಕ್ಷೆ ಬೇಡುತ್ತಾಳೆ. ಅಲ್ಲಿಯವರೆಗೆ ಸ್ತ್ರೀಯರಿಗೆ ದೀಕ್ಷೆ ಕೊಡದಿದ್ದ ಬುದ್ಧನು ಏನೇನು ಕಾರಣ ಹೇಳಿದರೂ ಯಶೋಧರೆಯ ಜೀವವನ್ನು ಕಂಡಾಗ ದೀಕ್ಷೆ ಕೊಡದಿರುವುದು ಕಷ್ಟ ವಾಗುತ್ತದೆ. ಆನಂದ ಅಂಬಾಪಾಲಿಯರು ಈ ಮಾತಿಗೆ ಪುಷ್ಟಿಯನ್ನು ಕೊಡುತ್ತಾರೆ. ತಮ್ಮ ಮತಕ್ಕೆ ಬುದ್ಧನು ಹೇಗೆ ಮೊದಲ ಭಿಕ್ಷುವೋ ಹಾಗೆ ಯಶೋಧರೆಯೂ ಮೊದಲ ಭಿಕ್ಷುಣಿಯಾಗುತ್ತಾಳೆ. ಗುರುವಿನ ಸೂಚನೆಯಂತೆ ಕಪಿಲವಸ್ತುವಿನಲ್ಲಿದ್ದು ಶುದ್ಧೋದನ ಮಹಾರಾಜನ ಸೇವೆಯಲ್ಲಿ ನಿಲ್ಲುತ್ತಾಳೆ.

ಈ ಸಂವಾದದಲ್ಲಿ ಭವ್ಯಜೀವನದ ಸಂಯಮಪೂರ್ಣವಾದ, ಸ್ವಾರ್ಥರಹಿತವಾದ, ಧರ್ಮಾಸಕ್ತವಾದ, ಅಖಂಡ ಪುಣ್ಯಫಲ ದಂತಿರುವ ಸ್ತ್ರೀತ್ವದ ದರ್ಶನ ನಮಗಾಗುತ್ತದೆ. ಅವಳ ನಡವಳಿಕೆ ಯನ್ನು ನೆನೆದರೆ ಅವಳ ನಾಮಸ್ಮರಣೆಯೂ ಒಂದು ಪುಣ್ಯಕಾರ್ಯ ವೆನಿಸುತ್ತದೆ.

'ಯಶೋಧರಾ' ನಾಟಕದಲ್ಲಿ ಯಶೋಧರೆಯದೇ ಮುಖ್ಯಪಾತ್ರ ವಾದರೂ, ಆ ಪಾತ್ರಕ್ಕೆ ಹಿನ್ನೆಲೆಯಾಗಿ ಇತರ ಪಾತ್ರಗಳಿಗೆ ಪ್ರಾಮುಖ್ಯವಿದೆ. ಈ ಪಾತ್ರಗಳ ಪರಿಚಯದಿಂದ ಪ್ರಧಾನ ಪಾತ್ರದ ಹಿರಿಮೆ ಮತ್ತಷ್ಟು ಸ್ಪಷ್ಟವಾಗುತ್ತದೆ.

## ಅಂಬಿಕೆ

ಅಂಬಿಕೆ ಇವರಲ್ಲೆಲ್ಲಾ ಮೊದಲನೆಯವಳು. ನಾಟಕದ ಪ್ರಾರಂಭ ದಲ್ಲಿಯೇ ಅಂಬಿಕೆ ಯಶೋಧರೆಯರು ಸಂಭಾಷಿಸುವುದು ನಮಗೆ ತಿಳಿದುಬರುತ್ತದೆ. ಅಂಬಿಕೆ ಯಶೋಧರೆಗಿಂತ ದೊಡ್ಡವಳಲ್ಲದೆ, ಬಾಲ್ಯ ದಿಂದಲೂ ಯಶೋಧರೆಯ ಸೇವೆ ಮಾಡಿದ್ದವಳು; ಹತ್ತು ವರ್ಷ ನೋವನ್ನು ಹತ್ತಿರವಿದ್ದು ಸಮಾಧಾನ ಮಾಡಿದವಳು, ಬುದ್ಧಿ ತಿಳಿಸಿ ದವಳು. ಮನಸ್ಸಿಗೆ ಹೀಗೆ ಒಪ್ಪಿಗೆಯಾಗಿರುವ ಸಖಿಯೂ, ಸೇವಕಿಯೂ ಆದ ಅಂಬಿಕೆಯು ತನ್ನನ್ನು ಎಲ್ಲಿ ಬಿಟ್ಟು ಹೊರಟುಹೋಗು

ವಳೋ ಎಂದು ಯಶೋಧರೆಗೆ ಹೆದರಿಕೆಯಾಗುತ್ತಿತ್ತು. ಅಂಬಿಕೆಯು ಅಂತಹವಳಲ್ಲ.

ಬುದ್ಧನನ್ನು ಹುಡುಕಿಕೊಂಡು ಹೊರಟು ಅವನು ಎಲ್ಲ ದೇಶಗಳನ್ನೂ ಸುತ್ತಿದ್ದಾನೆ ಎಂದಾಗ, "ಆ ಪುಣ್ಯವಿಲ್ಲದುದು ನಮ್ಮ ನಾಡಿಗೆ ಮಾತ್ರ" ಎನಿಸುತ್ತದೆ ಅವಳಿಗೆ. ಇವರ ಆಹ್ವಾನವನ್ನೊಪ್ಪಿ ಬುದ್ಧನು ಕಪಿಲವಸ್ತುವಿಗೆ ಬಂದಾಗ ಅಂತಃಪುರದ ಒಳಗಡೆಯೇ ಇದ್ದ ಯಶೋಧರೆಗೆ ಕಣ್ಣಾದವಳು ಅಂಬಿಕೆ. ಅವಳೂ ಬುದ್ಧನನ್ನು ಗುರುವಾಗಿ ಮಾಡಿಕೊಂಡಿದ್ದಾಳೆ. ಯಶೋಧರೆಯು ಗುರುಪತ್ನಿಯೆಂದೂ, ಒಡತಿಯೆಂದೂ ಗೌರವ ಹೆಚ್ಚಿದೆ. ತನ್ನ ಒಡತಿಯನ್ನು ಬಿಟ್ಟು ಯಾವ ಸುಖ, ಯಾವ ಮುಕ್ತಿಯೂ ಅವಳಿಗೆ ಬೇಡ. "ಎರಡನೆಯ ಪಂಕ್ತಿಯಲ್ಲಿ ಸುಖಿಸುವುದು ನನಗೆ ಅಭ್ಯಾಸವಾಗಿಹುದವ್ವ" ಎಂದು ಯಶೋಧರೆಗೆ ಹೇಳುತ್ತಾಳೆ. ಸೇವಕಿಯ ವಿಶ್ವಾಸಪೂರ್ಣವಾದ ಸ್ವಾರ್ಥರಹಿತವಾದ ಜೀವನವನ್ನು ನಾವು ಅವಳಲ್ಲಿ ಗುರುತಿಸಬಹುದು.

ಅರಮನೆಯಲ್ಲಿಯೇ ಇದ್ದು ಅಲ್ಲಿಯ ಸಂಸ್ಕೃತಿಯನ್ನು ಕೈಗತ ಮಾಡಿಕೊಂಡಿದ್ದ ಅವಳು ವಿದ್ಯಾವಂತರಂತೆ ಮಾತನಾಡಬಲ್ಲಳು.

> ಹುಣ್ಣಿಮೆಯ ಆಗಸದಿ, ತಾರೆಗಳ ಮಧ್ಯದಲಿ
> ತುಂಬಿ ತೊಳಗುವ ಚಂದ್ರನಂತೆ

ಎಂದು ಮುಂತಾಗಿ ಬುದ್ಧನನ್ನು ವರ್ಣಿಸಬಲ್ಲಳು. ಬುದ್ಧನ ಎದುರಿಗೆ ಉಪಾಯನಗಳನ್ನು ಇಡುವಾಗ "ಅಡಿಗಳಿಗೆ ಸಮರ್ಪಿಸಿದರು" ಎಂದು ಹೇಳಬೇಕಾಗಿತ್ತು ಎಂದು ಯಶೋಧರೆಯು ಅಂಬಿಕೆಯನ್ನು ಆಕ್ಷೇಪಿಸುತ್ತಾಳೆ. ಅದಕ್ಕೆ ಅಂಬಿಕೆ,

> ಹೆಣ್ಣಾದ ಮಾತ್ರಕ್ಕೆ ಅಷ್ಟು ಅಗ್ಗವೇ ಮಾಜಿ?
> ಅಡಿಯ ನುಡಿ, ಅರ್ಪಣೆಯ ನುಡಿ ನಿಮಗೆ ಇಷ್ಟವಿರೆ
> ಸತಿಯಾದ ನೀವು ಆಡಿರಿ, ನಾನು ಆಡಲೆ?
> ಸೀವೆನಗೆ ರಾಣಿ ನಿಮ್ಮನು ಕಡಿಮೆ ಮಾಡಲೆ?

ಎನ್ನುತ್ತಾಳೆ. ಹಾಗೆಯೇ ಅಂಬಿಕೆಯ ಮಾತಿನಲ್ಲಿ ಗಡುಸು ಕಂಡುಬಂದಿತೆಂದು ತಿಳಿದರೆ "ಊಳಿಗದ ಹೆಣ್ಣು ಮಾತಾಡುವುದು, ಒಂದು

ಅರಿಕೆಯಿದೆ" ಎಂದು ಹೇಳಿ ಗುರುಗಳಿಗೆ ಅಪಚಾರವಾಗದಂತೆ ಹೇಳಿ ಕಳುಹಿಸಬೇಕೆಂದು ಬುದ್ಧಿ ತಿಳಿಸುತ್ತಾಳೆ. ಅಂಬಿಕೆ, ಯಶೋಧರೆಯ ಛಾಯೆ, ಮತ್ತೊಂದು ಒಡಲು, ಅವಳಿಗೆ ಬೇರೆಯ ಬದುಕಿಲ್ಲ. ಈ ಆತ್ಮೀಯತೆಯನ್ನೇ ಹಿರಿಯರು ಉದಾತ್ತ ಗುಣ ಎಂದು ಕೈಬೆರಳಿಟ್ಟು ತೋರಿಸುವುದು.

## ಅಂಬಾಪಾಲಿ

ಬುದ್ಧನು ಪತಿತರನ್ನು ಪಾವನರನ್ನಾಗಿ ಮಾಡಿದನೆನ್ನುವುದಕ್ಕೆ ಅಂಬಾಪಾಲಿಯು ಒಂದು ಉದಾಹರಣೆ. ಶ್ರಾವಸ್ತಿಯ ಜೇತವನದಲ್ಲಿ ನಮಗೆ ಅವಳ ಮೊದಲ ಸಂದರ್ಶನವಾಗುತ್ತದೆ. ಬುದ್ಧನೇ ಅವಳನ್ನು "ಬಾರ ತಾಯಿ ಅಂಬಾಪಾಲಿ" ಎಂದು ಸ್ವಾಗತಿಸುತ್ತಾನೆ. ಅವಳು ತನ್ನ ಮನೆಯಲ್ಲಿ ಆತಿಥ್ಯವನ್ನು ಸ್ವೀಕರಿಸಬೇಕೆಂದು ಬುದ್ಧನನ್ನು ಆಹ್ವಾನಿಸು ವಷ್ಟು ಪವಿತ್ರಳಾಗಿದ್ದಾಳೆ. ಆಹ್ವಾನವನ್ನು ಸ್ವೀಕರಿಸುತ್ತಾನೆ ಬುದ್ಧ. ರಾಹುಲನು ಬಂದಾಗ ಅಂಬಾಪಾಲಿಯು "ಗುರುವೆ, ನಾನೀತನನು ಮುಟ್ಟಬಹುದೇ?" ಎಂದು ಕೇಳಿದಾಗ ಬುದ್ಧನು "ಮುಟ್ಟಬೇಕು, ಅಂಬಾಪಾಲಿ, ಶುದ್ಧ ಮಾನಸರೆಲ್ಲ ಅವನ ಪೈಮನಗಳನ್ನು ಮುಟ್ಟಿ ಶುದ್ಧ ಚೇತನನ ಮಾಡಿರಿ" ಎನ್ನುತ್ತಾನೆ.

ಈ ಶುದ್ಧ ಮಾನಸವು ಅಂಬಾಪಾಲಿಗೆ ಮೊದಲಿಂದಲೂ ಇರಲಿಲ್ಲ. ನಾಗರ ಸ್ತ್ರೀಯಾಗಿ ಬಾಳಿ ಜೀವನದ ಪಂಕದಲ್ಲಿ ಕೊಳಕಾಗಿದ್ದವಳು ಅನಾಥ ಪಿಂಡಿಕನ ವನದಲ್ಲಿ ಬುದ್ಧನ ಉಪದೇಶವಾಣಿಯಿಂದ ಶುದ್ಧ ಳಾದಳು. ಗುರುವಿನೊಡನೆ ಕಪಿಲವಸ್ತುವಿಗೆ ಬಂದಾಗ ಯಶೋಧರೆ ಯನ್ನು ಕಾಣಲು ಹೋದಳು. ಯಶೋಧರೆಯು "ನೀವವರ ಪರಿವಾರ, ನಾವು ಅವರಿಗೆ ಹೆರರು" ಎಂದು ನೋವಿನಿಂದ ನುಡಿದರೂ ಕೊನೆಗೆ ಅವಳ ಜೀವನ ಕಥೆಯನ್ನು ಕೇಳಿ ಕರುಣೆಯಿಂದ "ತಾಯಿ ಅಂಬಾಪಾಲಿ ನೀವೆಲ್ಲ ನಮ್ಮ ನಗರಕ್ಕೆ ಬಂದುದೆಮಗೆ ಬಹು ಸಂತೋಷ" ಎನ್ನುತ್ತಾಳೆ. ಗುರುವಿನಲ್ಲಿದ್ದ ಕರುಣಾದೃಷ್ಟಿ ಗುರುಪತ್ನಿಯಲ್ಲಿಯೂ ಕಾಣುತ್ತದೆ ಅಂಬಾಪಾಲಿಗೆ. ಪ್ರೇಮಮಯವಾದ ಜೀವ ಎಲ್ಲೆಲ್ಲಿಯೂ ಪ್ರೇಮ

ವನ್ನೇ ಕಂಡೀತು. ನಾಟಕದ ಕೊನೆಯಲ್ಲಿ ಯಶೋಧರೆಗೆ ದೀಕ್ಷೆ ಕೊಡುವ ಮಾತು ಬಂದಾಗ ಇವಳ ನುಡಿಯು ಇವಳ ಗುಣವನ್ನು ವ್ಯಕ್ತ ಗೊಳಿಸುತ್ತದೆ. ಜಗತ್ತಿನ ಜೀವನದಲ್ಲಿ ಜನರು ಜಾರಿದರೂ ಪಶ್ಚಾತ್ತಾಪದಿಂದ ಪವಿತ್ರರಾಗಿ ಗೌರವಾರ್ಹರಾಗುವುದಕ್ಕೆ ಅಂಬಾ ಪಾಲಿಯು ದೃಷ್ಟಾಂತವಾಗಿದ್ದಾಳೆ. ನಾಟಕವು ಅವಳ ಪ್ರಾರ್ಥನೆ ಯಿಂದಲೇ ಕೊನೆಗಾಣುತ್ತದೆ. ಇದರಲ್ಲಿಯೂ ಕೂಡ ನಾವು ಇದೇ ಅರ್ಥವನ್ನು ಕಾಣಬಹುದು. ಪತಿತರು ಪಾವನರಾಗುವ ಅವಕಾಶವಿಲ್ಲ ದಿದ್ದರೆ ಲೋಕಕಲ್ಯಾಣ ಸಾಧ್ಯವಾಗುವುದೆಂತು?

## ಆನಂದ

ಬುದ್ಧನು ಕಾಡಿಗೆ ತೆರಳಿದಾಗ ಹಿಂದೆಯೇ ಉಳಿದ ಆನಂದನಿಗೆ ಐದು ವರ್ಷಗಳಾದಮೇಲೆ ಬುದ್ಧನ ಮಾರ್ಗವೇ ಸರಿಯಾಗಿ ಕಂಡು ತಾನೂ ಬುದ್ಧನಂತೆಯೇ ಯಾರಿಗೂ ತಿಳಿಸದೆ ಹೊರಟುಹೋಗುತ್ತಾನೆ. ಅಲ್ಲಿ ಬುದ್ಧನ ಅಂತರ್ಯದ ಶಿಷ್ಯನಾಗಿ, ಅವನ ತತ್ವಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ಅದರ ವಿವರಣೆಗೆ, ಪ್ರಚಾರಕ್ಕೆ ಸಹಾಯಕನಾದವನು ಆನಂದ.

ಆತನು ಕಪಿಲವಸ್ತುವಿಗೆ ಗುರುವಿನೊಡನೆ ಹಿಂದಿರುಗಿದಾಗ ಯಶೋಧರೆಯು 'ಬನ್ನಿ ಆನಂದ ಗುರುಗಳೇ' ಎಂದು ಹಾಸ್ಯಕರವಾಗಿ ಸ್ವಾಗತಿಸುತ್ತಾಳೆ. ಅವನೂ ಅಷ್ಟೇ ಆತ್ಮೀಯತೆಯಿಂದ "ಗುರುಗಳಾ ನಂದ ಅತ್ತಿಯ ಪದಕೆ ವಂದಿಪೆನು" ಎನ್ನುತ್ತಾನೆ. 'ಗುರುಗಳಾನಂದ' ಎನ್ನುವ ಪದ ಬೇಕೆಂದೇ ಪ್ರಯೋಗವಾಗಿದೆ. ಅದು ಗುರುವಾದ ಆನಂದ ಎಂದಾದರೂ ಅರ್ಥವಾಗಬಹುದು; ಗುರುಗಳ ಸಮೀಪದ ಶಿಷ್ಯನಾದ ಆನಂದ ಎಂದಾದರೂ ಅರ್ಥವಾಗಬಹುದು. ಎಲ್ಲಕ್ಕಿಂತ ಹೆಚ್ಚಾಗಿ ಗುರು ವಂದಿಸುವುದರಲ್ಲಿ, ಅದರಲ್ಲಿಯೂ 'ಅತ್ತಿಯ ಪದಕೆ' ವಂದಿಸುವುದರಲ್ಲಿ ಉಕ್ತಿ ಚಾತುರ್ಯವಿದೆ. ಉದ್ದಕ್ಕೂ ಈ ಗುಣ ಆನಂದನ ಮಾತಿನಲ್ಲಿ ವ್ಯಕ್ತವಾಗಿದೆ. ಅವನು ಬುದ್ಧನ ಧರ್ಮ ವಿಜಯವನ್ನು ಹೆಮ್ಮೆಯಿಂದ ವಿವರಿಸುತ್ತಾನೆ. ಗುರುವು ತನ್ನನ್ನು ನೆನೆದುದುಂಟೆ?

ಎಂದು ಯಶೋಧರೆ ಕೇಳಿದಾಗ ಉತ್ತರ ಕೊಡುವುದು ಅವನಿಗೆ ಕಷ್ಟವಾಗಿಬಿಡುತ್ತದೆ. ನೆನೆದಿಲ್ಲವೆಂದು ಹೇಳಿದರೆ ಆತ್ಮಾಭಿಮಾನಕ್ಕೆ ಕೇಡುಂಟಾಗಿ ಯಶೋಧರೆ ಏನಾಗುತ್ತಿದ್ದಳೋ ಯಾರಿಗೆ ಗೊತ್ತು? ಹೇಳದಿದ್ದರೆ ಅಸತ್ಯವಾಡಿದಂತಾಗುತ್ತದೆ. ಆದುದರಿಂದ "ಕಂಡಂತೆ ತಮ್ಮ ಕುರಿತಾಡಿದುದನಾನರಿಯೆ? ಧರ್ಮಿಷ್ಠೆಯಾದ ಸತಿಯನ್ನು ವರ್ಣಿಸುವಾಗ ನಿಮ್ಮನ್ನೇ ಕುರಿತು ಆಡುತ್ತಿದ್ದರು ಎನ್ನುವುದು ನನ್ನ ಅಭಿಪ್ರಾಯ" ಎನ್ನುತ್ತಾನೆ.

ಪೂರ್ವಾಶ್ರಮದ ಪತ್ನಿಗೆ ಬುದ್ಧನ ದರ್ಶನವಮಾಡಿಸಿ ದೀಕ್ಷೆ ಕೊಡಿಸುವುದರಲ್ಲಿ ಇವನ ಪಾತ್ರ ಬಹಳ. "ಮಾವೆಯಲಿ ಚಿಕ್ಕಮ್ಮ, ಬೆಳೆದುದರೊಳಕ್ಕಯ್ಯ, ಯುವರಾಣಿಯಾದಂದು ಅತ್ತೆ, ಇನ್ನೀಗಳೋ ಗುರುವಿನಂದಿನ ಪತ್ನಿ." ಇಂತಹವಳಿಗೆ ಸೇವೆ ತನ್ನ ಕರ್ತವ್ಯವೆಂದು ಎಣಿಸಿದ್ದಾನೆ ಆನಂದ.

ಹೀಗೆ ಅನ್ವರ್ಥನಾಮನಾಗಿದ್ದಾನೆ ಆನಂದ. ಬುದ್ಧನಿಗೆ ತಕ್ಕ ಶಿಷ್ಯನಾಗಿ ಆನಂದಮಯವಾದ ಜೀವನಕ್ಕೆ, ಲೋಕಕಲ್ಯಾಣಕ್ಕೆ ಆವಾಸವಾಗಿದ್ದಾನೆ. ಇಂತಹ ಜೀವಗಳಿಂದಲೇ ಜಗತ್ತು ಪವಿತ್ರವಾಗುವುದು.

ಮಾಸ್ತಿಯವರ ಕಲೆಯಲ್ಲಿ ಸರಸ ವಿನೋದ, ಮಧುರ ಶೃಂಗಾರ, ಆಶಾವಾದ, ಸ್ತ್ರೀತ್ವ ಗೌರವ, ಸ್ವಾರ್ಥರಹಿತವಾದ ಕಲ್ಯಾಣದೃಷ್ಟಿಗಳು ವ್ಯಾಪ್ತವಾಗಿವೆ. ಬುದ್ಧನ ಸರ್ವತೋನ್ನತಿಯನ್ನಾಗಲಿ, ಆನಂದನ ಸಮತಾ ದೃಷ್ಟಿಯನ್ನಾಗಲಿ, ಅಂಬಾಪಾಲಿಯ ಪಶ್ಚಾತ್ತಾಪ ದಗ್ಧ ಹೃದಯವನ್ನಾಗಲಿ, ಅಂಬಿಕೆಯ ಸ್ವಾರ್ಥರಾಹಿತ್ಯವನ್ನಾಗಲಿ, ಯಶೋಧರೆಯ ಆತ್ಮಾಭಿಮಾನವನ್ನಾಗಲಿ, ಶುದ್ಧೋದನನ ವೃದ್ಧಾಪ್ಯದ ದೃಷ್ಟಿಯನ್ನಾಗಲಿ ಒಂದೇ ಮಟ್ಟದಿಂದ ನೋಡಬಲ್ಲದು ಚಿತ್ರಿಸಬಲ್ಲದು. ಆ ಹಿರಿಯ ಕಲಾಶಕ್ತಿಗೆ 'ಯಶೋಧರಾ' ಒಂದು ದೃಷ್ಟಾಂತ.

೨೫

# ಕಾರಂತರ
# ಒಂದು ಕಾದಂಬರಿ—ಕುಡಿಯರ ಕೂಸು

ಅಲೆಗ್ಝಾಂಡರನು ಇಂಡಿಯಾ ದೇಶಕ್ಕೆ ಬಂದ ಕಾಲದಲ್ಲಿ ಕಾರಂತರೇನಾದರೂ ಜೀವಿಸಿದ್ದರೆ ಅವನನ್ನು ಸೋಲಿಸಿ ಓಡಿಸಿಬಿಡುತ್ತಿದ್ದರು. ಮಹಮದ್ ಘೋರಿಯೋ, ಘಜ್ನಿಯೋ ಇವರನ್ನು ಕಂಡಿದ್ದರೆ ದಂಡಯಾತ್ರೆಗಳ ಸಂಖ್ಯೆ ಇಷ್ಟೊಂದಿರುತ್ತಿರಲಿಲ್ಲ. ಈ ಮಾತಿನ ಸತ್ಯ ಕಾರಂತರನ್ನು ಅರಿಯದವರಿಗೆ ತಿಳಿಯದು.

ಕಾರಂತರು ಸಾಹಸದ ವ್ಯಕ್ತಿ ಎನ್ನುವುದಕ್ಕೆ ಉದಾಹರಣೆಗಳನ್ನು ಹುಡುಕಬೇಕಾಗಿಲ್ಲ. ಅವರೊಡನೆ ನಿಂತು ಸ್ವಲ್ಪಕಾಲ ಮಾತನಾಡಿದರೆ ಸಾಕು, ಇದು ವ್ಯಕ್ತವಾಗುತ್ತದೆ. ಮೊದಮೊದಲು ಅವರನ್ನು ಕಂಡರೆ ಸ್ವಾತಂತ್ರ್ಯ ವಹಿಸುವುದಕ್ಕೆ ಹೆದರಿಕೆಯೇ ಆಗುತ್ತದೆ ಎನ್ನಬೇಕು. ಅವರ ರೀತಿಯನ್ನು ಅರಿತಮೇಲೆ ಆ ಸರಳ ಹೃದಯದ ಹಾಸ್ಯ ವಿಲಾಸಗಳ ಸವಿಯನ್ನು ಅನುಭವಿಸುವುದು ಬಹು ಸುಲಭ.

## ಸಾಹಸಿ ಬೆಟ್ಟದ ಜೀವ

ಕಾರಂತರು ಬೆಟ್ಟದ ಮೇಲೆ ಮನೆ ಮಾಡಿದ್ದಾರೆ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ" ಎಂದು ನಾವು ಕೇಳಿದರೆ, ಅವರು ಅದೇ ಮಾತನ್ನು ಪ್ರಾರಂಭಿಸಿ "ಮೃಗಗಳ ನೋಡಿಸದೆಂತಯ್ಯಾ?" ಎಂದು ಪ್ರಶ್ನಿಸುವ ರೀತಿಯವರು. ಕಾಡಿನ ಮಧ್ಯೆ ಮನೆಮಾಡಿ ಮೃಗಗಳನ್ನು ಓಡಿಸುವುದು, ಸಂತೆಯ ಮಧ್ಯೆ ಮನೆ ಮಾಡಿ ಶಬ್ದವನ್ನು ದೂರಮಾಡುವುದು ಇವರ ಸಾಹಸ.

ಅವಿಶ್ರಾಂತವಾದ ದುಡಿಮೆಗೆ ಆಕರವಾದ ಕಾರಂತರ ವ್ಯಕ್ತಿತ್ವದಲ್ಲಿ ಅನೇಕ ಆಸೆಗಳು ಮನೆಮಾಡಿವೆ. ಸಮಾಜ ಸುಧಾರಣೆ, ಬಾಲ ಶಿಕ್ಷಣ, ಸಾಹಿತ್ಯಪ್ರಯೋಗ, ಚಿತ್ರಕಲೆ, ನೃತ್ಯ, ನಾಟಕ ಪ್ರದರ್ಶನ,

ಪುಸ್ತಕ ಪ್ರಕಾಶನ, ದೇಶಪರ್ಯಟನ, ಸ್ನೇಹಸಂಪಾದನ, ಚಿತ್ರಗ್ರಹಣ, ಇವುಗಳಲ್ಲಿ ಅನೇಕ ಆಸೆಗಳು ಅವರ ಕೈಕಚ್ಚಿವೆ. ಆದರೆ ಅದಕ್ಕೆ ಹೆದರದೆ ಪರಿಹಾರಗಳನ್ನು ಹುಡುಕಿ ಮತ್ತೆ ಸಾಹಸಕ್ಕೆ ಕೈಹಾಕುವುದೆ! "ಅಡಿಯು ಹಿಂದಿಡೆ ನರಕ." ಮುಂದಿಡೆ ಸ್ವರ್ಗ ವಿದೆಯೋ ಇಲ್ಲವೋ ಗೊತ್ತಿಲ್ಲ. ಇಷ್ಟಕ್ಕೂ ಅವರಿಗೆ ಸ್ವರ್ಗವೂ ಬೇಕಿಲ್ಲ, ತಾವು ಮಾಡುವ ಕೆಲಸದಿಂದ ನರಕ ದೊರೆಯುವುದಾದರೆ, ಅದೇ ಸಾಕು, ಅದೇ ಬೇಕು!

ಪುಸ್ತಕ ಪ್ರಕಾಶನವೇ ಕಷ್ಟವಾಗಿದ್ದ ಆ ಕಾಲದಲ್ಲಿ 'ಬಾಲ ಪ್ರಪಂಚ'ವನ್ನು ಪ್ರಕಟಿಸಿದ ಸಾಹಸವನ್ನು ನೆನೆಸಿಕೊಂಡರೆ ವ್ಯಕ್ತಿಯ ಯೋಗ್ಯತೆ ಗೊತ್ತಾಗುತ್ತದೆ. ಕೆಲಸಕ್ಕೆ ಹೊರಟರೆ, ಹುಲಿ ಹಿಡಿಯು ವುದೇ, ಸಿಂಹಕ್ಕೆ ಜಡೆ ಹೆಣೆಯುವುದೇ, ಆನೆ ಸವಾರಿ ಮಾಡುವುದೇ ದೃಷ್ಟಿ. ಇಲಿ ಹಿಡಿದು, ಕಪಿಗೆ ಜಡೆ ಹೆಣೆಯುವವರನ್ನು ಕಂಡರೆ ಇದೇನು ಕೆಲಸ ಎನ್ನುವ ಅನುಕಂಪೆ.

ರಂಗದ ಮೇಲೆ ತಾವೇ ನೃತ್ಯಮಾಡಿ, ಪ್ರೀತ ಮಯೂರವನ್ನು ಸೃಷ್ಟಿ ಮಾಡುವುದಾಗಲಿ, ಛಾಯಾ ನಾಟಕಗಳನ್ನಾಡಿ ಹಾಡುಗಳನ್ನು ಹೊಂದಿಸುವುದಾಗಲೀ, ಗೀತ ರೂಪಕಗಳನ್ನು ರಚಿಸಿ ಪ್ರದರ್ಶಿಸುವುದ ರಲ್ಲಾಗಲೀ ಒಂದು ಹೊಸ ವೈಖರಿಯನ್ನು ಕಾರಂತರು ಬೀರುತ್ತಾರೆ.

## 'ಲತ್ತೆ ಕೊಡುವ ಕತ್ತೆ'

ನಾಟಕ ಕಾದಂಬರಿಗಳು ಇವರ ಅಭಿಪ್ರಾಯಗಳ ಮುಖ್ಯ ವಾಹಕಗಳು. ಒಂದು ಗ್ರಂಥದಲ್ಲಿ "ಸುತ್ತಲೂ ಲತ್ತೆ ಕೊಡುವ ಕತ್ತೆ ಯಿದು" ಎಂದು ಪಾಶ್ಚಾತ್ಯ ಸಾಹಿತಿಯ ಮಾತನ್ನು ಅವರೇ ಎತ್ತಿ ಹೇಳಿದ್ದಾರೆ. ಈ 'ಲತ್ತೆಗಳಿಗೆ' ಸಿಕ್ಕದ ವಿಷಯವಿಲ್ಲ. ಪೂಜಾರಿಗಳ ಡಂಭ, ಫಂಡರ ಪಾಪ, ಸಿರಿವಂತರ ಘೋರಣೆ, ಬಡವರ ದೈನ್ಯ, ರಾಜಕಾರಣಿಗಳ ಸ್ವಾರ್ಥ, ಸಾಹಿತಿಗಳ ಸ್ವಾಭಿಮಾನ, ಉಪಾಧ್ಯಾಯರ ದುರವಸ್ಥೆ, ಇವೆಲ್ಲ 'ಲತ್ತೆ'ಗಳನ್ನುಪಡೆದಿವೆ. ಘಟ್ಟದ ಕೆಳಗಿನ ಮತ್ತು ಮೇಲಣ ಜೀವನ ಚಿತ್ರಣದಲ್ಲಿ'ಕ್ಯಾಮರಾ'ದಂತೆ ಹೊರಗಣ ಚಿತ್ರ

ವನ್ನು ಸೂಚಿಸಿ, ಆ ಯಂತ್ರಕ್ಕೆ ಸಿಕ್ಕದ ಅಂತರಂಗದ ಭಾವೋದ್ರೇಕಗಳನ್ನು ತುಂಬಿ, ರಮ್ಯವೂ ಆಕರ್ಷಕವೂ ಆದ ಕಾದಂಬರಿಗಳನ್ನು ರಚಿಸಿದ್ದಾರೆ. ಈ ಕಾದಂಬರಿಗಳನ್ನು ಓದುವವರಿಗೆ ಉಡುಪಿ ಕುಂದಾಪುರಗಳೂ, ಪಿಟ್ಲ ಮಂಗಳೂರುಗಳೂ, ಪಡುಮಲೆಯ ನೂರಾರು ಗುಡ್ಡಗುಡಿಸಲುಗಳೂ, ಜಿಟ್ಟದ ಜೀವಗಳೂ, ಜಾರುವ ದಾರಿಗಳೂ, ಚಿಗುರುವ ಕನಸುಗಳೂ, ಔದಾರ್ಯದ ಉರುಳುಗಳೂ ಅನುಭವದ ವಸ್ತುಗಳಾಗುತ್ತವೆ. 'ಲಚ್ಚ'ನ ದುಷ್ಟಸ್ವಭಾವ, ಸರಸೋತಿ ಪಾರೋತಿಯರ ಸೌಹಾರ್ದ, ನಾಗವೇಣಿಯ ಸಾಹಸ, ಪ್ರಭುದೇವನ ಔದಾರ್ಯ, ಸತ್ಯಳ ಆತ್ಮತ್ಯಾಗ, ಅಚ್ಚುತನ ಮುಗಿದ ಯುದ್ಧ, ಕೆಂಪಿಯ ಧಾರ್ಷ್ಟ್ಯ, ಕರಿಯನಸಾಹಸ, ಕರಾವಳಿಯ ಕಷ್ಟಜೀವನ, ಗಿರಿ, ವನ, ನದಿಗಳ ರಮ್ಯಭಯಂಕರತೆ, ಬೆಳ್ಳಿಯ ಬಾಳು, ಚೋಮನ ದುಡಿ, ಇವೆಲ್ಲ ಇಂದು ಕನ್ನಡದ ಸ್ವತ್ತಾಗಿರುವುದು ಕಾರಂತರಿಂದ. 'ಹಾರ್ಡಿ'ಯ ಕಾದಂಬರಿಗಳನ್ನು ಓದುವವರಿಗೆ ವೆಸ್ಸೆಕ್ಸಿನ ಚಿತ್ರ ದೊರೆತಂತೆ, ಕಾರಂತರ ಕಾದಂಬರಿಗಳಿಂದ ಪಶ್ಚಿಮ ಘಟ್ಟಗಳ ಚಿತ್ರ ನಮ್ಮ ಹಸ್ತಗತವಾಗಿದೆ.

ಇವರ ಎಲ್ಲ ರಚನೆಗಳಲ್ಲಿ ವಿಡಂಬನೆಯ ದೃಷ್ಟಿ ಒಡಮೂಡಿದೆ. ಹಳ್ಳಿಯ ಹತ್ತು ಸಮಸ್ತರಿಂದ ಹಿಡಿದು ಡಿಲ್ಲಿಯ "ಬತ್ತದ ತೊರೆ"ಗಳ ವರೆಗೆ ವಿಡಂಬನೆ ಹರಿದಿದೆ. ಇದು ಗರ್ಭಗುಡಿಯನ್ನು ಹೊಕ್ಕು ದೇವರನ್ನೇ ಹಾಸ್ಯಮಾಡುತ್ತದೆ. ಆಬುವಿಂದ ಬರಾಮಕ್ಕೆ ನುಗ್ಗಿ ಭಾರತೀಯರ ವೈವಿಧ್ಯ, ಐಕ್ಯಗಳನ್ನು ಅರ್ಥಮಾಡಿಕೊಂಡು ಚಿತ್ರಿಸುತ್ತದೆ. ಕಾಳ್ಗಿಚ್ಚನ್ನು ಹೊತ್ತಿಸುತ್ತದೆ. ಹೊಳೆ ನೆರೆಯನ್ನು ಹಿಡಿದು ತೇಲುತ್ತದೆ. ಇದೊಂದು ಅದಮ್ಯವಾದ ಸಾಹಸ ಶಕ್ತಿ. ಶ್ರೀಮಾನ್ ಕಾರಂತರು ಕಾರ್ಯವಂತರು.

ಕನ್ನಡದಲ್ಲಿ "ಮರಳಿ ಮಣ್ಣಿಗೆ' ಎಂಬ ಕಾದಂಬರಿ ಬಂದ ದಿನ ಕಾರಂತರ ಕೀರ್ತಿ ನಮ್ಮ ಸಾಹಿತ್ಯದಲ್ಲಿ ಶಾಶ್ವತವಾಗಿಹೋಯಿತು.

ಅದಾದಮೇಲೆ ಬರುತ್ತಿರುವ ಅವರ ಕಾದಂಬರಿಗಳಲ್ಲಿ ಅವರ ಕಥನ ಕೌಶಲ್ಯ ಮತ್ತಷ್ಟು ಉತ್ತಮಗೊಳ್ಳುತ್ತಿರುವುದೇ ಅಲ್ಲದೆ ವೈವಿಧ್ಯವನ್ನೂ ವ್ಯಕ್ತಪಡಿಸುತ್ತಿರುವುದು ನಮ್ಮ ಆಸೆಯನ್ನೂ, ನಿರೀಕ್ಷೆ

ಯನ್ನೂ ಹೆಚ್ಚುಮಾಡುತ್ತಿದೆ. ಕಾದಂಬರಿಗಳ ಸಂಖ್ಯೆಯ ದೃಷ್ಟಿಯಿಂದಲೂ ಅರ್ಹತೆಯ ದೃಷ್ಟಿಯಿಂದಲೂ ಕಾರಂತರು ನಮ್ಮ ಸಾಹಿತ್ಯದಲ್ಲಿ ಬಹಳ ಹಿರಿಯ ವ್ಯಕ್ತಿಯಾಗಿದ್ದಾರೆ. ನಾಟಕ, ಪ್ರಬಂಧ, ಸಣ್ಣ ಕಥೆ, ಗೀತನಾಟಕ, ವಿಡಂಬನೆ ಮುಂತಾದ ಎಲ್ಲ ಸಾಹಿತ್ಯ ರೂಪಗಳು ಇವರಿಗೆ ಸ್ವಕ್ಷೇತ್ರ.

ಘಟ್ಟದ ಜನರ ವಿವಿಧ ಚಿತ್ರಗಳನ್ನು ಕಟ್ಟಿ ನಮ್ಮ ಕಣ್ಮನಗಳನ್ನು ಇವರು ತಣಿಸಿದ್ದಾರೆ. 'ಕುಡಿಯರ ಕೂಸು' ಇವುಗಳಲ್ಲಿ ಬಹು ಮುಖ್ಯವಾದ ಒಂದು ಚಿತ್ರ. ದಕ್ಷಿಣ ಕನ್ನಡದ ಘಟ್ಟ ಪ್ರದೇಶಗಳಲ್ಲಿ ವಾಸಮಾಡುವ ಮಲೆಕುಡಿಯರ ಜೀವನ ಮಾರ್ಗವನ್ನು ನಾವಿಲ್ಲಿ ಕಾಣುತ್ತೇವೆ. ಅವರ ನಂಬಿಕೆಗಳು, ವ್ಯವಹಾರಗಳು, ದೇವತೆಗಳು, ಧಣಿಗಳು ಇವು ಇಲ್ಲಿ ಹಾಸುಹೊಕ್ಕಾಗಿ ಹೆಣೆದುಕೊಂಡಿವೆ. ಚಿತ್ರಕಾರನು ಉಪಯೋಗಿಸುವ ಸಾಧನಗಳಲ್ಲಿ ವಸ್ತ್ರ (Canvas) ವಿಸ್ತಾರವಾಗಿದ್ದು ಅದರ ಮೇಲೆ ಬರುವ ಚಿತ್ರಗಳು ವಿರಳವಾಗಿದ್ದರೆ ಅದರ ರೀತಿಯೇ ಬೇರೆ. ಹಾಗಲ್ಲದೆ ವಸ್ತ್ರದ ಉದ್ದ ಅಗಲಗಳು ಚಿಕ್ಕದಾಗಿದ್ದು ಅದರಲ್ಲಿನ ಚಿತ್ರ ಸೂಕ್ಷ್ಮವಾಗಿ ಬಂದಿದ್ದರೆ ಅದರ ರೀತಿ ಬೇರೆ. "ಕುಡಿಯರ ಕೂಸು" ಈ ಎರಡನೆಯ ಮಾರ್ಗಕ್ಕೆ ಸೇರಿದ ಚಿತ್ರ ಕರ್ಮ. ಸುಮಾರು ಹತ್ತು ಚದರ ಮೈಲಿಗಳೊಳಗೇ ಈ ಕಾದಂಬರಿಯ ಎಲ್ಲ ಕಥೆಯೂ ನಡೆಯುತ್ತದೆ. ಸುಮಾರು ಇಪ್ಪತ್ತು ವರ್ಷಗಳಲ್ಲಿ ಒಂದು ಪ್ರದೇಶದಲ್ಲಿ ನಡೆಯುವ ಮುಖ್ಯ ಘಟನೆಗಳೆಲ್ಲ ಇಲ್ಲಿ ಸೇರಿವೆ. ಮಲೆಕುಡಿಯರ ಜೀವನದ ಎಲ್ಲ ಮುಖ್ಯ ಸಂಗತಿಗಳೂ ಕಥೆಗೆ ಸೇರಿಕೊಂಡು ಯಾವ ಒಂದು ಅಂಶವನ್ನು ಗಮನಿಸಿದರೂ ಬೇರೆ ಯಾವುದೋ ಹೊಸ ಸಮಾಜಕ್ಕೆ ಬಂದಂತೆ ಆಗುತ್ತದೆ ನಮಗೆ. ಮಲೆಕುಡಿಯರ ಧೈರ್ಯಸಾಹಸಗಳು, ಮೃಗಗಳ ಬೇಟೆ, ಕರಡಿಯೊಡನೆ ಯುದ್ಧ, ಆನೆ ಹಿಡಿಯುವುದು, ಹುಲಿ ಕೊಲ್ಲುವುದು, ಯಾಲಕ್ಕಿ ಬಿಡಿಸುವುದು, ಕಬ್ಬಿಣದ ಆಯುಧವಿಲ್ಲದೆ ಕುಮರಿ ಮಾಡುವುದು, ಧನಿಗಳ ಸೇವೆ ಮುಂತಾದುವೂ, ಕುಡಿಯರಲ್ಲಿ ವಿವಾಹಕ್ಕೆ ಹೆಂಗಸರು ದೊರಕುವ ಕಷ್ಟ, ಅವರ ಸೌಂದರ್ಯ, ಕಷ್ಟದ ಜೀವನ, ಅಲ್ಪತೃಪ್ತಿ, ಮಾತ್ಸರ್ಯ ಮುಂತಾದವೂ ; ಧನಿಯರಲ್ಲಿ ಕೆಲವರು

ಕಾಮದಾಹ, ಅದಕ್ಕೆ ಪ್ರತೀಕಾರ ಮುಂತಾದುವೂ, ನಿಸರ್ಗದ ಭವ್ಯ ವರ್ಣನೆಗಳೂ ಕಾದಂಬರಿಯಲ್ಲಿ ಸೇರಿವೆ. ಮಲೆಕುಡಿಯರ ಕೇರಿಗೆ ಇದೊಂದು ಕೈಮರವೆಂದು ಬೇಕಾದರೂ ಹೇಳಿಬಿಡಬಹುದು.

ಕಾದಂಬರಿಯ ಕಾಲ ವಿಸ್ತಾರವೂ ದೇಶ ವಿಸ್ತಾರವೂ ಎಲ್ಲರ ಕಲ್ಪನೆಗೂ ನಿಲುಕುವುದಾದುದರಿಂದ ಇಲ್ಲಿಯ ಪಾತ್ರಗಳೂ ಘಟನೆಗಳೂ ಎದುರಿಗೆ ಓಡಾಡುವಂತೆ, ನಡೆದಂತೆ ಕಾಣುತ್ತವೆ. ಮಳೆಗಾಲ, ಸೆಕೆಗಾಲಗಳು ಬೀಸಿಬಂದು ವೈತಾಗಿದಂತಾಗುತ್ತದೆ. ಕಾಡಿನ ಒಳಗೆ ನುಗ್ಗಿ, ಮರಗಳನ್ನು ಸವರಿ, ಬಂಡೆಯೇರಿ, ಕಣಿವೆಯಿಳಿದು ತೊರೆಯ ದಡ ಸೇರಿ ನೀರಿನಲ್ಲಿ ಕಾಲಾಡಿಸುತ್ತಾ ಕುಳಿತು 'ಕೆಂಪಿ'ಗಳಾಗಿಬಿಡುತ್ತೇವೆ. ಬಂದಿಸಿಂದ 'ತಿರುಮಲಭಟ್ಟರ' ಸವಾರಿ ಸಾಗುತ್ತಿದ್ದಂತೆಯೇ 'ತಿಮ್ಮ'ನ ಕೂಗು ಕಿವಿಗೆ ಕೇಳಿಸುತ್ತದೆ. ಇಲ್ಲದಿದ್ದರೆ 'ಬಿರುಮ'ನೊಡನೆ 'ಕಿರಿಮಲೆ'ಗೆ ಬರುವಾಗ ಅವನನ್ನು ಹುಲಿ ಹೊತ್ತುಕೊಂಡುಹೋಗುವುದನ್ನು ನೋಡಿ ಕಿರಿಚಿಕೊಳ್ಳುತ್ತೇವೆ. 'ಕಾಳ'ನನ್ನೇ ಕುರಿಯಾಗಿ ಮಾಡಿ ಹುಲಿಯನ್ನು ಹೊಡೆಯುತ್ತೇವೆ. ಆನೆಯನ್ನು ಹಿಡಿದು ಪಳಗಿಸುತ್ತೇವೆ. ಜನರ ಸಹವಾಸ ಬೇಡವಾದರೆ ಈ ಕಣಿವೆಯನ್ನು ದಾಟಿ ಯಾರಿಗೂ ಕಾಣದೆ ಗವಿಯೊಂದರಲ್ಲಿ ತಿಂಗಳುಗಟ್ಟಲೆ ವಾಸಮಾಡುತ್ತೇವೆ. 'ಕಲ್ಕುಡ'ನ ಮುಂದೆ ನಿಂತು ನಮಸ್ಕರಿಸಿ ನಮ್ಮ ಕುಡಿಯರ ಗುಂಪನ್ನು ಕಾಪಾಡುವಂತೆ ಬೇಡುತ್ತೇವೆ. ಅಂತೂ ಈ ಕಾದಂಬರಿಯು ನಮ್ಮ ಮೇಲೆ ಯಾವುದೋ ಮಾಯೆಯನ್ನು ಬೀಸಿ ನಮ್ಮನ್ನು ಕುಡಿಯರನ್ನಾಗಿ ಮಾಡಿಬಿಡುತ್ತದೆ. ಗ್ರಂಥದ ವಾಚನ ಪೂರೈಸಿದ ಮೇಲೆಯೇ ಈ ಮಾಟ ಹರಿಯಬೇಕಾದರೆ.

ಇಲ್ಲಿ ಬರುವ ನಿಸರ್ಗದ ವರ್ಣನೆ ತಾನೆ ಎಷ್ಟು ಸೊಗಸಾದುದು! ಕಿರಿಹಿರಿಮಲೆಯ ಪರಿಚಯ ಮಾಡಿಕೊಳ್ಳಿ. "ದಂಡೆಗೆ ಮೂತಿಚಾಚಿ ಮಲಗಿಕೊಂಡ ಅವಳಿಜವಳಿ ಮೊಸಳೆಗಳಂತೆ ಸಹ್ಯಾದ್ರಿಯ ಉನ್ನತ ಶ್ರೇಣಿಯಿಂದ ಕವಲೊಡೆದು ನಿಡಿದು ಚಾಚಿ ನಿಂತವು–ಹಿರಿ–ಕಿರಿ ಮಲೆಗಳು." ಲೇಖಕರು ಹೀಗೆ ಪ್ರಾರಂಭಿಸಿ ಅಲ್ಲಿನ ಅಬ್ಬಿ, ವೃಕ್ಷರಾಜಿ, ಹುಲ್ಲುಗಾವಲು, ಕಾಳ್ಗಿಚ್ಚು, ಮುಂತಾದುವನ್ನು ಪ್ರತ್ಯಕ್ಷಪಡಿಸುತ್ತಾರೆ.

ಮಳೆಗಾಲ ಕಳೆದಮೇಲೆ ಪರ್ವತಗಳ ಸಾಲು "ಶಾಪಗ್ರಸ್ತವಾಗಿ, ಚಲನ ಶಕ್ತಿಯನ್ನು ಕಳೆದುಕೊಂಡ ಸಮುದ್ರದ ತೆರೆಗಳಂತೆ ಕಾಣುತ್ತವೆ." ಅಲ್ಲಿನ ತೊರೆಯ ಚೆಲುವನ್ನು ವರ್ಣಿಸತೀರದು. "ಕೆಲವೊಮ್ಮೆ ಪೊದೆಗಳೆಡೆಯಲ್ಲಿ ಹೊಕ್ಕು ಹೊರಡುವ ಹೆಬ್ಬಾವಿನ ಮೈಯಂತೆ ತೊರೆಯ ಮೈ ಥಳಥಳಿಸುತ್ತದೆ. ತೊರೆ ಅಲ್ಲಲ್ಲಿ ವಿರಮಿಸಿ, ಬಂಡೆಗಳನ್ನು ಅಪ್ಪಳಿಸಿ, ತನ್ನ ಉಕ್ಕನ್ನು ತೋರಿಸುವಾಗಲಂತೂ ಯಾರೋ ಕಣಿವೆಯಲ್ಲಿ ಕುಳಿತು ಮಲ್ಲಿಗೆಯ ಹೂವನ್ನು ಮೇಲಕ್ಕೆ ಹಾರಿಸುವಂತೆ ಕಾಣುತ್ತದೆ". ಧುಮುಕುವ ಅಬ್ಬಿಗಳು ಬಿಳಿ ಬಟ್ಟೆಗಳನ್ನು ಬಿಸಿಲಿಗೆ ಒಣಗಿಸಲು ತೂಗಿಸಿರುವಂತೆ ಕಾಣುತ್ತವೆ. ಬಂಡೆಯೊಂದರಿಂದ ನೀರಿಳಿಯುವಾಗ ಕಿರಿಮಲೆಯ ತೊರೆ ಶಿವನ ಜಡೆಯಿಂದಿಳಿಯುವ ಗಂಗೆಯಂತೆ ಕಾಣುತ್ತಾಳೆ. ಬೆಟ್ಟ ಹಿರಿಯ ದೇಗುಲದ ಗರ್ಭಗುಡಿಯಂತೆ ಕಾಣಿಸುತ್ತದೆ. ಸಹಸ್ರಾರು ಭಕ್ತರೂ ತಪಸ್ವಿಗಳೂ 'ಓಂ'ಕಾರ ನುಡಿದಂತೆ ಕೇಳಿಸುತ್ತದೆ ನೈಸರ್ಗಿಕ ದೇಗುಲದಿಂದ ಹೊರಡುವ ಧ್ವನಿ. ಮಳೆಗಾಲದಲ್ಲಿ ಈ ಅಬ್ಬಿಗಳ ಮೊರೆತ ಪ್ರಲಯ ಘರ್ಜನೆ. ಕಾಡೆಲ್ಲ ರುದ್ರಕುಂಡವಾಗಿಬಿಡುತ್ತದೆ ಆಗ. ಆ ಬಳಿಕದ ಸೊಗಸೇ ಸೊಗಸು. "ನದಿ, ವನಗಳ ಸ್ವರ್ಗೋದ್ಯಾನದ ಈ ಸಭೆಯಲ್ಲಿ, ದಾರಿತಪ್ಪಿದ ಮುಗಿಲೊಂದು ತೇಲಿ ಬಂದರೆ, ಅಪ್ಸರೆಯರ ವಿಲಾಸವೆಲ್ಲ ಕಾಣಿಸುತ್ತದೆ." "ಈ ಮುಗಿಲ ಮೋಹಿನಿಯರು ಮಾಯಾವಿಗಳಾಗುತ್ತಾರೆ. ತೇಲುವ ಜಲಕನ್ಯೆಯರ ರೂಪ ಬಿಟ್ಟು, ಕತ್ತೆತ್ತಿದ ಬಾಲದ ಚವರಿ ಬೀಸಿ, ನಾಗಾಲೋಟ ಹೂಡುವ ಬಿಳಿ ಕುದುರೆಗಳಾಗುತ್ತಾರೆ. ಈ ಮುಗಿಲು ಕುದುರೆಗಳ ಹಿಂಡಿಗೆ ಹಿಂಡೇ ಓಡುವಾಗ ಪಡವಣದ ಬೆಟ್ಟದ ಸಾಲು ಹಿರಿಯ ಹುಲ್ಲುಗಾವಲೊಂದರ ಕಲ್ಪನೆ ಕೊಡುತ್ತದೆ."

ಈ ವರ್ಣನೆಗಳಲ್ಲೆಲ್ಲಾ ಶ್ರೀ ಕಾರಂತರ ಕವಿಹೃದಯ ವ್ಯಕ್ತವಾಗಿ ಓದುಗನನ್ನು ಕಿರಿಮಲೆಗೆ ಕರೆದೊಯ್ಯುತ್ತದೆ. ಈ ಕಾದಂಬರಿಯನ್ನು ಓದುವುದೂ ಒಂದೆ, ಘಟ್ಟದ ಮಲೆಯೊಂದರಲ್ಲಿ ವರ್ಷದ ವಿವಿಧ ಕಾಲಗಳಲ್ಲಿ ವಿಹರಿಸುವುದೂ ಒಂದೇ. ನಿಸರ್ಗದ ಚಿತ್ರದಂತೆಯೇ ನಿಸರ್ಗದ ಮಡಿಲ ಪ್ರಾಣಿಗಳಾದ ಮಾನವರ ಚಿತ್ರವೂ ಇದೆ. ಇತರ ಪ್ರಾಣಿಗಳೂ

ಇಲ್ಲಿ ಓಡಾಡುತ್ತವೆ. ಅವುಗಳ ಆಸೆ ಭಯಗಳಲ್ಲಿ ನಾವೂ ಭಾಗಿಗಳಾಗುತ್ತೇವೆ. ಹೀಗೆ ನಿಸರ್ಗವೇ ಈ ಕಾದಂಬರಿಗೆ ಹಿನ್ನೆಲೆ.

ಈ ಹಿನ್ನೆಲೆಯಲ್ಲಿ ಕಾಳ, ಕರಿಯ ಇವರು ಬೂದನೊಡನೆ ಸೇರಿ ಪ್ರಾಣಿಗಳಿಗೆ ಉರುಳಿಡುವುದನ್ನೂ ಪ್ರಾಣಿಗಳ ಸುಳಿವನ್ನು ತಿಳಿಯುವ ಕ್ರಮಗಳನ್ನೂ ನಾವು ಅರಿತುಕೊಳ್ಳುತ್ತೇವೆ. ಕುಡಿಯರು ಒಬ್ಬರೊಬ್ಬರಿಗೆ ತಿಳಿಯದಂತೆ ಉರುಳಿಡುತ್ತಾರೆ. ತಮ್ಮ ಉರುಳಿಗೆ ಬಿದ್ದ ಪ್ರಾಣಿಯನ್ನು ಇತರಾರೂ ಮುಟ್ಟುವಂತಿಲ್ಲವೆಂಬ ಧೈರ್ಯ ಅವರಿಗೆ. ಮುಟ್ಟಿದರೂ ಕೇರಿಯವರು ಅದನ್ನು ಕೊಡಿಸಿಬಿಡುತ್ತಾರೆ.

ಹೆಂಗಸರು ಗೆಣಸು ಹರಡುವುದೂ, ಗಂಡಸರು ಬಗನಿ ಹೆಂಡವನ್ನು ಇಳಿಸುವುದೂ, ಹಸಿವಾದಾಗ ಬಗನಿಯ ಕಬ್ಬನ್ನೇ ಆಹಾರವನ್ನಾಗಿ ಸಿಗಿದು ಆಯಾಸ ಪರಿಹಾರ ಮಾಡಿಕೊಳ್ಳುವುದೂ ಈ ಜನರ ಅಭ್ಯಾಸ. ಅರಣ್ಯದ ಸೌಂದರ್ಯ ಸುತ್ತ ತುಂಬಿದ್ದರೂ ಈ ಮಲೆಕುಡಿಯರಿಗೆ ಕಾವ್ಯದೃಷ್ಟಿಯೆಲ್ಲಿ ಬಂದೀತು, ಪಾಪ. ಬೆಟ್ಟ, ಕೋಡು, ಬಂಡೆಕಾಳ್ಗಿಚ್ಚುಗಳು ಈ ಜನರಿಗೆ ಅಶರೀರ ಪಿಶಾಚಿಗಳ ನೆನಪು ತರುತ್ತವೆ. ಮಲೆಗೊಂದು ಆತ್ಮ, ಕೋಡಿಗೊಂದು ಆತ್ಮ, ಮರ ಬಂಡೆ ಮುಂತಾದ ಎಲ್ಲ ಜಡವಸ್ತುಗಳಿಗೂ ಆತ್ಮಗಳು. ಹೀಗಾಗಿ ಈ ಜನ ತಮ್ಮ ಸುತ್ತಲಿನ ನಿಸರ್ಗಕ್ಕೆ ಆಳಾಗಿ ನಡೆದುಕೊಳ್ಳುವವರಾಗಿದ್ದಾರೆ. ಬಾಹ್ಯ ಪ್ರಪಂಚವನ್ನು ಅರಿಯದವರು ಈ ಕುಡಿಯರು. ನಾಗರಿಕತೆಯ ಸೋಂಕು ಅವರಿಗಿಲ್ಲ. ಕುಲ, ಕಟ್ಟಲೆ, ಕಲ್ಕುಡಗಳ ಪರಿಣಾಮ ಬಹಳ ಅವರ ಮೇಲೆ. ಮಲೆಯೇ ಕುಡಿಯ ಮಕ್ಕಳಿಗೆ ತವರುಮನೆ. ಅದನ್ನು ಬಿಟ್ಟು ಬೇರೆ ಕಡೆ ಅವರು ಇರಲಾರರು. ಅವ್ಯಕ್ತವಾದ ಒಂದು ಬಂಧನ ಅವರನ್ನಲ್ಲಿ ಹಿಡಿದಿರಿಸಿಬಿಡುತ್ತದೆ. ಇಂತಹ ಸ್ಥಳವೇ 'ಕುಡಿಯರ ಕೂಸು' ಚಿತ್ರಿಸುವ ಪ್ರದೇಶ.

## ಮೂರು ಘಟ್ಟಗಳು

'ಕುಡಿಯರ ಕೂಸು' ವಿಕಾಸವಾಗುವುದು ಮೂರು ಮಜಲುಗಳಲ್ಲಿ. ಮೊದಲು ಮುದಿಯ ಕೆಂಚನ ಗುರಿಕಾರಿಕೆಯಲ್ಲಿ ಕುಡಿಯರ ಜೀವನದ

ಚಿತ್ರವಿದ್ದರೂ ನಮಗೆ ಕಾಣುವುದು ಕೆಂಚನ ಸಂಸಾರದ ಚಿತ್ರ- ಹೆಂಡತಿ, ಮಗ, ಸೊಸೆಯರನ್ನೆಲ್ಲ ಕಳೆದುಕೊಂಡು ಒಬ್ಬಂಟಿಗನಾದರೂ ಅವನು ಬದುಕಿರುವುದು ಮೊಮ್ಮಗ ಕರಿಯನಿಗಾಗಿ, ತನ್ನ ಬಳಿಕ ಕರಿಯ ಗುರಿಕಾರನಾಗಿ ಬಾಳಬೇಕು ಎಂಬ ಹೆಬ್ಬಯಕೆಗಾಗಿ. ಆ ಕರಿಯನನ್ನು ಚಿಕ್ಕತನದಿಂದ ಹದಿನೇಳರ ಪ್ರಾಯಕ್ಕೆ ತಂದಿದ್ದೂ ಆಯಿತು. ತನ್ನ ಪ್ರಿಯ ದೇವತೆಗಳಾದ 'ಕಲ್ಕುಡ', 'ಮಲೆರಾಯ', 'ಸುಬ್ರಹ್ಮಣ್ಯ ಸ್ವಾಮಿ' ಇವರ ಸೇವೆಯನ್ನು ಸಲ್ಲಿಸಿಯೂ ಆಯಿತು. ದೈವದ ಎದುರು ತನ್ನ ಮೊಮ್ಮಗನೇ ಮುಂದಿನ ಗುರಿಕಾರನಾಗಬೇಕೆಂದು ಹೇಳಿಸಿದ್ದೂ ಆಯಿತು. ಹೀಗೆ ತನ್ನ ದೈವಋಣವನ್ನೂ ಪಿತೃಋಣವನ್ನೂ ತೀರಿಸಿ ಕೆಂಚನು ಹೊಗೆಯಾಗಿ ಕುಡಿಯ ಹಿರಿಯರ ರಾಜ್ಯಕ್ಕೆ ಹೊರಟು ಹೋಗುತ್ತಾನೆ.

ಕೆಂಚನ ಜೀವನಕ್ಕೆ ಸೇರಿದಂತೆ ಕಿರಿಮಲೆಯ ಕುಡಿಯರಲ್ಲಿ ಮುಖ್ಯರಾದ ತುಕ್ರ, ಬೂದ, ತಿಮ್ಮ, ಕೆಂಪಿ, ಚಿನ್ನಿ ಇವರ ಪರಿಚಯವೂ ನಮಗೆ ಆಗಿಹೋಗುತ್ತದೆ. ಕರಡಿಯನ್ನು ಕೊಲ್ಲಬಲ್ಲವನು 'ಕರಡಿ ತುಕ್ರ'. ಅವನ ಸಮಾನರಲ್ಲದಿದ್ದರೂ ಬೇಟೆಯಲ್ಲಿ ಹೆಸರಾದ ಬೂದ, ತಿಮ್ಮ, ಬೊಗಸೆಗಣ್ಣಿನ 'ಮಾಂಟಿ ಚಿಕ್ಕು' ಕೆಂಪಿ, ಬಲಿತ ಕಾಟಿಯ ಮರಿಯಂತಿದ್ದ ಚಿನ್ನಿ ಇವರೆಲ್ಲರೂ ನಮಗೆ ಹತ್ತಿರದವರಾಗಿ ಬಿಡುತ್ತಾರೆ ಈ ಮೊದಲ ಭಾಗದಲ್ಲಿ. ಇಲ್ಲಿಯ ಕಥನಕ್ರಮದಲ್ಲಿ ವಿಕಾಸಕ್ಕಿಂತ ಪೂರ್ವಚರಿತ್ರ ನಿರೂಪಣೆಯ ಹಾಟಿ ಕಂಡುಬರುತ್ತದೆ.

ನಿಜವಾಗಿ ಕಥೆ ವಿಕಾಸವಾಗಲು ಪ್ರಾರಂಭವಾಗುವುದು ಕೆಂಚನ ಅವಸಾನಾನಂತರ. ಇಲ್ಲಿಂದ ನಮಗೆ ತಿಳಿಯಬರುವುದು ತುಕ್ರ-ಕರಿಯ ಇವರಿಬ್ಬರ ಗುರಿಕಾರಿಕೆಯ ವಿಚಾರದಲ್ಲಿರುವ ತುಮುಲ. ಒಂದು ಕಡೆ 'ಕಲ್ಕುಡ'ನ ಪ್ರತಿನಿಧಿ ಕರಿಯ, ಮತ್ತೊಂದು ಕಡೆ ಧನಿ ತಿರುಮಲ ಭಟ್ಟರ ಪ್ರತಿನಿಧಿ ತುಕ್ರ. ಇವರಿಬ್ಬರಲ್ಲಿ ತುಕ್ರನೇ ಹೆಚ್ಚು ಅನುಭವಸ್ಥ; ಆದರೆ ವಕ್ರವಾದ ವ್ಯವಹಾರದವನು. ಕೆಂಚ ತನ್ನ ಸಾವಿಗೆ ಮುಂಚೆ "ಮಗು, ದೈವಕ್ಕೆ ಸಮನಾಗಿ ನಡೆ" ಎಂದು ಹೇಳಿದ್ದ ಮಾತನ್ನು ಕಾಪಾಡಿಕೊಂಡು ಬರುತ್ತಿರುವ ಕಿರಿಯ, ಕರಿಯ. ಈ ತುಮುಲದ

ಪರಿಣಾಮವಾಗಿ ಒಟ್ಟು ಕೇರಿಯೇ ಛಿನ್ನವಾಗುತ್ತದೆ. ಆದರೂ ಧನಿಗೆ ಎರಡು ಬಗೆಯುವವರು ಯಾರೂ ಇಲ್ಲ.

ಇದೇ ಭಾಗದಲ್ಲಿ ತುಕ್ರನಿಂದ ದೂರವಾಗಿ, ಬೂದನನ್ನು ಮದುವೆಯಾಗಿ, ಧನಿಗಳ ವಿಲಾಸದ ಭೂಮಿಯಾಗಿ, ಮೆರೆದ ಕೆಂಪಿಯ ಕಥೆ ಬೇರೆ ಸೇರುತ್ತದೆ. ಕಾಳ ಕರಿಯ ಇವರ ಬೇಟೆಗಳ ರಮ್ಯ ವರ್ಣನೆಗಳೂ, ತಿಮ್ಮನ ವಧೂ ಅನ್ವೇಷಣೆಯೂ ಕೊನೆಗೆ ಅವನ ಮತ್ತು ಗಿಡ್ಡಿಯ ಸಂಸಾರ ಚಿತ್ರವೂ ಬರುತ್ತವೆ. ಉಪಪ್ರಸಂಗವಾಗಿ ಕ್ರೈಸ್ತ ಜನರ ಹಾವಳಿಯ ಪರಿಣಾಮವಾಗಿ ಗಿಡ್ಡಿ ಪಾಲಿನ್ ಆದುದೂ, ಕುಕ್ಕ ಪಾಲು ಆದುದೂ ಅವರಿಗೆ ವಂಶನಾಮವಾಗಿ 'ಮಾರ್ಥಾ' ಎಂಬ ಹೆಸರು ಬಂದುದೂ ಉಕ್ತವಾಗಿದೆ. ವಲ್ಲಿಬ್ರಗಾಂಜನ ಕ್ರೂರ್ಜಿಯ ಪರಿಣಾಮ ಗಿಡ್ಡಿಯ ವಸನ ಸುಧಾರಣೆ, ಕುಕ್ಕನ ಕ್ರಾಪು ಇತ್ಯಾದಿಗಳು ಕಥೆಗೆ ಬೇಕಾಗಿರುವ ಧೋರಣೆಯನ್ನು ತಂದಿತ್ತು ಕುಡಿಯರ ಪರಾವಲಂಬನ ಸ್ಥಿತಿಯನ್ನು ಚಿತ್ರಿಸುತ್ತವೆ. ಒಟ್ಟನಲ್ಲಿ ಈ ಎರಡನೆಯ ಭಾಗ ತುಕ್ರನ ಗುರಿಗಾರಿಕೆಯ ರಾಜ್ಯಭಾರದ ಕಾಲವನ್ನು ಚಿತ್ರಿಸುತ್ತದೆ.

ಮೂರನೆಯ ಭಾಗವೇ ಈ ಕಾದಂಬರಿಯ ಕಥಾನಾಯಕನಾದ ಕರಿಯನ ಬೆಳವಣಿಗೆಗೆ ಮೀಸಲಾದ ಭಾಗ. ಇಲ್ಲಿ ಅವನ ಮಾನಸಿಕ, ದೈಹಿಕ, ವ್ಯಾವಹಾರಿಕ ಅಭಿವೃದ್ಧಿಗಳೆಲ್ಲ ಸೂಕ್ಷ್ಮವಾಗಿ ವಿವರಿಸಲ್ಪಟ್ಟವೆ. ತಿಮ್ಮ ಗಿಡ್ಡಿಯರಿಗಾಗಿ ತನ್ನ ಗುರಿಗಾರಿಕೆಯನ್ನೂ ಬಿಟ್ಟು ಕಣಿವೆಯಿಳಿದು ಗುಹೆಯಲ್ಲಿ ವಾಸಿಸಿದ ಅವನ ಹಿರಿಮೆ ಹೆಚ್ಚಿನದು. ಅವನ ಬೇಟೆ ಆನೆ, ಹುಲಿ, ಬರ್ಕ, ಕಾಟಿ ಇನ್ನೆಷ್ಟೋ ! ಊರಿನ ಈಡುಗಾರರನ್ನು ಮೀರಿಸಿದ ಅವನ ಕೀರ್ತಿ ಬೇಗ ಹರಡುವುದೇನೂ ಹೊಸದಲ್ಲ. ಅವನಿದ್ದ ಕಡೆಗೆ ಅವನೇ ರಾಜನೆಂದೂ ಅದಕ್ಕೆ 'ಕರಿಯಮಲೆ' ಎಂದು ನಾಮಕರಣಮಾಡಿದ ತಿಮ್ಮ ಅವನನ್ನು ಚೆನ್ನಾಗಿ ಅರ್ಥಮಾಡಿಕೊಂಡಿದ್ದನು. ಕೊನೆಗೆ ತುಕ್ರನೇ ಒಪ್ಪಿ ಅವನಿಗೆ ಗುರಿಕಾರಿಕೆಯನ್ನೊಪ್ಪಿಸಿಬಿಡುತ್ತಾನೆ. ಈ ಮೂರು ವರ್ಷದ ಕಥೆ ಈ ಕಾದಂಬರಿಯ ರಸಸ್ಥಾನ; 'ಕುಡಿಯರ ಕೂಸಿ'ನ ವೈವಿಧ್ಯಮಯ ಜೀವನದ ರಂಗ

ಮಂದಿರ. ಅದರ ಚಿತ್ರಣದಲ್ಲಿ ಕಾರಂತರ ಚಿತ್ರಕರ್ಮ ಬ
ಸೊಗಸಾಗಿ ಮೂಡಿದೆ.

## 'ಕಲ್ಕುಡ'ನ ಪ್ರಭಾವ

ಕುಡಿಯರ ಕರ್ಮಧರ್ಮದಲ್ಲಿ ದೈವಭಕ್ತಿಯೂ ಬಹು ಮುಖ
ವಾದುದು. ಕೆಂಚನಂತಹ ಹಿರಿಯ ಗುರಿಕಾರನಿಗೆ ತಮ್ಮನ
ಕಾಪಾಡುವ ದೇವತೆಗಳು ಗೊತ್ತು. ಕುಡಿಯರೆಲ್ಲರು ಅರಿತ ದೇವತೆಗ
ಮೂರು: ಕಲ್ಕುಡ, ಮಲೆರಾಯ, ಸುಬ್ರಹ್ಮಣ್ಯಸ್ವಾಮಿ. ಕು
ಸುಬ್ರಹ್ಮಣ್ಯಸ್ವಾಮಿಯು ಸುತ್ತಣ ಪ್ರದೇಶಗಳಿಗೇ ಅಲ್ಲದೆ ಬಹುದೂರ
ವರೆಗೂ ಪ್ರಭಾವ ಬೀರುವ ದೇವರು. ಅವನನ್ನು ಎಲ್ಲರೂ ಪೂಜಿ
ತ್ತಾರೆ. ಅವನ ಆಶೀರ್ವಾದವಿದ್ದರೆ ಎಲ್ಲವೂ ಸರಿಹೋದೀತು. ಆದು
ರಿಂದ ತುಂಬ ಕಷ್ಟ ಬಂದಾಗ ಕೆಂಚನಂತಹವರೂ ದೂರ ನಡೆ
ಈ ದೇವತೆಗೆ ನಮಸ್ಕಾರ ಹಾಕಿ ಬರುತ್ತಾರೆ. ಕರಿಯನ ಪ್ರಾಣವನ
ಉಳಿಸುವುದಕ್ಕೆ ಕೆಂಚ ಅದನ್ನು ಮಾಡಲೇಬೇಕಾಯಿತೆಂದು ಅವ
ಭಾವನೆ.

ಮಲೆರಾಯ ಕೆಂಚನ ವಂಶಕ್ಕೆ ಕುಲದೈವ. ಮಾನವ ಯು
ಬರುವುದಕ್ಕೆ ಮುಂಚೆ ಕುಡಿಯರಿಗೆಂದು ಪ್ರಕೃತಿಯೇ ಅರಮನೆಗಳನ್
ನಿರ್ಮಿಸಿದಂತೆ ಇದ್ದ ಗವಿಯೊಂದರಲ್ಲಿ ಈ ಮಲೆರಾಯನ ದೇವಸ್ಥಾ
ವಿತ್ತು. ಒಂದು ಗವಿಯ ಮುಂದೆ ಗೋಡೆಯಂತಿದ್ದ ಒಂದು ಕಲ್ಲಿ
ಮಧ್ಯದಲ್ಲಿ ಬೆಣಚುಗಲ್ಲಿನ ಒಂದು ಪದರ ಎದ್ದು ಬೆಳ್ಳಗೆ ಪ್ರಕಾಶಿಸುತ್ತಾ
ಇತ್ತು. ಬೆಳಕು ಬಿದ್ದಾಗ ಅದು ಥಳಥಳಿಸಿ ಒಂದು ಆಕಾರ ಪಡೆದಂ
ಕಾಣುತ್ತಿತ್ತು. ಅದೇ ಮಲೆರಾಯನ ವಿಗ್ರಹ. ಕುಕ್ಕೆಯ ದೇವ
ಯನ್ನು ಬಿಟ್ಟರೆ ಇದರ ಹಿರಿಮೆ ಹೆಚ್ಚು. ಹಿರಿಯನಾದ ಕೆಂಚನಿಗೆ ಇ
ಗೊತ್ತು. ಗವಿಗಳನ್ನು ಬಿಟ್ಟು ಕೇರಿಯಲ್ಲಿ ವಾಸಮಾಡುವ ಕುಡಿಯ
ಗೆಲ್ಲ ಈ ಮಲೆರಾಯ ಮರೆತುಹೋದ ದೈವ.

ಕಲ್ಕುಡ ಈ ಎರಡು ದೇವತೆಗಳ ಹಾಗಲ್ಲ. ಅದು ಬಹ
ಸಿಡುಕಿನ ದೈವ. ಕೋಲದಲ್ಲಿ ಹೆಚ್ಚುಕಡಿಮೆಯಾದರೆ ಸಿಟ್ಟು. ಬ

ಯಲ್ಲಿ ಹೆಚ್ಚುಕಡಿಮೆಯಾದರೆ ಸಿಟ್ಟು. ಹಿಂದೆ ನರಬಲಿಯನ್ನೇ ತೆಗೆದು ಕೊಳ್ಳುತ್ತಾ ಇತ್ತು. ಈಗ ದಯೆಯಿಂದ ಕುರಿ ಕೋಳಿಯಿಂದಲೇ ತೃಪ್ತಿಪಡುತ್ತದೆ. ಮನುಷ್ಯರಿಗೆ ಹೆದರಿಕೆಯಾಗುವ ಕೊರಕಲೊಂದು ಅದರ ಗುಡಿ. ಸುತ್ತಣ ಎಲ್ಲ ಕುಡಿಯರೂ ಕಪ್ಪಕಾಣಿಕೆಗಳನ್ನು ತಂದು ಅಲ್ಲಿಗೆ ಒಪ್ಪಿಸುತ್ತಾರೆ. ಹಿಂದಿನ ಅದರ ವೈಭವ ಬರುಬರುತ್ತಾ ಕಡಿಮೆ ಯಾಯಿತು. ತನ್ನ ಹಿರಿಯರಿಂದ ಕೇಳಿ ತಿಳಿದಿದ್ದ ಈ ಕಲ್ಕುಡನ ಹಿರಿಮೆ, ಸಿಟ್ಟು ಗುರಿಕಾರನಾದ ಕೆಂಚನಿಗೆ ತುಂಬ ಅಧೈರ್ಯವನ್ನು ತಂದಿತು. ಇವನ ಮನಸ್ಸಿನ ಭಯವೇ ಕಲ್ಕುಡನಾಗಿ ಬಂದು ಇವನಿಗೆ ಹೇಳುತ್ತಾ ಇತ್ತು. "ನೀನೆಂಥ ಗುರಿಕಾರ, ಪೂಜೆ ಇಲ್ಲದಿದ್ದರೆ ನಾನೇನು ಸುಮ್ಮನಿರುವುದಿಲ್ಲ".

ಕೆಂಚನ ಮನಸ್ಸಿಗೆ ಈ ಹೆದರಿಕೆ ಬರುವ ಹೊತ್ತಿಗೂ ಮನೆಯಲ್ಲಿ ಮಗ ಸಾಯುವುದಕ್ಕೂ ಸರಿಹೋಯಿತು. ಬಗನಿಯ ಮರದಿಂದ ಬಿದ್ದು ಸತ್ತ ಅವನ ಮಗ ತಿಪ್ಪ. ಈ ಸಾವಿನ ಅಸಾಧಾರಣತೆಯೇ ಮತ್ತಷ್ಟು ವಿಚಿತ್ರ ಪರಿಣಾಮ ಮಾಡಿತು ಕೆಂಚನ ಮನಸ್ಸಿನ ಮೇಲೆ. ಕಲ್ಕುಡ ಬಂದು ಅವನೊಡನೆ ಮಾತಾಡುವಂತಾಯಿತು. "ನಿನ್ನ ತಲೆ ತೆಗೆಯು ತ್ತೇನೆ. ಒಂದಲ್ಲ ಎರಡು ತಲೆ ತೆಗೆಯುತ್ತೇನೆ" ಎನ್ನುವ ಮಾತು ಸ್ವಪ್ನದಲ್ಲಿ ಕೇಳಿಸಿತು. ಕೆಂಚ "ಮೊಮ್ಮಗನನ್ನು ಉಳಿಸಿಕೊಡು" ಎಂದು ವಿಧವಿಧವಾಗಿ ಪ್ರಾರ್ಥಿಸಿದ. ಇದಕ್ಕೆ ಕಾರಣವೆಂದರೆ ಕೆಂಚನ ಸೊಸೆ ಚಿಕ್ಕಿ ಸತ್ತ ರೀತಿ. ಅವಳು ಬಂಡೆಯ ತುದಿಯಿಂದ ಗುಂಡಿಗೆ ಬಿದ್ದು ಸತ್ತಿದ್ದಳು. ಒಂದು ತಲೆಯೇನೋ ಆಯಿತು. ಇನ್ನು ಎರಡನೆ ತಲೆ ಯಾರದು ಎಂಬ ಪ್ರಶ್ನೆ ಕೆಂಚನ ಮನಸ್ಸಿನಲ್ಲಿದ್ದು ಈ ಪ್ರಾರ್ಥನೆ ಮಾಡಿಸಿತು. ಮೊಮ್ಮಗನ ನಡಿಗೆ, ಧೈರ್ಯ ನೋಡಿ "ಇಂಥ ಮಗು ವನ್ನು ಕೇಳುತ್ತಾನಲ್ಲ ಕಲ್ಕುಡ" ಎಂದು ದುಃಖವಾಗುತ್ತಾ ಇದೆ. ಅಂತೂ ಸೊಸೆಯ 'ಬೊಜ್ಜ'ಕ್ಕೂ ದೆವ್ವದ 'ಕೋಲ'ಕ್ಕೂ ಏರ್ಪಾಟು ಮಾಡಿದ ಕೆಂಚ.

ಕಲ್ಕುಡನ ಪೂಜೆಯೂ ವಿಚಿತ್ರವಾದುದೇ. ಹಿರಿಕಿರಿಮಲೆಗಳ ಕುಡಿಯರೆಲ್ಲ ಸೇರಿ, ಅಬ್ಬಿಯ ನೀರಿನಲ್ಲಿ ಮಿಂದು, ಕಲ್ಕುಡನಿಗೆ ಕೋಳಿ,

ಕುರಿಗಳ ಕಾಣಿಕೆ ಕಟ್ಟುವುದು. ಕಲ್ಕುಡನ ಕೊರಕಲಿಗೆ ಮಧ್ಯಾಹ್ನಕ್ಕೆ ಬಿಸಿಲು ಬರುವುದು. ಆಗ ಪೂಜಾರಿ ಬಿರುಮ ಕಲ್ಕುಡನ ಮುಂದೆ ಶುಭ್ರ ವಸ್ತ್ರಧಾರಿಯಾಗಿ ನಿಲ್ಲುವುದು. ಎದೆಗೆ ಕೆಂಪುಬಟ್ಟೆ. ತಮಟೆಯ ವಾದ್ಯ ಧ್ವನಿ, ಡೋಲುಗಳ ಆರ್ಭಟ ಹೆಚ್ಚಾದಹಾಗೆಲ್ಲಾ ಬಿರುಮನಿಗೆ ಆವೇಶ ಬರುತ್ತಿತ್ತು. ಆ ಆವೇಶದ ಭರದಲ್ಲಿ ಹೂವನ್ನು ಮುಖಕ್ಕೆ ಬಡಿದು ಕೊಂಡು ಗುರಿಕಾರನಿಂದ ಕತ್ತಿಯನ್ನು ಸ್ವೀಕರಿಸಿ ಅವನೂ ಆರ್ಭಟಿಸ ಬೇಕು. ಅನೇಕ "ಹಾರ"(ಬಲಿ)ಗಳ ಸಮರ್ಪಣೆಯಾಗಬೇಕು. ಆಮೇಲೆ ದೈವದ ಅಪ್ಪಣೆಗೆ ಎಲ್ಲರೂ ಹಾತೊರೆಯಬೇಕು. ಬಿರುಮ ಕಿರಿಚಿ "ನಾನು ಬೇಡವಾದೆನಲ್ಲ ನಿಮಗೆ!" ಎಂದು ಗದರಿಸಬೇಕು. ಆಗ ಕೆಂಚ ಮೊದಲಾಗಿ ಎಲ್ಲರೂ ತಪ್ಪು ಒಪ್ಪಿಕೊಳ್ಳಬೇಕು.

ಇದೆಲ್ಲ ಬಿರುಮ ಪೂಜಾರಿಯ ಜಾಣತನ. ಅವರವರ ತಪ್ಪನ್ನು ಅವರವರ ಬಾಯಿಂದಲೇ ಹೊರಡಿಸುತ್ತಿದ್ದ ಅವನು. ಕೇವಲ ಕುಡಿಯರ ನಡುವಣ ಬಿರುಮನೇ ಆಗಿದ್ದಾಗ ಅರಿತಿದ್ದ ಸತ್ಯವಿಚಾರಗಳನ್ನು ಈ ಪೂಜಾರಿ, ಕಲ್ಕುಡನ ಆವೇಶದಲ್ಲಿ ಸದುಪಯೋಗಪಡಿಸಿಕೊಂಡು ಜನರ ತಪ್ಪನ್ನು ತಿದ್ದಲು ಪ್ರಯತ್ನಪಡುತ್ತಿದ್ದ. ಆ ಪೂಜಾರಿ ಯಾವಾಗಲೂ ಒಂದು ಕಡೆ ಸೇರಿ ಅಧರ್ಮವನ್ನಾಚರಿಸದೆ ಹೋದುದೇ ಸುದೈವ. ಇಲ್ಲದಿದ್ದರೆ, ಈಗಿನ ಪೂಜಾರಿಗಳಾಗಿದ್ದರೆ ಅವನೇನು ತಾನೇ ಮಾಡಿಸ ಲಾರನಾಗಿದ್ದ?

ಪೂಜೆಯಾದಮೇಲೆ ಬಿರುಮ ಪೂಜಾರಿಯು ಕಿರಿಮಲೆಗೆ ಭೇಟಿ ಕೊಟ್ಟು ಹಿಂದಿರುಗಬೇಕು. ಆಮೇಲೆ ಕಿರಿಯ ಕುಡಿಯರ ನೃತ್ಯ. ಆಮೇಲೆ ವನಭೋಜನ. ಮುಂದಿನ ಕೋಲದ ತನಕ ತೃಪ್ತಿ, ಸಮಾಧಾನ.

ಈ ಪೂಜೆಯನ್ನು ಕಲ್ಕುಡನ ರೀತಿ ನೀತಿಯನ್ನೂ ನೋಡಿದರೆ ಕುಡಿಯರ ಅಂಧಶ್ರದ್ಧೆ ಎಷ್ಟು ಕರುಣಾಜನಕವಾದುದೆಂದು ಗೊತ್ತಾಗು ತ್ತದೆ. ತಮ್ಮ ಪಾಪದ ಭಯ ತಮ್ಮನ್ನೇ ತಿನ್ನುವ ಈ ಆವರಣದಲ್ಲಿ ಏನೂ ಸಾಧ್ಯ. ಕುಡಿಯರ ನಡುವೆ ಈ ದೈವದ ಪ್ರಭಾವ ಅಷ್ಟು

ಅಸಾಮಾನ್ಯ. ಕಲ್ಕುಡನ ಮಾತಿಗೆ ಒಪ್ಪಿ ಕುಡಿಯರು ಧನಿಯನ್ನೂ ಎದುರಿಸಬಲ್ಲರು.

ಕೆಂಪಿ ತಾನು ಮಾಡಿದ ತಪ್ಪು ಯಾರಿಗೂ ತಿಳಿದಿಲ್ಲವೆಂದಿದ್ದಳು. ಆದರೆ ಕಲ್ಕುಡ ಹೇಳಿಬಿಟ್ಟಿತು, ಖರ್ಜೂರದಲ್ಲಿ ವಿಷ ಬೆರೆಸಿದುದು, ಓತಿಕೇತ ತಂದು ಸೀರಿಗೆ ಹಾಕಿದುದು ತಪ್ಪು ಎಂದು. ಚೋಮು ಕುಕ್ಕೆತಿಯರಿಗೆ ಗೊತ್ತಾಯಿತು, ಈ ಕಲ್ಕುಡನ ಮಾತಿನಿಂದ ತಾವೇ ಜಾತಿ ಕೆಟ್ಟವರೆಂದು. ಕೆಂಪಿ ಯಾರಿಗೂ ಹೇಳಿಕೊಳ್ಳಲಾರದೆ ತನ್ನ ಆಂತರಿಕ ಭಯದಿಂದಲೇ ಸತ್ತುಹೋದಳು. ಚೋಮು ಕ್ರಿಸ್ತಜಾತಿಗೆ ಸೇರಿದ್ದ ಮಕ್ಕಳನ್ನು ಹಿಂದಕ್ಕೆ ತಂದು ತಪ್ಪುಕಾಣಿಕೆ ಒಪ್ಪಿಸಿ, ಮತ್ತೆ ಅವರನ್ನು ಕುಡಿಯರನ್ನಾಗಿ ಮಾಡಿದ.

ಗುರಿಕಾರರನ್ನು ಗೊತ್ತುಮಾಡಬೇಕಾದರೆ ಕಲ್ಕುಡನೇ ಹೇಳಬೇಕು. ಕಳ್ಳನನ್ನು ಕಂಡುಹಿಡಿಯಬೇಕಾದರೇ ಕಲ್ಕುಡನೆ "ತುಬ್ಬು" ಮಾಡಬೇಕು. ಯಾವ ವಿಚಾರವನ್ನು ಸೂಚಿಸಬೇಕಾದರೂ, ಕೆಲಸ ಮಾಡಬೇಕಾದರೂ ಪೂಜಾರಿ ಬಿರುಮನೇ ಪ್ರಧಾನನಾಗಬೇಕು. ಹೀಗೆ ಕಲ್ಕುಡನ ಪ್ರಭಾವ ಕಿರಿಮಲೆಯ ಕಲ್ಲು ಬಂಡೆ, ಗಾಳಿ ಮಳೆ, ಗಿಡ ಮರಗಳನ್ನೆಲ್ಲಾ ಆವರಿಸಿ ಕುಡಿಯರ ಜೀವನಕ್ಕೆ ಆ ದೆವ್ವವನ್ನೇ ಸರ್ವಾಂತರ್ಯಾಮಿಯನ್ನಾಗಿ ಮಾಡಿಬಿಟ್ಟದ್ದಿತು. ಆ ದೆವ್ವಕ್ಕೆ ಎರಡು ಬಗೆದವರು ಬದುಕುವುದಾದರೂ ಸಾಧ್ಯವೇ!

## ಕುಡಿಯರ ಕೂಸು ಯಾರು?

ಈ ಕಾದಂಬರಿಯಲ್ಲಿ ಕರಿಯನೇ ಪ್ರಧಾನ ಪಾತ್ರ. ಅವನ ಕತೆಯೇ ಕಾದಂಬರಿಯ ಕತೆ. ಕರಿಯನ ಹುಟ್ಟು, ಬೆಳವಣಿಗೆ, ವ್ಯವಹಾರ, ಶೀಲ, ದೈವಭಕ್ತಿ ಮುಂತಾದುವು ಇಲ್ಲಿ ಪೂರ್ಣವಾಗಿ ಬಂದಿವೆ. ಇನ್ನಾವ ಪಾತ್ರಕ್ಕೂ ಈ ಪ್ರಾಧಾನ್ಯ ದೊರೆತಿಲ್ಲ. ಅವನೇ ಕುಡಿಯರ ಕೂಸು.

ಕರಿಯನಿಗೆ ಬಾಲ್ಯದಲ್ಲಿಯೇ ಕೆಂಚನ ಗುರಿಕಾರಿಕೆಯ ಮೇಲ್ಪಂಕ್ತಿ ದೊರೆತು ನಿಸ್ಪೃಹ ಜೀವನದ ರೀತಿನೀತಿಗಳು ಅವನ ಹಸ್ತಗತವಾಗಿ

ದ್ದುವು. ಎಂಟು ವರ್ಷದವನಾಗಿದ್ದಾಗಲೇ ಕೆಂಚನೊಡನೆ ಸುತ್ತಿ ಕರಡಿಯ ಗುಹೆ, ಮಲೆರಾಯನ ದೇಗುಲ, ಕಲ್ಕುಡನ ಭಯ, ಇವುಗಳ ಪರಿಚಯ ಹೊಂದಿದ್ದನು. ಇನ್ನೂ ಸ್ವಲ್ಪ ದೊಡ್ಡವನಾದ ಮೇಲೆ ಕಾಳನ ಸ್ನೇಹದಲ್ಲಿ ಸವಿಯ ಜೊತೆ ದೊರೆತು, ಸುತ್ತಣ ವನಪ್ರಾಂತದ ಸರ್ವಾಧಿಕಾರವನ್ನೇ ದೊರಕಿಸಿಕೊಂಡನು.

ಒಂದು ಹಾಸುಗಲ್ಲಿಗೆ "ಮಂಚದ ಕಲ್ಲು" ಎಂದು ನಾಮಕರಣ ಮಾಡಿ, "ಬಂತು ದೇವರ ಸವಾರಿ" ಎಂದು ಸೂರ್ಯದೇವನನ್ನು ಸ್ವಾಗತಿಸಿ, ಬೆಟ್ಟವನ್ನು 'ಚೆಂದದ ಗೋಡೆ' ಎಂದು ಕರೆದು, ಕೆಳಗಿನ ಕಣಿವೆಯನ್ನು "ನೊರೆ ಹೆಂಡದ ಸಮುದ್ರ"ವೆಂದು ಊಹಿಸಿ, ಇವರಿಬ್ಬರು ಪ್ರಕೃತಿ ದೇವಿಯನ್ನು ಅವರಿಗೇ ಗೊತ್ತಿಲ್ಲದೆ ಆರಾಧಿಸಿದರು. ಅರಣ್ಯ ರಾಜ್ಯದಲ್ಲಿ ಕೌಪೀನಧಾರಿಗಳಾದ ಇವರು ನಿಸರ್ಗದ ಶಿಶುಗಳಂತೆ ಬೆಳೆದು ಹಿರಿಯರ ಪಾಠಗಳನ್ನು ಕಲಿತರು. ಬೇಟೆಯಾಡಿ, ಉರುಳಿಟ್ಟು ನಾಯಿಗಳೊಡನೆ ಓಡಿ, ಜಿಂಕೆಯನ್ನು ಹಿಡಿದು, ಹಂದಿಯನ್ನು ಬೀಳಿಸಿ ಸುಖಪಟ್ಟರು ಈ ಮಕ್ಕಳು. ತುಕ್ರನಿಟ್ಟ ಉರುಳಿನಿಂದ ಕರಿಯ ಜಿಂಕೆಯನ್ನು ಬಿಚ್ಚಿಸಿ ಮನೆಗೆ ತಂದುದು ದೊಡ್ಡ ಅಪರಾಧವಾಗಿ ಕರಿಯನಿಗೆ ಬುದ್ಧಿ ಬಂದಿತು. ಆ ಜಿಂಕೆಯನ್ನು ತುಕ್ರನಿಗೆ ಹಿಂದಿರುಗಿಸಿದಾಗ ಅವನು ಅದನ್ನು ತಿಂದುಬಿಟ್ಟನಂತೆ. ಕರಿಯ ಇದನ್ನು ಕೇಳಿ "ತುಕ್ರಣ್ಣ ನನ್ನು ಉರುಳು ಹಾಕಿ ಹಿಡಿದೇ ಹಿಡಿಯುತ್ತೇನೆ, ಕೊಂದೇಬಿಡುತ್ತೇನೆ, ತಿಂದೇಬಿಡುತ್ತೇನೆ" ಎಂದು ಹಾರಾಡುತ್ತಾ ಇದ್ದನು. ಚಿಕ್ಕವನಾದ ಕರಿಯನ ಈ ಮಾತು ವಿಶಾಲವಾದ ಅರ್ಥದಲ್ಲಿ ನಿಜವೇ ಆಯಿತು ಎನ್ನುವುದು ಮುಂದಿನ ಕಥೆಯಿಂದ ಗೊತ್ತಾಗುತ್ತದೆ.

ಮಳೆರಾಯನ ಗುಡ್ಡಕ್ಕೆ ಆಗಿಂದಾಗ ಹೋಗುತ್ತಿದ್ದಾಗ, ಕೆಂಚನ ಮಾತುಗಳಿಂದ ಆನೆಯ ಹಂಬಲ ಬೆಳೆಯಿತು ಕರಿಯನಲ್ಲಿ. ಅಜ್ಜ ನಡೆದದ್ದನ್ನು ಅನುಕರಿಸುವ ಕರಿಯನಿಗೆ ಕೆಂಚನ ಶುಚಿಯಾದ ಬಾಳುವೆಯೇ ಮಾದರಿಯಾಯಿತು. ಜೊತೆಗೆ ಮೊಮ್ಮಗನು ಬೇಟೆಯಲ್ಲಿ ಜಾಣನಾಗಿ ನಿಜವಾಗಿ ಕರಡಿಯ ಮರಿಯನ್ನು ಹಿಡಿದಾಗ ಅವರೆಲ್ಲರೂ ಸಂತೋಷಪಟ್ಟಂತೆಯೇ ಕೆಂಚನೂ ಸಂತೋಷಪಟ್ಟಿದ್ದನು.

ಕರಿಯನ ಆನೆ ಹಿಡಿಯುವ ಕನಸು ಸುಬ್ರಹ್ಮಣ್ಯದಲ್ಲಿ ಮೊಳಕೆಗೊಂಡಿದ್ದರೂ, ಕಿರಿಮಲೆಯಲ್ಲಿಯೇ ಅದಕ್ಕೆ ನೀರೆರೆಯುವರು ದೊರಕುತ್ತಾರೆಂದು ಅವನೆಂದುಕೊಂಡಿರಲಿಲ್ಲ. ತಿರುಮಲಭಟ್ಟರ ಆಸೆಯಿಂದಾಗಿ ಅವನಿಗೆ ಈ ಪ್ರೋತ್ಸಾಹವೂ ದೊರೆತು ಆನೆಯ ಹಿಂಡನ್ನೇ ನೋಡುವ ಅವಕಾಶ ಸಿಕ್ಕಿತು.

ಕೆಂಚ ಸತ್ತಮೇಲೆ ಕರಿಯನ ಜೀವನದ ಮಾರ್ಗವೇ ವ್ಯತ್ಯಾಸವಾಯಿತು. ಅವನ ಪರವಾಗಿ ಹಿರಿಯರು ಮಾತಾಡುತ್ತಿದ್ದುದು ಅವನ ಕಿವಿಗೆ ಬಿದ್ದರೂ ಸುಮ್ಮನಿರುತ್ತಿದ್ದ. ಬೂದನೇ ಕೆಂಚನ ಸ್ಥಾನವನ್ನು ಸ್ವೀಕರಿಸಿ ಕರಿಯನ ಪೋಷಕನಾಗಬೇಕಾಯಿತು. ದೇವತೆಯಾದ 'ಕಲ್ಕುಡ'ನ ಮಾತಿನಿಂದಾಗಿ ಕರಿಯನೇ ಗುರಿಕಾರನಾದನು. ಆದರೂ ತುಕ್ರನ ಕಾರುಬಾರು ಕಡಿಮೆಯಲ್ಲ. ತಿಮ್ಮ, ಬೂದ ಇವರಿಬ್ಬರಂತೂ ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದರೂ ತುಕ್ರನ ಗುರಿಕಾರಿಕೆಯನ್ನು ಒಪ್ಪಲಿಲ್ಲ. ದಣಿಗಳ ಮಾತಿಗೆ ಸಂದ ಬೆಲೆ ಇದೇ.

ಆದರೆ ಕರಿಯನ ಮನಸ್ಸೂ, ವಯಸ್ಸೂ ಬೆಳೆಯುತ್ತಿತ್ತು. ತಿಮ್ಮನ ಹೆಂಡತಿ ಗಿಡ್ಡಿಯೂ ಊರಿಗೆ ಬಂದಾಗ ತಿಮ್ಮನ ದುಃಖವನ್ನು ಮೊದಲಿನಿಂದಲೂ ಅರಿತಿದ್ದ ಅವನು ತಿಮ್ಮ-ಗಿಡ್ಡಿಯರ ಆತ್ಮೀಯನಾಗಿದ್ದ. ಇದರಿಂದ ಕೆಂಪಿಗೆ ಕೋಪ ಬಂದು ಕರಿಯನನ್ನು ಹೀಯಾಳಿಸಿದಳು. ಇದು ಊರಲ್ಲೆಲ್ಲಾ ಹರಡಿದೆಯೆಂದು ತಿಳಿದು ಕರಿಯ ಮನೆಯನ್ನೂ ಊರನ್ನೂ ಬಿಟ್ಟು, ತಿಮ್ಮ ಹೋಗಿ ವಾಸಮಾಡುತ್ತಿದ್ದ ಗವಿಯನ್ನು ಹುಡುಕಿಬಿಡುವಂತೆ ಮಾಡಿತು. ಆಮೇಲೆ ಕರಿಯನು ಮಾಡಿದ ಸಾಹಸವೇ ಅವನ ಹಿರಿಮೆಗೆ ಕುರುಹು. ಮೂರೇ ಜನರು ಸಮಾಜದ ಎಲ್ಲ ಅವಹೇಳನಗಳಿಗೂ ಎದುರಾಗಿ, ತಾವು ಒಂದಾಗಿ ಶುಚಿಜೀವನ ನಡೆಸಿದ ಈ ಕತೆ ಓದುಗರಿಗೆ ಬಹು ಪ್ರಿಯವಾದುದು. ನೆಲೆಯೊಂದನ್ನು ಕಂಡುಹಿಡಿದು, ನೆಲಮಾಡಿ, ಬೇಟೆಯಾಡಿ, ಯಾಲಕ್ಕಿ ಮಾರಿ, ಬ್ಯಾಟನ ಸ್ನೇಹ ಬೆಳೆಸಿ ಮೂರು ವರ್ಷ ಬದುಕಿದ ಬಾಳು ಕರಿಯನ ಜೀವನದಲ್ಲಿ ಒಂದು ತಪಸ್ಸು. ಮದುವೆಯ, ಮನೆಮಕ್ಕಳ ಆಶಿಬಂತಾದರೂ ತಾನು ಪಳಗಿಸಿದ ಆನೆಯನ್ನೇ "ಇದೇ ನನ್ನ ಮಗು" ಎಂದ ಕರಿಯನ ಮಮತೆಗೆ

ಕೊನೆಯಿಲ್ಲ. ಈ ಕಾಲದಲ್ಲಿ ಅವನ ಬೇಟೆಯ ವ್ಯಾಮೋಹ ಹೆಚ್ಚಿ, ಹಾಗೆಯೇ ಚಾತುರ್ಯವೂ ಬೆಳೆದು, ಕರಿಯನನ್ನು ಒಬ್ಬ ಸತ್ವಶಾಲಿಯಾದ ಆತ್ಮಪ್ರತ್ಯಯದ ಬೇಟೆಗಾರನನ್ನಾಗಿ ಮಾಡಿದುವು. ಊರಿನ ಈಡು ಗಾರರಿಗೂ ಆಗದ ಹುಲಿಯನ್ನು ಕೊಂದುದಂತೂ ಅವನ ಕೀರ್ತಿಗೆ ಕಳಶ. ತುಕ್ರನಿಗೂ ಕೂಡ ಕರಿಯನನ್ನೇ ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬಾರದೇ ಎನಿಸಿತು. ಕೊನೆಗೆ ಹಳೆಯ ಧನಿ ತೀರಿಹೋಗಿ, ತಿಳಿದ ರಾಮಚಂದ್ರಯ್ಯನೆಂಬ ಕಿರಿಯ ಧನಿಯು ಆಗಮನದೊಡನೆ ಕರಿಯನೇ ಮತ್ತೆ ಕಿರಿಮನೆಗೆ ಎಲ್ಲರ ಮೆಚ್ಚಿಗೆಯ ಗುರಿಕಾರನಾಗು ತ್ತಾನೆ. ಈ ಸ್ಥಾನಕ್ಕೆ ಅವನಿಗಿಂತ ಹೆಚ್ಚು ಯೋಗ್ಯರಾದವರು ಅಲ್ಲಿಯ ಸುತ್ತಮುತ್ತಣದಲ್ಲಿಯೇ ಇರಲಿಲ್ಲ ಎಂದಮೇಲೆ ಕರಿಯನ ಹಿರಿಮೆ ಹೆಚ್ಚಲ್ಲವೆ.

## ಇತರ ಪಾತ್ರಗಳು

ಇತರ ಪಾತ್ರಗಳಾದ ತುಕ್ರ, ಬೂದ, ತಿಮ್ಮ ಇವರ ಚಿತ್ರಣ ದಲ್ಲಿಯೂ ಕಾರಂತರು ತುಂಬ ಸೂಕ್ಷ್ಮದ ಕೆಲಸ ಮಾಡಿದ್ದಾರೆ. ತುಕ್ರನ ಸ್ಫುರದ್ರೂಪ, ದೈಹಿಕ ಶಕ್ತಿ, ಬೇಟೆಯ ಕೌಶಲ, ಸ್ತ್ರೀವಿಲಾಸ, ಸ್ವಾರ್ಥ, ಹೆಮ್ಮೆ, ಕಲ್ಕುಡನ ಭಯ ಇವುಗಳೆಲ್ಲಾ ಒಂದೊಂದಾಗಿ ಚಿತ್ರಿತವಾಗಿವೆ. ಬೂದನ ಜೀವನದಲ್ಲಿಯೂ ಕುಡಿಯನೊಬ್ಬನ ವಾಸ್ತವ ಚಿತ್ರವಿದೆ. ಕೆಂಪಿಯನ್ನು ಅವನು ಮದುವೆಯಾದ ರೀತಿಯೂ, ಕರಿಯನನ್ನು ಕಾದ ರೀತಿಯೂ, ಅವನ ಸಮಯೋಪಾಯ ಜ್ಞಾನವನ್ನು ತಿಳಿಸುತ್ತವೆ. ತಿಮ್ಮನ ಆಗ್ರಹಕ್ಕೆ ಅವನ ವಕ್ರರೂಪವೇ ಕಾರಣ. ಅವನು ಪಟ್ಟ ವ್ಯಥೆ ಹೇಳತೀರದು. ಎಷ್ಟು ಅವಹೇಳನಕ್ಕೆ ಗುರಿ ಯಾದರೂ, ಕೆಟ್ಟುಹೋದ ಹೆಣ್ಣನ್ನೇ ಮದುವೆಯಾದರೂ, ಅವಳೊಡ ನೆಯೇ ಮಾದರಿಯಾಗಿ ಜೀವನ ನಡೆಸಿದವನು ಅವನು. ಅವನ ವಸ್ತ್ರ ಭೂಷಣದ ಆಸೆಯೂ, ತುಕ್ರನ ಮೇಲಿನ ವಿರೋಧವೂ ಇಲ್ಲಿ ಚೆನ್ನಾಗಿ ಬಂದಿವೆ.

## ಸ್ತ್ರೀ ಪಾತ್ರಗಳು

ಸ್ತ್ರೀ ಪಾತ್ರಗಳಲ್ಲಿ ಕೆಂಪಿ, ಗಿಡ್ಡಿ ಇವರೇ ಮುಖ್ಯರಾದವರು. ಕೆಂಪಿಯ ಕೆಂಪುತನವನ್ನೂ, ಯಾರನ್ನೂ ಒಲ್ಲದ ಅವಳನ್ನು ತುಕ್ರನ ಪರಾಕ್ರಮವೂ ಕರಡಿಯ ವಿಜಯವೂ ಒಲಿಯುವಂತೆ ಮಾಡಿದು ದನ್ನೂ, ಅವಳು ಬೂದನನ್ನು ತುಕ್ರನ ದ್ವೇಷಕ್ಕಾಗಿ ಮದುವೆಯಾದು ದನ್ನೂ, ಅಪರೂಪದ ಧಣಿಗಳಿಗೆ ತಾನೇ ಒಲಿದುದನ್ನೂ, ಗಿಡ್ಡಿಯ ಮೇಲಿನ ಮತ್ಸರದಿಂದ ಅವಳಿಗೆ ವಿಷಹಾಕಿದುದನ್ನೂ, ಕೊನೆಗೆ ಕಲ್ಕುಡನ ಹೆದರಿಕೆಯಿಂದ ಸಾವನ್ನು ಅಪ್ಪಿದುದನ್ನೂ ನಾವು ಆಶ್ಚರ್ಯ ದಿಂದ ನಿರೀಕ್ಷಿಸುತ್ತೇವೆ. ಧಣಿಗಳ ಮನೆಯನ್ನು ಮನೆಯ ರಾಣಿ ಯಂತೆಯೇ ಬೆಳಗಿ, ಸ್ಪರ್ಧಿಗಳನ್ನು ಕಾದು ಓಡಿಸುವ ಶಕ್ತಿಯ ಇವಳನ್ನು ತುಕ್ರನೇ "ಮಾಂಟ ಬೆಕ್ಕು" ಎಂದು ಕರೆದಾಗ ಅದೇ ಸರಿ ಯಾದ ಹೆಸರೆಂದು ಒಪ್ಪಿಕೊಳ್ಳುತ್ತೇವೆ. ಒಂದೆಡೆ ಒಲಿದು ಶಾಂತಿ ಯನ್ನು ಅರಸದ, ತನ್ನ ಮೈಯ ಬಯಕೆಯನ್ನು ಅವಕಾಶ ಸಿಕ್ಕಿದ ಕಡೆ ತೀರಿಸಿಕೊಳ್ಳುವ, ಈ ಸ್ತ್ರೀಯನ್ನು ಕಂಡು ಅಂತಹ ಬಲಿತ ಹೆಣ್ಣು ಗಳಿರುವ ಸಮಾಜದ, ಸಂಸಾರದ ದುಃಸ್ಥಿತಿಗಾಗಿ ಕನಿಕರಪಡುತ್ತೇವೆ. ಈ ಕೆಂಪು ಕೆಂಪಿಗಿಂತ, ಕಾಟಿಯ ಮರಿ ಚೆನ್ನಿಯೇ ಚೆನ್ನವೆಂದುಕೊಳ್ಳು ತ್ತೇವೆ. ಆದರೂ ತುಕ್ರನ ವಕ್ರನಡೆವಳಿಕೆಯನ್ನು ಕಂಡಾಗ ಅವಳು ಇನ್ನೇನೂ ಮಾಡಲಾರದವಳಾಗಿದ್ದಳೆಂದು ಅವಳ ಮೇಲೆಯೂ ಮರುಕ ಬರುತ್ತದೆ. ಕೆಂಪಿಯು ಮರ ಹತ್ತುವುದನ್ನೂ, ಗೆಣಸು ಅಗೆಯುವು ದನ್ನೂ, ತೊರೆ ಮೀಯುವುದನ್ನೂ, ತನ್ನ ಪ್ರತಿಬಿಂಬವನ್ನು ನೀರಿ ನಲ್ಲಿಯೇ ನಿರೀಕ್ಷಿಸುವುದನ್ನೂ, ನಿರ್ಭಯವಾಗಿ ಕಾಡಲೆಯುವುದನ್ನೂ, ಜಾಣತನದಿಂದ ಕುಕ್ಕೆ ಹೆಣೆಯುವುದನ್ನೂ, ಅದಕ್ಕೆ ನಿಂಬೆಹಣ್ಣು ತುಂಬುವುದನ್ನೂ, ಧಣಿಗಳಿಗೆ ಅವುಗಳನ್ನು ಅರ್ಪಿಸುವುದನ್ನೂ ಕಂಡಾಗ ಇವಳು ಮನೆಯಲ್ಲಿರುವವಳಲ್ಲ ಎನ್ನಿಸುತ್ತದೆ. ಆದರೂ ಕುಡಿಯರಲ್ಲಿ ತನ್ನ ನೀತಿಯನ್ನು ಮೀರದೆ ಬದುಕಿದಳೆಂಬುದು ಅವಳ ಕಡೆಗಿರುವ ಮರ್ಯಾದೆಯ ಮಾತು. ಮಕ್ಕಳಿಲ್ಲದ ಅವಳ ದುಃಖವನ್ನು ತಾಯ

ಬಯಕೆಯಿರುವ ಯಾರಾದರೂ ಅರ್ಥಮಾಡಿಕೊಳ್ಳಬಹುದು. ವಿಷ ಹಾಕಿದುದನ್ನು ಮಾತ್ರ ಯಾರೂ ಮೆಚ್ಚಲಾರರು. ಎಲ್ಲ ಸಮಾಜಗಳಲ್ಲೂ ಇಂತಹ ಕೆಂಪಿಯರೂ, ಕರಿಗಿಯರೂ ಇರುತ್ತಾರೆ.

ಗಿಡ್ಡಿಯ ಪಾತ್ರಕ್ಕೆ ನಮ್ಮ ಮೆಚ್ಚಿಗೆ ಇನ್ನೂ ಹೆಚ್ಚಾಗಿದೆಯೆನ್ನಬೇಕು. ಸೌಂದರ್ಯದಲ್ಲಿ ಗಿಡ್ಡಿ ಕೆಂಪಿಗೇನೂ ಕಡಿಮೆಯಿಲ್ಲ; ವಯಸ್ಸಿನಲ್ಲಿ ಕಿರಿಯವಳಾಗಿದ್ದ ಇವಳ ಸೌಂದರ್ಯವನ್ನು ಕಂಡೇ ವಲ್ಲಿಬ್ರಗ್ಯಾಂಜಾ ಮಾರುಹೋಗಿದ್ದನು. ವಯೋನುಗುಣವಾಗಿ ಗಿಡ್ಡಿಯಲ್ಲಿಯೂ ಚಂಚಲತೆ ಕಾಣಬಂದಿತು. ವಲ್ಲಿಯ ಎಲ್ಲ ಯೋಜನೆಗಳಿಗೂ ಗಿಡ್ಡಿಯ ಸಹಾಯವಿದ್ದೇ ಇದ್ದಿತು. ಕುಕ್ಕನೊಡನೆ ತಾನೇ ವಲ್ಲಿಯ ಊರಿಗೆ ಹೋಗುತ್ತಾಳೆ, ವಸನ ಸುಧಾರಣೆಯಾಗಿ ಕತ್ತಿಗೆ ಕ್ರೂಜೆಬಿದ್ದು, ಗಿಡ್ಡಿ ಪಾಲಿನ್ ಆದಳು; ಅವಳಿಗೂ ವಲ್ಲಿಗೂ ಇನ್ನೇನು ಮದುವೆಯಾಗಬೇಕು; ಅಷ್ಟರಲ್ಲಿ ಕಲ್ಕುಡ ಅಡ್ಡಿ ಬಂದು ಅವಳನ್ನೂ ಕುಕ್ಕನನ್ನೂ ಹಿಂದಕ್ಕೆ ತಂದುಬಿಟ್ಟಿತು. ಗಿಡ್ಡಿಯಾಗಲಿ ವಲ್ಲಿಯಾಗಲಿ ತಮ್ಮ ಕಾಮಪಾಪವನ್ನು ಮದುವೆಯಾಗುವತನಕ ತಡೆದಿಡಲು ಶಕ್ತರಾಗಿರಲಿಲ್ಲ. ಆದುದರಿಂದ ಊರಿಗೆ ಬಂದಮೇಲೆ ಗಿಡ್ಡಿಯ ಯೋಚನೆ ಹೆಚ್ಚಾಯಿತು. ವಲ್ಲಿಯ ಚಿತ್ರವೇ ಕಣ್ಮುಂದೆ ಮೂಡಿತು, ಮತ್ತೆ ಓಡಿ ಹೋಗೋಣವೆನ್ನಿಸಿತು.

ಇಂತಹ ಸಂದಿಗ್ಧ ಸಮಯದಲ್ಲಿ ಬಿರುಮನ ಜಾಣತನದಿಂದ ಅವಳಿಗೂ ತಿಮ್ಮನಿಗೂ ಮದುವೆ ನಡೆದು ಅವಳು ಕಿರಿಮಲೆಗೆ ಬಂದುಬಿಟ್ಟಳು. ಅಲ್ಲಿ ಅವಳ ಅಂತರಂಗದ ದುಃಖಕ್ಕೆ ಕರಿಯನೇ ಸಮಾಧಾನ ಹೇಳಬೇಕಾಯಿತು. ಕರಿಯನ ಒಳ್ಳೆಯತನದಿಂದ, ತಿಮ್ಮನ ಶುಭ್ರವಾದ ಪ್ರೇಮದಿಂದ ಗಿಡ್ಡಿಯ ಮನಸ್ಸಿನ ಭ್ರಮಣೆ ನಿಂತು ಅವಳ ಜೀವನವೇ ವ್ಯತ್ಯಾಸವಾಯಿತು. ತಿರುಮಲಭಟ್ಟರು ಕೆಂಪಿಯಲ್ಲಿ ಕಂಡ ಸವಿಯನ್ನು ಗಿಡ್ಡಿಯಲ್ಲಿ ಕಾಣದಾದರು. ಕೆಟ್ಟು, ಮತ್ತೆ ಬುದ್ಧಿ ತಿಳಿದು ಪುನಃ ಎಡವದ ಪ್ರಾಣವನ್ನು ಕಾಣುತ್ತೇವೆ ನಾವು ಗಿಡ್ಡಿಯಲ್ಲಿ. ಅವಳು ಕರಿಯನಿಗೆ ಹೇಳಿದ "ಒಂದು ಬಾರಿಗೆ ನಾನು ಪಾರಾದೆ, ಇನ್ನೆಂದೂ ಹೊಂಡದಲ್ಲಿ ಬೀಳಲಾರೆ" ಎನ್ನುವ ಮಾತನ್ನು

ಕಾಪಾಡಿಕೊಂಡಳು. ತನ್ನ ಚೆಲುವಿನ ರೂಪವೇ ಎಲ್ಲ ಅನೀತಿಗೂ ಕ್ಷಮೆಯೆಂದು ತಿಳಿದು, ಧಣಿಯರ ಪ್ರಸಾದದಿಂದ ದೊರೆತ ಒಂದೆರಡು ಬಂಗಾರದಿಂದ ಮೈ ಕೈ ಬೆಳಗಿ, ಬನದ ಸಿಂಗಾರಿಯಾದ ತಾನು ಪರಿಹಾಸ್ಯ ಮಾಡಿದ ತಿಮ್ಮನನ್ನು ಒಲಿಯಬಂದ ಗಿಡ್ಡಿಯಮೇಲೆ ಕೆಂಪಿಗೆ ಮಾತ್ಸರ್ಯ ಸೂಸಿದ್ದು ಆಶ್ಚರ್ಯವಲ್ಲ. ಅವಳ ಆಗಮನವೇ ತನಗೊಂದು ಕುಂದು ಎಂದುಕೊಂಡಳು ಅವಳು. ತಮಗೆ ಬೇಡವಾದವರಲ್ಲಿ ಅನೀತಿಯನ್ನು ದೊಡ್ಡದುಮಾಡುವುದು ಮನುಷ್ಯರ ಸ್ವಭಾವ. ಅಲ್ಲದೆ ತನಗಿಲ್ಲದ ಭಾಗ್ಯವನ್ನು ಗಿಡ್ಡಿ ಪಡೆದರೆ, ಅವಳು ತಾಯಾದರೆ, ಕೆಂಪಿ ಸಹಿಸಿಯಾಳೆ? ಮಾತಿನಿಂದ ಗಿಡ್ಡಿಯನ್ನು ನೋವಿನ ಮಂಚದಲ್ಲಿ ಮಲಗಿಸಿದಳು. ಕೆಂಪಿಯು ನಂಜಿನ ನಾಲಿಗೆ, ನಂಜಿನ ಕೈ ಎರಡರಿಂದಲೂ ನೊಂದವಳು ಗಿಡ್ಡಿ. ಆದರೂ ಈ ಎರಡು ಪಾತ್ರಗಳಿಗೆ ಅದೆಷ್ಟು ವ್ಯತ್ಯಾಸವಿದೆ! ನೀತಿಯ ಮಾತು ಬಿಡಿ. ಕುಡಿಯರಲ್ಲಿ ಅದಕ್ಕೆ ಅಷ್ಟೊಂದು ಪ್ರಾಧಾನ್ಯವೂ ಇಲ್ಲ. ಅವರಿಬ್ಬರನ್ನೂ ಬೇಕೆಂದೇ ಹೀಗೆ ಅಕ್ಕಪಕ್ಕದಲ್ಲಿಟ್ಟು ತೂಗಿದ್ದಾರೆ ಕಾರಂತರು.

ಪಾತ್ರಗಳ ಸೃಷ್ಟಿಯಲ್ಲಿ ಏನೇನು ಸೊಗಸಿದೆಯೋ, ಈ ಕಾದಂಬರಿಯಲ್ಲಿ ಅಷ್ಟೇಮಟ್ಟಿನ ಬೇಟೆಯ ಸ್ವಾರಸ್ಯವೂ ಚಿತ್ರಗೊಂಡಿದೆ. ಉರುಳಿಡುವುದರಿಂದ ಹಿಡಿದು ಆನೆ ಪಳಗಿಸುವುದು, ಹುಲಿ ಹೊಡೆಯುವುದು, ಜೇನು ತರುವುದು, ಮೀನು ಹಿಡಿಯುವುದು, ಒಂದೊಂದೂ ಒಂದೊಂದು ವಿಹಾರ. ಕರಿಯನ ಆನೆಯಂತೂ 'ಕೆಂಚ' ಎಂಬ ಅವನ ತಾತನ ಹೆಸರನ್ನೇ ಪಡೆದು ಕಥೆಯ ಕೊನೆಯ ಭಾಗವನ್ನೆಲ್ಲ ಆಕ್ರಮಿಸಿದೆ. ಆನೆಯಿದ್ದ ಕಡೆ ಕರಿಯ. ಬಾಲ್ಯದ ಕನಸು ಅವನಿಗೆ ನನಸಾಗಿ ಏನೋ ಸೊಗಸು ಜೀವನ. ಆತನ ಆನೆಯನ್ನು ಪಳಗಿಸಿರುವುದರಲ್ಲಿ ಒಂದು ಅಂತರಾರ್ಥವಿರುವಂತಿದೆ. ಕಿರಿಮಲೆಯ ಕುಡಿಯರಲ್ಲಿ ಆನೆಯಂತಿದ್ದ ತುಕ್ರನೂ ಹೀಗೆಯೇ ಪರೋಕ್ಷವಾಗಿ ಕರಿಯನಿಂದಲೇ ಪಳಗಿದನೆನ್ನಬಹುದು. ತನ್ನ ಜಾಣತನದಿಂದ ಕರಿಯನು ಯಾವ ಆನೆ ಸಿಕ್ಕಿದರೂ ಪಳಗಿಸಬಲ್ಲವನಾಗಿದ್ದನೆಂದು

ಗೊತ್ತಾಗುತ್ತದೆ. ಕೆಂಪಿಯಂಥ ಆನೆಯಾದರೂ ಸರಿಯೇ, ಎಲ್ಲಕ್ಕೂ ಮಂತ್ರವನ್ನು ಬಲ್ಲ ಹಿರಿಯ ಮಾವುತ ಈ ಕರಿಯ.

ಕಾರಂತರ ಕಥನ ಶೈಲಿಯಲ್ಲಿ ನಾವು ಕಾಣುವುದು ಸಂಭಾಷಣೆಗಿಂತ ಹೆಚ್ಚಾಗಿ ನಿರೂಪಣಾ ಕ್ರಮ. ಇವರ ನಿರೂಪಣ ಶೈಲಿಗೆ ಮತ್ತಷ್ಟು ಸಂಭಾಷಣೆ ಸೇರಿದರೆ ಸೊಗಸು ಇನ್ನೂ ಹೆಚ್ಚುತ್ತದೆಯೆಂದು ತೋರುತ್ತದೆ. ಹುಟ್ಟು ವಿಡಂಬನಕಾರರಾದ ಕಾರಂತರ ಬರವಣಿಗೆಯಲ್ಲಿ ಅಪ್ರಯಾಸವಾಗಿ ವಿಡಂಬನೆ ಮಿಂಚಿ ಮಾಯವಾಗುತ್ತದೆ. ಆಗಂತೂ ಅದರ ಸೊಗಸು ಬಹು ಹೆಚ್ಚು. ಈ ಕೆಳಗಿನ ದೃಷ್ಟಾಂತಗಳಿಂದ ಈ ಮಾತಿನ ಅರ್ಥ ಸ್ಫುರಿಸಬಹುದು.

* * * *

"ನೆತ್ತರು ಕುಡಿದ ಹುಲಿಯ ಹಾಗೆ ತಿರುಮಲಭಟ್ಟರಿಗೆ ಏಲಕ್ಕಿಯ ಸವಿ ಹತ್ತಿತು".

* * * *

"ಅಂತೂ ಭಟ್ಟರು ಈ ಬಾರಿ ಊರಿಗೆ ಹೋಗುವಾಗ, ಇಬ್ಬಿಬ್ಬರು ಕನ್ಯೆಯರ ಸ್ಮರಣೆಯೊಡನೆ ಮರಳುವಂತಾಯಿತು. ಆದುದರಿಂದಲೋ ಏನೋ 'ಆದಷ್ಟು ಬೇಗ ಮಲೆಗೆ ಬರುತ್ತೇನೆ' ಎಂದು ತಿಳಿಸಿ ಹೊರಟರು".

* * * *

"ಜಪಮಾಲೆಯ ವಶೀಕರಣ ಶಕ್ತಿಯಿಂದಲೋ ಏನೋ ಗಿಡ್ಡಿಗೂ ವಲ್ಲಿಗೂ ಸ್ನೇಹ ಪ್ರಾಪ್ತಿಸಿತು".

* * * *

"ಜೆರುಸಲೇಮಿನ ತನಕ ಅವನ ದೂರು ಹೋಗದಿದ್ದರೂ, ಊರ ಪಾದ್ರಿಯ ತನಕ ಮುಟ್ಟಿದ್ದರಿಂದ, ಅವರ ಸಹಾನುಭೂತಿಯಂತೂ ದೊರೆತೇ ದೊರೆಯಿತು."

ಕವಿ ಹೃದಯಸ್ಪರ್ಶಿಯಾದ ನಿಸರ್ಗದ ವರ್ಣನೆ, ರಸಿಕ ಮನೋಲ್ಲಾಸಕಾರಿಯಾದ ಪಾತ್ರನಿರೂಪಣೆ, ನೂತನ ಸಮಾಜ ಸೃಷ್ಟಿಯಂತಿ

ರುವ ಮಲೆಕುಡಿಯರ ವಾಸ್ತವ ಚಿತ್ರಣ, ವಿಲಾಸಿಗಳಾದ ಧಣಿಗಳು ಕುಡಿಯರಲ್ಲಿ ಮಾಡಿದ ವಿಹಾರ, ಕಲ್ಕುಡನಂತಹ ದೈವಗಳ ರಕ್ತದಾಹ ಮುಂತಾದುವುಗಳಿಲ್ಲದರಿಂದ 'ಕುಡಿಯರ ಕೂಸು' ಕನ್ನಡದ ಅಗ್ರ ಸ್ಥಾನದ ಕಾದಂಬರಿಗಳಲ್ಲಿ ಒಂದು.

೬

# 'ಭಾರತೀಪ್ರಿಯ'ರ ಕಥಾಸಂಕಲನ—ರುದ್ರವೀಣೆ

ಈಗಿನ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆ ಅಷ್ಟು ಪ್ರಧಾನವಾದ ಸಾಹಿತ್ಯರೂಪವಾಗಿಲ್ಲ. ಕಾದಂಬರಿ ಎಂಬ ಹೆಸರಿಗೆ ಆಸೆಪಟ್ಟು ಅನೇಕ ಸಣ್ಣ ಕತೆಗಳು ಅಕಾರಣವಾಗಿ ಹಿಗ್ಗಿ ಈಸೋಪನ ಕತೆಯೊಂದರಲ್ಲಿ ಬರುವ ಕಪ್ಪೆಯಂತೆ ಊದಿಹೋಗಿವೆ.

ಕಪ್ಪೆಗಾದ ಪರಿಣಾಮವೇ ಕಾದಂಬರಿಗೆ ಅಥವಾ ಸಣ್ಣ ಕತೆಗೆ ಬರದಿರಲೆಂದು, ತಿಳಿದಿರುವವರು ಹಾರೈಸುತ್ತಿದ್ದಾರೆ. ಹೀಗಿರುವ ಸಮಯದಲ್ಲಿ ಹಿಂದೆ ಬರೆದ ಕತೆಗಳನ್ನು ಒಟ್ಟುಗೂಡಿಸಿ, ಒಂದು ರೀತಿಯ ಕಥಾರಚನೆಯಲ್ಲಿ ಏನು ಸಾಧನೆ ಮಾಡಬಹುದೆಂಬುದನ್ನು ಸೂಚಿಸುವುದಕ್ಕೆ ಅನುಕೂಲವಾಗುವಂತೆ 'ರುದ್ರವೀಣೆ' ಎಂಬ ಕಥಾಸಂಕಲನ ಒಂದಿದೆ. 'ರುದ್ರವೀಣೆ' ಎನ್ನುವುದರಲ್ಲಿರುವ ಎಲ್ಲಾ ಕತೆಗಳೂ ಒಂದೇ ಮಟ್ಟಕ್ಕೆ ಬರುವವೆಂದಾಗಲಿ ಇದು ಇತರರಿಗೆ ಮಾರ್ಗದರ್ಶಕವೆಂದಾಗಲಿ ನಮ್ಮ ಅಭಿಪ್ರಾಯವಲ್ಲ. ಆವರಣ ಪ್ರಧಾನವಾದ ಕತೆಗಳನ್ನು ಮಾತ್ರ ಬರೆದು ಅವುಗಳನ್ನೇ ಒಂದು ಕಡೆ ಸಂಕಲಿಸಿ ಪ್ರಕಟಪಡಿಸಿರುವುದು ಇಲ್ಲಿರುವ ಪ್ರಾಧಾನ್ಯ.

## ಆವರಣ ಸೃಷ್ಟಿ

'ಭಾರತೀಪ್ರಿಯ'ರ ಕತೆಗಳಲ್ಲಿ ಆವರಣಕ್ಕೇ ಹೆಚ್ಚು ಪ್ರಾಧಾನ್ಯ. ಆವರಣ ಚಿತ್ರಣಕ್ಕೆ ಹೊಂದಿಕೊಂಡಂತೆ ಯಾವುದಾದರೂ ಪಾತ್ರ ಅಥವಾ ಘಟನೆ ರೂಪುಗೊಂಡಿರಬಹುದು. ಆದರೂ ಹಿಂದಿರುವ ಆವರಣದ ನೆಲೆ ಬಹುತೇಕವಾಗಿ ವ್ಯಕ್ತವಾಗಿದೆ. ಈ ಕಥಾಸಂಕಲನಕ್ಕೆ ಕತೆಗಾರರು ಕೊಟ್ಟಿರುವ ಹೆಸರಿನಲ್ಲಿಯೇ ಈ ದೃಷ್ಟಿ ಸೂಚಿತವಾಗಿದೆ.

ಸಾಮಾನ್ಯವಾಗಿ ಕತೆಗಳಲ್ಲಿ ಕಾಣದ, ಕನ್ನಡಕ್ಕೆ ಅಷ್ಟು ಪರಿಚಿತವಾಗದ ಒಂದು ವಿಚಿತ್ರತೆ ಈ ಕತೆಗಳಲ್ಲಿವೆ. ವಸ್ತುವಿನ ಆಯ್ಕೆಯಲ್ಲಾಗಲಿ ಕತೆಯ ನಿರೂಪಣೆಯಲ್ಲಾಗಲಿ ಉಪಯೋಗಿಸುವ ಭಾಷಾ ಶೈಲಿಯಲ್ಲಾಗಲಿ ನಾವು ಈ ಹೊಸತನವನ್ನು ಕಾಣದಿರುವುದಿಲ್ಲ. ಆದುದರಿಂದ 'ರುದ್ರವೀಣೆ' ಎಂಬ ಹೆಸರಿನಿಂದ ಈ ವೈಚಿತ್ರ್ಯ ಸೂಚಿತವಾಗಿದೆ ಎಂದು ಹೇಳಬೇಕು. ರುದ್ರವೀಣೆ ಅಪರೂಪವಾದ ಒಂದು ಸಂಗೀತ ವಾದ್ಯ. ಈಗ ಉಪಯೋಗದಲ್ಲಿಲ್ಲದ ಈ ವಾದ್ಯದಲ್ಲಿ ಹೃದಯಭೇದಿಯಾದ, ಮರ್ಮಸ್ಪರ್ಶಿಯಾದ, ಗೀತ ವಿಶೇಷಗಳನ್ನು ನುಡಿಸುವುದು ಸಾಧ್ಯವಾಗಿದ್ದಿತೆಂದೂ ಶ್ರೋತೃಗಳ ಕಿವಿಮನಗಳು ಈ ವಾದ್ಯಗೀತದಿಂದ ದುಃಖಾನುಭವದ ಗಾಢ ಪರಿಚಯವನ್ನು ಪಡೆಯುತ್ತಿದ್ದುವೆಂದೂ ತಿಳಿದವರು ಹೇಳುತ್ತಾರೆ. ಈ ಕತೆಗಾರರು ಆ ಅನುಭವವನ್ನೇ ಕತೆಗಳ ಮೂಲಕ ಸೃಷ್ಟಿ ಮಾಡಲು ತೊಡಗಿದ್ದಾರೆ. ಯಾವುದೋ ಒಂದು ಕತೆಯ ಹೆಸರನ್ನೋ, ಒಂದು ವ್ಯಕ್ತಿಯ ಹೆಸರನ್ನೋ, ಕೊನೆಯ ಅಥವಾ ಮೊದಲಿನ ಕತೆಯ ಹೆಸರನ್ನೋ ಆರಿಸದೆ ಎಲ್ಲ ಕತೆಗಳಿಗೂ ಮಧ್ಯಸೂತ್ರವಾಗಿರುವ ಈ ದುಃಖಭಯಗಳ ಅನುಭವವನ್ನು ಸೂಚಿಸುವುದಕ್ಕೆ 'ರುದ್ರವೀಣೆ' ಎನ್ನುವ ಹೆಸರು ಉಚಿತವಾಗಿದೆ. ಈ ಸಂಕಲನದ ಎಲ್ಲ ಕತೆಗಳಿಗೂ ಇದು ವಿವರಣೆಯನ್ನು ಸಾಧ್ಯವನ್ನಾಗಿ ಮಾಡುವ ಕೈಮರವಾಗಿದೆ.

ಒಂದೊಂದು ಕತೆ ಒಂದೊಂದು ರೀತಿಯ ದುಃಖಾನುಭವದ ಅಥವಾ ಭಯಾನುಭವದ ಚಿತ್ರ. ಚಮ್ಮಾರನಾದ ರಾಚನ ಸ್ವಯಂತೃಪ್ತ ಜೀವನದಲ್ಲಿ ದುಡಿಮೆಯಿಲ್ಲದೆ ಬಿಡಿಕಾಸನ್ನೂ ಮುಟ್ಟದ ಆತ್ಮಗೌರವ ಸೂಚಿತವಾಗಿದ್ದರೆ, ಅವನಿಗೆ ಒಂದು ರೂಪಾಯಿ ಕೊಡಲು ಹೋಗುವ ಸಭ್ಯನ ಉದಾರತೆಯಲ್ಲಿ ನಿಷ್ಕಾರಣವಾದ ಕರುಣೆ ಚಿತ್ರಿತವಾಗಿದೆ. ಪರೋಪಕಾರಿಯಾದವನ ಮನಸ್ಸು ಹೇಗೆ ಕಷ್ಟದ ಸಂಪರ್ಕದಲ್ಲಿ ಕರುಣಾಸ್ರೋತವಾಗಬಹುದು ಎನ್ನುವುದು ಕತೆಗಾರನ ದೃಷ್ಟಿಯ ಹಿನ್ನೆಲೆ.

ಮೊಹರಂ ಹಬ್ಬದಲ್ಲಿ ಹುಲಿವೇಷವನ್ನು ಹಾಕಿ ತನ್ನ ಊರಿನವರನ್ನೂ ಇತರರನ್ನೂ ಸಂತೃಪ್ತಿಪಡಿಸುತ್ತಿದ್ದ ಅಮೀರನ ಜೀವನದಲ್ಲಿ ಇದ್ದ ಅಪಾರಸುಖವನ್ನೂ ಅದು ಇದ್ದಕ್ಕಿದ್ದಂತೆಯೇ ಅಪಾರದುಃಖವಾದುದನ್ನೂ ಅದರ ಪರಿಣಾಮವಾಗಿ ಅಮೀರನೇ ಸಾಯುವುದನ್ನೂ ನಾವು ಕಾಣುತ್ತೇವೆ. 'ರಾಹು'ವಿನಲ್ಲಿ ಹೂವಿನ ಹಿಂದಿರುವ ಮಿಡಿನಾಗರದಂತೆ ಸುಖದ ಕೆನೆಹಾಲಿಗೆ ವಂಚನೆಯ ಹುಳಿಹಿಂಡುವ ಅಮೀರನ ಹೆಂಡತಿ ಉನ್ನೀಸಳ ಅಸ್ಪಷ್ಟ ಚಿತ್ರವೂ, ಮಗು ನೂರಳ ಭವ್ಯ ಸುಂದರಾಕೃತಿಯ ಚಿತ್ರವೂ ನಮಗೆ ಹೊಸ ಅನುಭವವನ್ನುಂಟುಮಾಡುತ್ತವೆ.

ನಾದನಾಮಕ್ರಿಯಾ ರಾಗಾಭಿಮಾನಿ ದೇವತೆ ಪ್ರತ್ಯಕ್ಷಳಾಗಿ ತನ್ನ ಪಿಟೀಲಿನಲ್ಲಿ ನುಡಿಯುತ್ತಿದ್ದರೂ, ಎಂದೂ ಆ ರಾಗವನ್ನು ಪೂರ್ಣವಾಗಿ ನುಡಿಸಲು ಶಕ್ತರಾಗದೇ ಇದ್ದ ಪಿಟೀಲು ಶ್ರೀನಿವಾಸಯ್ಯ ಊರಿನ ಜನರ ಬಲವಂತಕ್ಕೆ ಕಟ್ಟುಬಿದ್ದು ಸಾವಿರಾರು ಸಭಿಕರ ಮುಂದೆ ಆ ಪ್ರಯತ್ನವನ್ನು ಮಾಡಿದುದೂ ಅದರ ಭೀಕರ ಪರಿಣಾಮವೂ 'ನಾದನಾಮಕ್ರಿಯಾ' ಕತೆಯಾಗಿದೆ.

ಎರಡು ಕುದುರೆಗಳ ಪರಸ್ಪರ ತ್ಯಾಗಮಯವಾದ ಜೀವನದ ದೃಷ್ಟಿಯಲ್ಲಿ ಮಾನವರ ಸ್ವಾರ್ಥತೆಯನ್ನೂ ಧನಾಕಾಂಕ್ಷೆಯನ್ನೂ 'ತ್ಯಾಗ'ವು ಪರಿಚಯಮಾಡಿಕೊಡುತ್ತದೆ. ಮೂಕಪ್ರಾಣಿಗಳ ಮೂಕ ದುಃಖಾನುಭವದಲ್ಲಿಯೂ ಕೂಡ ಹೃದಯವನ್ನು ಸ್ಪರ್ಶಿಸುವ ಮಾತಿನ ಮಾಧುರತೆಯಿದೆ. ಕುದುರೆಗಳಿಗೆ ಮಾತನ್ನೂ, ಸಂಭಾಷಣಾ ಕೌಶಲವನ್ನೂ ಆರೋಪಣೆ ಮಾಡುವುದರಲ್ಲಿಯೂ ಕತೆಗಾರರ ಜಾಣ್ಮೆ ವ್ಯಕ್ತವಾಗಿದೆ.

ದೆವ್ವದ ಕತೆಗಳಲ್ಲಿ ಆವರಣ ಚಿತ್ರಣ ಸುಲಭವಾದರೂ ಸರ್ವಾಂಗ ಸೌಂದರ್ಯ ಸೃಷ್ಟಿ ಕಷ್ಟವಾಗುತ್ತದೆ. 'ಒಂದು ಹಳೆಯ ಕತೆ' ಒಂದು ದೆವ್ವದ ಕತೆ. ಮೋಹಿಸಿ ವಾಸುವಿನ ಮೇಲೆ ಪ್ರೇಮ ಬೆಳೆಸುವುದು, ಆ ಪ್ರೇಮ ಅಷ್ಟು ಸಾರ್ಥಕವಾಗದಂತೆ ಕಾಣದಿದ್ದಾಗ ತಾನೇ ಕಾದು ಸೇಡು ತೀರಿಸಿಕೊಳ್ಳುವುದೂ ಚಿತ್ರಿತವಾಗಿವೆ. ಈ ಕತೆಯೊಳಗೆ ಹೊಂದಿ

ಕೊಂಡಿರುವ ದೇವೀ ನರಸಯ್ಯನ ಯಂತ್ರತಂತ್ರ ಕೌಶಲವೂ ಕೂಡ ಕತೆಗೆ ಹೆಚ್ಚು ಪ್ರಾಧಾನ್ಯವನ್ನು ಒದಗಿಸುತ್ತದೆ.

ಯೋಗಾಭ್ಯಾಸದಲ್ಲಿ ಅಪೂರ್ಣವಾಗಿ ಯಶಸ್ಸುಗೊಳಿಸಿದ ಸನ್ಯಾಸಿಯ ವಿಚಿತ್ರವಾದ ಅವಸಾನವನ್ನೂ ಅದರ ಅಸ್ಪಷ್ಟವಾದ ಚಿತ್ರವನ್ನೂ 'ಅನುಗ್ರಹ'ದಲ್ಲಿ ಕಾಣುತ್ತೇವೆ. ಅಷ್ಟೇ ಅಲ್ಲದೆ ಈ ಕಥೆಯಲ್ಲಿ ಬಾಡಿಗೆಗೆ ಬರುವವನ ವಿಚಿತ್ರ ಅನುಭವ ಸ್ವಯಂ ವೇದ್ಯವಾಗುವಂತೆ ವಿವೃತವಾಗಿದೆ.

ಎಳೆಯುತನದಿಂದ ಸುಪ್ತಚೇತನದಲ್ಲಿ ಬೆಳೆದು ಬಂದ ಪ್ರೇಮ ಯುವಕ ಯುವತಿಯರ ದರ್ಶನಮಾತ್ರದಿಂದ ಅವರಲ್ಲಿ ಯಾವ ಯಾವ ಸ್ವರೂಪವನ್ನು ತಾಳಿಕೊಳ್ಳಬಹುದೋ ಹೇಳುವರಾರು? ರಂಗಸಾಮಿಗೆ ನಾಗವೇಣಿಯನ್ನು ಕಂಡು ಹಾಗಾಯಿತು. ಒಂದು ರಾತ್ರಿ ಕನಸಿನಲ್ಲಿ ಹದಿನೈದು ದಿನಗಳ ಸವಿಯಾದ, ಆದರೂ ದುಃಖಾಂತವಾದ ಕನಸು ಬಿದ್ದು ಕಣ್ಣಿನಲ್ಲಿ ನೀರು ತುಂಬಿ ಕನವರಿಸಿಕೊಂಡ ರಂಗಸಾಮಿಯ ಅನುಭವ 'ಆ ಒಂದು ರಾತ್ರಿಯಲ್ಲಿ' ಚೆನ್ನಾಗಿ ಚಿತ್ರಿತವಾಗಿದೆ.

ತಂತ್ರಸಾಧಕರ ಕಾಯಕ್ಲೇಶವನ್ನೂ ಅಸಾಧಾರಣವಾದ ಕಷ್ಟಾನುಭವವನ್ನೂ ಚಿತ್ರಿಸಿ ಅಂತಹ ಸಾಧನೆಯ ಅನುಪಯುಕ್ತತೆಯನ್ನೂ ಸೂಚಿಸಿ 'ಸಾಧನೆ' ರಚಿತವಾಗಿದೆ.

'ಹಾಲೆರೆದ ಹಾವು' ಮಹಾ ವಿದ್ವಾಂಸನೊಬ್ಬನು ತನ್ನ ಎರಡನೆಯ ಹೆಂಡತಿ ಮತ್ತು ಶಿಷ್ಯ ಇವರ ಮೇಲೆ ಅನುಮಾನವನ್ನು ಹೊಂದಿ ತತ್ಪರಿಣಾಮವಾಗಿ ಸನ್ಯಾಸವನ್ನು ಸ್ವೀಕರಿಸುವುದನ್ನು ಹೇಳುತ್ತದೆ.

ರುದ್ರವೀಣೆಯ ಕತೆಗಳಲ್ಲಿ ಹೀಗೆ ವಿವಿಧ ವಸ್ತುಗಳಿದ್ದರೂ ಎಲ್ಲದರಲ್ಲಿಯೂ ಒಂದು ಸುಂದರವಾದ ಅಸ್ಪಷ್ಟತೆ ಇದೆ. ಬೇಕೆಂದೇ ಸೃಷ್ಟಿಯಾಗಿರುವ ಈ ಅಸ್ಪಷ್ಟತೆ, ಕತೆಗಳಿಗೆ ಹೆಚ್ಚು ರಮ್ಯತೆಯನ್ನು ತಂದಿದೆ.

ಒಬ್ಬ ಕತೆಗಾರನ ಶಕ್ತಿಯನ್ನೂ ಸ್ಥಾನವನ್ನೂ ಪರಿಶೀಲಿಸಿ ನಿಶ್ಚಯಿಸಬೇಕಾದರೆ ಕತೆಗಾರನ ಅನೇಕ ಕತೆಗಳನ್ನು ವಿಮರ್ಶೆಗೆ ಒಳಗುಮಾಡಬೇಕು. ನೂರಾರು ಕತೆಗಳಲ್ಲಿ ಬಂದಿರುವ ವಸ್ತು ವೈವಿಧ್ಯವನ್ನೂ ಲೋಕಾನುಭವವನ್ನೂ ಭಾಷಾಶಕ್ತಿಯನ್ನೂ ಶೈಲಿಯ ಔಚಿತ್ಯ

ವನ್ನೂ ವಿವರಿಸಿ ಕತೆಗಾರನ ಹಿರಿಮೆಯನ್ನು ಕಂಡುಕೊಳ್ಳಬಹುದು. ಒಂದೇ ರೀತಿಯ ಹತ್ತು ಕತೆಗಳಿಂದ ಕತೆಗಾರನ ಶಕ್ತಿಯನ್ನೂ ಲೋಕಾನುಭವದಿಂದ ಬೆಳೆದುಬಂದ ದರ್ಶನವನ್ನೂ ನಿಶ್ಚಯಿಸುವುದು ಕಷ್ಟ, ಅಲ್ಲದೆ ಅಸಂಪೂರ್ಣ.

'ಭಾರತೀಪ್ರಿಯ'ರ ಭಾಷಾಶಕ್ತಿಯು ಹಿರಿದೆನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ರಮ್ಯವಾಗಿ ವ್ಯಕ್ತವಾಗಿ ಹೇಳುವುದನ್ನೂ, ಮಧುರವಾಗಿ ಅಸ್ಪಷ್ಟವಾಗಿ ಸೂಚಿಸುವುದನ್ನೂ ಅವರು ಬಲ್ಲರು. ಆವರಣವನ್ನು ಚಿತ್ರಿಸುವುದರಲ್ಲಿಯೂ ಅವರ ಕೈ ಪಳಗಿದ ಕೈ. ರುದ್ರ ವೀಣೆಯನ್ನು ನುಡಿಸುವ ಅವರ ಹಸ್ತಕೌಶಲದಲ್ಲಿ ಮೃದಂಗವಾದನ, ಪಿಟೀಲು ವಾದನ, ವೀಣಾವಾದನಗಳ ವಿವಿಧ ನಾದ ಮಾಧುರ್ಯ ಅಡಗಿಲ್ಲವೆ? ಅವರೇ ಹೇಳಬೇಕು.

## ಕಥಾವಸ್ತು

ಈ ಕಥಾಸಂಕಲನದಲ್ಲಿ ಹತ್ತು ಕತೆಗಳು ಪ್ರಕಟವಾಗಿವೆ. ಇವುಗಳಲ್ಲಿ ಕಾಣುವ ಕಥಾವಸ್ತುವನ್ನೂ ಕಥನ ಕ್ರಮವನ್ನೂ ಸಾಹಿತ್ಯದಲ್ಲಿ ಅವುಗಳಿಗೆ ದೊರಕಬಹುದಾದ ಸ್ಥಾನವನ್ನೂ ಕುರಿತು ಕೆಲವು ಮಾತುಗಳನ್ನು ಕೇಳಬಹುದು.

ಈ ಕತೆಗಳಲ್ಲಿ ಕೆಲವು ಮಾತ್ರ ಜೀವನದಲ್ಲಿ ಒದಗಿದ ಸನ್ನಿವೇಶಗಳಿಂದ ಪ್ರೇರಿತವಾದುವೆಂದೂ ಮಿಕ್ಕವೆಲ್ಲ ಬಹುಮಟ್ಟಿಗೆ ಕಲ್ಪಿತವೆಂದೂ ಕತೆಗಾರರು ಹೇಳುತ್ತಾರೆ. ಕತೆಗಳನ್ನು ಬರೆಯುವವರ ಅನುಭವವೆಲ್ಲ ಹೀಗೆಯೇ. ಯಾವುದೋ ಒಂದೆರಡು ಎಳೆಗಳು ಮಾತ್ರ ಸಿಕ್ಕಿದರೂ ಅದರ ಸುತ್ತ ಇತರ ಎಳೆಗಳನ್ನು ಸೇರಿಸಿ, ಅಂಚು ಸೆರಗು ಕಟ್ಟಿ, ಭವ್ಯವಾದ ವಸ್ತ್ರನಿರ್ಮಾಣವನ್ನೆಸಗುತ್ತದೆ ಕತೆಗಾರನ ಪ್ರತಿಭೆ. ನಾವು ಕಲ್ಪಿತವೆನ್ನುವ ಕತೆಗಳಿಗೂ ಕೂಡ ನಾವರಿಯದಂತೆಯೇ ಯಾವುದೋ ಸಂದರ್ಭ ಮೂಲವಾಗಿರಬಹುದು. ಒಂದು ಪದ, ವಾಕ್ಯ, ಒಂದು ರಾಗ, ತಾಳ, ಒಂದು ಗತಿ, ವಿನ್ಯಾಸ ಒಟ್ಟು ಕತೆಯೊಂದನ್ನು ಸ್ಫುರಣಗೊಳಿಸಬಹುದು. ಮತ್ತೆ ಕೆಲವರು ಕತೆಗೆ ವಸ್ತುವನ್ನು ಹುಡುಕಿ

ಕೊಂಡು ಹೋಗಿ ಸಿಕ್ಕಿದ ಚಿನ್ನದ ಅದುರನ್ನು ಪ್ರತಿಭೆಯ ಮೂಸೆಯಲ್ಲಿ ಕಾಸಿ, ಕಲ್ಪನೆಯ ಚಾಣದಲ್ಲಿ ಕೊರೆದು, ಭವ್ಯಸುಂದರಾಕೃತಿಯನ್ನು ಸಮೆದಿಡುತ್ತಾರೆ. ಜೀವನದ ಸಂಗತಿಯನ್ನು ಆರಿಸಿಕೊಳ್ಳುವುದು ತಪ್ಪಲ್ಲವೆನ್ನುವುದು ಇದರಿಂದ ಸಾಧಿತವಾಗುತ್ತದೆ.

ಈ ಸಂಕಲನದ ಮೊದಲನೆಯ ಕತೆ 'ಮೋಚಿ'. ಇದರಲ್ಲಿ ಕತೆಯನ್ನು ಮೊದಲುಮಾಡುವ ತಂತ್ರ ಬಹು ಆಕರ್ಷಕವಾಗಿರುವುದರಿಂದ ಈ ಕತೆಗೆ ಪ್ರಾಧಾನ್ಯ ಬಂದಿದೆ. ಕತೆಯ ಮೊದಲ ಒಂದು ಪುಟ ಸಂಭಾಷಣೆಯಿಂದಲೇ ತುಂಬಿದೆ.

'ಬನ್ನಿ, ಮಾಸಾಮಿ',

"ಏನೋ, ಸರಿಯಾಗಿ....?"

"ಉಣ್ಣಿ, ಬುಡಿ ನನ್ನೊಡ್ಯ, ಕಳ್ಚಿ"

ಎಂದು ಪ್ರಾರಂಭವಾಗಿರುವ ಸಂಭಾಷಣೆಯಲ್ಲಿಯೇ ಕತೆಗೆ ಬೇಕಾದ ವಿವರಣೆ ದೊರಕುತ್ತದೆ. 'ಕಳ್ಚಿ' ಎನ್ನುವ ಒಂದು ಪದ ಚಮ್ಮಾರನ ಪರಿಚಯ ಮಾಡಿಕೊಡುತ್ತದೆ' ಈ ಸಂಭಾಷಣೆ ಚಮ್ಮಾರನ ಬಳಿಯಲ್ಲಲ್ಲದೆ ಇನ್ನೆಲ್ಲಿಯೂ ಸಾಧ್ಯವಿಲ್ಲ. ಕತೆಗಾರರಲ್ಲಿ ಇದು ನಿಜವಾದ ಚಾತುರ್ಯ. ಆದರೆ ಇಷ್ಟನ್ನು ಬಿಟ್ಟರೆ ಈ ಕತೆಯಲ್ಲಿ ಇನ್ನಾವ ಸ್ವಾರಸ್ಯವೂ ಇಲ್ಲ. ದುಡಿದು ಜೀವಿಸುವ, ಇತರರ ಅವ್ಯಾಜ ಔದಾರ್ಯವನ್ನು ದೂರೀಕರಿಸುವ, ಒಬ್ಬನ ಸಾಮಾನ್ಯ ಚಿತ್ರ ಇಲ್ಲಿ ಕಾಣಬರುತ್ತದೆ.

## ಕಲೆಗಾರನ ಅಂತ್ಯ

'ರಾಹು', 'ನಾದನಾಮಕ್ರಿಯಾ' ಎಂಬ ಎರಡು ಕತೆಗಳು ಹೆಚ್ಚು ಕಡಿಮೆ ಒಂದೇ ರೀತಿಯ ವಸ್ತುವನ್ನು ಉಳ್ಳವು. ಕಲೆಗಾರನೊಬ್ಬನು ಒಂದು ವಿಚಿತ್ರ ಸನ್ನಿವೇಶಕ್ಕೆ ಒಳಗಾಗಿ, ತನ್ನ ಕಲಾಕೌಶಲ್ಯದ ಪರಿಣಾಮವಾಗಿಯೇ ಅವಸಾನ ಹೊಂದುವುದು ಇವುಗಳೆರಡರಲ್ಲಿಯೂ ಇರುವ ತಡಿಕೆ. ಅಮೀರನೆಂಬ ಮುಹಮ್ಮದೀಯನು ಹುಲಿವೇಷವನ್ನು ಕುಣಿಯುವುದರಲ್ಲಿ ಅದ್ವಿತೀಯನಾಗಿ ಗೌರವ ಸಂಪಾದಿಸಿದ್ದುದೂ,

ಮಡದಿ 'ಉನ್ನೀಸ'ಳ ಪ್ರೇಮವು ಅಡ್ಡಹಾದಿಯನ್ನು ಹಿಡಿಯುವುದೂ, ಅವನ ಮೊದಲನೆಯ ಹೆಂಡತಿಯ ಮಗು 'ನೂರ್' ವಿಷಮಶೀತಜ್ವರ ದಿಂದ ಸಾಯುವುದೂ, ಅವನು ತನ್ನ ಮತೀಯರ ಬಲವಂತಕ್ಕೆ ಸಿಕ್ಕಿ ಹುಲಿವೇಷವನ್ನು ಧರಿಸಿ ಮನೆಯ ಮುಂದೆ ಕುಣಿಯುವುದಕ್ಕೆ ಬರು ವುದೂ, ಮಡದಿ ಮಕ್ಕಳ ನೆನಪು ಬಂದು ಧೂಳಿನಲ್ಲಿ ಬಿದ್ದು ಗುಂಡಿ ನೇಟಿಗೆ ಸಿಕ್ಕಿ ನೆಗೆದುರುಳುವ ಹುಲಿಯಂತೆ ಸಾಯುವುದೂ 'ರಾಹು'ವಿ ನಲ್ಲಿ ಕಾಣುವ ಕತೆ. ಹೀಗೆಯೇ ಪಿಟೀಲು ಶ್ರೀನಿವಾಸಯ್ಯನು ತಬ್ಬಲಿ ಯಾಗಿದ್ದಾಗ ಅಣ್ಣನ ಆಶ್ರಯದಲ್ಲಿ ಬೆಳೆದು ಮದುವೆಯಾಗಿ ಮುದ್ದು ಮಡದಿಯನ್ನು ಕಳೆದುಕೊಳ್ಳುವುದೂ, ನಾದನಾಮಕ್ರಿಯಾ ರಾಗಾಭಿ ಮಾನಿ ದೇವತೆಯು ಪ್ರತ್ಯಕ್ಷಳಾಗಿದ್ದರೂ ಆ ರಾಗವನ್ನು ಎಂದೂ ಪೂರ್ತಿಯಾಗಿ ನುಡಿಸದೇ ಇದ್ದುದೂ, ಊರಿನವರ ಬಲವಂತಕ್ಕೆ ಸಿಕ್ಕಿ ತನ್ನ ಜೀವನದ ಮೂಕ ದುಃಖವನ್ನು ಪಿಟೀಲಿನ ನಾದದಲ್ಲಿ ಹರಿಬಿಡು ವುದೂ, ನಾದನಾಮಕ್ರಿಯೆಯನ್ನು ನುಡಿಸುವಾಗ ತನ್ನ ಕಲೆಯಿಂದ ಜನಿತವಾದ ದುಃಖಪ್ರಪಂಚವನ್ನು ಅನುಭವಿಸಲಾರದೇ ತಾನೇ ಅವಸಾನ ಹೊಂದುವುದೂ "ನಾದನಾಮಕ್ರಿಯಾ" ಕತೆಯಾಗಿವೆ. ಹುಲಿ ವೇಷದ ಕುಣಿತದ ವರ್ಣನೆ ಮೊದಲನೆಯ ಕತೆಯಲ್ಲಿದ್ದರೆ, ಎರಡನೆಯ ದರಲ್ಲಿ ಪಿಟೀಲಿನ ನಾದಮಾಧುರ್ಯದ ಸೊಗಸು ವಿವೃತವಾಗಿದೆ. ಒಂದೇ ವ್ಯತ್ಯಾಸವೇನೆಂದರೆ 'ರಾಹು' ಎನ್ನುವುದು ಆ ಕತೆಗೆ ಹೇಗೆ ಹೊಂದೀ ತೆಂಬ ಪ್ರಶ್ನೆಯೊದಗಿದರೂ ಇನ್ನೊಂದು ಕತೆಯಲ್ಲಿ ಆ ಗೋಜು ಇಲ್ಲ. 'ರಾಹು'ವಿನಲ್ಲಿ ರಾಹು ಎನ್ನುವ ಪದ ಒಂದು ಸಲವೂ ಬಂದಿಲ್ಲ. ಈ ಕತೆಗೆ ಈ ಹೆಸರೇಕೆ ಬಂದಿರಬಹುದು ಎನ್ನುವುದು ಸ್ವಲ್ಪ ಯೋಚಿಸಿದರೆ ಸ್ಪಷ್ಟವಾಗುತ್ತದೆ. ಅಮೀರನು ಸತ್ತದ್ದು ರಾವು ಬಡಿದು. 'ರಾವು' ಎನ್ನು ವುದು 'ರಾಹು' ಎನ್ನುವುದರ ತದ್ಭವ. ಏನಾದರೂ ಆಕಸ್ಮಾತ್ ಒದಗುವ ದುರಂತಕ್ಕೆ 'ರಾವು ಬಡಿಯುವುದು' ಎನ್ನುವ ಮಾತು ಪ್ರಯೋಗದಲ್ಲಿದೆ. ಅದನ್ನೇ ಕತೆಗಾರರು ಉಪಯೋಗಿಸಿಕೊಂಡಿದ್ದಾರೆ. ಈ ಅರ್ಥವಲ್ಲದೆ ಇತರ ಅರ್ಥಗಳನ್ನು ಕಲ್ಪಿಸಿದರೆ 'ರಾಹು' ಎಂಬ ಹೆಸರಿಗೆ ಸಂಪೂರ್ಣ ಸಾರ್ಥಕ್ಯ ದೊರಕುವುದಿಲ್ಲ. 'ರಾಹು' ಎಂದರೆ

ವಿಧಿ ಎಂದೋ, ಉನ್ನೀಸಳ ವಂಚನೆಯೇ ರಾಹು, ಒಲುಮೆಯ ಜೀವನವೇ ಚಂದ್ರ ಎಂದೂ ವಿವರಣೆ ಕೊಡಲು ಹೋದರೆ ಅರ್ಥವನ್ನು ತುಂಬ ದೂರ ಎಳೆದಂತಾಗುತ್ತದೆ. ಈ ಒಂದು ವಿವರಣೆಯನ್ನು ಬಿಟ್ಟರೆ ಇವೆರಡು ಕತೆಗಳೂ ಒಂದೇ ರೀತಿಯವು.

'ಬೇಟೆ' ಬಹು ಸಾಧಾರಣವಾದ ಒಂದು ಕತೆ.

'ತ್ಯಾಗ' ಎನ್ನುವ ಕತೆ ಈ ಗ್ರಂಥದಲ್ಲಿ ವಿಶಿಷ್ಟವಾಗಿರುವ ಒಂದು ಕತೆ. ಅದು ಮಾನವ ಸ್ವಭಾವವನ್ನು ಚಿತ್ರಿಸಲು ಪ್ರಾಣಿಗಳಿಗೆ ಸಂಭಾಷಣಾ ಕೌಶಲವನ್ನೂ ವಾಕ್ಯಕ್ತಿಯನ್ನೂ ಆರೋಪಣೆ ಮಾಡಿ ತನ್ಮೂಲಕ ಪ್ರಾಣಿ ಪ್ರಪಂಚದ ಅಂತರಾಳದ ಆಲೋಚನೆಗಳು ಹೇಗೆ ರೂಪುಗೊಳ್ಳಬಹುದೆಂಬುದನ್ನು ಚಿತ್ರಿಸುತ್ತದೆ. ಪಾಶ್ಚಾತ್ಯರಲ್ಲಿ ಇಂತಹ ಅನೇಕ ಕತೆಗಳು ರಚಿತವಾಗಿವೆ. ಪಿರ್ಯಾಂಡೆಲೋ ಎಂಬ ಇಟಲಿ ದೇಶದ ಸಾಹಿತಿಯೂ ಮೆಟರ್‌ಲಿಂಕ್ ಎಂಬ ಬೆಲ್ಜಿಯಂ ದೇಶದ ಸಾಹಿತಿಯೂ ಈ ಸಮಯದಲ್ಲಿ ನೆನಪಿಗೆ ಬರುತ್ತಾರೆ. ಇವರಿಬ್ಬರೂ ನೊಬೆಲ್ ಬಹುಮಾನವನ್ನು ಪಡೆದ ಮಹಾ ಕವಿಗಳು. ಅವರ ಕತೆ, ನಾಟಕಗಳಲ್ಲಿ ಬರುವ ಈ ಚೈತನ್ಯಾರೋಪಣೆಯನ್ನು ಜಾಣತನದಿಂದ "ಭಾರತೀಪ್ರಿಯ'ರು 'ತ್ಯಾಗ'ದಲ್ಲಿ ಉಪಯೋಗಿಸಿದ್ದಾರೆ. ಈ ಚೈತನ್ಯಾರೋಪಣೆ ನಮಗೆ ಪಾಶ್ಚಾತ್ಯರಿಂದ ಬಂದಿತೆಂಬುದು ನನ್ನ ಅಭಿಪ್ರಾಯವಲ್ಲ. ನಮ್ಮಲ್ಲಿಯೂ 'ಪಂಚತಂತ್ರ'ದ ಕತೆ ಮುಂತಾದುವುಗಳಲ್ಲಿ ಇದೇ ತಂತ್ರಪ್ರಯೋಗಗೊಂಡಿದೆ. ಸಣ್ಣ ಕತೆಗಳು ನಮಗೆ ಹೇಗೆ ಹೊರಗಿನಿಂದ ಬಂದವೋ ಹಾಗೆಯೇ ಅಲ್ಲಿಂದ ಕತೆಯ ತಂತ್ರವೂ ಬಂದಿತು. ಆದುದರಿಂದ ಈ ವಿಧವಾದ ಎರವಲು ನಿಜವಾದ ಎರವಲೇ ಆಗಿಬಿಡುವುದಿಲ್ಲ. 'ತ್ಯಾಗ' ಇದಕ್ಕೆ ಒಳ್ಳೆಯ ಉದಾಹರಣೆ. ಕತೆಯ ಪ್ರಾರಂಭವೂ ಕೂಡ ತುಂಬ ಚೆನ್ನಾಗಿದೆ. ಇಬ್ಬರು ಪರಸ್ಪರ ಪರಿಚಯವಿದ್ದವರು, ಬಹು ದಿನ ಒಬ್ಬರನ್ನೊಬ್ಬರು ಅಗಲಿದ್ದವರು, ಒಂದು ಸಲ ಭೇಟಿಯಾದಾಗ ಹೇಗೆ ಮಾತುಕತೆ ಬೆಳೆಯಬಹುದೋ, ಹಾಗೆ ಇಲ್ಲಿ ಸಂಭಾಷಣೆ ಮುಂದುವರಿಯುತ್ತದೆ.

"ನಾವು ಎಲ್ಲೋ ಭೇಟಿಯಾಗಿರುವಂತೆ ಜ್ಞಾಪಕ."

"ನನಗೂ ಹಾಗೇ ತೋರುತ್ತದೆ."

ಹೀಗೆ ಮಾತು ಮೊದಲಾಗುವುದಕ್ಕೆ ಮುಂಚೆ ಕತೆಗಾರರು "ಮೊದಲು ಮಾತಾಡಿಸಿದವನು ಅವನೇ" ಎಂದು ಬರೆಯುತ್ತಾರೆ. ಇದರಿಂದ ಯಾರೋ ಇಬ್ಬರು ಸ್ನೇಹಿತರು ಮತ್ತೆ ಭೇಟಿಯಾದರು ಎಂದು ನಾವು ಭಾವಿಸುತ್ತೇವೆ. ಆದರೆ ಮಾತು ಕೊನೆಗಾಣುತ್ತಾ ಬಂದಾಗ, "ಹಾಗೇ ಒಂದು ಗಳಿಗೆ ತನ್ನ ಹೊಸ ಗೆಳತಿಯನ್ನು ದಿಟ್ಟಿಸಿ ನೋಡಿದ" ಎಂದು ಓದಿದಾಗ ಇವರಿಬ್ಬರು ಹೆಣ್ಣುಗಂಡುಗಳೆಂದು ಸ್ಪಷ್ಟ ವಾಗುತ್ತದೆ. ಈ ಸಮಯದಲ್ಲಿ ಬರುವ ಹೆಣ್ಣಿನ ವರ್ಣನೆ ಮಾನವರಿಗೇ ಸಲ್ಲಬೇಕಾದುದು. "ಬೆಣ್ಣೆಯಂತಹ ನುಣ್ಪುಳ್ಳ ಮೈ; ಅವಕ್ಕೆ ತಕ್ಕ ಲವಲವಿಕೆ; ಮುಪ್ಪಾದ ಮುಖ, ಕಣ್ಣುಗಳಲ್ಲಿ ಇನ್ನೂ ಎಳೆತನದ ಕಾಂತಿ; ಗಂಭೀರವಾದ ನಿಲುವು; ಆ ರೂಪಿಗೆ ಲಜ್ಜೆ ಮೈಗಾವಲಾಗಿರು ವಂತೆ ತೋರುವುದು. ಒಂದು ಸಲ ನೋಡಿದರೆ ಬೆಳುದಿಂಗಳಂಥ ಆ ಚೆಲುವನ್ನು ಬಿಟ್ಟು ಬೇರೆ ಕಡೆ ದೃಷ್ಟಿ ಹೊರಳಿಸುವುದಕ್ಕೆ ಮನಸ್ಸು ಬಾರದು." ಬಹು ಚಾತುರ್ಯದಿಂದ ರಚಿತವಾದ ಈ ವರ್ಣನೆಯನ್ನು ಓದಿ ಪೂರೈಸಿ ಮುಂದೆ ಹೋದಾಗ ನಮಗೆ ದೊರಕುವ ಆಶ್ಚರ್ಯವು ನಿಜ ವಾಗಿಯೂ ಶ್ರೇಷ್ಠವಾದುದು.

"ಆಳುಗಳು ಬಂದು ಒಟ್ಟಿಗೆ ನಿಂತಿದ್ದ ಕುದುರೆಗಳೆರಡನ್ನೂ ಬೇರೆ ಬೇರೆಯಾಗಿ ಕರೆದೊಯ್ದರು."

ಈ ಕುದುರೆಗಳ ಸ್ನೇಹ ಬೆಳೆಯುವುದನ್ನೂ ಅವುಗಳ ಸಂಭಾಷಣೆ ಯಲ್ಲಿ ಮಾನವರಿಗೆ ಸ್ವಾರ್ಥ, ಹೆಮ್ಮೆ, ಹೆಸರು, ಇವು ಹೇಗೆ ಮುಖ್ಯ ಎಂಬುದನ್ನೂ ಅವಕ್ಕೆ ಕುದುರೆಗಳು ಹೇಗೆ ಸಾಧನಮಾತ್ರ ಮುಂತಾದ ಟೀಕೆಗಳು ಬರುವುದನ್ನೂ ಕಾಣುತ್ತೇವೆ.

ಇವೆರಡೂ ಜೂಜಿನ ಕುದುರೆಗಳು. ಜೂಜಿನ ದಿನ ಇವೆರಡರ ಯಜಮಾನರೂ ತಾವೇ ಬಂದು ಮೈಮೇಲೆ ಕೈ ಆಡಿಸಿ ಹೋಗುತ್ತಾರೆ. ಜೂಜು ಮೊದಲಾದಮೇಲೆ ಈ 'ರಾಜ' 'ರಾಣಿ'ಯರು ಒಂದೇ ಪಂದ್ಯ ದಲ್ಲಿ ಓಡುತ್ತಿರುವುದೂ, ಜನರ ಉತ್ಸಾಹವೂ ವರ್ಣಿತವಾಗಿವೆ. 'ರಾಜ'ನು 'ರಾಣಿ'ಯನ್ನು ಕಂಡು ತನ್ನ ಪ್ರೇಯಸಿಗೆ ಸೋಲನ್ನುಂಟು

ಮಾಡಲು ಇಚ್ಛೈಪಡದೆ ಇರುವಾಗ ಎಚ್ಚರ ತಪ್ಪಿ ಮುಗ್ಗರಿಸುತ್ತದೆ. 'ರಾಣಿ' ಗೆಲ್ಲುತ್ತದೆ. 'ರಾಜ'ನಿಗೆ ಯಜಮಾನನಿಂದ ಗುಂಡಿನೇಟಿನ ಬಹುಮಾನ ದೊರಕುತ್ತದೆ. ಗುಂಡಿನ ಶಬ್ದ ಕೇಳಿದ ಒಡನೆಯೇ 'ರಾಣಿ'ಗೆ ತನ್ನವರು ತೋರುತ್ತಿದ್ದ ಗೌರವವೂ ಬೇಡವಾಗದೆ, ಅದು ಬಿಲ್ಲಿನಿಂದ ಚಿಮ್ಮಿದ ಬಾಣದಂತೆ ಹಾರಿ 'ರಾಜ'ನಿದ್ದ ಗುಡಾರಕ್ಕೆ ಬರುತ್ತದೆ. 'ರಾಜ'ನ ಅವಸಾನ ಕಾಲದಲ್ಲಿ 'ರಾಜರಾಣಿ'ಯರು ದುಃಖವನ್ನು ತೋಡಿಕೊಳ್ಳುತ್ತವೆ.

"ನಿನ್ನ ಸಾವಿಗೆ ನಾನೇ ಕಾರಣಳಾದೆನೆ?" ಎಂದು 'ರಾಣಿ' ದುಃಖಿಸಿದರೆ "ನಿನಗಾಗಿ ಇಂತಹ ಸಾವಿರ ಸಾವುಗಳನ್ನು ಸಾಯಲು ಸಿದ್ಧನಾಗಿದ್ದೇನೆ" ಎಂದು 'ರಾಜ' ಹೇಳುತ್ತದೆ. ಆತ್ಮತ್ಯಾಗದಿಂದ ಅವಸಾನ ಹೊಂದಿತು 'ರಾಜ'.

ಈ ಕತೆಯನ್ನು ಕೊನೆಗಾಣಿಸುತ್ತಾ ಕತೆಗಾರರು "ಯಾರಿಗೂ ಏನೂ ಅರ್ಥವಾಗಲಿಲ್ಲ" ಎನ್ನುತ್ತಾರೆ. ಈ ವಾಕ್ಯದಿಂದಲೇ ಎಲ್ಲರಿಗೂ ಎಲ್ಲವೂ ಅರ್ಥವಾಗುತ್ತದೆ. 'ತ್ಯಾಗ'ವು ಉತ್ತಮವಾದ ಕತೆಯೆಂದು ನಿರ್ಭರವಾಗಿ ಹೇಳಬಹುದು.

## ದೆವ್ವದ ಕತೆಗಳು

ದೆವ್ವದ ಕತೆಗಳನ್ನು ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಉಪಯೋಗಿಸಿಕೊಂಡಿಲ್ಲ. ಈ ವಸ್ತು ನಮ್ಮ ಜನರಲ್ಲಿ ಬಹಳವಾಗಿದೆ. ಮೂಢ ನಂಬಿಕೆಯಿರುವ ಸಾಮಾನ್ಯ ಸಮಾಜದಲ್ಲಿ ಸಾವಿರಾರು ಕತೆಗಳು ಸಿಕ್ಕುತ್ತವೆ. ಇವುಗಳಲ್ಲಿ ಬಹುವಾಗಿ ಒಂದೇ ಕತೆಯ ಬೇರೆ ಬೇರೆ ರೂಪಗಳು ಸಿಕ್ಕುತ್ತವೆ. ಜಾಣನಾದ ಕತೆಗಾರ ಈ ರಾಶಿಯಿಂದ ಕಾಳನ್ನು ಮಾತ್ರ ಆರಿಸಿ, ನೂತನ ನಿರ್ಮಾಣ ಮಾಡಬಹುದು.

'ಒಂದು ಹಳೆಯ ಕತೆ' ಇಂತಹ ಕತೆ. ಈ ಹಿಂದೆ ನಮಗೆ 'ಶ್ರೀನಿವಾಸ'ರ 'ಮಲೆನಾಡಿನ ಪಿಶಾಚಿ' 'ವೆಂಕಟರಾಯನ ಪಿಶಾಚಿ' ಎಂಬ ಕತೆಗಳೂ ಪರಿಚಯವಾಗಿದ್ದುವು. 'ಶ್ರೀರಂಗ'ರ 'ಭರಮಪ್ಪನ ಭೂತ' ಎಂಬ ಕಾದಂಬರಿಯೂ, ಶ್ರೀ ಕೆ. ವಿ. ಅಯ್ಯರ್ ಅವರ

'ದೆವ್ವದ ಮನೆ', ಚದುರಂಗರ 'ಶವದ ಮನೆ' ಇತ್ಯಾದಿಯಾಗಿ ಈಚೆಗೆ ಬಂದ ಕೆಲವು ಗ್ರಂಥಗಳೂ ಉಂಟು. ಆದರೂ ಈ ವಿಭಾಗದಲ್ಲಿ ಬೆಳೆಯು ಅಷ್ಟು ಹುಲುಸಾಗಿಲ್ಲವೆಂದೇ ಹೇಳಬೇಕು.

ಈ ಕತೆಯಲ್ಲಿನ ಆವರಣ ಚಿತ್ರಣ ಅಚ್ಚುಕಟ್ಟಾಗಿದೆ. 'ಭಾರತೀ ಪ್ರಿಯ'ರ ಭಾಷೆಯ ಶೈಲಿ ಇಲ್ಲಿ ಒಂದು ಸೊಗಸನ್ನು ಕಂಡಿದೆ. ನರಸೀ ಪುರದ ಬಳಿಯಿರುವ ನದಿಯ ದಡದ ವರ್ಣನೆ, ವಾಸು ಒಬ್ಬನೇ ಒಂದು ಮೋಹಿನಿಯನ್ನು ಕಂಡುದು ಹೀಗೆ ವರ್ಣಿತವಾಗಿದೆ.

"ಒಂದು ಕ್ಷಣ ಮರದ ಎಲೆಗಳು ಮರ್ಮರನೆ ಅಲ್ಲಾಡಿದಂತಾ ಯಿತು. ಯಾರೋ ಕಿಲಕಿಲನೆ ನಕ್ಕಂತಾಯಿತು. ಏನೋ ದೊಪ್ಪನೆ ನೀರಿನಲ್ಲಿ ಬಿದ್ದಹಾಗಾಯಿತು. ವಾಸು ಸರ್ರನೆ ತಿರುಗಿನೋಡಿದ. ಮರದ ಕೆಳಗೆ ನಿಂತಿದ್ದ ಹೆಂಗಸು ಅಲ್ಲೆಲ್ಲೂ ಕಾಣಿಸಲಿಲ್ಲ. ನೀರಿನ ಮೇಲೆ ಬಾಗಿ ಕೊಂಡಿದ್ದ ಕೊಂಬೆಗಳು ಮಾತ್ರ ಅಲ್ಲಾಡುತ್ತಿದ್ದುವು. ಅವನ ಮೈ ಝುಲ್ಲೆಂದು ಬೆವತುಹೋಯಿತು". ಈ ವರ್ಣನೆ ಬಹು ಒಳ್ಳೆಯ ಆವರಣ ವನ್ನು ಸೃಷ್ಟಿಸುತ್ತದೆ. ಕಾಲ ದೇಶ ಸ್ಥಿತಿಗಳನ್ನು ಕತೆಗೆ ಹೊಂದಿಸಿರುವ ಜಾಣ್ಮೆಯನ್ನು ಇಲ್ಲಿ ಚೆನ್ನಾಗಿ ವ್ಯಕ್ತಪಡಿಸಿದ್ದಾರೆ ಕತೆಗಾರರು.

ಅದೇ ರಾತ್ರಿ ಕಲ್ಲು ನೀರು ಒಂದಾಗುವ ವೇಳೆ ಮೋಹಿನಿ ಬಂದು ವಾಸುವನ್ನು ಮೋಹಿಸುವುದು, ಅವನು ಅಲ್ಲಿಂದ ಮುಂದೆ ಹಲ್ಲಿಯ ಹಾಗೆ ಸವೆಯುತ್ತಾ ಬರುವುದು, ದೇವೀ ನರಸಯ್ಯನ ತಂತ್ರ ಇವೆಲ್ಲಾ ವರ್ಣಿತವಾಗಿವೆ. ದೇವೀ ನರಸಯ್ಯನ ತಂತ್ರ ಸಾರ್ಥಕವಾಗಿ, ದೆವ್ವಕ್ಕೆ ವಿರೋಧವಾದ ಒಂದು ಬೇರು ವಾಸುವಿಗೆ ದೊರಕಿ ಅವನು ಬದುಕಿ ಕೊಳ್ಳುತ್ತಾನೆ. ಕತ್ತಿಗೆ ಕಟ್ಟಿದ್ದ ಈ ಬೇರಿನ ತಾಯಿತಕ್ಕೆ ಹೆದರಿ ಮೋಹಿನಿ ಬರುವುದು ನಿಂತುಹೋಗುತ್ತದೆ. ಆದರೆ ನಾಲ್ಕು ವರ್ಷಗಳಾದ ಮೇಲೆ, ತಾಯಿತಿ ಕಿತ್ತುಹೋಗಿರುವುದು ವಾಸುವಿಗೆ ಮರೆತುಹೋಗಿ ದ್ದಾಗ, ಅಕಸ್ಮಾತ್ ಊರಿಗೆ ಬರುತ್ತಿದ್ದಾಗ, ಅದೇ ಮೋಹಿನಿ ಅದೇ ಸ್ಥಳದಲ್ಲಿ ಮತ್ತೆ ಮೆಟ್ಟಿಕೊಂಡು ವಾಸು ಕೆಲವು ದಿನಗಳಲ್ಲಿಯೇ ಸತ್ತುಹೋಗುತ್ತಾನೆ.

ಈ ಕತೆಯಲ್ಲಿ ಕತೆಗಾರರು ಒಂದು ಕಡೆ ಮಾತ್ರ ಎಚ್ಚರ ತಪ್ಪಿ ದ್ದಾರೆ. ದೆವ್ವ ಪಿಶಾಚಿಗಳಿಗೆ ಕಾಮರೂಪಿಗಳೆಂಬ ಹೆಸರಿದೆ. ಅವು ಗಾಳಿಯಾಗಿ, ನೀರಾಗಿ ಎಲ್ಲೆಲ್ಲಿ ಬೇಕಾದರೂ ಹೋಗಿಬಂದು ಮಾಡ ಬಹುದು. ಆದರೆ ವಾಸು ಬೀಗ ಹಾಕಿದ್ದ ಕೊಠಡಿಯಿಂದ ಈಚೆಗೆ ಹೇಗೆ ಬಂದನೆಂಬುದು ಸ್ಪಷ್ಟವಾಗಿಲ್ಲ. ಇದು ಸ್ಪಷ್ಟಗೊಳಿಸಬೇಕಾದ ಅಂಶ. ಈ ಅನುಮಾನವೂ ಇಲ್ಲದಿದ್ದರೆ ಕತೆ ಮತ್ತಷ್ಟು ಶ್ರೇಷ್ಠವಾಗುತ್ತಿದ್ದಿತು.

"ಆ ಒಂದು ರಾತ್ರಿ" ಎಂಬ ಕತೆಯ ರಚನೆಯಲ್ಲಿ ಕಾಣುವ 'ತಂತ್ರ' ಉತ್ತಮವಾದುದು. ಆದರೆ ಅದು ಪೂರ್ಣವಾಗಿ ವ್ಯಕ್ತ ಗೊಂಡಿಲ್ಲವೆಂದು ಯಾರಿಗಾದರೂ ಹೊಳೆದೀತು. ಕತೆ ಬೆಳೆದಿರುವ ರೀತಿ ಸರಿಯಾಗಿಯೇ ಇದೆ. ರಂಗಸಾಮಿ ಮಲೆನಾಡಿನ ಸೌಂದರ್ಯದಲ್ಲಿ ಮುಳುಗಿ ಹಳ್ಳಿಗೆ ಬರುವುದು, ರಾತ್ರಿ ಊಟ ಮಾಡುವಾಗ ನಾಗವೇಣಿ ಯನ್ನು ನೋಡುವುದು, ಅವಳ ಸೌಂದರ್ಯವು ಸ್ಪಷ್ಟವಾಗಿ ಕಾಣಿಸದೆ ಅವಳ ಜಡೆ ಹೊಳೆಯುವ ಕೆನ್ನೆಯ ಕೆಳಗೆ ಹಾವಿನಂತೆ ಹರಿಯುವುದು, ಇವುಗಳ ಯೋಚನೆಯಲ್ಲಿಯೇ ರಂಗಸಾಮಿ ನಿದ್ದೆಹೋಗುವುದು, ನಿದ್ದೆ ಯಲ್ಲಿ ಹದಿನೈದು ದಿನಗಳ ಕನಸು ಕಾಣುವುದು, ಇದೇ ಕತೆಯ ತಡಿಕೆ. ಈ ಹದಿನೈದು ದಿನದ ಕನಸಿನಲ್ಲಿ ನೀಲಿಯ ಪರಿಚಯ, ಅವಳು ಹಾವು ಹಿಡಿಯುವ ಜಾಣ್ಮೆ, ಅವಳ ಸಲಿಗೆ, ನೀತಿ, ಇವುಗಳಿಂದಾಗಿ ರಂಗ ಸಾಮಿಯ ಆಶೆ ಕೈಗೂಡದೆ ಹೋಗುವುದು ಇದೆಲ್ಲ ರೂಪುಗೊಳ್ಳುತ್ತವೆ. ಕಿಟಕಿಯ ಶಬ್ದವೇ ರೈಲುಗಾಡಿಯ ಶಬ್ದವಾಗಿ ಎಚ್ಚರವಾಗುತ್ತದೆ.

ಕನಸನ್ನು ಸಾಹಿತ್ಯದಲ್ಲಿ ಉಪಯೋಗಿಸಿಕೊಳ್ಳುವುದು ಬಹು ಪ್ರಸಿದ್ಧವಾದ, ಪ್ರಾಚೀನವಾದ ತಂತ್ರ. ಈಚೆಗೆ 'ಕನಸಿನ ಮನಶ್ಶಾಸ್ತ್ರ' ಸಂಪೂರ್ಣವಾಗಿ ಚರ್ಚಿತವಾಗಿರುವಾಗ ಕನಸಿಗೆ ಅಲ್ಪ ಸ್ವಲ್ಪ ಸೂಚನೆಗಳನ್ನು ಕೊಡುವುದರ ಪ್ರತಿಯಾಗಿ ರಂಗಸಾಮಿಯ ಸತ್ಯ ಜೀವನದಲ್ಲಿ, ಕನಸಿನ ಪ್ರತಿ ಕೃತಿಯನ್ನೂ ಸೃಷ್ಟಿಸಿ ಅದರಿಂದ ಕನಸಿನ ರೂಪರೇಖೆಗಳನ್ನು ಸೂಚಿಸಿ ಸಂಪೂರ್ಣಗೊಳಿಸಿದ್ದರೆ ಕತೆಯ ಮೇಲ್ಮೆ ಇನ್ನೂ ಹಿರಿದಾಗುತ್ತಾ ಇತ್ತು. ಈ ಕತೆಯಲ್ಲಿ ನೀಲಿ, ಅವಳ ಹಾವು ಗಳು, ಮಲೆನಾಡಿನ ಕಾಡು ಮುಂತಾದುವೆಲ್ಲ ಸತ್ಯದ ಪ್ರತಿಬಿಂಬ.

ರಂಗಸ್ವಾಮಿಯು ತಾನೇನು ಯೋಚಿಸಿದ್ದನೋ—ಯೋಚನೆಗೆ ರಾಜ ಮಾರ್ಗ ಯಾವುದೂ ಇಲ್ಲ—ಅವೆಲ್ಲ ವಿಚಿತ್ರ ರೂಪನ್ನು ತಾಳಿ ಕನಸಿನಲ್ಲಿ ತೋರಿದುವು. ನೀಲಿಯೇ ನಾಗವೇಣಿ. ಹಾವುಗಳೇ ನಾಗವೇಣಿಯ ಜಡೆ, ಮಲೆನಾಡಿನ ಕಾಡು ಅವನ ಕಲ್ಪನೆಯ ಕಾಡು. ಹೀಗೆ ಕನಸನ್ನೂ, ಸತ್ಯವನ್ನೂ ಒಟ್ಟುಕೂಡಿಸಿ ಒಳ್ಳೆಯ ಕತೆಯೊಂದನ್ನು 'ಭಾರತೀಪ್ರಿಯ'ರು ರಚಿಸಿದ್ದಾರೆ.

'ಅನುಗ್ರಹ'ದಲ್ಲಿ ಆವರಣವು ಬಾಡಿಗೆ ಮನೆಯ ವರ್ಣನೆಯಿಂದ ಅಚ್ಚುಕಟ್ಟಾಗಿ ಚಿತ್ರಿತವಾಗುತ್ತದೆ. 'ಸಾಧನೆ'ಯು ಬೇಟೆಯಂತೆ ಸಾಮಾನ್ಯವಾದ ಕತೆ.

'ಹಾಲೆರೆದ ಹಾವಿ'ನಲ್ಲಿ ಘನಪಾಟಿ ಮೃತ್ಯುಂಜಯ ಶಾಸ್ತ್ರಿಗಳ ಮಹಾ ವಿದ್ವತ್ತು, ತೇಜಸ್ಸುಗಳನ್ನೂ ಎರಡನೆಯ ಮದುವೆ ಮಾಡಿಕೊಂಡು ಅವರು ಸುಖವಾಗಿದ್ದುದನ್ನೂ ಕ್ರಮೇಣ ಅವರ ಮನಸ್ಸಿನಲ್ಲಿ ಶಿಷ್ಯ ಮತ್ತು ಹೆಂಡತಿಯ ಮೇಲೆ ಅನುಮಾನ ಬಂದುದನ್ನೂ ವಿವರಿಸಿದೆ. ಇಲ್ಲಿ ಯಾರದು ತಪ್ಪು ಎನ್ನುವುದು ಸ್ಪಷ್ಟವಾಗಿಲ್ಲ. ಪ್ರಾರಂಭದಲ್ಲಿ ದಾಂಪತ್ಯದ ಸವಿಯನ್ನು ವರ್ಣಿಸಿ, ಶಾಸ್ತ್ರಿಗಳ ಮನಸ್ಸು ಕ್ರಮೇಣ ವ್ಯತ್ಯಾಸವಾಗುತ್ತಿರುವುದನ್ನು ವರ್ಣಿಸಿ ಕತೆಗಾರರು "ಹೀಗೆ ದಿನದಿನಕ್ಕೆ ವ್ಯತ್ಯಾಸವಾಗುತ್ತಿದ್ದ ಗಂಡನ ಸ್ಥಿತಿಯನ್ನು ನೋಡಿ ಗೌರಮ್ಮ ಅಧೀರಳಾದಳು" ಎನ್ನುತ್ತಾರೆ. ಈ ಮಾತಿನಿಂದ ಗೌರಮ್ಮನಲ್ಲಿ ಏನೂ ತಪ್ಪಿಲ್ಲವೆಂದು ವ್ಯಕ್ತವಾಗುತ್ತದೆ. ಆದುದರಿಂದ ಶಾಸ್ತ್ರಿಗಳ ಮನಸ್ಸಿನಲ್ಲಿ ತಮ್ಮ ನಡವಳಿಕೆಯಲ್ಲಿ ತಪ್ಪು ಕಂಡಿರಬಹುದು ಎಂದು ಊಹಿಸಬಹುದು. ಆದರೆ ಪತ್ನಿಯ ಮೇಲೆ ತಪ್ಪು ಹಾಕುವುದಕ್ಕೆ ಅವರು ಹೋಗಬಾರದಾಗಿತ್ತು. ಹೀಗೆ ಈ ಕಥೆಯಲ್ಲಿ ಪೂರ್ವಾಪರಗಳ ಸಂಯೋಜನೆ ಸ್ವಲ್ಪ ಕಷ್ಟವಾಗುತ್ತದೆ. "ನನ್ನ ಪಾಪಕ್ಕೆ ಪ್ರಾಯಶ್ಚಿತ್ತ ಅನುಭವಿಸುವುದಕ್ಕೆ ಇಗೋ ಹೋಗುತ್ತಿದ್ದೇನೆ" ಎನ್ನುವುದರ ಅರ್ಥವೇನು? ಅಸ್ಪಷ್ಟತೆಗಾಗಿಯೇ ಅಸ್ಪಷ್ಟತೆಯನ್ನು ಚಿತ್ರಿಸಿದರೆ ಈ ತೊಂದರೆ ಬಂದೊದಗುತ್ತದೆ. ಆದರೂ ಕತೆಯಲ್ಲಿ ಆಕರ್ಷಕ ಗುಣ ಇರುವುದು ಸ್ಪಷ್ಟವಾಗಿದೆ.

'ಭಾರತೀಪ್ರಿಯ'ರ "ರುದ್ರವೀಣೆ" ಹೀಗೆ ಏಕರೀತಿಯ ವಸ್ತುವನ್ನು ಸಂಗ್ರಹಿಸಿದ್ದರೂ, ವಸ್ತುನಿರೂಪಣೆಯಿಂದ ಉತ್ತಮ ಶೈಲಿಯಿಂದ, ಭಾಷಾಶಕ್ತಿಯಿಂದ ಕನ್ನಡ ಸಣ್ಣಕತೆಗಳಲ್ಲಿ ಮುಖ್ಯಸ್ಥಾನವನ್ನು ಗಳಿಸಿದೆ ಎಂದು ಧಾರಾಳವಾಗಿ ಹೇಳಬಹುದು.

೭

# ಕವಿದೃಷ್ಟಿಯಲ್ಲಿ ಶ್ರೀ ಕೃಷ್ಣ

ಕಾಲಕಾಲಕ್ಕೆ ವಿಭೂತಿ ಪುರುಷರು ಅವತರಿಸಿ ಜನತೆಯನ್ನು ಸನ್ಮಾರ್ಗದಲ್ಲಿ ನಡೆಸಿಕೊಂಡು ಹೋಗುತ್ತಾರೆ. ಅವರ ಸಮಕಾಲೀನರಿಗೆ ಆ ಮಹಾಪುರುಷರ ಮಾತುಗಳು ವೇದಕ್ಕೆ ಸಮನಾಗುತ್ತವೆ. ಅವರ ಕೆಲಸಗಳು ಎಲ್ಲರಿಗೂ ಮೇಲ್ಪಂಕ್ತಿಯಾಗುತ್ತವೆ. ಅವರನ್ನು ಅನುಸರಿಸುವವರಿಗೆ ಅಚ್ಚಳಿಯದ ಕೀರ್ತಿ ಲಭಿಸುತ್ತದೆ. ಜೀವಿತ ಕಾಲದಲ್ಲಿಯೇ ಜನರ ಮೆಚ್ಚುಗೆಯನ್ನು ಪಡೆದ ಅಂತಹ ಮೇಧಾವಿಗಳ ಪುಣ್ಯಚರಿತೆಯು ಮುಂದಿನ ತಲೆಮಾರುಗಳಿಗೆ ಪಾವನವಾದ ಕಥೆಯಾಗುತ್ತದೆ. ಇದು ಪ್ರಕೃತಿಸಿದ್ಧವಾದುದು.

ಶ್ರೀ ಕೃಷ್ಣನ ಜೀವನದಲ್ಲಿ ವಿಶ್ವಪ್ರೇಮದ ಪವಿತ್ರ ತತ್ವವು ಅಡಗಿದೆ. ಮಹಾಭಾರತದಲ್ಲಿ ಶ್ರೀಕೃಷ್ಣನ ಪೂಜೆಯೆ ಮುಖ್ಯವಾದ ಗುರಿ. ಆ ಗ್ರಂಥದ ಅನುಕ್ರಮಣಿಕೆಯಲ್ಲಿ ಶ್ರೀಕೃಷ್ಣನ ಮಹಿಮೆಯನ್ನೂ ಅವನ ಯಶಸ್ಸನ್ನೂ ಹೇಳುವುದು ತನ್ನ ಕೆಲಸದಲ್ಲಿ ಒಂದು ಎಂದು ಕವಿಯೇ ಸೂಚಿಸಿದ್ದಾನೆ. ಭಾರತದಲ್ಲಿ ಮೊದಲಿನಿಂದಲೂ ಶ್ರೀಕೃಷ್ಣನನ್ನು ಮಹಾಮಹಿಮಾಮಯನಾದ ದೇವನೆಂದೇ ಕರೆದಿದೆ. ಸತ್ಯ ಧರ್ಮಗಳನ್ನು ಉದ್ಧರಿಸಿ, ಅಸತ್ಯ ಅಧರ್ಮಗಳನ್ನು ತುಳಿಯುವುದೇ ಅವನ ಕೆಲಸ.

ಮೊಟ್ಟಮೊದಲು ಒಬ್ಬ ಪರಾಕ್ರಮಶಾಲಿಯಾದ ಯೋಧನಾಗಿಯೂ, ಆಮೇಲೆ ನ್ಯಾಯದ ಆಧಾರಸ್ತಂಭವಾಗಿಯೂ, ಅಲ್ಲಿಂದ ಮುಂದೆ ಶತ್ರುಮಿತ್ರರಿಬ್ಬರಿಗೂ ಒಂದೇ ವಿಧವಾದ ಪ್ರೇಮವನ್ನು ತೋರುವವನಾಗಿಯೂ ಕೊನೆಗೆ ವಿಶ್ವಪ್ರೇಮದಲ್ಲಿ ಮಗ್ನನಾಗಿರುವಂತೆಯೂ ಭಾರತದಲ್ಲಿ ಶ್ರೀಕೃಷ್ಣನು ಚಿತ್ರಿತನಾಗಿದ್ದಾನೆ. ಅವನ ಶೀಲದ ಬೆಳವಣಿಗೆಯಲ್ಲಿ ಮಾನವಪ್ರೇಮವು ದೇವತ್ವಕ್ಕೆ ಏರುವ ಒಂದು ಕ್ರಮವು ನಿರೂಪಿತವಾಗಿದೆ. ಆದರೆ ಭಾರತದಲ್ಲಿ ಶ್ರೀಕೃಷ್ಣನ ಬಾಲ್ಯ

ಯೌವನಗಳ ಪರಾಕ್ರಮವನ್ನು ಚಿತ್ರಿಸಿಲ್ಲ. ಅದು ಭಾರತದ ಉದ್ದೇಶವೂ ಅಲ್ಲ. ಭಾರತದಲ್ಲಿ ಮೊಟ್ಟಮೊದಲು ಶ್ರೀಕೃಷ್ಣನು ಕಾಣಬರುವುದು ದ್ರೌಪದಿಯ ಸ್ವಯಂವರದಲ್ಲಿ. ಪಾಂಡವರನ್ನು ಕೊಂದೆನೆಂದು ಹಿಗ್ಗಿ ತಮ್ಮ ಸ್ವಾರ್ಥದಲ್ಲಿ ನಿರತರಾಗಿ ಅನ್ಯಾಯಮಾಡಿದ್ದ ಕೌರವರೆದುರು, ಭರತಖಂಡದ ಇತರ ಎಲ್ಲ ರಾಜರೆದುರು ಪಾಂಡವರನ್ನು ನಾಟಕೀಯವಾಗಿ ಪ್ರಕಾಶಕ್ಕೆ ತಂದು ಅವರ ಪರಾಕ್ರಮವನ್ನು ಪ್ರಪಂಚಕ್ಕೇ ಬೀರಿದ ಶ್ರೀಕೃಷ್ಣನ ರಾಜನೀತಿಯನ್ನು ಮೆಚ್ಚದವರಿಲ್ಲ. ಒಟ್ಟು ಪ್ರಪಂಚಕ್ಕೆ ಕೌರವರ ಅನ್ಯಾಯ ಅಂದು ಹೊಳೆಯಿತು. ಅಂದಿನಿಂದ ಕೌರವರ ಕೀಳ್ಬಿಸೆಗೆ ಮೊದಲಾಯಿತು. ಅಲ್ಲಿಂದ ಮುಂದೆ ಪಾಂಡವರಿಗೆ ಪಟ್ಟಾಭಿಷೇಕವಾಗುವವರೆಗೂ ಶ್ರೀಕೃಷ್ಣನು ಪಾಂಡವರ ರಕ್ಷಾನಿಧಿಯಾಗಿದ್ದನು.

ಹೀಗೆ ಶ್ರೀಕೃಷ್ಣನ ಚರಿತೆಯಲ್ಲಿ ಕಾಣಬರುವುದು ವಿಶ್ವಪ್ರೇಮದ ತತ್ವ. ವಿಶ್ವಪ್ರೇಮವೇ ದೇವರು, ದೇವರೇ ವಿಶ್ವಪ್ರೇಮ ಎಂಬ ಗಾಢವಾದ ಅಂತರಾರ್ಥ ಅವನ ಜೀವನದಿಂದ ಪ್ರತಿಪಾದಿತವಾಗಿದೆ. ಈ ತತ್ವದ ಆಧಾರದಿಂದಲೇ ಶ್ರೀಕೃಷ್ಣನು ನಮ್ಮ ಜನಕ್ಕೆ ದೇವರದೇವನಾದುದು. ಅವನು ಸರ್ವಶಕ್ತನಾದ ಅಂತರ್ಯಾಮಿಯೆಂಬುದನ್ನು ಜನರು ಒಪ್ಪಲಿ ಒಪ್ಪದಿರಲಿ ಈ ತತ್ವವನ್ನು ಎಲ್ಲರೂ ಒಪ್ಪಬೇಕು. ಅದೇ ಭಾರತದ ಮುಖ್ಯ ಮಂತ್ರ. ಶ್ರೀ ಭಗವದ್ಗೀತೆಯಲ್ಲಿ ಅವನೇ ಹೇಳಿರುವ ಹಾಗೆ,

> ಯದ್ಯದ್ವಿಭೂತಿಮತ್ ಸತ್ವಂ ಶ್ರೀಮದೂರ್ಜಿತಮೇವವಾ ।
> ತತ್ತದೇವಾವಗಚ್ಛತ್ವಂ ಮಮ ತೇಜೋಂಶ ಸಂಭವಂ ॥

ಪ್ರಪಂಚದಲ್ಲಿ ಯಾವ ಯಾವುವು ಯಶಸ್ಸು, ಸೌಂದರ್ಯ ಮತ್ತು ಶಕ್ತಿಗಳಿಂದ ಕೂಡಿವೆಯೋ ಅವೆಲ್ಲವೂ ಆತನ ತೇಜಸ್ಸಿನ ಭಾಗವೊಂದರಿಂದ ಉಂಟಾದುವು. ಆದುದರಿಂದಲೇ ಧರ್ಮರಾಜ, ದ್ರೌಪದಿ, ಅರ್ಜುನ ಮುಂತಾದ ಮಹಾಮಹಿಮರು ಶ್ರೀಕೃಷ್ಣನಿಗೆ ಪರಮ ಆಪ್ತರಾದುದು. ಇದನ್ನು ಅರಿತ ಮೇಲೆ ಶ್ರೀಕೃಷ್ಣನ ಎಲ್ಲಾ ಕಾರ್ಯಗಳಿಗೂ ಸರಿಯಾದ ಸಮನ್ವಯ ದೊರಕುವುದು ಕಷ್ಟವೇನಲ್ಲ.

ವ್ಯಾಸಮಹಾಭಾರತದ ಕೃಷ್ಣನ ಈ ಗುಣಗಾನ ಕನ್ನಡ ಕವಿ ಪಂಪನಿಗೆ ಹಿಡಿಸಲಿಲ್ಲ. ಭಾರತವನ್ನು ಕಥಾವಸ್ತುವಾಗಿ ಆರಿಸಿದರೂ ಶ್ರೀಕೃಷ್ಣನ ಪಾರಮ್ಯವನ್ನು ಅವನು ಬಿಟ್ಟುಬಿಟ್ಟನು. ತನ್ನ ಜೈನ ಮತದ ಅಭಿಮಾನದಿಂದ ವ್ಯಾಸರ ಕೃಷ್ಣನ ಪ್ರತಿಕೃತಿಯನ್ನು ರಚಿಸುವುದು ಅವನಿಗೆ ಅಸಾಧ್ಯವಾಯಿತು. ಆದುದರಿಂದ ಪಂಪನಲ್ಲಿ ಕೃಷ್ಣನೊಬ್ಬ ಪರಾಕ್ರಮಶಾಲಿಯಾದ ರಾಜಕುಮಾರ ಅಷ್ಟೇ. ಅವನಲ್ಲಿ ಎಲ್ಲರನ್ನೂ ಆಕರ್ಷಿಸುವ ಅನೇಕ ಗುಣಗಳು ತುಂಬಿವೆ. ಅದರಿಂದ ಅವನು ಜನರೆಲ್ಲರ ಮೆಚ್ಚಿಗೆಗೆ ಪಾತ್ರನಾಗಿದ್ದಾನೆ. ಅವನನ್ನು ಎದುರಿಸಿದವರು ಬದುಕುವುದೂ ಕಷ್ಟ. ಈ ಒಂದು ಕಾರಣದಿಂದ ಜರಾಸಂಧ, ಶಿಶುಪಾಲ, ಕಂಸ ಮುಂತಾದ ರಾಕ್ಷಸರೂ, ಕೌರವ, ದುಶ್ಶಾಸನ ಮುಂತಾದ ಹಟಮಾರಿಗಳೂ, ಉದಾತ್ತನಾದರೂ ಅನ್ಯಾಯದ ಕಡೆಗೆ ಸೇರಿದ ಕರ್ಣನೂ ಮಡಿಯಬೇಕಾಯಿತು. ಈ ಎಲ್ಲ ಕಾರ್ಯಗಳಲ್ಲಿ ಯಾವ ಅತಿ ಮಾನುಷತೆಯೂ ಇಲ್ಲ.

ಪಂಪನಿಗೆ ಈ ದೃಷ್ಟಿ ಇದ್ದದ್ದರಿಂದ ಭಾರತದ ಅನೇಕ ಸ್ವಾರಸ್ಯವಾದ ಭಾಗಗಳು ಇವನಲ್ಲಿ ಇಲ್ಲವಾಗಿವೆ. ಅಕ್ಷಯ ವಸ್ತ್ರಧಾನ, ದೂರ್ವಾಸರ ಆತಿಥ್ಯ ಮುಂತಾದ ರಸಪ್ರಕರಣಗಳು ಮಾಯವಾಗಿವೆ. ದುಶ್ಶಾಸನನು ದ್ರೌಪದಿಯ ಸೀರೆಯನ್ನು ಎಳೆಯುವುದರ ಬದಲು ಧಮ್ಮಿಲ್ಲವನ್ನು ಮಾತ್ರ ತೆಗೆಯುತ್ತಾನೆ. ಆಗ ಕೆದರಿದ ಕೇಶ ಪುನಃ ಮುದುರುವುದು ದುಶ್ಶಾಸನ ಮಡಿದ ಮೇಲೆ ಮಾತ್ರ.

ಹೀಗಾಗಿ ಕೃಷ್ಣನ ದೃಷ್ಟಿಯಿಂದ ಪಂಪ ಭಾರತದಲ್ಲಿ ಹೆಚ್ಚಿಲ್ಲವೆಂದೇ ಹೇಳಬೇಕು.

ಕುಮಾರವ್ಯಾಸನು ಭಕ್ತಕವಿ. ಅವನು ಪರಮ ವೈಷ್ಣವ. ಆದುದರಿಂದ ವ್ಯಾಸಭಾರತದಲ್ಲಿ ಹೇಳಿರುವ ಕೃಷ್ಣಪಾರಮ್ಯವೂ ಅವನಿಗೆ ಸಾಲದಾಯಿತು. ಎದ್ದರೆ ಕೂತರೆ ಶ್ರೀಕೃಷ್ಣನ ಮಹಿಮೆಯನ್ನು ವಿವರಿಸುವುದೇ, ಅವನ ಅಗಾಧ ಸಾಮರ್ಥ್ಯವನ್ನು ಬಣ್ಣಿಸುವುದೇ ಕುಮಾರವ್ಯಾಸನ ಕೆಲಸವಾಯಿತು. ಮಹಾಭಾರತವು ಅವನಿಗೆ ಶ್ರೀಕೃಷ್ಣಚರಿತೆ. ಗ್ರಂಥವು ಪಾವನವಾಗಿರುವುದು ಅವನ ನಾಮ

ಸ್ಮರಣೆಯಿಂದ. ಇಂಥ ಭಾರತವನ್ನು ಓದುವುದೊಂದೇ ಸಾಕು, ಎಲ್ಲ ಪುಣ್ಯಲೋಕಗಳನ್ನೂ ಸಾಧಿಸಿಕೊಡುವುದಕ್ಕೆ.

ವೇದಪಾರಾಯಣದ ಫಲ ಗಂ
ಗಾದಿ ತೀರ್ಥಸ್ನಾನಫಲ ಕೃ
ಚ್ಛ್ರಾದಿತಪಸಿನ ಫಲವು ಜ್ಯೋತಿಷ್ಟೋಮಯಾಗಫಲ
ಮೇದಿನಿಯನೊಲಿದಿತ್ತಫಲ ವ
ಸ್ತ್ರಾದಿ ಕನ್ಯಾದಾನ ಫಲವಹು
ದಾದರಿಸಿ ಭಾರತದಳೊಂದಕ್ಕರವ ಕೇಳ್ದರಿಗೆ

ಈ ಭಾರತದಲ್ಲಿ ಒಂದಕ್ಷರವನ್ನು ಕೇಳಿದರೇ ಸಾಕು!

ನಮ್ಮ ಗದುಗಿನ ಕವಿಗೆ ಕೃಷ್ಣನ ಪಾರಮ್ಯವನ್ನು ಹೇಳಿದಷ್ಟೂ ಹೆಚ್ಚಿಗೆ ಹೇಳಬೇಕೆನ್ನಿಸುತ್ತಿತ್ತು. ಪ್ರಪಂಚವೆಲ್ಲವೂ ಕೃಷ್ಣನ ಇಚ್ಛೆಗೆ ಅಡಿಯಾಳು. ಅವನು ಯಂತ್ರಿ; ಲೋಕ ಯಂತ್ರ. ಈ ಅಭಿಪ್ರಾಯವನ್ನು ಭೀಷ್ಮನ ಬಾಯಿನಲ್ಲಿ ಕವಿ ಸ್ಪಷ್ಟವಾಗಿ ಹೇಳಿಸಿಬಿಟ್ಟಿದ್ದಾನೆ. ಭೀಷ್ಮನನ್ನು ಚಕ್ರದಿಂದ ಕೊಲ್ಲುತ್ತೇನೆಂದು ಕೃಷ್ಣನು ರಥದಿಂದ ಭೂಮಿಗಿಳಿದಾಗ ಭೀಷ್ಮನು ಹೀಗೆ ಹೇಳುತಾನೆ:

ಯಂತ್ರಮಿಡಿದರೆ ಕಾದಿ ಬೀಳ್ವವು
ಯಂತ್ರಮಯ ಹಾಹೆಗಳು ವಥೆಯಾ
ಯಂತ್ರಿಗೋ ಹಾಹೆಗಳಿಗೋ ಹೇಳಾರ ನೆಮ್ಮುವುದು
ಯಂತ್ರಿ ಕೃಷ್ಣನು ನಾವು ನೀವೀ
ತಂತ್ರವಖಿಲ ಚರಾಚರಂಗಳು
ಯಂತ್ರ ರೂಪುಗಳೆಲ್ಲ ಕಾರಣವಿಲ್ಲ ನಿನಗೆಂದ

ಶ್ರೀಕೃಷ್ಣನು ಅರ್ಜುನನಿಗೆ ವಿಶ್ವರೂಪದರ್ಶನ ಮಾಡಿಸಿದ ಮೇಲೆ ಅರ್ಜುನನು ಅವನನ್ನು ಕುರಿತು ಹೇಳುವ ಮಾತುಗಳಲ್ಲಿಯೂ ಇದೇ ತತ್ವ ಅಡಗಿದೆ:

ವಿಶ್ವ ನಿನ್ನಯ ಮಾಯೆ ನಿರ್ಮಲ
ವಿಶ್ವರೂಪನು ನೀನು ಬಗೆವೊಡೆ
ವಿಶ್ವನಿನ್ನೊಳು ಸುಳಿವುದಳಿವುದು ಲಲಿತ ಲೀಲೆಯಲಿ

ಈ ಮಾತುಗಳಲ್ಲಿ ಕವಿಯ ಅಭಿಪ್ರಾಯ ತುಂಬಿದೆ. ಇಂತಹ ಅಭಿಮಾನವುಳ್ಳ ಕವಿಗೆ ಕೃಷ್ಣನ ಒಂದು ಸಾಹಸ ಕಾರ್ಯ, ಒಂದು ಕರುಣೆಯ ತೋರ್ಕೆ ಸಿಕ್ಕಿದರೆ ಸಾಕು. ಭಕ್ತಿಯ ಹೊನಲು ಹರಿದುಬಿಡುತ್ತದೆ. ಕವಿಯ ಭಾವ ಭಾಷೆಗಳೆರಡೂ ಹೊಂದಿಕೊಂಡು ಈ ಪ್ರವಾಹದಲ್ಲಿ ಓದುಗನನ್ನು ತೇಲಿಸಿಬಿಡುತ್ತವೆ. ಸನ್ನಿವೇಶಕ್ಕೆ ಈ ದೀರ್ಘವಾದ ಸ್ತೋತ್ರಗಳು ಹೆಚ್ಚು. ಆದರೂ ನಮಗೆ ಅದರಿಂದ ಬೇಸರವಾಗುವುದರ ಬದಲು ಇನ್ನಷ್ಟು ಕೇಳೋಣವೆನ್ನಿಸುತ್ತದೆ.

ದ್ರೌಪದಿಗೆ ಮಾನಭಂಗವಾಗುವ ಸಂದರ್ಭವೊದಗಿದಾಗ ಅನೇಕ ಪದ್ಯಗಳಲ್ಲಿ ಕೃಷ್ಣನ ಪೂರ್ವಕಥೆಗಳೆಲ್ಲವನ್ನೂ ವಿಸ್ತಾರವಾಗಿ ಹೇಳಿ ತನ್ನನ್ನು ಕಾಪಾಡಬೇಕೆಂದು ದ್ರೌಪದಿ ಕೇಳಿಕೊಳ್ಳುತ್ತಾಳೆ.

ಸುಲಿವರೂರೊಳಗುಟ್ಟ ಸೀರೆಯ
ನೆಲೆ ಮುರಾಂತಕ ರಕ್ಷಿಸೈ ಶಶಿ
ಕಳೆಗೆ ಸದರವೆ ರಾಹುರಚಿಸಿದ ತುಟಿಯ ತೋಟಿಯದು
ಸೆಳೆವರಸುವನು ಖಳರು ಸೀರೆಯ
ಸೆಳೆಯಲುಳಿವೆನೆ ಕೃಷ್ಣ ಕರುಣಾ
ಜಲಧಿಯೇ ಕೈಗಾಯಬೇಕೆಂದೊಜಲಿದಳು ತರಳೆ

ಇಂತಹ ಸನ್ನಿವೇಶ ಭಾರತದಲ್ಲಿ ನೂರಾರು. ಎಲ್ಲವನ್ನೂ ಸಮದೃಷ್ಟಿಯಿಂದ ಪರಿಹರಿಸಿ ಎಲ್ಲರಿಗೂ ಕನಿಕರವನ್ನು ಹರಡುವುದು ಅವನ ಕೆಲಸ. ಅವನು ಕರುಣಾನಿಧಿ, ದಯಾಸಾಗರ, ದ್ರೌಪದಿಯ ಮಾತು ಅವನಿಗೆ ಕೇಳಿಸಿ ಪಗಡೆಯಾಡುವ ನೆವದಿಂದ ಆಕೆಯ ಸೀರೆಯನ್ನು ಅಕ್ಷಯವನ್ನಾಗಿಸಿದ.

ಮೊದಲ ನೋಟಕ್ಕೆ ಅನ್ಯಾಯವೆಂದು ಕಾಣುವುದೂ ವಿಮರ್ಶೆಯಲ್ಲಿ ಸೋಸಿದಾಗ ಕೃಷ್ಣನಲ್ಲಿ ನಿಷ್ಕಲ್ಮಷವಾದ ಗುಣವಾಗಿ ಕಾಣುತ್ತದೆ. ಹಟವಾದಿಯಾದ ಕೌರವನಿಗೂ ಇದು ಗೊತ್ತು. "ಕಾವನಾತನು ಕೊಲುವನಾತನು; ಕೃಷ್ಣನನ್ನು ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲ" ಎಂಬ ಮಾತುಗಳು, ಶ್ರೀಕೃಷ್ಣನನ್ನು ಮನಸಾರೆ ಬೈದು

ಮರುಳುಗಳಲಾ ಬೊಪ್ಪನವರೀ
ಮುರಹರನು ಹರಿಯೆಂದು ಮುನ್ನದನರಿದಿಹೆನು

ಎಂದು ಹೇಳಿದ ಸುಯೋಧನನದು.
ಅಂತಹ ಕೌರವನಿಗೂ ಶ್ರೀಕೃಷ್ಣನಿಂದ ಮುಕ್ತಿ ದೊರಕಿತು. ಕರ್ಣನು "ಆವಂತಹೆನು ಕುರುನೃಪತಿ" ಎಂದು ತನ್ನ ಮನಸ್ಸಿನ ದೃಢವನ್ನು ತಿಳಿಸಿದಾಗ ಕೃಷ್ಣನು, "ನೀಸುಖಿಯಾಗು ಹೋಗು" ಎಂದು ಹೇಳಿಕಳುಹಿಸಿದನು. ಕರ್ಣನು ರಣರಂಗದಲ್ಲಿ ಮಡಿಯುವುದರಲ್ಲಿದ್ದಾಗ

ಪರಮ ಕರುಣಾ ಸಿಂಧು ಕರ್ಣಂ
ಗಿರದೆ ನಿಜಮೂರ್ತಿಯನು ತೋರಿಸಿ
ಯುರುತರ ಪ್ರೇಮದಲಿ ಮುಕ್ತಿಯ ಪದವ ನೇಮಿಸಿದ

ಹೀಗಾಗಿ ಭೀಷ್ಮನು ಕೃಷ್ಣನನ್ನು ಹೊಗಳುವಾಗ ಹೇಳುವಂತೆ 'ಇದು ಮುರಾರಿಯ ಲೀಲೆಗೋಸುಗ ಉದಯಿಸಿದ ಜಗ'. ಅವನು ಅಲ್ಲಿ ಅನೇಕ ನಾಟಕಗಳನ್ನು ಆಡುತ್ತಿದ್ದಾನೆ. ಅವನ ಭಕ್ತಿಯಿಂದ ಜಗತ್ತಿನ ಜನ ಉದ್ಧಾರವಾಗಬೇಕು. ಪಾಂಡವರು ವಿಜಯಿಗಳಾದುದು ಈ ಕಾರಣದಿಂದ.

ದೇವಸಂತತಿ ನಲಿಯೆ ಪಾಂಡವ
ಜೀವಿ ಹರಿಯೆಂಬೀ ಪ್ರತಿಜ್ಞೆಯ
ಭಾವ ಸಂದುದು ಧರ್ಮಜನ ಪಟ್ಟಾಭಿಷೇಕದಲಿ

ಇಷ್ಟೆಲ್ಲ ಆದರೂ ಕುಮಾರವ್ಯಾಸನ ಭಾರತದಲ್ಲಿ ಕೇವಲ ಕೃಷ್ಣ ಮಹಿಮೆಯೊಂದೇ ವರ್ಣಿತವಾಗಿಲ್ಲ. ಅದರೊಡನೆ ಅನೇಕ ರಸಸಂದರ್ಭಗಳೂ ತಮ್ಮ ಸಂಪೂರ್ಣ ವರ್ಣ ವೈಖರಿಯೊಡನೆ ಚಿತ್ರಿತವಾಗಿವೆ. ಅವನ ಕಥಾನಾಯಕನಂತೆಯೇ ಅವನ ಗ್ರಂಥವೂ ಒಂದು ಮಹಾ ಮಾಯಾ ನಾಟಕಶಾಲೆ.

೮

# ಮೂವರು ನವ್ಯ ಕವಿಗಳು

ಈ ಮೂವರು* ಬೇರೆ ಬೇರೆ ತಲೆಮಾರುಗಳಿಗೆ ಸೇರಿದ ಕವಿಗಳು. ಇವರ ಕಾವ್ಯವನ್ನು ಒಟ್ಟಿಗೆ ವೀಕ್ಷಿಸುವುದು ಈಗಂತೂ ಅಪ್ರಾಸಂಗಿಕವಾಗಲಾರದು. ಕನ್ನಡ ಕಾವ್ಯವು ಈಚೆಗೆ ನಡೆದಿರುವ ಮಾರ್ಗದಲ್ಲಿ ಈ ಮೂವರೂ ತಮ್ಮ ಪಾಲಿನ ಕರ್ತವ್ಯವನ್ನು ಎಸಗುತ್ತಿದ್ದಾರೆ. "ಬಾಳದೇಗುಲದಲ್ಲಿ" ಗೋಕಾಕರ ಈಚಿನ ಕಾವ್ಯರಾಶಿಗೆ ಸೇರುವುದಿಲ್ಲ. ಸುಮಾರು ಹದಿನೈದು ವರ್ಷಗಳ ಹಿಂದೆಯೇ ಕವಿಯ ಮನಸ್ಸಿನಲ್ಲಿ ರೂಪುಗೊಂಡು, ಆಗಲೇ ಬಹುವಾಗಿ ಕೃತಿರೂಪವನ್ನೂ ತಳೆದು, ಅದಕ್ಕೂ ಹಿಂದೆ ರಚಿತವಾಗಿದ್ದ ಕೆಲವು ಕವನಗಳನ್ನೂ ಒಳಗೊಂಡು ಈ ಕವನಮಾಲೆ ಸಿದ್ಧವಾಗಿದೆ. ಕವಿಯ ಮನಸ್ಸು ಒಂದು 'ಅಗ್ನಿದಿವ್ಯ'ಕ್ಕೆ ಒಳಗಾಗಿ, ಶಾಂತಿಯನ್ನು ಅರಸುತ್ತಿದ್ದ ಆ ಕಾಲದಲ್ಲಿ ರಚಿತವಾದ ಈ ಕವನಗಳನ್ನು ಕವಿಯ ಈಗಿನ ನಿಟ್ಟಿನಿಂದ ಅಳೆಯುವುದು ಸರಿಯಲ್ಲ. ಏಕೆಂದರೆ ನವ್ಯಕವಿತೆಗಳ ರೂಪರೇಷೆಗಳನ್ನು ಸೂಚಿಸಿ, ಅದಕ್ಕೆ ಒಂದು ಹೊಸ ಸ್ವತಂತ್ರಮಾರ್ಗವೇ ಬೇಕೆಂದು ಐದಾರು ವರ್ಷಗಳ ಹಿಂದೆಯೇ ಕಹಳೆಯೂದಿದ ಗೋಕಾಕರು ಈ ಕವನಮಾಲೆಯನ್ನು ರಚಿಸಿದೀಚೆಗೆ ಅನೇಕ ಮಜಲುಗಳನ್ನು ದಾಟಿದ್ದಾರೆ, ತಮ್ಮ ಕೃತಿರಚನೆಯಲ್ಲಿ. ಆದುದರಿಂದ ಈ ಕವನಮಾಲೆಗೂ ಅವರ ಈಗಿನ ನಿಲುವಿಗೂ ಸಂಬಂಧವನ್ನೇ ಕಲ್ಪಿಸದೆ, ಇದು ಅವರ ನಾವೀನ್ಯದ ಅನ್ವೇಷಣೆಗೆ ಕಾರಣವಾಗಿರಬಹುದೆಂಬುದನ್ನು ಮಾತ್ರ ಸೂಚಿಸಬಹುದು.

---

* ೧. ಬಾಳದೇಗುಲದಲ್ಲಿ — ಶ್ರೀ ವಿ. ಕೃ. ಗೋಕಾಕ,
೨. ದೀಪಧಾರಿ — ಶ್ರೀ ಚೆನ್ನವೀರ ಕಣವಿ,
೩. ಬುವಿನೀಡಿದ ಸ್ಫೂರ್ತಿ — ಶ್ರೀ ರಾಮಚಂದ್ರ ಶರ್ಮ.

ಸುಮಾರು ಮುನ್ನೂರು ಪುಟಗಳಷ್ಟು ಸುದೀರ್ಘವಾದ 'ಬಾಳ ದೇಗುಲದಲ್ಲಿ' ಮಾನವತೆಯಲ್ಲಿ ವ್ಯಕ್ತವಾಗುವ ವಿವಿಧ "ವ್ಯಕ್ತಿ–ತತ್ವ"ಗಳ ಚಿತ್ರಣವಿದೆ. ಮಗುವಿನ ಮುಗ್ಧತೆಯಿಂದ ಹಿಡಿದು 'ಮುಕ್ತಜೀವಿಗಳ' ಮುಗಿಲ ಸಂಚಾರದವರೆಗೆ ಮನುಜ ಚೈತನ್ಯ ವೈವಿಧ್ಯಪೂರ್ಣವಾಗಿದೆ. ಗಣಿತದ ಕೈಗೆ ಎಟುಕದ್ದು ಈ ವೈವಿಧ್ಯ; ಅಮೇಯವಾದದ್ದು. ಸೃಷ್ಟಿಕರ್ತನಾದ, ವಿಶ್ವಕವಿಯಾದ ಬ್ರಹ್ಮನಿಗೆ ಮಾತ್ರ ಅದರ ಸಂಪೂರ್ಣ ಪರಿಚಯ ಸಾಧ್ಯ. ಆದರೂ ದಾರ್ಶನಿಕನಾದ ಕವಿ ತನ್ನ ಜೀವನಾನುಭವದಲ್ಲಿ ಬಾಳಿನ ನೂರಾರು ಪರಿಗಳನ್ನು, ಧರ್ಮಕರ್ಮಾಸಕ್ತಿಗಳನ್ನು ಕಾಣುತ್ತಾನೆ. ಈ ಧರ್ಮಮೂರ್ತಿಗಳೂ, ದೃಷ್ಟಿ–ವ್ಯಕ್ತಿಗಳೂ, ಆಸಕ್ತಿ–ಶಕ್ತಿಗಳೂ 'ಬಾಳದೇಗುಲ'ಕ್ಕೆ ಸ್ತಂಭರೂಪರಾಗಿದ್ದಾರೆ.

ಈ ದೇಗುಲದಲ್ಲಿ ಏಳು ಗುಂಪುಗಳ ವ್ಯಕ್ತಿಗಳನ್ನು ವಿವಿಧವಾಗಿ ಕವಿಗಳು ನಿರುಕಿಸಿದ್ದಾರೆ. ಕೌಟುಂಬಿಕ, ರಾಜಕೀಯ–ಸಾಮಾಜಿಕ, ಕಾರ್ಯಾಸಕ್ತ, ಜ್ಞಾನಸಾಧಕ, ಸೌಂದರ್ಯೋಪಾಸಕ, ಆಧ್ಯಾತ್ಮಿಕ, ಮುಕ್ತಜೀವಿ. ಜೀವನದಲ್ಲಿ ಈ ಏಳೇ ಗುಂಪುಗಳೆಂದಾಗಲಿ ಒಂದು ಮತ್ತೊಂದರಿಂದ ಸಂಪೂರ್ಣವಾಗಿ ಬೇರೆಯಾದದ್ದೆಂದಾಗಲಿ ಹೇಳುವುದು ಸರಿಯಲ್ಲ. ಆದುದರಿಂದಲೇ ಇಲ್ಲಿ ಅಷ್ಟೊಂದು ನಿಷ್ಕೃಷ್ಟವಾದ ಗಡಿ ನಿರ್ಧಾರವಿಲ್ಲ. ಈ ಒಂದೊಂದು ಗುಂಪಿನಲ್ಲಿಯೂ ಸಮಾನ ಅನುಭವವಿದೆಯೆನ್ನುವುದು ಕವಿ ದೃಷ್ಟಿ.

> ಬಾಳ್ವಿಕೆಯ ಒಗಟಕ್ಕೆ ಬಾಳುವೆಯ ಉತ್ತರವು
> 'ಎಂತಿರಲಿ?' 'ನಿನ್ನಿರವು ಎಂತೊ ಅಂತೆ.'

ಪ್ರೇಮ, ವಾತ್ಸಲ್ಯ, ಮೋಹ ಮುಂತಾದುವು ಗಂಡು ಹೆಣ್ಣಿನಲ್ಲಿ ತಲೆದೋರುವುದನ್ನೂ ಅದರ ಯೋಗ್ಯ ಆವಿಷ್ಕರಣವನ್ನೂ ನಾವು ಕೌಟುಂಬಿಕ ಭಾಗದಲ್ಲಿ ನೋಡಬಹುದು. ಶಿಶುವಾಗಿ ನೋಟವನು, ಸತಿಯಾಗಿ ಬೇಟವನು, ತಾಯ್ತನದಿ ಆಟವನು ಕಂಡು, ಮುಡಿಯನ್ನು ದೇವರ ಪದತಲದಲ್ಲಿಟ್ಟರೆ ಅದೇ ಮುಕ್ತಿಯೆಂದು ಸಾರಿ ಮೊದಲ ಗುಂಪು ಸಾರ್ಥಕವಾಗುತ್ತದೆ.

ಆ ಮುಂದೆ ದೊಡ್ಡವರ ಹೆಸರಿನಲ್ಲಿ ಮಠಕಟ್ಟಿ ಬಾಳುವ ಸಣ್ಣ ಸ್ವಾಮಿಗಳನ್ನೂ, ಮಾತಿನಲ್ಲಿ ಸ್ವರ್ಗವನ್ನೂ ಕೃತಿಯಲ್ಲಿ ನರಕವನ್ನೂ ನಿರ್ಮಿಸುವ ನವ್ಯಬ್ರಹ್ಮರನ್ನೂ ಹಳಿದು ರಾಜಕೀಯ, ಸಾಮಾಜಿಕ, ವೈಜ್ಞಾನಿಕವಾದ ಉದಾತ್ತ ದೃಷ್ಟಾಂತಗಳೊಡನೆ ಔತ್ತಮ್ಯದ ಪರಿಚಯವನ್ನು ಮಾಡಿಕೊಟ್ಟಿದ್ದಾರೆ ಕವಿಗಳು.

ಈ ಕವನಮಾಲೆಯಲ್ಲಿ ಬಹು ಮುಖ್ಯವಾದುದು ಐದನೆಯ ಗುಂಪು, ಸೌಂದರ್ಯೋಪಾಸಕರ ಗುಂಪು. ಕವಿಗಳ ಜೀವನದಲ್ಲಿ ಈ ವ್ಯಕ್ತಿ ದೃಷ್ಟಿಗಳ ಪರಿಚಯ ಹೆಚ್ಚಾದುದರಿಂದಲೋ ಏನೋ ಈ ಭಾಗವೇ ಹೆಚ್ಚು ವಿಸ್ತಾರವಾಗಿದೆ. ಇಲ್ಲಿ ಕವಿಗಳು ಯಾರೊಬ್ಬರ ಹೆಸರನ್ನೂ ಹೇಳದೆ ಹೋದರೂ ಕವನಗಳಲ್ಲಿ ಉಕ್ತವಾದ ವ್ಯಕ್ತಿ-ಮಾದರಿಗಳು ಓದುಗನಿಗೆ ನಿಚ್ಚಳವಾಗಿ ಕಣ್ಮುಂದೆ ನಿಲ್ಲುತ್ತವೆ. ಮಾಸ್ತಿ, ಬೇಂದ್ರೆ, ಕಾರಂತ, ವಿ.ಸೀ, ಶ್ರೀರಂಗ, ಕೈಲಾಸಂ, ಮುಂತಾದ ಆಧುನಿಕ ವ್ಯಕ್ತಿತ್ವಗಳ ಮೂಲಕ ಒಂದೊಂದು ರಸಾಸ್ವಾದನ ಮಾರ್ಗವನ್ನು ನಾವು ಪರಿಚಯಿಸಿಕೊಳ್ಳಬಹುದು. ಒಂದು ದೃಷ್ಟಿಯಿಂದ ನೋಡಿದರೆ ಒಂದೊಂದು ಕವನವೂ ಆಯಾ ವ್ಯಕ್ತಿಗಳ ಸಾಹಿತ್ಯ ಕೃಷಿಯ ಸ್ಥೂಲ ವಿಮರ್ಶೆಯೂ ಆಗಿಬಿಡುತ್ತದೆ. ಆದರೆ ಕೆಲವು ವೇಳೆ ಕವಿಯು ತನ್ನ ದೃಷ್ಟಿಯ ಸ್ಥಾಪನೆಗಾಗಿ ಈ ವ್ಯಕ್ತಿಗಳ ಕಾವ್ಯ ವಿಸ್ತಾರವನ್ನು ಮೊಟಕು ಮಾಡಿರುವುದೂ ಕಂಡುಬರುತ್ತದೆ. ಕವಿಗಳೇ ಹೇಳಿರುವಂತೆ "ಈ ಕೃತಿಯು ಈ ರೀತಿಯ ವ್ಯಕ್ತಿತ್ವ-ಮಾದರಿಗಳ ಸಮ್ಮಿಲನದಿಂದ ಹುಟ್ಟಿಬಂದದ್ದು. ನಾನು ಕಂಡು ಅನುಭವಿಸಿದ ವ್ಯಕ್ತಿತ್ವವೇ ಅದರ ಮಾದರಿಯನ್ನು ನಾನು ಚಿತ್ರಿಸಲು ಹವಣಿಸುವಂತೆ ಮಾಡಿದೆ.... ಈ ಕವನಗಳಲ್ಲಿ ವ್ಯಕ್ತಿತ್ವವೇ ಪ್ರಧಾನವಾಗಿ ಕಣ್ಣೆದುರು ನಿಂತಿದ್ದು ಮಾದರಿಯು ಹಿನ್ನೆಳಲಾಗಿ ಇಲ್ಲವೇ ಧ್ವನಿಯಾಗಿ ಬಂದಿದೆ." ಇದನ್ನು ತಿಳಿಯದೆ ಕವನವು ಅರ್ಥವಾಗುವುದಿಲ್ಲ.

ಈ ಮಾದರಿಗಳನ್ನು ಕವಿಗಳು ನೋಡುವ ರೀತಿಯೇ ಬೇರೆ. ಅವರ ಪ್ರಕಾರ ಈ ಮಾದರಿಗಳ ಮಾಲಿಕೆಯು,

ಪುರುಷನಿಗೆ ಅರ್ಪಿಸಲೆಂದು ಪರಾಪ್ರಕೃತಿಯು
ರಚಿಸಲು ಹವಣಿಸುತ್ತಿರುವ ರತ್ನಹಾರ.

ಈ ಕವಿ ಬಾಳನ್ನು ನೋಡುವ ದೃಷ್ಟಿಯೂ ಮುಖ್ಯ. ಬಾಳಿನ ಸತ್ವ-ದರ್ಶನವನ್ನು ಪಡೆಯಬೇಕಾದರೆ ಬಾಳದೇಗುಲದಲ್ಲಿ ಮಾತ್ರ. ಈ ದರ್ಶನದಿಂದ ಪ್ರತಿಯೊಬ್ಬನೂ ತನ್ನ ಬಾಳನ್ನು ತಿದ್ದಿಕೊಳ್ಳಬೇಕು. ಒಂದು ಬಾಳಿನಲ್ಲಿ ಬಾಳಿನ ಅನಂತತೆಯು ಮೂಡಿದಷ್ಟೂ ಅದು ಕೃತಾರ್ಥವಾಗುತ್ತದೆ.

ಈ ಕವನಮಾಲೆಯನ್ನು ಕಟ್ಟುವುದರಲ್ಲಿ ಕವಿಗೆ ಒಂದು ಆಧ್ಯಾತ್ಮಿಕ ಪೂರ್ವಾನುಸಂಧಾನವಿದೆ. ಅವರು ಓದುಗನನ್ನು ಈ ರೀತಿ ಪ್ರಶ್ನಿಸುತ್ತಾರೆ:

ರತ್ನಾಕರಾಧೀಶ್ವರನು ಬೆರಳಿನಲಿಟ್ಟ
ಬಾಳಹರಳಿನ ಚೆಲುವ ತಿಳಿದೆಯೇನು?
ಇಣಿಕಿ ನೋಡಲು ಕುಣಿವ ಬಗೆ ಬಗೆಯ ಬಣ್ಣಗಳ
ಇಂದ್ರಜಾಲವನೆಲ್ಲ ಅಳೆದೆಯೇನು?

ಉತ್ತರಕ್ಕೆ ಕಾಯದೇ ಮಾರ್ಗದರ್ಶನ ಮಾಡುತ್ತಾರೆ.

ಅದರನಂತತೆಯ ಚಿಂತನದಲಿಹ ಮಣಿಗಾರ
ಉಪಲದೀಕ್ಷಿತ, ರತ್ನರಸಿಕನಾಗಿ
ನೀ ಬಾಳುವುದು . . . . . . . .
ನಂಬದಿರು ಒಂದೆ ಧರ್ಮವ, ಒಂದೆ ಮಾರ್ಗವನು,
ಇಂಬುಗೊಡದಿರು ಯಾವುದೊಂದೆ ಶ್ರುತಿಗೆ
. . . . . . . . .
ಎಲ್ಲ ದರ್ಶನಗಳಿಗೆ ನೆಲನೆ ಒರೆಗಲ್ಲೆಂಬ ಶ್ರದ್ಧೆ ಬರಲಿ.

ಈ ಶ್ರದ್ಧೆಯಿಂದಲೇ ಬೆಳೆದ, ಬೆಳೆಸಿದ ಬುದ್ಧಿ ಆತ್ಮಗಳುಳ್ಳವರಾಗಿ ಗೋಕಾಕರು ಈ ಮಾಲೆಯನ್ನು ಕೊಟ್ಟಿದ್ದಾರೆ. ಇಲ್ಲಿ ಹಾಯುವವರಲ್ಲಿ ಮುಕ್ತಜೀವಗಳೇ ಪ್ರಧಾನರು.

ಬಾಳದೇಗುಲದಲ್ಲಿ ಚಿರಸನಾತನರಿವರು
ಬಾಳ್ಮೊದಲ ಬಲ್ಲವರು, ಬಹು ಪುರಾತನರು,

ಹೀಗಿದ್ದು ಯುಗಯುಗಕೆ ಸಿಗುವ ಸನ್ನಿಧಿಯವರು
ಸಂಕ್ರಾಂತಿ ಪುರುಷರ್ರೈ, ನಿತ್ಯನೂತನರು.
. . . . . . . . .
ಧಾರುಣಿಯುದಿರಲಿವರ ತಿಳಿವಿಂದ ಹೊಳವಿಂದ
ಗುಡಿಯು ದಾರಿಯು ಧರ್ಮಶಾಲೆಯಾಗಿ
ನಾಳೆ ಮನುಕುಲವನ್ನೆ ಮುನಿಕುಲವನಾಗಿಸುವ
ಅತಿಮಾನವರ ಕರ್ಮಶಾಲೆಯಾಗಿ.

ವರ್ಡ್ಸ್‌ವರ್ತ್‌ನ The Prelude ಮತ್ತು ಕೀಟ್ಸ್‌ನ Hyperion ಎಂಬ ಕವನಗಳ ಮಾದರಿಯಲ್ಲಿ ಈ ಕವನಮಾಲೆ ರಚಿತವಾಗಿದೆ. The Preludeನಲ್ಲಿ ಕಾಣುವ ನವಚೈತನ್ಯವು ಆ ಕವಿಯ ಸ್ವೋಪಜ್ಞತೆಯನ್ನೇ ಪವಿತ್ರವಾಗಿಸಿದ ನಿಸರ್ಗದಿಂದೊದಗಿದುದು. ಬುದ್ಧಿ ಇಂದ್ರಿಯಗಳೆರಡನ್ನೂ ಶಿಕ್ಷಿಸಿದ ಆ ನಿಸರ್ಗದ ಪ್ರಭಾವದಲ್ಲಿ ಕವಿ The Prelude ಬರೆದನು. ಅದರಲ್ಲಿ ಆತ್ಮವು ಬೆಳೆದು ವ್ಯಕ್ತಿತ್ವವನ್ನು ಅಧೀನ ಮಾಡಿಕೊಂಡ ದಿವ್ಯಾನುಭವ ಚಿತ್ರಿತವಾಗಿದೆ. ಕೀಟ್ಸ್‌ನ Hyperion ಕೂಡ Pagan Mythologyಯ ದಿವ್ಯಕ್ರಾಂತಿಯನ್ನು ಚಿತ್ರಿಸುತ್ತದೆ. ಅವುಗಳ ಮಾದರಿಯಲ್ಲಿ ರಚಿತವಾದ 'ಬಾಳದೇಗುಲದಲ್ಲಿ' ಕನ್ನಡ ಸಾಹಿತ್ಯದಲ್ಲಿ ಬಹು ಮುಖ್ಯವಾದ ಒಂದು ಮಜಲನ್ನು ಸೂಚಿಸುತ್ತದೆ. ಇದು ಮಹಾಕಾವ್ಯವೋ ಅಲ್ಲವೋ, ಅಂತೂ ರಮ್ಯಪಂಥದ ಮಾರ್ಗದಲ್ಲಿ ಒಂದು ಶ್ರೇಷ್ಠ ಸಾಧನೆ. ಗೋಕಾಕರ ವ್ಯಕ್ತಿತ್ವಕ್ಕೆ ಇಷ್ಟೊಂದು ಮನ್ನಣೆ ದೊರೆತಿರುವುದಾದರೆ ಅದು ಇಂಥ ಕಾವ್ಯದಲ್ಲಿ ಕಾಣುವ ವಿದ್ವತ್ತು, ದರ್ಶನ, ಪ್ರಭಾವ ಇವುಗಳಿಂದ.

ಚೆನ್ನವೀರ ಕಣವಿಯವರು ಬೇಂದ್ರೆಯವರ ಅರವತ್ತೊಂದನೆಯ ಹುಟ್ಟುಹಬ್ಬದ ನೆನಪಿಗೆ ವಿಶೇಷವಾಗಿ ಪ್ರಕಟಿಸಿರುವ ಕವನಸಂಗ್ರಹ 'ದೀಪಧಾರಿ.' ಈ ಹಿಂದೆ ನಾಲ್ಕು ಕವನ ಗುಚ್ಛಗಳಲ್ಲಿ ಯೌವನದ ವಿವಿಧ ಭಾವನೆಗಳನ್ನು ಹಾಡಿ ಪರಿಚಿತರಾದ ಕಣವಿಯವರು ಈ ಹೊಸ ಸಂಕಲನದಲ್ಲಿ ನವ್ಯ ಕಾವ್ಯಮಾರ್ಗದಲ್ಲಿ ನಡೆಸಿದ ಕೆಲವು ಪ್ರಯೋಗಗಳನ್ನೂ ಪ್ರಕಟಿಸಿದ್ದಾರೆ. "ಆಧುನಿಕ ಭಾವಗೀತೆ ಹಾಗೂ ನವ್ಯಮಾರ್ಗಗಳ ನಡುವೆ ನಿರ್ಮಾಣಗೊಂಡಿರುವ ಕಂದರಕ್ಕೆ ಇದು ಸೇತುವೆ

ಯಾದೀತು" ಎಂದು ಕವಿಗಳು ನಮ್ರರಾಗಿ ಭಾವಿಸಿದ್ದಾರೆ. 'ದ್ವಂದ್ವ', 'ಕೊನೆಯ ನಿಲ್ದಾಣ', 'ಪಣತಿ', 'ಮೃತ್ಯುಬಂಧ', 'ನೆರಳು' ಎಂಬ ಐದು ಕವನಗಳು ನವ್ಯತೆಯ ಸೋಂಕಿನಿಂದ ರಚಿತವಾದವು. ಮಿಕ್ಕ ವೆಲ್ಲ ಅವರ ಹಿಂದಿನ ಧಾಟಿಯಲ್ಲೇ ರಚಿತವಾಗಿವೆ. ಮಧುರ ಚೆನ್ನರನ್ನು ನೆನೆಸಿಕೊಂಡು

ದೇಹ ಸೋಂಬತ್ತಿಯೊಲು ಮುಡಿದ ಬೆಳಕಿನ ಕುಡಿಗೆ
ಕರಗಿ ಮಿದುವಾಗಿತ್ತು ಅಂತರಂಗ

ಎನ್ನುವಾಗಲಾಗಲಿ, ಅವರ ಕಾವ್ಯರಾಶಿಯನ್ನು

ಭಾವ ದೇವಾಲಯದಿ ನಿತ್ಯ ನಂದಾದೀಪ

ಎಂದಾಗಲಾಗಲಿ, 'ಕುವೆಂಪು', ಅವರನ್ನು

ಮಲೆನಾಡ ನಿರ್ಝರಿಣಿ ತಡಿಯ ತಳಿದೋಂಗಲಲಿ
ನಲಿವ ಮಂಗಲ ಪಕ್ಷಿ

ಎಂದು ಕರೆಯುವಾಗಲಾಗಲಿ, ಕವಿಯ ಆತ್ಮೀಯತೆಯೂ ಕಾವ್ಯ ಪ್ರೇಮವೂ ವ್ಯಕ್ತಗೊಳ್ಳುತ್ತವೆ. "ಮನೆ–ಕಿಟಕಿ" ಎಂಬ ಒಂದು ತುಂಬ ಸುಂದರವಾದ ಕವನದಲ್ಲಿ ಈ ಕವಿ ಕಿಟಕಿಯು ಬಾನ ಕನ್ನಡಿಗೆ ಚೌಕಟ್ಟು ಹಾಕಿರುವುದನ್ನೂ,

"ದಿನ ಬಳಕೆಯನು ಮೀರಿ ಸೆಳೆವತೀಂದ್ರಿಯ ಸ್ಪರ್ಶ ಹೊರ ಜಗವನೊಳಗಿಟ್ಟವುಂಕಿ ತಣಿಸಿರು"ವುದನ್ನೂ ಚಿತ್ರಿಸುತ್ತಾರೆ. ಓದುಗ ನನ್ನು ಆಹ್ವಾನಿಸಿ

ಇಲ್ಲಿ ಕುಳ್ಳಿರು, ಆಗು ಅಂತರ್ಮುಖಿ

ಎಂದು ಹುರಿದುಂಬಿಸುತ್ತಾರೆ. ಭಾವಗೀತೆಗಳ ನೇರಮಾರ್ಗದಲ್ಲಿ ರಚಿತವಾದ ಮನೋಹರವಾದ ಈ ಕವನದ ಭಾವನೆಗಳು ಅತಿ ಆಕರ್ಷಕ ವಾಗಿವೆ. ಉದಾಹರಣೆಗಾಗಿ ಒಂದು ಚಿತ್ರವನ್ನು ಅವರ ಮಾತಿನಲ್ಲಿಯೇ ಕೊಡಬಹುದು.

ಮುಂಜಾವಸಂಗಳದಿ ಹೊನ್ನ ಬೆಳಕಿನ ಹುಂಜ
ಕೂಗಿಕುಣಿಸುವುದದರ ಹೂ ತುರಾಯಿ.
ಸಂಜೆ ಸೋಲುಪ್ಪರಿಗೆ ಚಿಕ್ಕೆ ಸಮ್ಮೇಳನಕೆ
ಕತ್ತಲೆಯ ಬೀಡಿನಲೆ ಸರಬರಾಯಿ.

'ಸೊಳ್ಳೆ'ಯೆನ್ನುವ ಕವನವು A. G. Gardinerನ "Fellow Traveller" ಎಂಬ ಪ್ರಬಂಧವನ್ನೂ "ಚಿಂತನ" ಎಂಬುದು ಅಡಿಗರ 'ಅತಿಥಿಗಳು' ಎಂಬ ಕವನವನ್ನೂ ನೆನಪಿಗೆ ತರುತ್ತವೆ.

ಸಂಸಾರದಲ್ಲಿ ಮಕ್ಕಳಾಟದ ಸೊಗಸನ್ನು ಇವರು ಎರಡು ಕವನಗಳಲ್ಲಿ ಚೆನ್ನಾಗಿ ಚಿತ್ರಿಸಿದ್ದಾರೆ.

ಎಂಟು ತಿಂಗಳ ಮಗುವಿನ ಈ ಚಿತ್ರ ಹೇಗಿದೆ!

ಅತ್ತಿತ್ತ ಸುಳಿದೀರಿ ಮತ್ತೆ ಜೋಕೆ!
ತಾಸಿಗಿಪ್ಪತ್ತು ಮೈಲಿನ ವೇಗ ಮೀರುವುದು
ಮನೆತುಂಬ ಓಡುವುದು ಅಂಬೆಗಾಲಿನ ಕಾರು!
ನೋಡ ನೋಡುತ ಧುಮುಕಿ ಹೊಡೆದು ಮೇಲೇಳುವುದು
ಬ್ರೇಕು ಹಾಕಲು ವೇಗ ಮತ್ತಿಷ್ಟು ಜೋರು!
ಏನಿಲ್ಲವೆಂದರೂ ದಿನಕೆಂಟು ಅಪಘಾತ
ಇನ್ನೆಂಟು ಆದರೂ ಈತ ನಿರ್ಭೀತ
ಎಂಥ ಅದ್ಭುತವಡಗಿ ಕುಳಿತು ಆಡಿಸುತಿಹುದು
ಎಂಟು ತಿಂಗಳ ಈ ಪುಟ್ಟ ಜೀವಯಂತ್ರ!

ಮಲಗಲಿರುವಾಗ ಏನೋ ಹೇಳಿಕೊಳ್ಳುವ ಮಗುವಿನ ಚಿತ್ರ ಇದು.

ಎರೆದು ದೂಪವಹಾಕಿ ಹೊಚ್ಚಿ ಬೆಚ್ಚಗೆ, ತುಂಬುದೊಟ್ಟಿಲನು ತೂಗಿ
ಮೆಲ್ಲನುಲಿಯಲಿ ಇವಳು ಜೋಗುಳವ ಹಾಡುತಿರೆ
ಹೊಮ್ಮಿಬರುವುದು ಇವಗು ಕಾವ್ಯ ಸ್ಫೂರ್ತಿ!
ಯಾವ ದೈವಿಕ ಭಾಷೆ ಯಾವುದೋ ಧಾಟಿ
ಹಾಡಿಯೇ ಹಾಡುವನು ಕಂಠಪೂರ್ತಿ
ತೂಗಿದವರಿಗೆ ಬಂತು ತೂಕಡಿಕೆ ಎಂದಾಗ
ಹಾಡು ಮುಗಿವುದು ಕನಸಿನಲ್ಲಿ ಕರಗಿ.

ನವ್ಯಮಾರ್ಗದಲ್ಲಿ ಕಣವಿಯವರು ಬರೆದ ಕವನಗಳಲ್ಲಿ "ನೆರಳು" ಎನ್ನುವುದು ಬಡತನದ ಮೂರ್ತಿಮತ್ತಾದ ದಾರುಣ ಚಿತ್ರ. ಈ ವಾಸ್ತವ ಚಿತ್ರದಲ್ಲಿ ಕವಿಯ ಅನುಕಂಪವೆಲ್ಲ ಘನೀಭೂತವಾಗಿ ರೂಪು ತಳೆದಿದೆ.

ಅಸ್ಥಿಪಂಜರ ಕುಳಿತು ಬೀದಿಯಲಿ ಅಯ್ದು
ಕೊರೆಬೀಡಿ ಕಿಡಿಗೆ

ಕತ್ತಲೆದೆ ತಿದಿಯಿಂದ ಹೊಗೆಯೆಳೆದು ನೂಕಿ
ನೆರಳಿನನಿಮಿತ್ತ ಷೋಕಿ.

ನಿತ್ಯಶೋಕಿ ಭಿಕ್ಷುಕನು ಬೀಡಿಸೇದಿ ಷೋಕಿಪಡುವ ಚಿತ್ರ. 'ಕೊನೆಯ ನಿಲ್ದಾಣ', 'ದ್ವಂದ್ವ' ಎಂಬೆರಡು ಕವನಗಳಲ್ಲಿ ಕಲ್ಪನೆಯ, ರೂಪಕದ ಭಾಷೆಯ ಮಿಂಚು ಹೊಳೆಯುವುದು ಯಾರಿಗಾದರೂ ಸುಸ್ಪಷ್ಟ. ಇಷ್ಟಾದರೂ ನವ್ಯಮಾರ್ಗದಲ್ಲಿ ಆಸಕ್ತಿ, ಪ್ರಯೋಗ, ಪ್ರೇಮಗಳುಳ್ಳ ಕಣವಿಯವರಿಗೆ ಆ ಮಾರ್ಗದ ಕ್ಲಿಷ್ಟತೆಯ ಆವಿಷ್ಕರಣದಲ್ಲಿ ಸ್ವಲ್ಪವೂ ನಂಬಿಕೆಯಿಲ್ಲ. ರಮ್ಯ ಪಂಥಕ್ಕೂ ನವ್ಯ ಪಂಥಕ್ಕೂ ನಡುವೆ ಕಂದರ ಬೀಳಬಾರದು. ಈ ಆಸೆ ಅನೇಕರ ಆಸೆ. ಕಣವಿಯವರ ಕಾವ್ಯದಲ್ಲಿ ನಿಷ್ಕೃಷ್ಟವಾದ ಪದಪ್ರಯೋಗ, ರೂಪಕಗಳ ನಾವೀನ್ಯ, ವಸ್ತುವೈವಿಧ್ಯ ಜೀವನದಲ್ಲಿ ಹೊಂದಾಣಿಕೆ, ತಾಳಲಯಗಳ ಸತ್ಪ್ರಯೋಗ ಇವು ಕೂಡಿವೆ. ಒಂದು ನಿರ್ಧರವಾದ ದರ್ಶನವೂ ಕೂಡಿ ಬಂದು ಇವರ ಕಾವ್ಯ ಹೆಚ್ಚು ಪ್ರಯೋಜಕವಾಗಲೆಂದು ಹಾರೈಸಬೇಕು.

ಆಧುನಿಕ ಕನ್ನಡ ಕಾವ್ಯದಲ್ಲಿ ರಾಮಚಂದ್ರ ಶರ್ಮರು ದಂಗೆಕೋರ ಜಾತಿಗೆ ಸೇರಿದವರು. ನವ್ಯ ಮಾರ್ಗದ ಆಸ್ಫೋಟನೆಗಳಲ್ಲಿ ಅಡಿಗರ 'ಚಂಡಮದ್ದಳೆ' ಬಂದಮೇಲೆ ಈಗ ಶರ್ಮರ ಬಾಂಬು "ಬುವಿ ನೀಡಿದ ಸ್ಫೂರ್ತಿ". ಜೀವನ, ಕಲೆ, ಭಾಷೆ, ಕಾವ್ಯ, ಇವು ಯಾವುವೂ ಈಗಿರುವಂತೆ ಇವರಿಗೆ ತೃಪ್ತಿಯಿಲ್ಲ. ಎಲ್ಲದರಲ್ಲಿಯೂ ಯಾವುದೋ ಕೊರತೆ ಕಣ್ಣನ್ನು ಕೋರೈಸುತ್ತದೆ; ನಾಲಗೆಯನ್ನು ಸೆಟೆಯುತ್ತಿದೆ.

ಏಳು ಕವನಗಳು, ಒಂದು ಕಿರುನಾಟಕ, ಇವುಗಳಿಂದ ಕೂಡಿದ ಈ ಕವನಸಂಕಲನದಲ್ಲಿ ಕಾಣಬರುವುದು ಆರೆಜೀವದ ಪ್ರೇತ, ಹಸಿದ ಹೆಬ್ಬುಲಿ, ದಾಟುಗಾಲಿನ ಪೆಡಂಭೂತ, ಎದೆನರೆತ ಮಂದಿ, ಮೈಹುಣ್ಣು, ಎದೆ ಹುಣ್ಣು, ಜೋಲುಮುಖ, ಕೊನೆಗೆ ಈ 'ಮಸಣ ಹೂಬಿಡುವಂತೆ ಮಾಡುವ' ಹೆಬ್ಬಯಕೆ. ಈ ಕೊನೆಯ ಬಯಕೆಯಿಲ್ಲದಿದ್ದರೆ ಎಲ್ಲ ಅತೃಪ್ತಿಗಳೂ ಅರ್ಥರಹಿತವಾಗಿ, ವಿಕರಾಳವಾದ ಹುಚ್ಚುಕೂಗಾಗಿ ಪರಿಣಮಿಸಿಬಿಡುತ್ತಿತ್ತು. ಕವಿಯಲ್ಲಿ ಕಾಣುವ ಪ್ರಾಮಾಣಿಕವಾದ ಹತಾಶೆಯಿಂದ ಆತನ ಎದೆ ಕುದಿದು, ನೋಟ ಕಂದಿ, ಭಾವನೆ

ಬೀತು, ಎಲ್ಲವೂ ಪ್ರತ್ಯಾಶೆಯಲ್ಲಿ ಪುನರ್ಜೀವಿತವಾಗುತ್ತವೆ. ಇದು ಈ ಕವನ ಸಂಕಲನದ ಪ್ರಮುಖ ಗುಣ.

'ಬುವಿಸೀಡಿದ ಸ್ಫೂರ್ತಿ' ಎನ್ನುವ ಕವನದಲ್ಲಿ ಜೀವಕ್ಕೆ ಜೀವ ಕೊಟ್ಟ ಆದಿಮಾಯೆಯ ಅನ್ವೇಷಣೆಯಿದೆ. ನೂರು ಮನ್ವಂತರದ ಹಿಂದೆ ನುಗ್ಗಿ, ವೈಜ್ಞಾನಿಕವಾಗಿ ಪೌರಾಣಿಕವಾಗಿ ಹುಡುಕಿ ಮತ್ತೆ ಶೂನ್ಯವನ್ನೇ ಕಾಣುತ್ತದೆ ಕವಿಪ್ರಜ್ಞೆ. "ಜೀರ್ಣವಾಗಿದೆ ಕಾಯ, ಪೂರ್ಣವಾಗಿದೆ ಪತನ." ಹೀಗಿರುವಾಗ ಭಾರವನ್ನು ಹೊರಲು ಮೂರನೆಯ ಕಾಲಾದ ಧರ್ಮದಂಡ ಬೇಕು. ಅದೆಲ್ಲಿದೆ ಎಂಬುದೇ ಉತ್ತರ ಸಿಕ್ಕದ ಪ್ರಶ್ನೆ. ಈ ಕವನದಲ್ಲಿ ಈಡಿಪಸನ, ನಾರ್ಸಿಸಸ್ಸನ ಕಥೆಗಳನ್ನೂ' ಸ್ಫಿಂಕ್ಸನ ಪ್ರಸಿದ್ಧ ಪ್ರಶ್ನೆಯನ್ನೂ ಉಪಯೋಗಿಸಿ ಹೊಸ ಆವರಣವನ್ನು ಸೃಷ್ಟಿಸಲಾಗಿದೆ. ಪ್ರತಿಮೆ ಪುರಾತನವಾದರೂ ಅದರ ಪ್ರಯೋಗ ನವೀನವಾಗಿದೆ, ಅರ್ಥವತ್ತಾಗಿದೆ.

ಏಳುತಲಿ ಹೆಮ್ಮರದ ಹರಕೆಕೊಡೆ ನೆರಳಲ್ಲಿ ಎಂಬುದು ವಂಶಪರಂಪರೆಯಾಗಿ ಬಂದಿರುವ ಪದ್ಧತಿಗಳನ್ನು ಸುಟ್ಟು ನಾಶಮಾಡುವ ಆವಶ್ಯಕತೆಯನ್ನು ವಿವರಿಸುತ್ತದೆ. ಹೆಸರಿಗೂ ವಸ್ತುವಿಗೂ ಅಂತರವಿರುವುದೇ ಇಲ್ಲಿಯ ಸೊಗಸು.

> ಕಡವನೊಡೆ, ಕಿಟಕಿತೆಗೆ
> ರವಿಯ ಹೊಂಗಿರಣ ಪೊರಕೆಯ ಗಳಿಗೆ ಮನೆಯಗಲ ಆಡಲಿ . . .

ಹೀಗಿಲ್ಲದಿದ್ದರೆ ಜೀವನಕ್ಕೆ ಶಾಂತಿಯಿಲ್ಲ, ಸುಖವಿಲ್ಲ.

'ವೈಶಾಖ ಶುದ್ಧ ಪೂರ್ಣಿಮೆ' ಸಿದ್ಧಾರ್ಥನ ತ್ಯಾಗವೂ ವ್ಯರ್ಥವಾಗಿದೆಯೆನ್ನುವ ಭಾವವನ್ನೂ ವ್ಯಕ್ತಪಡಿಸುತ್ತದೆ.

ನಗರದಲ್ಲಿ ಇದ್ದಕ್ಕಿದ್ದಂತೆ ವಿದ್ಯುದ್ದೀಪವಾರಿ ಕಗ್ಗತ್ತಲೆ ಕವಿದ ಮೂರು ನಿಮಿಷಗಳನ್ನು 'ದೀಪ ಹೋಯಿತು–ಬಂತು' ಎಂಬುದು ರಮ್ಯವಾಗಿ ಚಿತ್ರಿಸುತ್ತದೆ. ದೀಪವಾರಿದೊಡನೆ

> ಕೀಲುಕಳಚಿ ಕಪ್ಪು ನೆಲಕೆ ದೊಪ್ಪನೆ ಬಿತ್ತು
> ಕಲ್ಲನೆಡವಿತು ಸದ್ದು, ಮುದ್ದೆ ಮೌನ

ಮತ್ತೆ ದೀಪ ಬಂದಾಗ

ಮನೆ ಮನೆಯ ವಿಧವೆಮುಖ ಕುಂಕುಮವ ನಗುತಿತ್ತು.

ನವ್ಯಮಾರ್ಗದ ಉಪಮೆ ರೂಪುಗೊಂಡು ಇದ್ದದ್ದರಲ್ಲಿ ಅಕ್ಲಿಷ್ಟವಾಗಿರುವ ಉದಾಹರಣೆಗಳಿವು.

'ಪ್ರಶ್ನೆ'ಯೆನ್ನುವ ಕವನದಲ್ಲಿ ಗಂಡು ಹೆಣ್ಣಿನ ರಹಸ್ಯಾನುಭವದ ಒಗಟೆಯನ್ನು ಬಿಡಿಸುವವರಾರೆಂಬ ಪ್ರಶ್ನೆಯಿದೆ. ಆದರೂ ಅದನ್ನು ಬಿಡಿಸದೆಯೇ ಇರುವುದೇ ಬದುಕಿನ ಸ್ವಾರಸ್ಯಕ್ಕೆ ಆದಿಕಾರಣವೆಂಬ ಉತ್ತರವೂ ಅಲ್ಲಿದೆ. ಇಲ್ಲಿ ಕಾಡು, ಕಾಡಬೆಕ್ಕು ಇವುಗಳ ರೂಪಕ ಪ್ರಯೋಗ ಈ ಕವನಕ್ಕೆ ಸೊಗಸನ್ನೂ ಶ್ರೇಷ್ಠತೆಯನ್ನೂ ತಂದಿದೆ. ಮುಗ್ಧ ಜೀವಿಗಳ ಮೇಲೆ ಲೈಂಗಿಕ ಚೇತನ ಆಗಂತುಕವಾಗಿ ಅಕ್ರಮಣ ಮಾಡುವ ಸನ್ನಿವೇಶದ ಚಿತ್ರ ಕವನದ ಕೊನೆಯಲ್ಲಿ ಸ್ವಾರಸ್ಯವಾಗಿ ಚಿತ್ರಿತವಾಗಿದೆ. ಇದು ನಿಜವಾಗಿಯೂ ಬಹು ಉತ್ತಮವಾದ ಕವನ.

'ಕೆಂಡ–ಕಡಲು' ಸಾಮಾನ್ಯವಾಗಿ ಅರ್ಥವಾಗದಿರುವ ಕವನಗಳಲ್ಲೊಂದು. ಈ ಸಂಕಲನದ ಕೊನೆಯಲ್ಲಿರುವ ನಾಟಕದಲ್ಲಿ, ಪ್ರಯೋಗ ಸಾಫಲ್ಯವಿಲ್ಲವೆಂದು ಹೇಳಬೇಕು. ಆದರೂ ಇದರಲ್ಲಿ ಇಲ್ಲಿಯವರೆಗೂ ಆಗಿರುವ ಕಾವ್ಯಸೃಷ್ಟಿ ಕಲಾಸೃಷ್ಟಿಗಳಲ್ಲಿ ಕಾಣುವ ಅಸಾರ್ಥಕತೆಯನ್ನು ಯಾವುದೋ ಧ್ವನಿ ಕವಿಗೆ ಕಾಣಿಸಿ ಅವನನ್ನು ಮಸಣ ಹೂಬಿಡುವಂತೆ ಮಾಡುವ ಸಾಹಸಕ್ಕೆ ಪ್ರೇರಿಸುತ್ತದೆ. ಕವಿಯೂ ಈ ಶಪಥವನ್ನು ಕೈಗೊಳ್ಳುತ್ತಾನೆ.

ಈ ಮೂರು ವರ್ಷಗಳಲ್ಲಿ ಶರ್ಮರು ಈ ಏಳು ಕವನಗಳನ್ನು ಮಾತ್ರ ಬರೆದಿದ್ದಾರೆ. ಈ ಸಂಯಮ ಸ್ತುತ್ಯ. ಶರ್ಮರ ಪ್ರತಿಭೆಗೆ ಓದುಗನನ್ನು 'ಬಿಲ್ಲುಂಬೆರಗಾಗಿಸುವ' ಶಕ್ತಿಯಿದೆ. ಕೆಲವು ಹೊಸ ರೂಪಕಗಳ ರೀತಿ ಓದುಗನನ್ನು ಭ್ರಮೆಪಡಿಸುತ್ತದೆ.

ನೂರುಮನ್ವಂತರದ ಬೀದಿ ಚಾಪೆಯ ಸುರುಳಿ,

ಅಥವಾ

ಹುಲ್ಲಿನುರಿ-ನಗೆ ಮಾತು ಗಾಜುಹುನೆ ಮಿನಾಯ್ತು.

ಅಥವಾ

ಮಾಂಸ-ಹೂರಣ ಮುಕ್ಕಿ ಮೂಳೆ-ತೋರಣಕಟ್ಟಿ
ಮೈಯ-ಮಾರಣ-ಬೆಂಕಿ ಹಸಿದ ನಾಲಗೆಯೊಸೆಯೆ
ರಕ್ತಾಭಿಷೇಕವನು ಮಾಡುತ್ತ ಅಂಡಲೆದೆ ಜೀವಂತ ನರಕವಾಗಿ.

ಈ ಕೊನೆಯದು ಒಂದೇ ಸಾಲು—ಕವನದಲ್ಲಿ.

ಸಾಮಾನ್ಯನಿಗೆ ಪರಂಪರಾಗತವಾದ ಅರ್ಥ ಕೊಡುವ ಪದಗಳು ಶಕ್ತನಾದ ಕವಿಯ ಪ್ರಯೋಗದಲ್ಲಿ ರಹಸ್ಯವಾದ ಸಾಮರ್ಥ್ಯವನ್ನು ಸಂಪಾದಿಸುತ್ತವೆ. ಕವನದ ಗುಂಗಿನಲ್ಲಿ ಕೇಳಿಬಂದ ಹಳೆಯ ಪದಕ್ಕೆ ಹೊಸ ಅರ್ಥ ಹೊಳೆದು ನೂತನ ಆವಿಷ್ಕರಣವನ್ನು ಅದು ಪಡೆಯುತ್ತದೆ. ಪದಗಳ ಗುಂಫನದಲ್ಲಿಯೇ ಇಂದ್ರಜಾಲದ ಮೋಡಿ ತೋರಿ ಬರುತ್ತದೆ. ಇದರಲ್ಲಿ ರೂಪಕವೆಂದರೆ ಎರಡು ಮೂರು ನಾಲ್ಕು ಪದಗಳ ಒಂದು ಸಂಘಟನೆ. ಇಲ್ಲಿಯವರೆಗೂ ವಿಮುಖವಾಗಿದ್ದ ಪದಗಳ ಅನಾಮತ್—ಜೋಡಣೆ, ಹೆಣೆದುಕೊಳ್ಳುವ ಮಾಟ, ನೂತನ ಛಂದದ ಗತಿ—ವೈವಿಧ್ಯ ಅಂದರೆ ಹೆಚ್ಚು ಸ್ವಾತಂತ್ರ್ಯ, ಪಾಶ್ಚಾತ್ಯ ಪುರಾಣಗಳ ಸಂಪರ್ಕ; ಇಷ್ಟೆಲ್ಲ ಈ ಕವನಗಳಲ್ಲಿ ಭಾವ ವಿಕಾಸನದ ಮಾರ್ಗ. ಪ್ರತಿಮೆಯಿಂದ ಮಾತ್ರ ಆದಿ ಮಾನವನು ಭಾವವನ್ನು ಅರ್ಥಮಾಡಿಕೊಳ್ಳುತ್ತಿರಲಿಲ್ಲವೆ. ನಾವೇಕೆ ಹೆಚ್ಚು ಮಾತುಗಳನ್ನು ವ್ಯರ್ಥಮಾಡಬೇಕು. ಯಾವ ಶಬ್ದವೂ ಬಂಜೆಯಾಗಬಾರದು. ಬಸುರಿ ಶಬ್ದ, ಬಾಣಂತಿ ಶಬ್ದಗಳು, ಬಹುಫಲವತಿಯಾಗಿದ್ದರಂತೂ ತುಂಬ ಸಂತೋಷ.

ರಾಮಚಂದ್ರಶರ್ಮರ ಪ್ರತಿಭೆ ತೀಕ್ಷ್ಣವಾದದ್ದು. ಅದಕ್ಕೆ ಗೌರವಕೊಟ್ಟು, ನವ್ಯಕವಿತೆಯ ಪ್ರಯೋಗಕ್ಕೆ ಒಂದು ಎಚ್ಚರಿಕೆ ಮಾತನ್ನಾಡಬೇಕೆನ್ನಿಸುತ್ತದೆ. ಇದರಿಂದ ನವ್ಯತೆ ಬೇಡವೆಂದಾಗಲೀ ಶರ್ಮರಿಗೆ ಶಕ್ತಿಯಿಲ್ಲವೆಂದಾಗಲೀ ಅರ್ಥವಲ್ಲ. ಇದು ಕನ್ನಡದ ಪ್ರಗತಿಯಲ್ಲಿರುವ ಆಸಕ್ತಿಯಿಂದಾಡಿದ ಮಾತು.

ಪಾಶ್ಚಾತ್ಯರಲ್ಲಿ ಪ್ರಸಿದ್ಧ ಕವಿಗಳಾದ ಎಲಿಯಟ್, ಸ್ಪೆಂಡರ್, ಥಾಮಸ್ ಮುಂತಾದವರ ಕವನಗಳು ಈ ಕವಿಗಳಿಗೆ ಪ್ರೇರಕವಾಗಿವೆ. ಪಾಶ್ಚಾತ್ಯರಲ್ಲಿಯೇ, ತುಂಬ ವಿದ್ವಾಂಸರಾದವರಿಗೇ, ಈ ಕವಿಗಳ ಕವನ

ಗಳು ಸಂಪೂರ್ಣವಾಗಿ ಅರ್ಥವಾಗುವುದಿಲ್ಲವಂತೆ. Sitwell ಹೇಳಿದಂತೆ ವಸ್ತುವಿನ ಆಯ್ಕೆಯಲ್ಲಿ Dylan Thomas ಪ್ರಸಿದ್ಧನಾಗಿರಬಹುದು. ಆದರೆ ವಸ್ತುಮಾತ್ರದಿಂದ ಯಾವ ಕಾವ್ಯತಾನೆ ಅಮರವಾಗಿ ನಿಂತಿದೆ? ತುಂಬ ಕಠಿನವಾದ ಪ್ರತಿಮೆಗಳು, ಅವುಗಳ ಕಠಿಣತರವಾದ ಸಂಬಂಧ, ಕಠಿಣತಮವಾದ ಸಮಷ್ಟಿ ದೃಷ್ಟಿ ಇವು ಯಾರಿಗೆ ಹೊಳೆಯಬೇಕು. ಒಗಟು ಕಟ್ಟುವ ಜಾಣ್ಮೆಯನ್ನೆಲ್ಲ ಉಪಯೋಗಿಸಿ ಪದಬಂಧವನ್ನು ಸಮಯಬೇಕೆ? Dylan Thomasನಲ್ಲಿ "Lamb white days" ಎಂದರೆ "Days innocent as a lamb is white" ಎಂದು ಅರ್ಥ. "A black cap of jackdaws Sir John's Just hill dons" ಎಂದರೆ "the hill capped with jackdaws is seen as a judge donning the black cap for the pronouncement of the death-sentence!" ಎಂದು ಅರ್ಥವಂತೆ.

ಶರ್ಮರಲ್ಲಿ

ನರೆತಗಡ್ಡದ ಕಲ್ಲುಬಂಡೆಗಳ ಎದೆ ಮಿಡಿದೆ

ಎಂದರೆ ಬಹಳ ಪ್ರಾಚೀನವಾದ ಶಿಲಾವಶೇಷಗಳೊಳಗಿನ ಪ್ರಾಣಿಗಳ ಗುರುತುಗಳಿಗೆ ಅರ್ಥವನ್ನು ಮಾಡಿನೋಡಿದೆ" ಎಂದು ಭಾವ. "ದೊರೆಗೆ ಮಕ್ಕಳೊಂಬತ್ತು" ಎಂದರೆ ನವಗ್ರಹಗಳು ಎಂದರ್ಥ.

"ಕಟ್ಟಿರುವೆ ಯಾತ್ರೆ ಹೊರಟದೆ ಕಾಶಿಮಂಚದೆಡೆಗೆ"

ಎಂದರೆ ಹೇಗೆ ಕಟ್ಟಿರುವೆಯು ಸಾಲುಸಾಲಾಗಿ ವಿವೇಚನೆಯಿಲ್ಲದೆ ಒಂದನ್ನೊಂದು ಹಿಂಬಾಲಿಸುತ್ತದೆಯೋ ಹಾಗೆಯೇ ಜನರು ಯಾತ್ರಿಕರಾಗಿ ಕಾಶಿಯೆಂಬ ಮಂಚ–ಬಹುಶಃ ಮರಣಶಯ್ಯೆಯ ಕಡೆಗೆ ಹೊರಟದ್ದಾರೆ" ಎಂದು ಭಾವ.

ಹೀಗೆ ಅರ್ಥಮಾಡುವುದು ಅತಿಪ್ರಯಾಸವಲ್ಲವೆ? ಶರ್ಮರ ಕಾವ್ಯದಲ್ಲಿ ಈ ಅನಭಿವ್ಯಕ್ತಿ ತುಂಬಿದೆ. ಈ ಕವನಗಳನ್ನು ಓದುವುದಕ್ಕೆ ನಾವು ಎಷ್ಟು ಪ್ರಯಾಸಪಡುತ್ತೇವೆಯೋ ಅಷ್ಟೇ ಪ್ರಯಾಸವಾಗಿರಬಹುದು ಕವಿಗೆ ಈ ಅರ್ಥರಹಸ್ಯವನ್ನು ಹೀಗೆ ಕವನದಲ್ಲಿ ತುಂಬುವುದಕ್ಕೆ.

ಅಪ್ರಯಾಸವಾಗಿ ಅನಾಯಾಸವಾಗಿ ಈ ಒಗಟು ಸಾಧಿತವಾದರೆ ಅ
ನಿಜವಾಗಿಯೂ ಆಶ್ಚರ್ಯಕರ. ಕವಿಯ ಮನಸ್ಸು ಒಂದೊಂದು ವೇ
ಹೀಗೆ ವಿಚಿತ್ರ ರೀತಿಯಲ್ಲಿ ಕೆಲಸ ಮಾಡಬಲ್ಲದೆನ್ನುವುದೇನೋ ಅ
ಭವಕ್ಕೆ ಬಂದಿರುವ ವಿಷಯ. ಹಾಗಿದ್ದಾಗ ಪ್ರತಿಯೊಂದು ಕವನಕ್
ಮುನ್ನುಡಿ, ಹಿನ್ನುಡಿಗಳ, ಅರ್ಥವಿವರಣೆಯ ಟಿಪ್ಪಣಿಯನ್ನು ಮೊ
ಮೊದಲು ಕೊಟ್ಟು ಓದುಗರನ್ನೂ ಈ ನವ್ಯರೀತಿಗೆ ಸಿದ್ಧರನ್ನಾ
ಮಾಡುವ ಪ್ರಯತ್ನವನ್ನಾದರೂ ಮಾಡಬೇಕು. ಪಾಶ್ಚಾತ್ಯರಲ್ಲಿಯ
ಈ ಅನಭಿವ್ಯಕ್ತಿಗೆ ಕೆಲವು ಮಾರ್ಗಗಳುಂಟು. ವಿಚಿತ್ರ ವಾಕ್ಯಸರಣಿ
ವಿರಾಮ ಚಿಹ್ನೆಗಳನ್ನು ತಲೆಕೆಳಗು ಮಾಡುವುದು ಅಥವಾ ಸಂಪೂಣ
ವಾಗಿ ಬಿಟ್ಟುಬಿಡುವುದು, ರೂಪಕಗಳ ದೂರಾನ್ವಯ, ಅಪೂರ್ವ ಕತೆಗಳ
ದೇಶಾಂತರ ಪುರಾಣಗಳ ಅಕಸ್ಮಾತ್ ಸಂಬಂಧ, ಅತಿ ಸ್ವತಂತ್ರವಾ
ಛಂದೋಗತಿ, ಇವೆಲ್ಲ ಸೇರಿ ಏಳು ಸುತ್ತಿನ ಕೋಟೆಯನ್ನೂ ಕಟ್ಟಿಬಿಡ
ತ್ತವೆ, ಸರ್ಪಕಾವಲು ಒಳಗೆ ಹೊರಗೆ. ಒಳಗೆ ರಾಜಕುಮಾರಿ. ನುಗ್ಗಿ
ಬರಬೇಕು ರಾಜಕುವರ ನಲ್ಲೆಯ ಬಳಿಗೆ. ಇಂಥವರೆಷ್ಟು ಮಂ
ಇದ್ದಾರೆಯೋ! ಈ ಶತಮಾನದ ಈ ದಶಕದಲ್ಲಿ ಶರ್ಮರಷ್ಟು ಹೆಸರುವಾ
ಯಾದ ಹೊಸ ಕವಿಗಳು ಕನ್ನಡದಲ್ಲಿ ಇನ್ನಾರೂ ಇಲ್ಲ. ಇವರಲ್ಲಿ ಪ್ರತಿಭೆ
ಆತ್ಮಪ್ರತ್ಯಯ, ಪ್ರಯೋಗಾಸಕ್ತಿ, ನವ್ಯತಾನ್ವೇಷಣೆ ಇವೆಲ್ಲ ತುಂಬಿವೆ
ಆದರೆ ಈ ನವ್ಯತೆಯೇ ಗುರಿಯಾಗಿಬಿಟ್ಟರೆ ಹೇಗೆ! ರಾಮಚಂದ್ರ
ಶರ್ಮರ ಉದಾತ್ತವಾದ ಕಾವ್ಯಗುಣಗಳನ್ನು ಅರಿತು ಮೆಚ್ಚಿಕೊಂಡಿರುವ
ನನಗೆ ಅವು ಎಲ್ಲಿ ಪೋಲಾಗಿಬಿಡುತ್ತವೆಯೋ ಎಂಬ ಹೆದರಿಕೆ ತುಂಬಿದೆ
ಹಾಗಾಗಬಾರದು ಅವರಿಗೆ, ಕನ್ನಡಕ್ಕೆ. ಒಗಟಿಯಿಲ್ಲದೆ ನವ್ಯತೆಯನ್ನು
ಸಾಧಿಸುವುದಕ್ಕಾಗುವುದೇ ಇಲ್ಲವೆ?